ವಿಶ್ವವಾಣಿ

ವಿಶ್ವಾಸವೇ ವಿಶ್ವ

ಭಾರತದ ದಾಖಲೆಗೆ ಬ್ರೇಕ್

ಕಿವೀಸ್ ವಿರುದ್ಧ ಹೀನಾಯ ಸೋಲು

ಭಾರತ ಹಾಗೂ ನ್ಯೂಜಿಲೆಂಡ್ ನಡುವಿನ ಎರಡನೇ ಟೆಸ್ಟ್ ಪಂದ್ಯದಲ್ಲೂ ಕಿವೀಸ್ ಪಡೆ ಗೆಲುವು ದಾಖಲಿಸುವ ಮೂಲಕ ಸರಣಿ ವಶಪಡಿಸಿಕೊಂಡಿದೆ. ನ್ಯೂಜಿಲೆಂಡ್ ಮೊದಲ ಮತ್ತು ಎರಡನೇ ಇನ್ನಿಂಗ್ಸ್‌ನಲ್ಲಿ ಕ್ರಮವಾಗಿ 259 ಮತ್ತು 255 ರನ್ ಗಳಿಸಿ ಭಾರತಕ್ಕೆ 359 ರನ್‌ಗಳ ಗೆಲುವಿನ ಗುರಿ ನೀಡಿತ್ತು. ಆದರೆ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 156 ರನ್‌ಗಳಿಗೆ ಕುಸಿದು ಹಿನ್ನಡೆ ಅನುಭವಿಸಿತು. ಎರಡನೇ ಇನ್ನಿಂಗ್ಸ್‌ನಲ್ಲೂ 245 ರನ್‌ಗಳಿಗೆ ಮುಗ್ಗರಿಸಿ ಆಲೌಟ್ ಆಯಿತು. 2012ರ ನಂತರ ತವರಿನಲ್ಲಿ ಒಂದೂ ಟೆಸ್ಟ್ ಸರಣಿ ಸೋಲದ ಭಾರತದ ದಾಖಲೆಗೆ ಬ್ರೇಕ್ ಬಿದ್ದಿದೆ.

ಪುಟ ತೆರೆದಂತೆ...

ಪ್ರಧಾನಿ ಶಾಸ್ತ್ರಿ ತಮ್ಮ ಜೀವನದಲ್ಲಿ ಒಂದೇ ಒಂದು ಸಿನಿಮಾವನ್ನೂ ನೋಡಿರಲಿಲ್ಲ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ದುಡಿಮೆಗೊಂದು ಕೈ, ದಾನಕ್ಕೊಂದು ಕೈ..
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು

ಭಯೋತ್ಪಾದನೆಯ ಬೆದರಿಕೆಯನ್ನು ಮಟ್ಟಹಾಕಲು ನೂತನ ಕಾರ್ಯತಂತ್ರ ಹೆಣೆಯಲಾಗಿದೆ. ಕೇಂದ್ರಾಡಳಿತ ಪ್ರದೇಶದ ನೆಲದ ಮೇಲೆ ಬಿದ್ದ ಮುಗ್ಧರ ಪ್ರತಿ ಹನಿ ರಕ್ತಕ್ಕೂ ಪ್ರತ್ಯುತ್ತರ ನೀಡುತ್ತೇವೆ. ಭಾರತವು ನೆರೆಯ ರಾಷ್ಟ್ರಗಳಿಂದ ಶಾಂತಿ ಬಯಸುತ್ತದೆ. ಆದರೆ, ದುದೃಷ್ಟವಶಾತ್ ಬಡತನ ತಾಂಡವವಾಡುತ್ತಿದ್ದರೂ ಯಾವಾಗಲೂ ಶಾಂತಿ ಕದಡಲು ಯತ್ನಿಸುವ ದೇಶವನ್ನು ಪಕ್ಕದಲ್ಲಿ ಹೊಂದಿದ್ದೇವೆ.

– ಮನೋಜ್ ಮಿಶ್ರಾ, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್

ದಾರಿದೀಪೋಕ್ತಿ

ನಿಮ್ಮ ಮಾತು ನಿಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ನೀವು ಎಷ್ಟೇ ದೊಡ್ಡ ವ್ಯಕ್ತಿಯಾಗಿರಬಹುದು, ನಿಮ್ಮ ಎಲ್ಲ ಮಾತುಗಳನ್ನು ಎಲ್ಲರೂ ಒಪ್ಪದಿರಬಹುದು. ಹೀಗಾಗಿ ಯಾವತ್ತೂ ದರ್ಪದ, ಅಹಂಕಾರದ ಮಾತುಗಳನ್ನು ಆಡಬಾರದು.

ವಕ್ರತುಂಡೋಕ್ತಿ

ಪಿಜ್ಜಾದ ಕೊನೆಯ ತುಂಡನ್ನು ನೀವು ಬೇರೆಯವರಿಗೆ ಕೊಟ್ಟರೆ, ನಿಮಗೆ ಹೊಟ್ಟೆ ತುಂಬಿದೆ ಅಥವಾ ಪಿಜ್ಜಾ ಚೆನ್ನಾಗಿಲ್ಲ ಎಂದರ್ಥ.

ಶಾಸಕ ಸ್ಥಾನ ನುಂಗಿದ ಬೇಲೆಕೇರಿ ಅದಿರು | ಶಿಕ್ಷೆ ಜತೆಗೆ 9.54 ಕೋಟಿ ರು. ದಂಡ

ಸೈಲ್‌ಗೆ 7 ವರ್ಷ ಸೆಲ್

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಬೇಲೆಕೇರಿ ಅದಿರು ನಾಪತ್ತೆ ಪ್ರಕರಣದಲ್ಲಿ ಕಾರವಾರದ ಕಾಂಗ್ರೆಸ್ ಶಾಸಕ ಸತೀಶ್ ಕೃಷ್ಣ ಸೈಲ್ ಸೇರಿ ಏಳು ಅಪರಾಧಿಗಳಿಗೆ ಜನಪ್ರತಿನಿಧಿಗಳ ವಿಶೇಷ ಸತ್ರ ನ್ಯಾಯಾಲಯವು ಗರಿಷ್ಠ ಏಳು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು 44.65 ಕೋಟಿ ರು. ದಂಡ ವಿಧಿಸಿದೆ. ಏಳು ವರ್ಷದ ಜೈಲು ಶಿಕ್ಷೆಯ ಆದೇಶದಿಂದಾಗಿ ಸೈಲ್ ಶಾಸಕತ್ವ ರದ್ದುಗೊಳ್ಳುತ್ತದೆ.

ಬೇಲೆಕೇರಿ ಅದಿರು ಅಕ್ರಮ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸತೀಶ್ ಸೈಲ್ ಸೇರಿ ಆರು ಜನರ ವಿರುದ್ಧ ಒಟ್ಟು 5 ಪ್ರಕರಣಗಳು ದಾಖಲಾಗಿದ್ದವು. ಇದರ ವಿರುದ್ಧ ಸುದೀರ್ಘ ವಿಚಾರಣೆ ನಡೆದಿತ್ತು. ಗುರುವಾರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಆರೋಪ ಸಾಬೀತಾಗಿತ್ತು. ಶನಿವಾರ ಶಿಕ್ಷೆಯ ಪ್ರಮಾಣ ಪ್ರಕಟವಾಗಿದೆ.

ಒಂದನೇ ಪ್ರಕರಣದಲ್ಲಿ ಅಪರಾಧಿಗಳಿಗೆ ಆರು ಕೋಟಿ ದಂಡ, ಕಳ್ಳತನ ಕೇಸಲ್ಲಿ ಮೂರು ವರ್ಷ ಜೈಲು ಶಿಕ್ಷೆ, ಎರಡನೇ ಪ್ರಕರಣದಲ್ಲಿ 7 ವರ್ಷ ಶಿಕ್ಷೆ 6 ಕೋಟಿ ದಂಡ ವಿಧಿಸಲಾಗಿದೆ. ಮೂರನೇ ಪ್ರಕರಣದಲ್ಲಿ ಶಿಕ್ಷೆ ಪ್ರಕಟಗೊಂಡಿದ್ದು, ಒಳಸಂಚು ಆರೋಪದಲ್ಲಿ ಎಲ್ಲ ಅಪರಾಧಿಗಳಿಗೆ ಐದು ವರ್ಷ ಶಿಕ್ಷೆ, ತಲಾ 20 ಸಾವಿರ ದಂಡ ವಿಧಿಸಲಾಗಿದೆ. ವಂಚನೆ ಆರೋಪದಲ್ಲಿ 9.36 ಕೋಟಿ ದಂಡ, ಏಳು ವರ್ಷ ಶಿಕ್ಷೆ ಪ್ರಕಟಿಸಲಾಗಿದೆ. ನಾಲ್ಕನೇ ಪ್ರಕರಣದಲ್ಲಿ ಮಹೇಶ್ ಬಿಳಿಯೇ, ಸ್ವಸ್ತಿಕ್ ನಾಗರಾಜ್, ಸತೀಶ್ ಸೈಲ್‌ಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದ್ದು, ವಂಚನೆ ಆರೋಪದಲ್ಲಿ ಏಳು ವರ್ಷ ಜೈಲು ಶಿಕ್ಷೆ 9.54 ಕೋಟಿ ದಂಡ ವಿಧಿಸಲಾಗಿದೆ. ಐದನೇ ಪ್ರಕರಣದಲ್ಲಿ ಒಳಸಂಚಿನ ಆರೋಪದಲ್ಲಿ 5 ವರ್ಷ ಕಠಿಣ ಶಿಕ್ಷೆಯಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ಅತಿಹೆಚ್ಚು ಶಿಕ್ಷೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದ್ದು, ಒಟ್ಟು 44.65 ಕೋಟಿ ರು. ದಂಡ ವಿಧಿಸಲಾಗಿದೆ. ದಂಡದ ಮೊತ್ತವನ್ನು ಸರಕಾರ ಜಪ್ತಿ ಮಾಡಿಕೊಳ್ಳಬೇಕು ಎಂದು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಶನಿವಾರ ಮಹತ್ವದ ತೀರ್ಪು ಪ್ರಕಟಿಸಿದ್ದಾರೆ.

→ 4

ಅದುರುವುದೇ ಶಾಸಕ ಸ್ಥಾನ?

ಪ್ರಜಾಪ್ರತಿನಿಧಿ ಕಾಯಿದೆ ನಿಯಮಗಳ ಪ್ರಕಾರ ಎರಡು ವರ್ಷಕ್ಕಿಂತ ಹೆಚ್ಚಿನ ಜೈಲು ಶಿಕ್ಷೆಯಾದರೆ ಶಾಸಕ ಸ್ಥಾನ ಕಳೆದುಕೊಳ್ಳಬೇಕಾ ಗುತ್ತದೆ. ಈ ಪ್ರಕರಣದಲ್ಲಿ ಸತೀಶ್ ಸೈಲ್ ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದು, ಶಾಸಕ ಸ್ಥಾನ ಅನರ್ಹಗೊಳ್ಳಲಿದೆ. ಆದರೆ, ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಅವಕಾಶ ಇದ್ದು, ಅಲ್ಲಿ ಅವರಿಗೆ ಶಿಕ್ಷೆಯ ಪ್ರಮಾಣಕ್ಕೆ ತಡೆ ಸಿಕ್ಕರೆ ಶಾಸಕ ಸ್ಥಾನ ಉಳಿಸಿಕೊಳ್ಳಬಹುದು.

ಅಪರಾಧಿಗಳು ಯಾರ‍್ಯಾರು?

- ಮಹೇಶ್ ಬಿಳಿಯೇ, ಅರಣ್ಯ ಸಂರಕ್ಷಣಾಧಿಕಾರಿ
- ಸತೀಶ್ ಕೃಷ್ಣ ಸೈಲ್, ಕಾರವಾರ ಕಾಂಗ್ರೆಸ್ ಶಾಸಕ ಮತ್ತು ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ ಮಾಲೀಕ
- ಪ್ರೇಮ್ ಚಂದ್ ಗರ್ಗ್
- ಖಾರದಪುಡಿ ಮಹೇಶ್
- ಸ್ವಸ್ತಿಕ್ ನಾಗರಾಜ್
- ಕೆ.ವಿ.ಗೋವಿಂದರಾಜ್
- ಚಂದನ್ ಶಾಹ

ಏನಿದು ಪ್ರಕರಣ?

ಬಳ್ಳಾರಿ, ಹೊಸಪೇಟೆ, ಸಂಡೂರು, ಹಾಗೂ ಚಿತ್ರದುರ್ಗ ಅರಣ್ಯ ಪ್ರದೇಶಗಳಿಂದ ಅಕ್ರಮವಾಗಿ ಕಬ್ಬಿಣದ ಅದಿರು ಬೇಲೆಕೇರಿ ಬಂದರಿನಿಂದ ವಿದೇಶಕ್ಕೆ ರಫ್ತಾಗುತ್ತಿದೆ ಎಂದು ಮಾಹಿತಿ ಪಡೆದ ಅರಣ್ಯ ಇಲಾಖೆ 2009ರ ಮಾ.20ರಂದು 350 ಕೋಟಿ ರು. ಮೌಲ್ಯದ 8.5 ಲಕ್ಷ ಮೆಟ್ರಿಕ್ ಟನ್ ಅದಿರನ್ನು ವಶಪಡಿಸಿಕೊಂಡಿತ್ತು. ಈ ಅದಿರು ಕಾಯ್ದುಕೊಳ್ಳುವಂತೆ ಬಂದರು ಇಲಾಖೆಗೆ ವಹಿಸಿತ್ತು. ಅದೇ ವರ್ಷ ಜೂ.2ರಂದು ವಶಪಡಿಸಿಕೊಂಡ ಅದಿರನ್ನು ಅರಣ್ಯ ಇಲಾಖೆಯು ಮತ್ತೆ ಮೌಲ್ಯಮಾಪನ ನಡೆಸಿದಾಗ ಕೇವಲ 2 ಲಕ್ಷ ಮೆಟ್ರಿಕ್ ಟನ್ ಅದಿರು ಉಳಿದಿತ್ತು. ಇನ್ನುಳಿದ (250 ಕೋಟಿ ಮೌಲ್ಯದ) ಅದಿರು ನಾಪತ್ತೆಯಾಗಿದೆ ಎಂದು ಬಂದರು ಅಧಿಕಾರಿ ಹಾಗೂ ಅದಿರು ಕಂಪನಿಗಳ ಮೇಲೆ ಅರಣ್ಯ ಇಲಾಖೆ ದೂರು ದಾಖಲಿಸಿತ್ತು. ಈ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಶಾಸಕ ಸತೀಶ್ ಸೈಲ್, ಮಹೇಶ್ ಬಿಳಿಯೆ, ಸ್ವಸ್ತಿಕ್ ನಾಗರಾಜು, ಪ್ರೇಮ್ ಚಂದ್ ಗರ್ಗ್, ಖಾರದಪುಡಿ ಮಹೇಶ್, ಕೆ.ವಿ.ಗೋವಿಂದರಾಜ್ ಮತ್ತು ಚಂದನ್ ಶಾಹ ವಿರುದ್ಧ ಸಿಬಿಐ ಆರೋಪಪಟ್ಟಿ ಸಲ್ಲಿಸಿತ್ತು. ಸುದೀರ್ಘ 14 ವರ್ಷಗಳ ವಿಚಾರಣೆಯ ಬಳಿಕ ಇದೀಗ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಸತೀಶ್ ಸೈಲ್ ಹಾಗೂ ಇತರ 7 ಆರೋಪಿಗಳನ್ನು ದೋಷಿ ಎಂದು ಘೋಷಿಸಿ, ಶಿಕ್ಷೆ ಪ್ರಮಾಣ ಪ್ರಕಟಿಸಿದೆ.

ಡಿಸಿ, ಜಿಪಂ ಸಿಇಒಗಳ ಜತೆ ಸಿಎಂ,ಡಿಸಿಎಂ ಸಭೆ

ಮಳೆ ಹಾನಿ: 2 ದಿನದಲ್ಲಿ ಪರಿಹಾರಕ್ಕೆ ಸಿಎಂ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವಾರ ಸುರಿದ ಭಾರಿ ಮಳೆಯಿಂದಾಗಿರುವ ಅನಾಹುತಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಶೀಘ್ರ ಕ್ರಮ ವಹಿಸಬೇಕು. ಇದರೊಂದಿಗೆ ಮನೆ ಹಾನಿ ಹಾಗೂ ಪ್ರಾಣ ಹಾನಿಯಾದರೆ 48 ಗಂಟೆಯೊಳಗೆ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖಡಕ್ ಸೂಚನೆ ನೀಡಿದ್ದಾರೆ.

ಹಿಂಗಾರು ಮಳೆಗೆ ಸಂಬಂಧಿಸಿದಂತೆ ಹಾಗೂ ಅತಿವೃಷ್ಟಿಯಿಂದ ಉಂಟಾಗಿರುವ ಅನಾಹುತಗಳಿಗೆ ಸಂಬಂಧಿಸಿದಂತೆ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒಗಳೊಂದಿಗೆ ವಿಡಿಯೊ ಸಂವಾದ ನಡೆಸಿದರು. ಈ ವೇಳೆ ರಾಜ್ಯಾದ್ಯಂತವಾಗಿರುವ ಅನಾಹುತಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಂದ ಮಾಹಿತಿ ಪಡೆದು, ಪರಿಹಾರಕ್ಕೆ ಸಂಬಂಧಿಸಿದಂತೆ ಕಠಿಣ ಕ್ರಮವಹಿಸುವಂತೆ ಸೂಚನೆ ನೀಡಿದರು.

ಅಧಿಕಾರಿಗಳು ಮಳೆಯಿಂದ ಹಾನಿಯಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಬೆಳೆ ಹಾನಿಗೆ ಸಂಬಂಧಿಸಿದಂತೆ ಆದಷ್ಟು ಶೀಘ್ರ ವರದಿ ಸಲ್ಲಿಕೆ ಮಾಡಬೇಕು ಎಂದು ಸೂಚನೆ ನೀಡಿದ್ದು, ಮಳೆಹಾನಿ ತಡೆಯುವ ಸಂಬಂಧ ಇನ್ನಷ್ಟು ಕ್ರಮವಹಿಸುವಂತೆ ಸೂಚನೆ ನೀಡಿದರು.

58ರಷ್ಟು ಹೆಚ್ಚುವರಿ ಮಳೆ: ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಈ ಬಾರಿ ಹಿಂಗಾರು ಹಂಗಾಮಿನಲ್ಲಿ ಅ.1ರಿಂದ 25ರ ವರೆಗೆ ರಾಜ್ಯದಲ್ಲಿ ಸರಾಸರಿ 181 ಮಿಮೀ ಮಳೆಯಾಗಿದೆ. ಈ ಅವಧಿಯ ವಾಸ್ತವಿಕ ಸರಾಸರಿ ಮಳೆ ಪ್ರಮಾಣ 114 ಮಿಮೀ ಆಗಿದ್ದು, ಶೇ.58ರಷ್ಟು ಹೆಚ್ಚುವರಿ ಮಳೆ ದಾಖಲಾಗಿದೆ.

ದೀಪಾವಳಿ ಸಂದರ್ಭದಲ್ಲಿ ಹಸಿರು ಪಟಾಕಿಗೆ ಮಾತ್ರ ಅವಕಾಶವಿದ್ದು, ಪರಿಸರಕ್ಕೆ ಹಾನಿಯಾಗುವ ಪಟಾಕಿಗಳಿಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಪಟಾಕಿ ದಾಸ್ತಾನು, ಮಾರಾಟ ಪ್ರಕ್ರಿಯೆಯಲ್ಲಿ ಸುರಕ್ಷತೆ ವಿಷಯದಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಂಗಾರು ಅವಧಿಯಲ್ಲಿ ಅಂದರೆ ಜೂನ್ 1ರಿಂದ ಸೆ.30ರ ಅವಧಿಯಲ್ಲಿ ರಾಜ್ಯದಲ್ಲಿ ವಾಡಿಕೆ ಮಳೆ 852 ಮಿಮೀ ಆಗಿದ್ದು, ಈ ಬಾರಿ 978 ಮಿಮೀ ಮಳೆ ದಾಖಲಾಗಿದೆ. ಮುಂಗಾರು ಅವಧಿಯಲ್ಲೂ ಶೇ.15ರಷ್ಟು ಹೆಚ್ಚು ವರಿ ಮಳೆಯಾಗಿತ್ತು. ಹಿಂಗಾರು ಅವಧಿ ಯಲ್ಲಿ ಅಂದರೆ ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಈಗಾಗಲೇ ಮುನ್ಸೂಚನೆ ನೀಡಲಾಗಿದೆ ಎಂದರು.

→ 4

ಸಿಎಂ, ಡಿಸಿಎಂ ಭೇಟಿಯಾಗಿ ಚರ್ಚಿಸಿದ ಖಾದ್ರಿ, ಕುನ್ನೂರು

ಶಿಗ್ಗಾವಿ ಕೈ ಬಂಡಾಯ ಶಮನ



ಬೆಂಗಳೂರು: ಉಪಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್‌ಗೆ ಎದುರಾಗಿದ್ದ ಬಂಡಾಯದ ಬಿಸಿಯನ್ನು ತಣಿಸುವಲ್ಲಿ ನಾಯಕರು ಯಶಸ್ವಿಯಾಗಿದ್ದಾರೆ.

ಶಿಗ್ಗಾವಿ ಕ್ಷೇತ್ರದಿಂದ ಮಾಜಿ ಶಾಸಕರಾದ ಅಜ್ಜಂಪೀರ್ ಖಾದ್ರಿ ಮತ್ತು ಮಂಜುನಾಥ್ ಕುನ್ನೂರು ಬಂಡಾಯದ ಬಾವುಟ ಹಾರಿಸಿದ್ದರು. ಶುಕ್ರವಾರ ಸಚಿವ ಜಮೀರ್ ಅಹ್ಮದ್ ನೇತೃತ್ವದಲ್ಲಿ ಬಂಡಾಯ ಶಮನಕ್ಕೆ ಪ್ರಯತ್ನ ನಡೆದು ವಿಫಲವಾಗಿತ್ತು. ಶನಿವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾದ ಬಳಿಕ 30ರಂದು ನಾಮಪತ್ರ ಹಿಂಪಡೆಯುವುದಾಗಿ ಖಾದ್ರಿ ಮತ್ತು ಕುನ್ನೂರು ಇಬ್ಬರೂ ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಅಜ್ಜಂಪೀರ್ ಖಾದ್ರಿ ಅವರಿಗೆ ಕಳೆದ ಚುನಾವಣೆಯಲ್ಲಿಯೇ ಟಿಕೆಟ್ ನೀಡಬೇಕಾಗಿತ್ತು. ಕಾರಣಾಂತರಗಳಿಂದ ಯಾಸಿರ್ ಪಠಾಣ್ ಅವರಿಗೆ ನೀಡಲಾಗಿತ್ತು. ಇವರ ತ್ಯಾಗವನ್ನು ಪಕ್ಷ ಮರೆಯುವುದಿಲ್ಲ. ಅವರಿಗೆ ಉತ್ತಮ ಸ್ಥಾನ ನೀಡುವುದಾಗಿ ಹಿಂದೆಯೂ ಹೇಳಿದ್ದೆವು, ಈಗಲೂ ಹಾಗೂ ಮುಂದಕ್ಕೂ ಹೇಳುತ್ತೇವೆ. ಚುನಾವಣಾ ನೀತಿ ಸಂಹಿತೆ ಇರುವ ಕಾರಣಕ್ಕೆ ಅವರಿಗೆ ನೀಡಿರುವ ಭರವಸೆಗಳನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ಅವರು ನಾಮಪತ್ರ ಹಿಂಪಡೆಯಲು ಒಪ್ಪಿದ್ದಾರೆ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಫಿಲಿಪೈನ್ಸ್ ಪ್ರವಾಹ 100ಕ್ಕೂ ಹೆಚ್ಚು ಸಾವು

ಮನಿಲಾ: ಫಿಲಿಪೈನ್ಸ್‌ನಲ್ಲಿ ಟ್ರಾಮಿ ಚಂಡಮಾರುತದಿಂದ ಭಾರಿ ಮಳೆಯಾಗುತ್ತಿದ್ದು, ಪ್ರವಾಹ ಮತ್ತು ಭೂಕುಸಿತಗಳಲ್ಲಿ ಮೃತಪಟ್ಟವರ ಸಂಖ್ಯೆ 100ಕ್ಕೂ ಹೆಚ್ಚಾಗಿದೆ ಎಂದು ಫಿಲಿಪೈನ್ ಅಧ್ಯಕ್ಷರು ಶನಿವಾರ ಹೇಳಿದ್ದಾರೆ.

ಶುಕ್ರವಾರ ವಾಯುವ್ಯ ಫಿಲಿಪೈನ್ಸ್‌ನಲ್ಲಿ ಸೃಷ್ಟಿಯಾದ ಟ್ರಾಮಿ ಚಂಡಮಾರುತ, ಗಂಟೆಗೆ 95 ಕಿ.ಮೀ ವೇಗದಲ್ಲಿ ಅಪ್ಪಳಿಸಿದ್ದು, ವ್ಯಾಪಕ ನಷ್ಟ ಉಂಟು ಮಾಡಿದೆ. ಈ ಚಂಡಮಾರುತದಿಂದ ಕನಿಷ್ಠ 81 ಜನ ಸಾವನ್ನಪ್ಪಿದ್ದಾರೆ. 34 ಜನರು ಕಾಣೆಯಾಗಿದ್ದಾರೆ ಎಂದು ಸರ್ಕಾರದ ವಿಪತ್ತು-ಪ್ರತಿಕ್ರಿಯೆ ಸಂಸ್ಥೆ ತಿಳಿಸಿದೆ. ಹಲವು ಕಡೆ ವಾಹನಗಳು ನೀರಿನಲ್ಲಿ ಕೊಚ್ಚಿಹೋಗಿದ್ದು, ಮನೆಯ ಛಾವಣಿಯಲ್ಲಿ ಸಿಕ್ಕಿಬಿದ್ದಿರುವ ಜನರನ್ನು ಮೋಟಾರು ಬೋಟ್‌ಗಳ ಮೂಲಕ ತೆರವುಗೊಳಿಸಲಾಗಿದೆ. ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದು, ಲುಝೋನ್ ದ್ವೀಪದಲ್ಲಿ ಶಾಲೆಗಳು ಹಾಗೂ ಕಚೇರಿಗಳಿಗೆ ರಜೆ ಘೋಷಿಸಲಾಗಿದೆ.

ಕಲಬುರಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶ

ಅತ್ಯಾಚಾರಿಗೆ 30 ವರ್ಷ ಜೈಲು

- ಸಂತ್ರಸ್ತೆಗೆ ಕಾನೂನು ಪ್ರಾಧಿಕಾರದಿಂದ 6 ಲಕ್ಷ ರು. ಪರಿಹಾರ ನೀಡಲು ಆದೇಶ
- ಸರಕಾರ ಪರ ವಾದ ಮಂಡಿಸಿದ್ದ ವಿಶೇಷ ಅಭಿಯೋಜಕ ಶಾಂತವೀರ ತುಪ್ಪದ್

ಕಲಬುರಗಿ: ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ 30 ವರ್ಷ ಜೈಲು ಶಿಕ್ಷೆ 20 ಸಾವಿರ ರು. ದಂಡ ಮತ್ತು ಕೃತ್ಯಕ್ಕೆ ಸಹಕರಿಸಿದ ನಾಲ್ವರು ಸಹಚರರಿಗೆ ಐದು ವರ್ಷ ಜೈಲುಶಿಕ್ಷೆ ಮತ್ತು 6 ಸಾವಿರ ರು. ದಂಡ ವಿಧಿಸಿ ಕಲಬುರಗಿಯ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಆದೇಶಿಸಿದ್ದಾರೆ. ಅಫಜಲಪುರ ತಾಲೂಕಿನ ಉಡಚಣದ ಭೀಮಾಶಂಕರ ಅಂಬಿಗೇರ (30) ಶಿಕ್ಷೆಗೆ ಒಳಗಾದ ವ್ಯಕ್ತಿ.

ಏನಿದು ಘಟನೆ?

2022ರ ಜೂ.4ರಂದು ಜೇವರ್ಗಿ ತಾಲೂಕಿನ ಗ್ರಾಮವೊಂದರ ಜಮೀನಿನಲ್ಲಿದ್ದ ಬಾಲಕಿಯನ್ನು ದುಷ್ಕರ್ಮಿಗಳು ಕಾರಿನಲ್ಲಿ ಅಪಹರಿಸಿ, ಅಫಜಲಪುರ ವ್ಯಾಪ್ತಿಯ ಕಬ್ಬಿನ ಹೊಲದಲ್ಲಿ ಅತ್ಯಾಚಾರ ಎಸಗಿದ್ದರು. ಮರುದಿನ ಅಳುತ್ತಿದ್ದ ಬಾಲಕಿಯನ್ನು ಉಪಾಹಾರ ಸೇವಿಸಲು ಹೋಟೆಲ್‌ಗೆ ಕರೆತಂದ ವೇಳೆ, ಆಕೆ ತಪ್ಪಿಸಿಕೊಂಡು ಬಸ್‌ನಲ್ಲಿ ಕಲಬುರಗಿಗೆ ಬಂದು ಸಹೋದರನ ಮೂಲಕ ಮನೆ ಸೇರಿದ್ದಳು. ಈ ಕುರಿತು ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿಪಿಐ ಎಂ. ಶಿವಪ್ರಸಾದ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಇಸ್ರೇಲ್ ವಾಯುನೆಲೆ ಮೇಲೆ ಹಿಜ್ಬುಲ್ಲಾ ದಾಳಿ

ಬೈರೂತ್: ಇರಾನ್ ಮೇಲೆ ಇಸ್ರೇಲ್ ದಾಳಿ ನಡೆಸಿದ ಬೆನ್ನಲ್ಲೇ ಇತ್ತ ದಕ್ಷಿಣ ಟೆಲ್ ಅವಿವ್‌ನಲ್ಲಿರುವ ಇಸ್ರೇಲ್ ವಾಯುನೆಲೆ ಮೇಲೆ ಹಿಜ್ಬುಲ್ಲಾ ದಾಳಿ ನಡೆಸಿದೆ. ಕಳೆದೊಂದು ತಿಂಗಳಿನಿಂದ ಇಸ್ರೇಲ್ ಮೇಲೆ ಸಮರ ಸಾರಿರುವ ಹಿಜ್ಬುಲ್ಲಾ ಇದೇ ಮೊದಲ ಬಾರಿಗೆ ಇಸ್ರೇಲ್‌ನ ಪ್ರಮುಖ ಪ್ರದೇಶವನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದೆ. ಈ ಹಿಂದೆ ಗಡಿ ಪ್ರದೇಶಗಳ ಮೇಲೆ ದಾಳಿ ನಡೆಸುತ್ತಿತ್ತು. ಇದರ ಜತೆಗೆ ದಕ್ಷಿಣ ಲೆಬನಾನ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಇಸ್ರೇಲ್ ಪಡೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದಾಗಿಯೂ ಹಿಜ್ಬುಲ್ಲಾ ಹೇಳಿದೆ.

ಡಾನಾ ಚಂಡಮಾರುತ ಸಾವಿನ ಸಂಖ್ಯೆ 4ಕ್ಕೇರಿಕೆ

ಕೋಲ್ಕತ್ತ: ಡಾನಾ ಚಂಡಮಾರುತದ ಪರಿಣಾಮ ಪಶ್ಚಿಮ ಬಂಗಾಳದಲ್ಲಿ ಮತ್ತಿಬ್ಬರು ಸಾವಿಗೀಡಾಗಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 4ಕ್ಕೆ ಏರಿಕೆಯಾಗಿದೆ. ಇನ್ನೊಂದೆಡೆ ಒಡಿಶಾದಲ್ಲಿ 1.75 ಲಕ್ಷ ಎಕರೆ ಬೆಳೆ ನಾಶವಾಗಿದೆ. ಅಲ್ಲದೇ, 2.80 ಲಕ್ಷ ಎಕರೆಗಳಷ್ಟು ಕೃಷಿ ಪ್ರದೇಶ ನೀರಿನಲ್ಲಿ ಮುಳುಗಿ ಹಾನಿಗೀಡಾಗಿದೆ. ಚಂಡಮಾರುತ ಶುಕ್ರವಾರ ಮುಂಜಾನೆ ಪ.ಬಂಗಾಳದ ಪೂರ್ವ ಕರಾವಳಿಗೆ ಅಪ್ಪಳಿಸಿದ್ದು, ಧಾರಾಕಾರ ಮಳೆಯಾಗಿದೆ. ಬಿರುಗಾಳಿ ಬೀಸಿ ಮರಗಳು ಮತ್ತು ವಿದ್ಯುತ್ ಕಂಬಗಳನ್ನು ಬುಡಮೇಲು ಮಾಡಿದೆ.

ಮಾಜಿ ಮಂತ್ರಿಗೆ ಟ್ರ್ಯಾಪ್ ಯತ್ನ ಹನಿ ಲೇಡಿ ಬಲೆಗೆ

ಕಲಬುರಗಿ: ಮಾಜಿ ಸಚಿವರೊಬ್ಬರಿಗೆ ಸ್ವಪಕ್ಷಿಯ ನಾಯಕಿಯೇ ತನ್ನ ಮೋಹ ಜಾಲದಲ್ಲಿ ಬೀಳಿಸಿ 20 ಲಕ್ಷ ರು.ಗಳಿಗೆ ಬೇಡಿಕೆ ಇಟ್ಟು, ಸಿಸಿಬಿ ಪೊಲೀಸರ ಬಲೆಗೆ ಬಿದ್ದಿರುವ ಪ್ರಕರಣ ಶುಕ್ರವಾರ ಸಾಯಂಕಾಲ ಬೆಳಕಿಗೆ ಬಂದಿದೆ.

ಜಿಲ್ಲೆಯ ಕಾಂಗ್ರೆಸ್ ಪ್ರಭಾವಿ ಮುಖಂಡ, ಮಾಜಿ ಸಚಿವರ ಮೇಲೆ ನಡೆದ ಹನಿಟ್ರ್ಯಾಪ್ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿ ಕಾಂಗ್ರೆಸ್ ನಾಯಕಿ ಮತ್ತು ಆಕೆಯ ಪತಿಯನ್ನು ಬೆಂಗಳೂರಿನ ಸಿಸಿಬಿ ಪೊಲೀಸರು ಶುಕ್ರವಾರ ಸಂಜೆ ಬಂಧಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷೆ ಹಾಗೂ ನಲಪಾಡ ಬ್ರಿಗೇಡ್ ಅಧ್ಯಕ್ಷೆ ಮಂಜುಳಾ ಪಾಟೀಲ್ ಮತ್ತು ಆಕೆಯ ಪತಿ ಶಿವರಾಜ ಪಾಟೀಲ್‌ನನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಆರೋಪಿಗಳನ್ನು ನ್ಯಾಯಾಲಯ 8 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿದ್ದು, ಪೊಲೀಸ್ ವಿಚಾರಣೆ ನಡೆಯುತ್ತಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನಿವಾಸಕ್ಕೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಪತ್ನಿ ಸುಧೇಶ್ ಅವರೊಂದಿಗೆ ಭೇಟಿ ನೀಡಿ ದೇವೇಗೌಡರ ಪತ್ನಿ ಚನ್ನಮ್ಮ ಅವರ ಆರೋಗ್ಯ ವಿಚಾರಿಸಿದರು. ಈ ವೇಳೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇದ್ದರು.

13ಕ್ಕೂ ಹೆಚ್ಚು ಸ್ಥಳಗಳಲ್ಲಿ ಇ.ಡಿ ಶೋಧಕಾರ್ಯ | ಮೊಬೈಲ್, ಲ್ಯಾಪ್ಟಾಪ್, ಸಿಮ್ ಕಾರ್ಡ್ ವಶ

ಅಕ್ರಮ ಟಿಕೆಟ್ ಮಾರಾಟ: 5 ರಾಜ್ಯಗಳಲ್ಲಿ ಇ.ಡಿ ದಾಳಿ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಡಿ.6 ರಂದು ದಿಲ್ಜಿತ್ ದೋಸಾಂಜ್ ಅವರ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಸಮಾರಂಭದ ಟಿಕೆಟ್‌ಗಳ ಅಕ್ರಮ ಮಾರಾಟಕ್ಕೆ ಸಂಬಂಧಿಸಿದಂತೆ ದೇಶದ ಹಲವೆಡೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಕೋಲ್ಡ್‌ಪ್ಲೇ ಮತ್ತು ದಿಲ್ಜೀತ್ ದೋಸಾಂಜ್ ಅವರ ದಿಲ್-ಲುಮಿನಾಟಿ ಬಹುನಿರೀಕ್ಷಿತ ಸಂಗೀತ ಕಛೇರಿಯ ಟಿಕೆಟ್‌ಗಳ ಅಕ್ರಮ ಮಾರಾಟಕ್ಕೆ ಸಂಬಂಧಿಸಿದಂತೆ ಕರ್ನಾಟಕ, ದೆಹಲಿ, ಮುಂಬೈ, ಜೈಪುರ, ಚಂಡೀಗಢ ರಾಜ್ಯಗಳಲ್ಲಿ ಇ.ಡಿ ಬೃಹತ್ ಶೋಧ ಕಾರ್ಯಾಚರಣೆ ನಡೆಸಿದೆ. ಅಕ್ರಮ ಟಿಕೆಟ್ ಮಾರಾಟದ ಬಗ್ಗೆ ವಿವಿಧ ರಾಜ್ಯಗಳಲ್ಲಿ ಅನೇಕ ಎಫ್ಐಆರ್ ದಾಖಲಾಗಿವೆ. ಈ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಕೋಲ್ಡ್‌ಪ್ಲೇ ಅವರ (ಬ್ರಿಟಿಷ್ ರಾಕ್ ಬ್ಯಾಂಡ್) ಮ್ಯೂಸಿಕ್ ಆಫ್ ದಿ ಸ್ಪಿಯರ್ಸ್ ವರ್ಲ್ಡ್ ಟೂರ್ ಸಂಗೀತ ಕಾರ್ಯಕ್ರಮವು ನ.18, 19, 21 ರಂದು ಮುಂಬೈನಲ್ಲಿ ನಡೆಯಲಿದೆ. ಜತೆಗೆ ದಿಲ್ಜೀತ್ ದೋಸಾಂಜ್ ಅವರ ದಿಲ್-ಲುಮಿನಾಟಿ' ಸಂಗೀತ ಕಾರ್ಯಕ್ರಮ ಬೆಂಗಳೂರಿನಲ್ಲಿ ಡಿ.6ರಂದು ನಡೆಯಲಿದೆ. ಜನಪ್ರಿಯ ಶೋಗಳಿಗೆ ಟಿಕೆಟ್ ಬೇಡಿಕೆ ಹೆಚ್ಚಾಗಿದ್ದು, ಬುಕ್ ಮೈ ಶೋ ಮತ್ತು ಜೊಮ್ಯಾಟೊ ಲೈವ್‌ನಂತಹ ಅಧಿಕೃತ ವೇದಿಕೆಗಳಲ್ಲಿ ಟಿಕೆಟ್‌ಗಳ ತ್ವರಿತ ಮಾರಾಟಕ್ಕೆ ಕಾರಣವಾಯಿತು. ಆದರೆ, ಕೆಲವರು ಹೆಚ್ಚಿನ ಬೆಲೆಗೆ ಅಕ್ರಮವಾಗಿ ಟಿಕೆಟ್ ಮಾರಾಟ ಮಾಡುತ್ತಿರುವ ಆರೋಪಗಳು ಕೇಳಿಬಂದಿವೆ.

- ಬ್ರಿಟಿಷ್ ರಾಕ್‌ಬ್ಯಾಂಡ್ ಕೋಲ್ಡ್‌ಪ್ಲೇ, ಗಾಯಕ ದಿಲ್ಜಿತ್ ದೊಸಾಂಝ್ ಸಂಗೀತ ಕಾರ್ಯಕ್ರಮಗಳ ಟಿಕೆಟ್ ಅಕ್ರಮ ಮಾರಾಟ
- ಹಣದ ಅಕ್ರಮ ವಹಿವಾಟು ತಡೆ ಕಾಯ್ದೆಯ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡ ಇ.ಡಿ.

ಯುಮುನಾ ಸ್ನಾನ ಬಿಜೆಪಿ ಮುಖಂಡ ಆಸ್ಪತ್ರೆಗೆ

ದೆಹಲಿ: ಯಮುನಾ ನದಿಯ ಕಲುಷಿತ ನೀರಿನಲ್ಲಿ ಸ್ನಾನ ಮಾಡಿದ ಎರಡು ದಿನಗಳ ನಂತರ ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಅವರು ಉಸಿರಾಟದ ತೊಂದರೆ, ಚರ್ಮದ ತುರಿಕೆಯಿಂದಾಗಿ ಶನಿವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಯಮುನಾ ನದಿಯನ್ನು ಸ್ವಚ್ಛಗೊಳಿಸಲು ಕೇಂದ್ರ ನೀಡಿದ ಹಣವನ್ನು ದೆಹಲಿ ಸರಕಾರ ಸರಿಯಾಗಿ ಬಳಕೆ ಮಾಡಿಲ್ಲವೆಂದು ಆರೋಪಿಸಿ ಗುರುವಾರ ಸಚ್‌ದೇವ ಅವರು ಯಮುನೆಯಲ್ಲಿ ಸ್ನಾನ ಮಾಡಿ ಕೇಜ್ರಿವಾಲ್‌ಗೂ ಇದನ್ನೇ ಮಾಡಲಿ ಎಂದು ಸವಾಲು ಹಾಕಿದ್ದರು.

ಶೆಲ್‌ಕಾಲ್-500, ಪ್ಯಾನ್-ಡಿ ನಕಲಿ

ದೆಹಲಿ: ಹೇರಳವಾಗಿ ಬಳಸಲ್ಪಡುತ್ತಿದ್ದ ಕ್ಯಾಲ್ಸಿಯಂ ಮಾತ್ರೆ ಶೆಲ್‌ಕಾಲ್-500 ಮತ್ತು ಪ್ಯಾನ್ ಡಿ ಸೇರಿದಂತೆ ನಾಲ್ಕು ಔಷಧಿಗಳನ್ನು ಕೇಂದ್ರ ಔಷಧ ನಿಯಂತ್ರಣ ಪ್ರಾಧಿಕಾರ ನಕಲಿ ಎಂದು ಗುರುತಿಸಿದೆ. ಇದಲ್ಲದೆ 49 ಔಷಧಿ ಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ, ಇದರಲ್ಲಿ ವ್ಯಾಪಕವಾಗಿ ಬಳಸಲಾಗುವ ಪ್ಯಾರ ಸಿಟಮಾಲ್, ಆಕ್ಸಿಟೋಸಿ ಮತ್ತು ಫ್ಲುಕೋನ ಜೋಲ್ ಸೇರಿವೆ. ಪರಿಶೀಲನೆ ನಡೆಸಿದ ಒಟ್ಟು ಔಷಧಗಳ ಮಾದರಿಗಳಲ್ಲಿ ಸುಮಾರು 1.5 ಪ್ರತಿಶತದಷ್ಟು ಪ್ರಮಾಣಿತ ಗುಣಮಟ್ಟವಲ್ಲದ ಔಷಧವೆಂದು ಕಂಡು ಬಂದಿದೆ ಎನ್ನಲಾಗಿದೆ.

ಮೂರು ತಿಂಗಳಿನಿಂದ ಕೆಟ್ಟು ನಿಂತಿರುವ ಆಕ್ಸಿಜನ್ ಪೂರೈಕೆ ಮಾಡುವ ಕಂಪ್ರೆಸರ್

ಮೂರು ತಿಂಗಳಲ್ಲಿ 41 ನವಜಾತ ಶಿಶು ಸಾವು

ವಿನಾಯಕ ಮಠಪತಿ

ಬೆಳಗಾವಿ: ಇಲ್ಲಿನ ಬಿಮ್ಸ್ ಆಸ್ಪತ್ರೆಯಲ್ಲಿ ಕಳೆದ ಮೂರು ತಿಂಗಳಲ್ಲಿ 41 ನವಜಾತ ಶಿಶು ಮೃತಪಟ್ಟಿರುವ ಶೋಚನೀಯ ಸಂಗತಿ ಬಯಲಿಗೆ ಬಂದಿದೆ. ಬಿಮ್ಸ್‌ನ ಹೆರಿಗೆ ಘಟಕಕ್ಕೆ ಸರಿಯಾದ ಪ್ರಮಾಣದಲ್ಲಿ ಆಕ್ಸಿಜನ್ ಪೂರೈಕೆಯಾಗದಿರುವುದೇ ನವಜಾತ ಶಿಶುಗಳು ಮರಣಕ್ಕೆ ಕಾರಣ ಎನ್ನಲಾಗಿದೆ.

ಆರೋಗ್ಯ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ಬಿಮ್ಸ್‌ನಲ್ಲಿ ಪ್ರತಿ ತಿಂಗಳು 800ಕ್ಕೂ ಅಧಿಕ ಹೆರಿಗೆಯಾಗುತ್ತವೆ. ಈ ಪೈಕಿ ಕಳೆದ ಆಗಸ್ಟ್‌ನಲ್ಲಿ 12, ಸೆಪ್ಟೆಂಬರ್‌ನಲ್ಲಿ 18 ಹಾಗೂ ಅಕ್ಟೋಬರ್‌ನಲ್ಲಿ 11 ಶಿಶುಗಳು ಮರಣ ಹೊಂದಿವೆ. ಈ ವರ್ಷದಲ್ಲಿ 155ಕ್ಕೂ ಅಧಿಕ ಶಿಶುಗಳು ಮರಣ ಹೊಂದಿವೆ. ಇವುಗಳಲ್ಲಿ ಭಾಗಶಃ ಏರ್ ಕಂಪ್ರೆಸರ್ ಇಲ್ಲದ ಕಾರಣ ಮೃತಪಟ್ಟಿವೆ ಎನ್ನಲಾಗಿದೆ.

ಖರೀದಿಯಾಗದ ಕಂಪ್ರೆಸರ್: ಬೀಮ್ಸ್ ಆಸ್ಪತ್ರೆ ಹೆರಿಗೆ ವಾರ್ಡ್‌ಗೆ ಆಕ್ಸಿಜನ್ ಪೂರೈಕೆ ಮಾಡುವ ಕಂಪ್ರೆಸರ್ ಕಳೆದ ಮೂರು ತಿಂಗಳಿನಿಂದ ಕೆಟ್ಟು ನಿಂತಿದ್ದರೂ ದುರಸ್ತಿ ಮಾಡಿಸಲು ಸಾಧ್ಯವಾಗಿಲ್ಲ. ಹೊಸ ಕಂಪ್ರೆಸರ್ ಖರೀದಿ ಮಾಡಲು ಬೆಳಗಾವಿಯ ವಿನಾಯಕ ಏಜೆನ್ಸಿಗೆ ಬಿಡ್ ಆಗಿತ್ತು. ಎರಡು ತಿಂಗಳಾದರೂ ಕಂಪ್ರೆಸರ್ ಬಿಮ್ಸ್‌ಗೆ ತಲುಪಿಲ್ಲ. ತ್ವರಿತ ಖರೀದಿಗೆ ಅವಕಾಶ ಇದ್ದರೂ ಬಿಮ್ಸ್ ನಿರ್ದೇಶಕರು ನಿರ್ಲಕ್ಷ್ಯವಹಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಬಿಮ್ಸ್‌ನ ಹೆರಿಗೆ ವಿಭಾಗದಲ್ಲಿ ಕಳೆದ ಮೂರು ತಿಂಗಳಿನಲ್ಲಿ 41 ನವಜಾತ ಶಿಶು ಮರಣ ಹೊಂದಿದ್ದು ಸತ್ಯ. ಆದರೆ ಶಿಶುಗಳ ಮರಣಕ್ಕೆ ಏರ್ ಕಂಪ್ರೆಸರ್ ಸಮಸ್ಯೆ ಕಾರಣವಲ್ಲ. ವಿವಿಧ ಕಾರಣಕ್ಕೆ ಶಿಶುಗಳ ಮರಣವಾಗಿದ್ದು, ಈ ಕುರಿತು ತನಿಖೆ ನಡೆಸುತ್ತೇವೆ. ಈಗಾಗಲೇ ಏರ್ ಕಂಪ್ರೆಸರ್ ಕಾರ್ಯ ಮಾಡುತ್ತಿದ್ದು, ಹೆಚ್ಚುವರಿ ಏರ್ ಕಂಪ್ರೆಸರ್ ಖರೀದಿಗೆ ಕ್ರಮ ವಹಿಸುತ್ತೇವೆ.

ಅಶೋಕ್ ಶೆಟ್ಟಿ, ಬಿಮ್ಸ್ ನಿರ್ದೇಶಕ

ಏರ್ ಕಂಪ್ರೆಸರ್‌ನಿಂದ ಸಾವು ಸಂಭವಿಸಿಲ್ಲ: 'ನವಜಾತ ಶಿಶುಗಳ ಸಾವಿಗೆ ಅವಧಿ ಪೂರ್ವ ಪ್ರಸವ, ಶಿಶುಗಳಲ್ಲಿ ತೂಕ ಕಡಿಮೆ, ಹೃದಯ ಸಮಸ್ಯೆ ಹಾಗೂ ಇತರೆ ಸಮಸ್ಯೆಗಳು ಕಾರಣ. ಏರ್ ಕಂಪ್ರೆಸರ್‌ನಿಂದ ಶಿಶುವಿನ ಸಾವು ಸಂಭವಿಸಿಲ್ಲ' ಎಂದು ಬಿಮ್ಸ್ ಆಡಳಿತ ಮಂಡಳಿ ಹೇಳಿದೆಯಾದರೂ 3 ತಿಂಗಳ ಅವಧಿಯಲ್ಲಿ 41 ನವಜಾತ ಶಿಶುಗಳ ಸಾವಿಗೆ ನಿಖರ ಕಾರಣ ಕೊಡಲು ಪೇಚಾಡುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ರೈತರ ಭೂಮಿ ವಕ್ಫ್ ಪಾಲಾಗುವುದಿಲ್ಲ

ವಿಜಯಪುರ: ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಹೊನವಾಡ ಗ್ರಾಮದ ಒಟ್ಟು 1,200 ಎಕರೆಯಲ್ಲಿ ಅದರಲ್ಲಿ 10 ಎಕರೆ 14 ಗುಂಟೆ ಖಬರಸ್ತಾನ ಇದೆ. ಉಳಿದದ್ದು ಈದ್ಗಾ, ಮಸೀದಿ ಇತ್ಯಾದಿ ಕಟ್ಟಡಗಳಿವೆ. ಇನ್ನು ಈ ಭೂಮಿಯು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದ್ದು, ಯಾವುದೇ ರೈತರ ಖಾಸಗಿ ಜಮೀನು ಒಳಪಟ್ಟಿಲ್ಲ ಎಂದು ಸಚಿವ ಎಂ.ಬಿ.ಪಾಟೀಲ್ ಹೇಳಿದ್ದಾರೆ.

ಈಗಾಗಲೇ ಜಿಲ್ಲೆಯಲ್ಲಿ ಹಲವು ರೈತರಿಗೆ ವಕ್ಫ್ ಆಸ್ತಿ ನೋಟಿಸು ಬಂದಿದೆ ಎಂಬ ದೂರುಗಳಿದ್ದು, ವಕ್ಫ್ ಸಮಿತಿ ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಂದಾಯ ಇಲಾಖೆಯಲ್ಲಿ ಎಲ್ಲ ದಾಖಲೆಗಳನ್ನು ಕೂಲಕುಂಷವಾಗಿ ಪರಿಶೀಲಿಸುತ್ತಾರೆ. ಒಂದೆ ಒಂದು ಇಂಚು ರೈತರ ಜಾಗವು ಅನಗತ್ಯವಾಗಿ, ಆಧಾರ, ದಾಖಲೆಗಳಿಲ್ಲದೆ ವಕ್ಫ್ ಆಸ್ತಿ ಎಂದು ಸೇರಿಸಲಾಗುವುದಿಲ್ಲ ಎಂದು ಹೇಳಿದ್ದಾರೆ.

ವಿಜಯಪುರದಲ್ಲಿ ರೈತರ ಆಸ್ತಿಗೆ ವಕ್ಫ್ ಆಡಳಿತ ಮಂಡಳಿ ನೋಟಿಸ್ ನೀಡಿದ್ದರ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳು ಹಳೆಯ ದಾಖಲೆಗಳನ್ನು ಪರಿಶೀಲನೆ ಮಾಡಿ ಕ್ರಮಕೈಗೊಳ್ಳುತ್ತಾರೆ.

ಜಿ.ಪರಮೇಶ್ವರ್, ಗೃಹ ಸಚಿವ

ಜಿಲ್ಲೆಯಲ್ಲಿ ಯಾವುದೇ ವ್ಯಕ್ತಿಯ, ಖಾಸಗಿ ಆಸ್ತಿಯನ್ನು ವಕ್ಫ್ ಮಂಡಳಿಗೆ ವರ್ಗಾಯಿಸಲಾಗುತ್ತಿಲ್ಲ. ವಕ್ಫ್ ಆಸ್ತಿ ಇಂಡೀಕರಣಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ರವಾನೆಯಾಗುತ್ತಿದೆ. ವದಂತಿಗಳಿಗೆ ರೈತರು-ಆಸ್ತಿ ಮಾಲೀಕರು ಕಿವಿಗೊಡಬಾರದು.

– ಟಿ.ಭೂಬಾಲನ್, ವಿಜಯಪುರ ಜಿಲ್ಲಾಧಿಕಾರಿ

ಫನ್‌ತರಂಗ

– ರಘುಪತಿ ಶೃಂಗೇರಿ –

ಕರ್ನಾಟಕ ಮೂರು ಭಾಗಗಳಾಗಲಿದ್ದು, 3 ಜನರು 'ಸಿಎಂ' ಆಗಲಿದ್ದಾರೆ – ಬ್ರಹ್ಮಾಂಡ ಗುರೂಜಿ
ಸುದ್ದಿ

ಸಮಾಚಾರ ಸಣ್ಣದಲ್ಲ

ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು 30ಕ್ಕೆ

ಚಿತ್ರದುರ್ಗ: ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಇದೇ ಅ.30ರಂದು ಬೆಳಗ್ಗೆ 10ಕ್ಕೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ''ಭ್ರಷ್ಟಾಚಾರದ ವಿರುದ್ಧ ಜಾಗೃತಿ ಅರಿವು ಸಪ್ತಾಹ-2024 ಮತ್ತು ರಾಷ್ಟ್ರದ ಏಳಿಗೆಗಾಗಿ ಸಮಗ್ರತೆಯ ಸಂಸ್ಕೃತಿ ಒಂದು ದಿನದ ಕಾರ್ಯಗಾರ ಆಯೋಜಿಸಲಾಗಿದೆ. ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಚಿತ್ರದುರ್ಗ ತಾಲ್ಲೂಕಿನ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ತಪ್ಪದೇ ಹಾಜರಬೇಕು ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ತಿಳಿಸಿದ್ದಾರೆ.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿಗೆ ಪರಿಶಿಷ್ಟ ಪಂಗಡ ಜನರ ಆರ್ಥಿಕ ಅಭಿವೃದ್ಧಿಗಾಗಿ ನಿಗಮದ ವಿವಿಧ ಯೋಜನೆಗಳನ್ನು ಅನುಷ್ಟಾನಗೊಳಿಸುವ ಸಂಬಂಧ ಪರಿಶಿಷ್ಟ ಪಂಗಡದ ಫಲಾಪೇಕ್ಷಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ನವೆಂಬರ್ 23 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡ ಜನರ ಆರ್ಥಿಕ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ, ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ ಸಾರಥಿ ಯೋಜನೆ, ಮೈಕ್ರೋಕ್ರೆಡಿಟ್ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆಗಳಿಗೆ ನಿಗಮದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡದ ಸಮುದಾಯದವರು ಸೇವಾಸಿಂಧು ಪೋರ್ಟಲ್ https://sevsindu.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಸರಸ್ವತಿಪುರಂ ಮುಖ್ಯ ರಸ್ತೆಯಲ್ಲಿನ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರನ್ನು ಅಥವಾ ಕಚೇರಿಯ ದೂರವಾಣಿ ಸಂಖ್ಯೆ 08194-221055 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪತ್ರಕರ್ತರಿಗೆ ಮೀಡಿಯಾ ಕಿಟ್ ಅರ್ಜಿ

ಚಿತ್ರದುರ್ಗ: ಪತ್ರಿಕೋದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಪತ್ರಕರ್ತರನ್ನು ಪ್ರೋತ್ಸಾಹಿಸುವ ಸಲುವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2024-25ನೇ ಸಾಲಿಗೆ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಮಾಧ್ಯಮ ಮಾನ್ಯತೆ ಹೊಂದಿರುವ ಪತ್ರಕರ್ತರಿಗೆ ''ಮೀಡಿಯಾ ಕಿಟ್'' ವಿತರಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಾಧ್ಯಮ ಮಾನ್ಯತೆ ಪಡೆದ ಪತ್ರಕರ್ತರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ವಿಭಾಗದಿಂದ ಅಥವಾ ಆಯಾ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕಾರಿಗಳಿಂದ ಅರ್ಜಿ ನಮೂನೆಯನ್ನು ಪಡೆದುಕೊಂಡು, ಇಲಾಖೆಯ ಮಾನ್ಯತಾ ಕಾರ್ಡ್, ಜನ್ಮ ದಿನಾಂಕ, ಖಾಯಂ ವಿಳಾಸ, ವಿದ್ಯಾರ್ಹತೆ, ಜಾತಿ, ಪತ್ರಿಕಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸೇವಾನುಭವ, ವೇತನ ವಿವರಗಳನ್ನೊಳಗೊಂಡ ಮಾಹಿತಿಯನ್ನು ಭರ್ತಿ ಮಾಡಿ ಸ್ವ-ವಿಳಾಸವಿರುವ ಲಕೋಟೆಯೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಇಲಾಖೆಯ ಆಯುಕ್ತರಾದ ಹೇಮಂತ್ ಎಂ.ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಕ್ರೀಡಾಂಗಣ ಸಮಿತಿ ಸಭೆ 29 ಕ್ಕೆ

ಚಿತ್ರದುರ್ಗ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅ.29 ರಂದು ಸಂಜೆ 4 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕ್ರೀಡಾಂಗಣ ಸಮಿತಿ ಸಭೆ ಕರೆಯಲಾಗಿದೆ. ಸಭೆಯಲ್ಲಿ ಬಳಕೆದಾರರ ಶುಲ್ಕ ನಿಗದಿ ಕುರಿತು ಚರ್ಚಿಸಲಾಗುವುದು. ನೊಂದಾಯಿತ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಭಾಗವಹಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಬಿ.ಎಂ.ನೆಲವಿಗಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಬಸವರಾಜ ಬೊಮ್ಮಾಯಿ} ಸಂಸದ

ಯಾಸೀರ್ ಖಾನ್ ಪಠಾಣ್ ರೌಡಿಶೀಟರ್ ಎಂದು ಕಾಂಗ್ರೆಸ್‌ನವರೇ ಮಾತಾಡಿದ್ದಾರೆ. ಈ ಬಗ್ಗೆ ಅವರ ಪಕ್ಷದವರೇ ಸ್ಪಷ್ಟೀಕರಣ ಕೊಡಲಿ. ಈ ಎಲ್ಲಾ ವಿಚಾರ ಬಿಜೆಪಿ ಕಾರ್ಯಕರ್ತರಿಗೆ ಮನದಟ್ಟಾಗಿದೆ. ಕ್ಷೇತ್ರದಲ್ಲಿ 2023ರ ವಿಧಾನಸಭಾ ಚುನಾವಣೆ ವಾತಾವರಣ ಇದೆ. ಕಾಂಗ್ರೆಸ್‌ನವರ ಕನಸು ನನಸಾಗಲ್ಲ.



ಧರಣಿ ಸ್ಥಳಕ್ಕೆ ಗೋವಿಂದ ಕಾರಜೋಳ ಭೇಟಿ | ಸಮಸ್ಯೆ ಆಲಿಕೆ | ಪರಿಹಾರಕ್ಕೆ ಸೂಚನೆ

ಸಮಾಜದ ಆಸ್ತಿಗಾಗಿ ಧರಣಿ

ಕಳೆದ ಎರಡು ದಿನಗಳಿಂದ ಅನಿರ್ದಿಷ್ಟವಾಧಿ ಧರಣಿ ಸತ್ಯಾಗ್ರಹ ನಡೆಸಿದರು.

ಚಳ್ಳಕೆರೆ: ಕಳೆದ ಎರಡು ದಿನಗಳಿಂದ ಮಾದಿಗ ಸಮಾಜದವರು ಅನಿರ್ದಿಷ್ಟವಾಧಿ ಧರಣಿ ಸತ್ಯಾಗ್ರಹ ನಡೆಸುವ ಸ್ಥಳಕ್ಕೆ ಲೋಕಸಭಾ ಸದಸ್ಯ ರಾದ ಗೋವಿಂದ ಎಂ ಕಾರಜೋಳ ಆಗಮಿಸಿ ಧರಣಿಯಲ್ಲಿ ಪಾಲ್ಗೊಂಡು ಧರಣಿ ನಿರತರ ಸಮಸ್ಯೆಗಳನ್ನು ಆಲಿಸಿದರು.

ಚಳ್ಳಕೆರೆ ನಗರದ ನಗರಸಭೆ ಆವರಣದಲ್ಲಿ ಕಳೆದ ಎರಡು ದಿನಗಳಿಂದ ಅನಿರ್ದಿಷ್ಟವಾಗಿ ಧರಣಿ ನಡೆಸುವ ಸ್ಥಳಕ್ಕೆ ಆಗಮಿಸಿ ಮಾತನಾಡಿದರು.

ಮಾದಿಗ ಸಮುದಾಯದ ಆಸ್ತಿಯನ್ನು ಅನ್ಯ ಸಮುದಾಯದವರು ಅತಿಕ್ರಮಣ ಮಾಡಿದ್ದಾರೆ, ಆದ್ದರಿಂದ ಮಾದಿಗರ ಆಸ್ತಿಯನ್ನು ಮಾದಿಗರಿಗಾಗಿ ಮೀಸಲಿಡಬೇಕು, ಮಾದಿಗರ ಭೂಮಿಯ ಹಕ್ಕು ಪತ್ರಗಳನ್ನು ಈ ಕೂಡಲೇ ಕೊಡಬೇಕು ಎಂದು ಒತ್ತಾಯಿಸಿದರು.

ಹಳೆನಗರದ ಜಯಣ್ಣ ಮಾತನಾಡಿ, ಮಾದಿಗ ಸಮಾಜದ ಆಸ್ತಿಯ ಉಳಿವಿಗಾಗಿ ಅನಿರ್ದಿಷ್ಟ ಕಾಲ ಧರಣಿ ಸತ್ಯಾಗ್ರಹ ಹಾಗೂ ಪ್ರತಿಭಟನೆಯಲ್ಲಿ ತಾಲೂಕಿನ ಪ್ರತಿಯೊಬ್ಬ ಮಾದಿಗರು ಭಾಗವಹಿಸಬೇಕು, ತಾಲ್ಲೂಕಿನ ಸಮಸ್ತ ಮಾದಿಗ ಸಮಾಜದ ಬೆಲೆಬಾಳುವ ಆಸ್ತಿಯನ್ನು ಅತಿಕ್ರಮಣ ಮಾಡುವಂತಹ (ಡೇಲೈಟ್ ರಾಬರಿ) ಈ ಕಾನೂನು ಬಾಹಿರ ಕೆಲಸದ ವಿರುದ್ಧ ಪ್ರತಿಯೊಬ್ಬ ಪ್ರಜ್ಞಾವಂತ ಮಾದಿಗ ಬಂಧು ಈ ಅನ್ಯಾಯದ ವಿರುದ್ಧ ಪ್ರತಿಭಟಿಸಲೇಬೇಕಾದ ಅನಿವಾರ್ಯತೆ ಇದೆ ಎಂದರು.

ನಮ್ಮ ಪೂರ್ವಜರು ಸಮಾಜದ ಏಳಿಗೆಗಾಗಿ ಚಳ್ಳಕೆರೆ ನಗರದಲ್ಲಿ ನಿರ್ಮಿಸಿದ ಚರ್ಮ ಹದಮಾಡುವ ಕೈಗಾರಿಕೆ. ಹಾಗೂ ಚರ್ಮಮಾರಾಟ ಮಾಡುವ ಮಳಿಗೆಯನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅತಿಕ್ರಮಣ ಮಾಡುತ್ತಿದ್ದರೂ ಚಳ್ಳಕೆರೆ ನಗರಸಭೆ ಇದರ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುತ್ತಿರುವುದು ಸೋಜಿಗದ ಸಂಗತಿ.

ಅಲ್ಲದೇ ಚಿತ್ರದುರ್ಗ ರಸ್ತೆಯಲ್ಲಿರುವ ಬಾಬೂ ಜಗಜೀವನರಾಂ ಭವನ ಹಾಗೂ ಗಾಂಧಿನಗರದಲ್ಲಿರುವ ಪುರಸಭಾ ಕಲ್ಯಾಣ ಮಂಟಪಕ್ಕೆ, ಚಳ್ಳಕೆರೆ ನಗರಸಭೆ ಇದೇ ರೀತಿ ದ್ವಿ-ಮುಖ ನೀತಿಯನ್ನು ಅನುಸರಿಸುತ್ತಿರುವುದು ನಗರಸಭೆಯ ಆಡಳಿತ ಮಾದಿಗ ಸಮಾಜದ ಪರ ಎಷ್ಟೆಂಬುದು ತಾವೇಯೋಚಿಸಬೇಕು. ಈಗಾಗಲೇ ಚರ್ಮ ಕೈಗಾರಿಕೆ ಮಳಿಗೆಯನ್ನು ಅನ್ಯ ಧರ್ಮಿಯರ ಸಂಘಟನೆ ವ್ಯಾಪ್ತಿಗೆ ಒಳಪಡಿಸುತ್ತಿರುವ ಹುನ್ನಾರ ನಡೆಯುತ್ತಿರುವುದು ಗಮನಕ್ಕೆ ಬಂದಿರುತ್ತೆ. ಈ ರೀತಿ ಮಾದಿಗ ಸಮಾಜದ ಬೆಲೆ ಬಾಳುವ ಆಸ್ತಿಯನ್ನು ಅತಿಕ್ರಮಣ ಮಾಡುತ್ತಿರುವುದು ನಗರಸಭೆಯ ಅಧಿಕಾರಿಗಳ ಗಮನಕ್ಕೆ ಬಂದಿದ್ದರೂ ನಿರ್ಲಕ್ಷ್ಯ ತೋರುತ್ತಿರುವುದು, ಅತಿಕ್ರಮಣಗಾರರಿಗೆ ಕುಮ್ಮಕ್ಕು ನೀಡುತ್ತಿರುವುದು ಎಂದು ಅನುಮಾನ ಮೂಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಸಂಧರ್ಭದಲ್ಲಿ , ಮಾದಿಗ ಮಹಾ ಸಭಾದ ಅಧ್ಯಕ್ಷ ಎಂ ಶಿವಮೂರ್ತಿ, ಇಂದ್ರೇಶ್, ಸೂರನಹಳ್ಳಿ ಶ್ರೀನಿವಾಸ್, ಚೆನ್ನಿಗರಾಮಯ್ಯ, ಕೃಷ್ಣಮೂರ್ತಿ, ಪಾಪಣ್ಣ ಜಯಣ್ಣ, ಮಾದಿಗ ದಂಡೋರದ ಜಿಲ್ಲಾಧ್ಯಕ್ಷ ತಿಪ್ಪೇಸ್ವಾಮಿ, ಚೆನ್ನಾಗನಹಳ್ಳಿ ಮಲ್ಲೇಶ್ , ತಿಪ್ಪೇಸ್ವಾಮಿ , ಮಂಜುನಾಥ್, ವೆಂಕಟೇಶ್, ಚೆನ್ನಕೇಶವ ಮೂರ್ತಿ, ನಾಗರಾಜ್, ಅಂಜಿನಪ್ಪ, ಶಿವಮೂರ್ತಿ, ಗಾಂಧಿನಗರದ ಯುವ ಮುಖಂಡ ಎಲ್ ಸಿದ್ದು , ಚಿರಂಜೀವಿ ,ಮನು ದೊರೆ, ಇತರ ಹಲವು ಸಮಾಜದ ಮುಖಂಡರು, ಮಾದಿಗ ಸಮಾಜದ ಹಿರಿಯ ರಾಜಕಾರಣಿಗಳು, ನಿವೃತ್ತ ನೌಕರರು, ಕಲಾವಿದರು, ಎನ್.ಜಿ.ಓ. ಸಂಘಟನೆಗಳು, ಮಹಿಳಾ ಮತ್ತು ದಲಿತ ಸಂಘಟನೆಗಳ ಪದಾಧಿಕಾರಿಗಳು

ಮೂರು ತಲೆಮಾರಿನ ಹಿಂದೆ ನಮ್ಮ ಹಿರಿಯರು ನಮ್ಮ ಮಕ್ಕಳ ಭವಿಷ್ಯದ ಇತದೃಷ್ಟಿಯಿಂದ ನಗರದಲ್ಲಿ ಆದಿಕರ್ನಾಟಕ ಹಾಸ್ಟೆಲ್ ಜಾಗ, ಚರ್ಮ ಕೈಗಾರಿಕಾ ಕುಶಲ ಕರ್ಮಿ ಭೂಮಿ, ಚರ್ಮ ಕೈಗಾರಿಕಾ ಮಳಿಗೆಗಳು ಎಂದು ಮೂರು ಕಡೆ ಭೂಮಿಯನ್ನು ಅಂದಿನ ಸರಕಾರ ಮಾದಿಗ ಜನಾಂಗಕ್ಕೆ ನೀಡಿತ್ತು ಆದರೆ ಅಂದು ನೀಡಿದ ಭೂಮಿಯ ಕಡತಗಳು ಇಂದು ಇಲಾಖೆಯಲ್ಲಿ ಕೊಡಲು ಕೋರ್ಟ್ ಆದೇಶ ಆಗಬೇಕು.

- ಎಂ.ಶಿವಮೂರ್ತಿ, ಮಾದಿಗ ಮಹಾಸಭಾದ ಅಧ್ಯಕ್ಷ

ಸೋಮವಾರದೊಳಗೆ ಧರಣಿ ನಿರತರ ಸಮಸ್ಯೆಗಳನ್ನು ಪರಿಹರಿಸಿ ಚಳ್ಳಕೆರೆ ನಗರದ ಮಾದಿಗ ಜನಾಂಗಕ್ಕೆ ಮೀಸಲಿಟ್ಟ ಭೂಮಿಗಳ ಹಕ್ಕುಪತ್ರಗಳನ್ನು ಈ ಕೂಡಲೇ ನೀಡಬೇಕು ಅಲ್ಲಿಯವರೆಗೆ ಧರಣಿ ನಿರತರಿಗೆ ರಕ್ಷಣೆ ನೀಡಿ ನ್ಯಾಯಯುತವಾಗಿ ತಮ್ಮ ಬೇಡಿಕೆಗೆ ಸಹಕರಿಸಿ.

- ಗೋವಿಂದ ಎಂ ಕಾರಜೋಳ, ಲೋಕಸಭಾ ಸದಸ್ಯ

ನಮ್ಮ ಸರಕಾರ ಮಾದಿಗರ ಪರವಿದೆ

ಹಿರಿಯೂರು: ನಮ್ಮ ಸರಕಾರ ಮಾದಿಗರ ಪರವಿದೆ ಒಳ ಮೀಸಲಾತಿ ಜಾರಿಯ ಕಾಲ ತುಂಬಾ ಹತ್ತಿರವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ ಸುಧಾಕರ್ ಹೇಳಿದರು.

ತಾಲೂಕಿನ ದಲಿತಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ನಗರದ ಟಿಬಿ ವೃತ್ತದಿಂದ ಬ್ಲಾಕ್ ಕಾಂಗ್ರೆಸ್ ಕಚೇರಿವರೆಗೂ ಶನಿವಾರ ಪಾದಯಾತ್ರೆ ನಡೆಸಿ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಎಂದು ಸಲ್ಲಿಸಿದ ಮನವಿ ಸ್ವೀಕರಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಮೀಸಲಾತಿ ಜಾರಿ ಮಾಡಿದ ಪಕ್ಷವಾಗಿದ್ದು, ಪಕ್ಷ ಮತ್ತು ಸರ್ಕಾರ ಮಾದಿಗರ ಪರವಿದೆ ಎಸ್ ಎಂ ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ, ಸದಾಶಿವ ಆಯೋಗ ರಚಿಸಿದರು. ಆನಂತರ ನಾನು ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದಾಗ ನ್ಯಾ. ಸದಾಶಿವರವರು ಭೇಟಿ ಮಾಡಿ ಆಯೋಗಕ್ಕೆ ಒಂದು ಕಚೇರಿ ಇಲ್ಲ ಕೆಲಸ ಮಾಡಲು ಮೂಲಭೂತ ಸೌಕರ್ಯಗಳೇ ಇಲ್ಲ ಎಂದಾಗ ವರದಿ ತಯಾರಿಯ ಅನುಕೂಲಕ್ಕಾಗಿ 9 ಕೋಟಿ ಹಣ ಬಿಡುಗಡೆ ಮಾಡಿದ್ದೆ ಎಂದರು.

ದಲಿತ ಸಂಘಟನೆಗಳ ಮುಖಂಡರಾದ ಕೆಪಿ ಶ್ರೀನಿವಾಸ್, ಜೀವೇಶ್, ಕರಿಯಪ್ಪ, ರಾಜಪ್ಪ ಮಸ್ಕಲ್, ಹೆಗ್ಗೆರೆ ಮಂಜುನಾಥ್, ಧರ್ಮಪುರ ರಂಗಸ್ವಾಮಿ, ಎಂ ಡಿ ರಮೇಶ್, ಲಕ್ಷ್ಮಕ್ಕ,ಮೇಟಿಕುರ್ಕೆ ಚಂದ್ರಪ್ಪ,ರಂಗನಾಥ್, ಘಾಟ್ ರವಿ, ಪರಮೇಶ್ವರಪ್ಪ,ಮಹೇಶ್, ಒಂಕಾರ್ ಮಟ್ಟಿ, ಬ್ಯಾಡರಹಳ್ಳಿ ಹನುಮಂತ ರಾಯ, ಘಾಟ್ ಮಂಜುನಾಥ್, ತಿರುಮಲೇಶ್ ಮುಂತಾದವರು ಹಾಜರಿದ್ದರು.

ಒಳ ಮೀಸಲಾತಿ ಜಾರಿಯ ಅನುಷ್ಠಾನ ಅಂತಿಮ ಘಟ್ಟಕ್ಕೆ ಬಂದಿದೆ. ಸಣ್ಣ ಪುಟ್ಟ ಲೋಪದೋಷಗಳನ್ನು ಸರಿಪಡಿಸಲಾಗುತ್ತಿದೆ. ಸೋಮವಾರ ನಡೆಯುವ ಸಚಿವ ಸಂಪುಟದ ಸಭೆಯಲ್ಲಿ ನಾನು ಇಡೀ ಜಿಲ್ಲೆಯ ಮಾದಿಗರ ಪರವಾಗಿ ಒಳ ಮೀಸಲಾತಿ ಜಾರಿಗೆ ಮನವಿ ಮಾಡುತ್ತೇನೆ. ಚಳ್ಳಕೆರೆ, ಹಿರಿಯೂರು,ಮೊಳಕಾಲ್ಮೂರು, ಚಿತ್ರದುರ್ಗದ ಸಂಘಟನೆಗಳು ಕೊಟ್ಟ ಮನವಿಯನ್ನು ಮುಖ್ಯಮಂತ್ರಿಗಳಿಗೆ ತಲುಪಿಸುತ್ತೇನೆ.

- ಡಿ ಸುಧಾಕರ್, ಸಚಿವ



ತಾಲೂಕಿನ ದಲಿತಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ನಗರದ ಟಿಬಿ ವೃತ್ತದಿಂದ ಬ್ಲಾಕ್ ಕಾಂಗ್ರೆಸ್ ಕಚೇರಿವರೆಗೂ ಪಾದಯಾತ್ರೆ ನಡೆಸಿ ಸಚಿವ ಡಿ ಸುಧಾಕರ್ ಮಾತನಾಡಿದರು.

ಸೊರಟೂರು ಪಂಚಾಯಿತಿ ಅಧ್ಯಕ್ಷ ಕಲ್ಯಾಣಿಮರಿಯಪ್ಪ



ಗ್ರಾಮಪಂಚಾಯಿತಿ ಅಧ್ಯಕ್ಷ ಕೆ.ಕಲ್ಯಾಣಿಮರಿಯಪ್ಪಗೆ ಅಭಿನಂದಿಸಲಾಯಿತು.

ಹೊನ್ನಾಳಿ: ತಾಲೂಕಿನ ಸೊರಟೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕೆ.ಕಲ್ಯಾಣಿಮರಿಯಪ್ಪ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಾ. ವಿಶ್ವನಟೇಶ್ ಘೋಷಿಸಿದರು.

ಹಿಂದಿನ ಅಧ್ಯಕ್ಷರಾಗಿದ್ದ ಪರಶುರಾಮ ರಾಮ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬೇರೆ ಸದಸ್ಯರು ಯಾರೂ ನಾಮಪತ್ರ ಸಲ್ಲಿಸದೇ ಇರುವುದರಿಂದ ಕೆ.ಕಲ್ಯಾಣಿ ಮರಿಯಪ್ಪ ಇವರು ಶುಕ್ರವಾರ ಅಧ್ಯಕ್ಷರಾಗಿ ಆಯ್ಕೆಗೊಂಡರು.

ಈ ಸಂದರ್ಭದಲ್ಲಿ ಶಾಸಕ ಶಾಂತನಗೌಡ, ಕಾಂಗ್ರೆಸ್ ಮುಖಂಡರಾದ ಎಚ್.ಬಿ ಮಂಜಪ್ಪ, ಎಚ್ ಎ ಉಮಾಪತಿ, ಗ್ರಾಪಂ ಮಾಜಿ ಅಧ್ಯಕ್ಷ ಜಿ. ಬಸವನಗೌಡ ಪಾಟೀಲ್, ಉಪಾಧ್ಯಕ್ಷೆ ರಾಧಮ್ಮ, ಸದಸ್ಯರಾದ ವಿರೂಪಾಕ್ಷಪ್ಪ, ಹನುಮಂತಪ್ಪ, ಮರಿಯಪ್ಪ, ರಾಧಮ್ಮ, ನಾಗರತ್ನಬಾಯಿ, ಕೆಂಚಮ್ಮ, ರಂಜಿತಾ, ಸುಮಾ, ಪಿಡಿಒ ಎನ್.ನಾಗರಾಜ್, ಕಾರ್ಯದರ್ಶಿ ಹಳದಪ್ಪ ಗ್ರಾಮದ ಮುಖಂಡರಾದ ಶಿವನಗೌಡ,ಎಂ ಬಸವಣ್ಯಪ್ಪ, ಚಂದ್ರಪ್ಪ ಮಾಸ್ಟರ್,ಒ ಹನುಮಪ್ಪ, ಎನ್.ನಾಗೇಶ್‌ರಾವ್,ಕೆ.ಬಿ ರಾಮನಗೌಡ ಇನ್ನಿತರರಿದ್ದರು.

ಹಿರಿಯೂರಿನದೆಂದು ಸಂಬೋಧಿಸಿದರೆ ಹೋರಾಟ | ಮಾಜಿಸಚಿವ ಗೂಳಿಹಟ್ಟಿ ಶೇಖರ್ ಎಚ್ಚರಿಕೆ

ಹೊಸದುರ್ಗ ವಿವಿ ಸಾಗರ ಎಂದೇ ನಮೂದಿಸಿ

ಹೊಸದುರ್ಗ: ವಾಣಿವಿಲಾಸ ಸಾಗರ ಜಲಾಶಯ ಹಿರಿಯೂರು ತಾಲೂಕಿನಲ್ಲಿದೆ ಎಂದು ಹೇಳುವುದು ಶುದ್ಧ ಸುಳ್ಳು. ಇಂತಹ ಸುದ್ದಿಯನ್ನು ದಯವಿಟ್ಟು ಹಬ್ಬಿಸಬೇಡಿ. ಈ ಜಲಾಶಯ ಇರುವುದು ಸಂಪೂರ್ಣ ಹೊಸದುರ್ಗ ತಾಲೂಕಿನಲ್ಲಿ. ಹಾಗಾಗಿ ಇನ್ನು ಮುಂದೆ ಹೊಸದುರ್ಗ ವಾಣಿವಿಲಾಸ ಸಾಗರ ಜಲಾಶಯ ಎಂದು ನಮೂದಿಸುವ ಜತೆಗೆ ಸಂಬೋಧನೆಯನ್ನು ಮಾಡಬೇಕು ಎಂದು ಮಾಜಿ ಸಚಿವ ಗೂಳಿಹಟ್ಟಿ ಡಿ.ಶೇಖರ್ ಮಾಧ್ಯಮದವರಿಗೆ ಹಾಗೂ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಸುದ್ದಿಗಾರರಿಗೆ ಅವರು ಆಡಿಯೋ ರೆಕಾರ್ಡ್ ಹಾಗೂ ವಾಣಿವಿಲಾಸ ಸಾಗರ ಜಲಾಶಯ ಇರುವ ಸ್ಥಳದ ನಕ್ಷೆ ಫೋಟೋ ಕಳಿಸಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಿಂದಲೂ ವಿವಿ ಸಾಗರ ಹೊಸದುರ್ಗ ತಾಲೂಕಿನಲ್ಲಿದೆ. ನಾನು ಕಳೆದ ಬಾರಿ ಶಾಸಕನಾಗಿದ್ದಾಗಲೇ ವಾಣಿವಿಲಾಸ ಸಾಗರ ಜಲಾಶಯದ ಇರುವ ಸ್ಥಳದ ಮೂಲನಕ್ಷೆಯನ್ನು ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆಯವರಿಂದ ಬಿಡುಗಡೆ ಮಾಡಿಸಿದ್ದೇನೆ. ವಾಣಿವಿಲಾಸ ಸಾಗರ ಜಲಾಶಯದಲ್ಲಿ ನೀರು ಸಂಗ್ರವಾಗಿರುವುದು, ಅಣೆಕಟ್ಟೆ ಕಟ್ಟಿರುವುದು, ಪ್ರವಾಸಿ ಮಂದಿರ ಹಾಗೂ ಅಮ್ಮನ ದೇವಸ್ಥಾನ ಇರುವ ಜಾಗ ಸಂಪೂರ್ಣ ಹೊಸದುರ್ಗ ತಾಲೂಕಿನಲ್ಲಿದೆ. ದಾಖಲೆಯಲ್ಲಿ ಹೀಗಿದ್ದರೂ ಇನ್ನೂ ಹಿರಿಯೂರು ತಾಲೂಕಿನ ವಾಣಿವಿಲಾಸ ಸಾಗರ ಜಲಾಶಯ ಎಂದು ಕರೆಯುತ್ತಿರುವುದು ಸರಿಯಲ್ಲ. ಈ ಬಗ್ಗೆ ಸದನದಲ್ಲಿಯೂ ಪ್ರಶ್ನೆ ಮಾಡಿ ಇನ್ನೂ ಮುಂದೆ ಹೊಸದುರ್ಗ ತಾಲೂಕಿನ ವಾಣಿವಿಲಾಸ ಸಾಗರ ಜಲಾಶಯ ಎಂದು ನಮೂದಿಸಬೇಕು ಎಂದು ಪ್ರಸ್ತಾಪಿಸಿದ್ದೇನೆ. ಮಾಧ್ಯಮದವರು ಸಹ ಜಲಾಶಯ ಇರುವ ದಾಖಲೆಗೆ ಪೂರಕವಾಗಿ ಸಂಬೋಧಿಸಿ, ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಮನವಿ ಮಾಡಿದ್ದಾರೆ.

ವಿವಿ ಸಾಗರ ನಮ್ಮದಾಗಿದ್ದರೂ ನಮ್ಮ ತಾಲೂಕಿಗೆ ಸ್ವಲ್ಪವೂ ಅನುಕೂಲ ಆಗುತ್ತಿಲ್ಲ. ಸರಕಾರ ಮಲತಾಯಿ ಧೋರಣೆ ಮಾಡಿದೆ. ಕೂಡಲೇ ಕ್ರಸ್ಟ್ ಗೇಟ್ ಅಳವಡಿಸಿ ಹಿನ್ನೀರಿನ ಜನರ ಹಿತ ಕಾಪಾಡಬೇಕು. ಹಾಗಾಗಿ ಮುಂದಿನ ಡಿಸೆಂಬರ್ ತಿಂಗಳಲ್ಲಿ ನಮ್ಮ ಹಕ್ಕು ನಮ್ಮ ನೀರು ಜನಾಂದೋಲ ಆರಂಭಿಸಲಾಗುವುದು. ಹೊಸದುರ್ಗ ತಾಲೂಕಿನ ಜನರಲ್ಲಿರುವ ಅಮಾಯಕತ್ವವನ್ನು ಹಿರಿಯೂರಿನ ಜನರು ದುರುಪಯೋಗ ಪಡಿಸಿಕೊಂಡಿದ್ದಾರೆ. ಇದರಿಂದಾಗಿ ಹಿರಿಯೂರು ತಾಲೂಕಿನ ವಾಣಿವಿಲಾಸ ಸಾಗರ ಜಲಾಶಯ ಎಂದು ಹೇಳಿಕೊಳ್ಳುತ್ತಲೇ ಬರುತ್ತಿದ್ದಾರೆ.

ಹೊಸದುರ್ಗ ರೈತ ಸಂಘದ ಅಧ್ಯಕ್ಷ ಬೋರೇಶ್, ಹಿರಿಯೂರಿನ ಕೆ.ಟಿ.ತಿಪ್ಪೇಸ್ವಾಮಿ, ಹೊಳಲ್ಕೆರೆ ರಂಗಸ್ವಾಮಿ, ಬಯಲಪ್ಪ, ಮಹೇಶ್ವರಪ್ಪ, ಕರಿಸಿದ್ದಯ್ಯ ಸೇರಿ ಇನ್ನಿತರ ರೈತ ಮುಖಂಡರು ಸಭೆಯಲ್ಲಿದ್ದರು.

ಹಿರಿಯೂರಿನ ರೈತ ಮುಖಂಡ ಕಸವನಹಳ್ಳಿ ರಮೇಶ್ ವಿವಿ ಸಾಗರವನ್ನು ಅವರ ಆಸ್ತಿ ಅಂತ ತಿಳಿದುಕೊಂಡಿದ್ದಾರೆ. ಅವರ ವೈಯಕ್ತಿಕ ಪ್ರಚಾರಕ್ಕಾಗಿ ಜಲಾಶಯದ ಬಗ್ಗೆ ಏನೇನೋ ಹೇಳಿಕೆ ಕೊಟ್ಟು, 2 ತಾಲೂಕಿನ ಸಂಬಂಧವನ್ನು ಹಾಳು ಮಾಡುತ್ತಿದ್ದಾರೆ. ಹಾಗಾಗಿ ಅವರ ಹೇಳಿಕೆಗೆ ಬೆಲೆ ಕೊಡುವ ಅಗತ್ಯವಿಲ್ಲ.

- ಗೂಳಿಹಟ್ಟಿ ಡಿ.ಶೇಖರ್, ಮಾಜಿ ಸಚಿವ

ಮಳೆ ಸಂತ್ರಸ್ತರಿಗೆ ಪರಿಹಾರ ಕಲ್ಪಿಸಿ: ಎಸ್‌ವಿಆರ್

ಜಗಳೂರು: ಮಳೆ ಸಂತ್ರಸ್ತರಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಮಾಜಿ ಶಾಸಕ ರಾಮಚಂದ್ರಪ್ಪ ಕಾಂಗ್ರೆಸ್ ಸರಕಾರಕ್ಕೆ ಒತ್ತಾಯಿಸಿದರು. ತಾಲೂಕಿನ ಉದ್ದಗಟ್ಟ ಹಿರೇಮಲ್ಲನ ಹೊಳೆ ಗ್ರಾಮದ ನೆರೆ ಸಂತ್ರಸ್ತರ ಭೇಟಿ ಮಾಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿ ಪತ್ರಕರ್ತರೊಂದಿಗೆ ಮಾತನಾಡಿದರು.

ತಾಲೂಕಿನಲ್ಲಿ ಈ ಬಾರಿ ಹಿಂಗಾರಿನಲ್ಲಿ ವಾಡಿಕೆಗಿಂತ 199 ಮಿ.ಮಿ ಹೆಚ್ಚು ಮಳೆಯಾಗಿದ್ದು, ಮನೆ ಬೆಳೆ ಹಾನಿಯಾಗಿದ್ದು ತಗ್ಗು ಪ್ರದೇಶದ ಜನವಸತಿಗಳಲ್ಲಿ ನೀರು ನುಗಿದ್ದು, ಉದ್ದಗಟ್ಟ ಗ್ರಾಮದಲ್ಲಿ 25 ಮನೆಗಳಿಗೆ ನೀರು ನುಗಿದ್ದು, ಸಂತ್ರಸ್ಥರಿಗೆ ಏನು ಬೇಕು ಅದನ್ನು ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು ಅಲ್ಲದೇ ತಾಲೂಕು ಆಡಳಿತ ಜಿಲ್ಲಾಡಳಿತ ಇವರಿಗೆ ಶಾಶ್ವತ ಪರಿಹಾರ ವ್ಯವಸ್ಥೆಯನ್ನು ಮಾಡಬೇಕು ಎಂದು ಒತ್ತಾಯಿಸಿದರು.

ನಂತರ ಹಿರೇಮಲ್ಲನಹೊಳೆ ಕೆರೆ ಕೋಡಿಯ ಮನೆಗಳ ಭೇಟಿ ನೀಡಿ ಸಂತ್ರಸ್ತರ ವಾಸ್ತವತೆಯನ್ನು ಪರಿಶೀಲಿಸಿ ಸಾಂತ್ವನ ಹೇಳಿ, ಜಗಳೂರಿನಲ್ಲಿ ರಾಜ್ಯದಲ್ಲಿ ರಣಬೀಕರ ಮಳೆಯನ್ನು ಕಂಡಿದ್ದು, ಹಚ್ಚಿನ ಹಾನಿ ಸಂಭವಿಸಿದೆ. ರಾಜ್ಯ ಸರಕಾರದ ಮೇಲೆ ಒತ್ತಡ ಹಾಕಿ ಸೈಟ್ ಹಾಗೂ ಮನೆ ನಿರ್ಮಿಸಿ ಕೊಡಲು ಶ್ರಮಿಸುತ್ತೇವೆ ಅಲ್ಲದೆ ಸರ್ಕಾರ ದಿಂದ ಬರುವ ಪರಿಹಾರದ ಹಣವನ್ನು ತಕ್ಷಣ ಸಹ ನೀಡಲು ಒತ್ತಡ ಹಾಕಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬಿಸ್ತುವಳ್ಳಿ ಬಾಬು, ಮಾಜಿ ತಾಪಂ ಕುಬೇಂದ್ರಪ್ಪ,ಅರವಿಂದ್ ಪಾಟೀಲ್, ಆರಾಧ್ಯ, ಬಾಣೇಶ್, ರಘು, ಇಂದ್ರೇಶ್, ಅಜ್ಜಯ್ಯ ಸೇರಿದ್ದಂತೆ ಗ್ರಾಮದ ಹಲವು ಯುವ ಮುಖಂಡರು ಜತೆಗಿದ್ದರು.

ತಾಲೂಕಿನ ಉದ್ದಗಟ್ಟ ಹಿರೇಮಲ್ಲನಹೊಳೆ ಗ್ರಾಮದ ನೆರೆ ಸಂತ್ರಸ್ತರ ಭೇಟಿ ಮಾಡಿದ ಮಾಜಿ ಶಾಸಕ ರಾಮಚಂದ್ರಪ್ಪ

ಉದ್ದಗಟ್ಟ ಗ್ರಾಮವು ತಾಲೂಕಿನಿಂದ ಮೂರನಾಲ್ಕು ಕಿಲೋಮಿಟರ್ ಅಂತರಲ್ಲಿದೆ ಈ ಗ್ರಾಮದಲ್ಲಿ 25 ಕ್ಕೂ ಹೆಚ್ಚು ಮನೆಗಳಿ ಜಲಾವೃತ್ತವಾದರು ಜಲ್ಲಾಡಳಿ ತಾಲೂಕು ಆಡಳಿತ ಇತ್ತ ಕಡೆ ತಲೆ ಕೂಡ ಹಾಕಿಲ್ಲ ಅಲ್ಲದೆ ಸಂತ್ರಸ್ತರನ್ನು ಸೌಜನ್ಯಕ್ಕೂ ಬಂದು ಭೇಟಿ ಮಾಡದೆ ಇರುವುದು ದುರ್ದೈವ ಎಂದು ಬೇಸರವ್ಯಕ್ತಪಡಿಸಿ ದರಲ್ಲದೇ ಈ ಗ್ರಾಮದಲ್ಲಿ 100 ಕ್ಕೂ ಹೆಚ್ಚು ಜನರಿಗೆ ಮಳೆಯಿಂದ ತೊಂದರೆಯಾಗಿದೆ.

- ರಾಜೇಶ್, ಮಾಜಿ ಶಾಸಕ

ಕಿತ್ತೂರು ಚನ್ನಮ್ಮ ಅಂಚೆ ಚೀಟಿ ಬಿಡುಗಡೆ

ಹೊನ್ನಾಳಿ: ಮಹಿಳೆಯರಿಗೆ ಸದಾ ಸ್ಫೂರ್ತಿ ಹಾಗು ಪ್ರೇರಣೆಯಾಗಿರುವ ಕಿತ್ತೂರುರಾಣಿ ಚೆನ್ನಮ್ಮ ಬ್ರಿಟೀಷರ ವಿರುದ್ಧ ಹೋರಾಡಿ ಗೆದ್ದ ವಿಜಯೋತ್ಸವ ಸಂಭ್ರಮಾಚರಣೆ ದಿನವನ್ನು ನಾವೆಲ್ಲರು ಆಚರಿಸುವುದೆ ಒಂದು ಸಂಭ್ರಮದ ದಿನವಾಗಿದೆ ಎಂದು ಉಪವಿಭಾಗಾಧಿಕಾರಿಗಳಾದ ಅಭಿಷೇಕ್ ರವರು ತಿಳಿಸಿದರು.

ಅವರು ಹೊನ್ನಾಳಿ ತಾಲೂಕು ಆಡಳಿತದಿಂದ ಇಂದು ನಡೆದ ಕಿತ್ತೂರು ಚನ್ನಮ್ಮ 200 ನೇ ವಿಜಯೋತ್ಸವ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಪಂಚಮಸಾಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಪಟ್ಟಣಶೆಟ್ಟಿ ಪರಮೇಶ್ ಮಾತನಾಡಿ ಕಿತ್ತೂರು ಪ್ರಾಧಿಕಾರ ಕನ್ನಡ ಹಾಗು ಸಂಸ್ಕೃತಿ ಇಲಾಖೆ ವತಿಯಿಂದ ಇಂದಿನಿಂದ 3 ದಿನಗಳ ಕಿತ್ತೂರು ಕೋಟೆ ಆವರಣದಲ್ಲಿ ಚನ್ನಮ್ಮನ ಕಿತ್ತೂರು ಉತ್ಸವ ವಿಶೇಷವಾಗಿ ಆಚರಿಸುತ್ತಿದ್ದು ನಾಡಿನೆಲ್ಲಡೆ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದರು.

ಕಿತ್ತೂರು ಚನ್ನಮ್ಮ ಬಗ್ಗೆ ಪತ್ರಕರ್ತ ಗೀರಿಶ್ ನಾಡಿಗ್ ಇವರಿಂದ ಉಪನ್ಯಾಸ ನಡೆಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ ಪಟ್ಟರಾಜೇಗೌಡ; ಪಂಚಮಸಾಲಿ ಯುವ ಘಟಕ ಅಧ್ಯಕ್ಷ ಹಾಲೇಶ ರಾಂಪುರ ,ಉಪಾಧ್ಯಕ್ಷ ಮೃತ್ಯುಂಜಯ ಪಾಟೀಲ್, ಚಂದ್ರಶೇಖರ, ಮಹಿಳಾ ಪದಾಧಿಕಾರಿಗಳಾದ ಶೀಲ್ಪಾ ರಾಜುಗೌಡ,ಕವಿತಾ ಚನ್ನೇಶ್, ರೈತ ಮುಖಂಡರಾದ ಹಿರೇಮಠ ಬಸವರಾಜಪ್ಪ,ಅರಬಗಟ್ಟೆ ಬಸಪ್ಪ ಇನ್ನಿತರರಿದ್ದರು.

ಹೊನ್ನಾಳಿ ತಾಲೂಕು ಆಡಳಿತದಿಂದ ಇಂದು ನಡೆದ ಕಿತ್ತೂರು ಚನ್ನಮ್ಮ 200 ನೇ ವಿಜಯೋತ್ಸವ ಸಮಾರಂಭ ನಡೆಯಿತು.

ರಾಣಿ ಚನ್ನಮ್ಮ ಗೆಲುವಿನ ಸಂಭ್ರಮದ ಸವಿನೆನಪಿಗಾಗಿ ಕೇಂದ್ರ ಸರಕಾರ ಅಂಚೆ ಚೀಟಿ ಬಿಡುಗಡೆಗೊಳಿಸುವ ಆದೇಶದ ಮೂಲಕ ಈ ದಿನವನ್ನು ಸ್ಮರಣೆಯ ದಿನವನ್ನಾಗಿಸುವುದರೊಂದಿಗೆ ಚನ್ನಮ್ಮನ ಸ್ವಾಭಿಮಾನಿ ಹಾಗು ದಿಟ್ಟತನದ ಹೋರಾಟಕ್ಕೆ ಗೌರವ ಸಲ್ಲಿಸಿದೆ.

- ಬೆನಕನಹಳ್ಳಿ ವೀರಣ್ಣ , ಅಧ್ಯಕ್ಷ

ಹೊಳಲ್ಕೆರೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ, ತಾಲ್ಲೂಕು ಮಾದಿಗ ಮಹಾಸಭಾ ಒಳ ಮೀಸಲಾತಿ ಹೋರಾಟ ಸಮಿತಿಯವರು, ಶನಿವಾರ ಒಳ ಮೀಸಲಾತಿ ಜಾರಿಮಾಡುವ ಸಲುವಾಗಿ ಶಾಸಕ ಡಾ. ಎಂ ಚಂದ್ರಪ್ಪ ಅವರನ್ನು ಭೇಟಿಯಾಗಿ ಮನವಿ ಪತ್ರ ಸಲ್ಲಿಸಿದರು.

ಪ್ರವಾಸೋದ್ಯಮಕ್ಕೆ ಸಂಗೇನಹಳ್ಳಿ ಕೆರೆ ಅಭಿವೃದ್ಧಿ

ಜಗಳೂರು: ಸಂಗೇನಹಳ್ಳಿ ಕೆರೆ ಕೋಡಿ ಕುದುರೆ ಲಾಳಕಾರದಲ್ಲಿ ಇದ್ದು, ಪ್ರವಾಸೋದ್ಯಮಕ್ಕೆ ಒಳ್ಳೆಯ ಅವಕಾಶವಿದ್ದು ಕೆರೆ ಅಭಿವೃದ್ದಿಗೆ ಚಿಂತಿಸಲಾಗುವುದು ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ತಾಲೂಕಿನ ಸಂಗೇನಹಳ್ಳಿ ಕೆರೆಗೆ ಬಾಗಿನ ಅರ್ಪಿಸಿ ನಂತರ ಕಲ್ಲೇದೇವಪುರ ಗ್ರಾಮದಲ್ಲಿ ವಿವಿಧ ಅಂಗನವಾಡಿ, ಸಮುದಾಯಭವನ ಕಾಮಗಾರಿ ಉದ್ಘಾಟಿಸಿ ವೇದಿಕೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಮೈಸೂರು ಸಂಸ್ಥಾನದಲ್ಲಿ ಅವಧಿಯಲ್ಲಿ ಸಚಿವರಾಗಿದ್ದ ಜೆ ಎಂ ಇಮಾಮ್ ಸಾಹೇಬರು ಕಟ್ಟಿದ್ದ ಐತಿಹಾಸಿಕ ಕೆರೆಗಳಲ್ಲಿ ಸಂಗೇನಹಳ್ಳಿ ಕೆರೆ ಒಂದಾಗಿದ್ದು, ಇದರ ವಿಹಂಗಮ ನೋಟ ಹಾಗೂ ಕೋಡಿಯ ಆಕಾರವು ಪ್ರವಾಸಿಗರನ್ನು ಕೈ ಬೀಸಿ ಕರೆಯುವಂತೆ ಇದೆ ಆದ್ದರಿಂದ ಮುಂದಿನ ದಿನಗಳಲ್ಲಿ ಸೂಳೆ ಕೆರೆಯಂತೆ ಅಭಿವೃದ್ದಿಪಡಿಸಿ ಪ್ರವಾಸೋದ್ಯಮಕ್ಕೆ ಸೇರಿಸುವ ಪ್ರಯತ್ನ ಮಾಡಲಾಗುವುದು ಎಂದರು

ಕಲ್ಲೇದೇವರಪುರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ , ಬಾಕ್ಸ್ ಚರಂಡಿ ಹೀಗೆ ಮೂಲಭೂತ ಸೌಲಭ್ಯಗಳು ಕಲ್ಪಿಸುವ ಸಲುವಾಗಿ ಪಕ್ಷದಿಂದ ಒಂದು ಕಮಿಟಿ ಮಾಡಿ ಸಭೆ ಕರೆದು ಅಭಿವೃದ್ಧಿ ಕೆಲಸ ಕಾರ್ಯಗಳ ಕುರಿತಾಗಿ ಚರ್ಚಿಸಿ ತಿರ್ಮಾನಿಸಿ ಯಾವೆಲ್ಲಾ ಕೆಲಸಗಳು ಆಗಬೇಕು ಎಂದು ನೋಡಿ ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಜಗಳೂರು ಭಾಗದಲ್ಲಿ ಗಾರ್ಮೆಂಟ್ಸ್ ಗೆ ಹೆಚ್ಚಿನ ಬೇಡಿಕೆ ಇದ್ದು, ಸ್ಥಳೀಯವಾಗಿ ಉದ್ಯೋಗ್ಯ ಒದಗಿಸುವ ನಿಟ್ಟಿನಲ್ಲಿ, ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದಲ್ಲಿ ಗಾರ್ಮೆಂಟ್ಸ್ ಸ್ಥಾಪನೆ ಮಾಡಲು ಚಿಂತನೆ ನೆಡಸಲಾಗಿದ್ದು ಶೀಘ್ರವೇ ಈ ಕುರಿತು ಕ್ರಮವಹಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಕೆ.ಪಿ ಪಾಲಯ್ಯ, ಬ್ಲಾಕ್ ಕಾಂಗ್ರೆಸ್ ಅಧಕ್ಷ ಶಂಷೀರ್ ಅಹಮದ್, ಕೆಪಿಸಿಸಿ ಸದಸ್ಯ ಕಲ್ಲೇಶ್‌ರಾಜ್‌ಪಾಟೀಲ್, ಗ್ರಾಪಂ ಅಧ್ಯಕ್ಷೆ ವಸಂತಮ್ಮ, ಗ್ರಾಮದ ಮುಖಂಡರಾದ ಬಡಯ್ಯ, ಕೊಟ್ಟಿಗೆ ತಿಪ್ಪೇಸ್ವಾಮಿ ಸೇರಿದಂತೆ ಹಲವರಿದ್ದರು.

ತಾಲೂಕಿನ ಸಂಗೇನಹಳ್ಳಿ ಕೆರೆಗೆ ಬಾಗಿನ ಅರ್ಪಿಸಿ ನಂತರ ಕಲ್ಲೇದೇವಪುರ ಗ್ರಾಮದಲ್ಲಿ ವಿವಿಧ ಅಂಗನವಾಡಿ, ಸಮುದಾಯಭವನ ಕಾಮಗಾರಿಯನ್ನು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ಸಮಾಚಾರ ಸಣ್ಣದಲ್ಲ

ದಿಶಾ ಸಮಿತಿಗೆ ಹಕ್ರೆ ನೇಮಕ

ಸಾಗರ: ಭಾರತ ಸರಕಾರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಿಲ್ಲಾಮಟ್ಟದ ದಿಶಾ ಸಮಿತಿ ನಾಮ ನಿರ್ದೇಶಿತ ಸದಸ್ಯರಾಗಿ ತಾಲೂಕು ಪಂಚಾಯಿತಿ

ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಹಕ್ರೆ ಅವರನ್ನು ನೇಮಕ ಮಾಡಲಾಗಿದೆ. ಸಮಿತಿ ಅಧ್ಯಕ್ಷರಾಗಿ ಸಂಸದ ಬಿ.ವೈ.ರಾಘವೇಂದ್ರ, ಸೇರಿದಂತೆ ಈ ಸಮಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲಾ ಕ್ಷೇತ್ರದ ಶಾಸಕರು, ಅಧಿಕಾರಿಗಳು ಸಮಿತಿ ಸದಸ್ಯರಾಗಿರುತ್ತಾರೆ.

6ನೇ ದಿನಕ್ಕೆ ಕಾಲಿಟ್ಟ ರೈತರ ಧರಣಿ

ಸಾಗರ: ಮಲೆನಾಡ ಭಾಗದ ರೈತರ ಭೂ ಹಕ್ಕು ಸಮಸ್ಯೆ ಪರಿಹರಿಸಿ ಎಂದು ಆಗ್ರಹಿಸಿ ಅ 21 ರಿಂದ ಆರಂಭ ಗೊಂಡಿರುವ ಧರಣಿ ಸತ್ಯಾಗ್ರಹ ಶನಿವಾರವೂ ಮುಂದುವರಿಯುವ ಮೂಲಕ 6 ನೇ ದಿನಕ್ಕೆ ಕಾಲಿಟ್ಟಿದೆ. ಶನಿವಾರ ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿ ಎದುರಿನ ಹೊರ ಆವರಣದಲ್ಲಿ ಮುಂದುವರಿಸಿರುವ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ಇನ್ನು ನಿರಂತರವಾಗಿ ಇಲ್ಲಿಯೇ ಬೇಡಿಕೆ ಈಡೇರುವವರೆಗೂ ನಡೆಯಲಿರುವುದಾಗಿ ಪ್ರತಿಭಟನಾಕಾರರು ತಿಳಿಸಿದ್ದಾರೆ.ಈ ವೇಳೆ ದಿನೇಶ್ ಶಿರವಾಳ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರಕಾರ ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವವರೆಗೂ ಹಾಗೂ ಇಲ್ಲಿಯ ಜನರಿಗೆ ನ್ಯಾಯ ಸಿಗುವವರೆಗೂ ಹೋರಾಟ ನಿಲ್ಲಿಸುವ ಪ್ರಶ್ನೆ ಇಲ್ಲ ಎಂದರಲ್ಲದೆ ಎರಡು ವರ್ಷವಾದರೂ ಇದು ಮುಂದುವರಿಯಲಿದೆ ಎಂದರು. ಹೋರಾಟಗಾರರಾದ ತೀ.ನ. ಶ್ರೀನಿವಾಸ, ದುಗೂರು ಪರಮೇಶ್ವರ್, ತಾಲೂಕು ರೈತ ಸಂಘದ ಅಧ್ಯಕ್ಷ ಡಾ. ರಾಮಚಂದ್ರಪ್ಪ, ಜಿಲ್ಲಾ ಉಪಾಧ್ಯಕ್ಷ ಕೆಳದಿ ರಮೇಶ್, ಚಂದ್ರು ಸಿರಿವಂತೆ, ಜನಾರ್ಧನ ಅರಸಾಳು, ಮಲ್ಲೇಶ್‌ಗೌಡ, ತಿಮ್ಮಣ್ಣ ಮತ್ತಿತರರು ಇದ್ದರು.

ಮಂಜುನಾಥ್‌ಗೆ ಅಭಿನಂದನೆ ಇಂದು

ಶಿವಮೊಗ್ಗ: ಕನ್ನಡ ಪತ್ರಿಕೋದ್ಯಮದ ಪ್ರತಿಷ್ಠಿತ ಮೊಹರೆ ಹಣಮಂತರಾಯ ಪ್ರಶಸ್ತಿಗೆ ಪಾತ್ರರಾದ ಕ್ರಾಂತಿದೀಪ ಪತ್ರಿಕೆಯ ಸಂಪಾದಕ ಎನ್.ಮಂಜುನಾಥ್ ಮತ್ತು ಕರ್ನಾಟಕದ ನಾಟಕ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾದ ಹೊನ್ನಾಳಿ ಚಂದ್ರಶೇಖರ್ ಅವರಿಗೆ ಇಂದು ಶಿವಮೊಗ್ಗ ಪ್ರೆಸ್ ಟ್ರಸ್ಟ್ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಶಾಖೆ ವತಿಯಿಂದ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ. ಶಿವಮೊಗ್ಗದ ಆರ್‌ಟಿಓ ಕಚೇರಿ ರಸ್ತೆಯ ಪತ್ರಿಕಾಭವನದಲ್ಲಿ ಅಕ್ಟೋಬರ್ 27 ರಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ಹಿರಿಯ ಪತ್ರಕರ್ತ ಹಾಗೂ ಕನ್ನಡ ಪ್ರಭ ಪತ್ರಿಕೆಯ ಪುರವಣಿ ವಿಭಾಗದ ಸಮನ್ವಯ ಸಂಪಾದಕ ಬಿ.ವಿ.ಮಲ್ಲಿಕಾರ್ಜುನಯ್ಯ ಅವರು ಅಭಿನಂದನಾ ಭಾಷಣ ಮಾಡಲಿದ್ದಾರೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಶಾಖೆಯ ಉಪಾಧ್ಯಕ್ಷ ಯು. ಎಚ್. ವೈದ್ಯನಾಥ್ ಅಧ್ಯಕ್ಷತೆ ವಹಿಸಲಿದ್ದಾರೆಂದು ಶಿವಮೊಗ್ಗ ಪ್ರೆಸ್ ಟ್ರಸ್ಟ್ ಮ್ಯಾನೆಜಿಂಗ್ ಟ್ರಸ್ಟಿ ಗೋಪಾಲ್ ಯಡಗೆರೆ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರೆಸ್‌ಟ್ರಸ್ಟ್ ಖಜಾಂಚಿ ಜೇಸುದಾಸ್ ಉಪಸ್ಥಿತರಿದ್ದರು.

ಒಳ ಮೀಸಲು ಜಾರಿಗೆ ಆಗ್ರಹ

ಶಿವಮೊಗ್ಗ: ಚರ್ಮಕಾರ ಹಾಗೂ ಅದರ ಉಪ ಜಾತಿಯವರಿಗೆ ಒಳ ಮೀಸಲಾತಿ ಜಾರಿ ಮತ್ತು ಅಭಿವೃದ್ಧಿ ನಿಗಮ ಮಂಜೂರು ಮಾಡಬೇಕು ಎಂದು ಆಗ್ರಹಿಸಿ ಅಖಿಲ ಕರ್ನಾಟಕ ಚರ್ಮಕಾರ ಮಹಾಸಭಾದ ಜಿಲ್ಲಾ ಶಾಖಾ ವತಿಯಿಂದ ಇಂದು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಚರ್ಮದ ಉದ್ಯೋಗ ಕ್ರಿ.ಪೂ. ಕಾಲದಿಂದಲೂ ಮಾಡುತ್ತ ಬರಲಾಗಿದೆ. ಚರ್ಮಕಾರ ಜಾತಿಯಲ್ಲಿ ಸಾಮಗಾರ, ಮಾಚಿಗಾರ, ಮೋಚಿ, ಡೋರ, ಮುಂತಾದ ಜಾತಿಗಳಿವೆ. ಎಲ್ಲರೂ ಅಸ್ಪೃಶ್ಯಗಳಾಗಿದ್ದಾರೆ, ಆದರೆ ಇರುವ ಶೇ.15ರ ಅಡಿಯಲ್ಲಿ ಸಿಗುವ ಮೀಸಲಾತಿ ಸೌಲತ್ತುಗಳು ಸಿಗುತ್ತಿಲ್ಲ, ಬಹುಪಾಲು ಚರ್ಮಕಾರರು ಇಂದಿಗೂ ಕೈಯಿಂದ ಮಾಡುವ ಚರ್ಮದ ಕೆಲಸವನ್ನೇ ಮಾಡುತ್ತ ಬಂದಿದ್ದಾರೆ. ಆದ್ದರಿಂದ ಇವರಿಗಾಗಿ ಒಂದು ಪ್ರತ್ಯೇಕ ಅಭಿವೃದ್ಧಿ ನಿಗಮ ಮಂಜೂರು ಮಾಡಬೇಕು ಮತ್ತು ಶೇ.3ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಪ್ರಮುಖರಾದ ಚನ್ನವೀರಪ್ಪ ಗಾಮನಗಟ್ಟಿ, ಬಾಬಣ್ಣ, ವೆಂಕಟರಮಣ, ಗೋವಿಂದ್ರ ನಾಯಕ, ನಾಗೇಂದ್ರ, ಶಿವಾನಂದ್, ವಿನಯ್ ಕಾನಾಡೆ, ಪ್ರಶಾಂತ್, ಸುಮಂತ್ ಮುಂತಾದವರು ಇದ್ದರು.

{ ಬಿ.ವೈ.ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ಸಂಡೂರಿನಲ್ಲಿ ಈವರೆಗೆ ಬಿಜೆಪಿ ಕಮಲ ಅರಳಿಲ್ಲ. ಈ ಬಾರಿ ಗೆಲ್ಲುವ ವಿಶ್ವಾಸವಿದೆ. ನಮ್ಮ ಜತೆಗೆ ಶಾಸಕರಿದ್ದಾರೆ ಎನ್ನುವ ಎಸ್.ಟಿ. ಸೋಮಶೇಖರ್‌ಗೆ ಉಪಚುನಾವಣೆ ಫಲಿತಾಂಶ ಬಂದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಗೊತ್ತಾಗಲಿದೆ .

ಮಾದಕ ದ್ರವ್ಯ ಮಾರಾಟಕ್ಕೆ ಕ್ರಮ

ಗಾಂಜಾ ಕೇಸುಗಳು ಮಿತಿಮೀರಿದರೆ ಎಸ್‌ಪಿ, ಡಿಸಿಪಿ ಹೊಣೆ: ಡಾ.ಜಿ. ಪರಮೇಶ್ವರ್

ಶಿವಮೊಗ್ಗ: ರಾಜ್ಯದಲ್ಲಿ ಗಾಂಜಾ ಹಾಗೂ ಮಾದಕ ದ್ರವ್ಯಗಳ ಮಾರಾಟ ಜಾಲವನ್ನು ಬುಡ ಸಹಿತ ಕಿತ್ತುಹಾಕಲು ಯುದ್ಧೋಪಾದಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ದಿ.ಬಂಗಾರಪ್ಪನವರ 92ನೇ ಹುಟ್ಟುಹಬ್ಬ ಸೊರಬದ ಬಂಗಾರಧಾಮದಲ್ಲಿ ನಡೆಯಲಿದ್ದು, ಈ ಸಮಾರಂಭ ಹಾಗೂ ಪೊಲೀಸ್ ಸಮುದಾಯ ಭವನದ ಉದ್ಘಾಟನೆಗಾಗಿ ಶಿವಮೊಗ್ಗಕ್ಕೆ ಬಂದಿದ್ದೇನೆ ಎಂದರು.

ಗಾಂಜಾ ನಿಯಂತ್ರಣಕ್ಕೆ ಮತ್ತು ಸಂಪೂರ್ಣ ನಾಶಕ್ಕೆ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಎಲ್ಲಾ ಠಾಣಾ ವ್ಯಾಪ್ತಿ ಹಾಗೂ ಎಸ್‌ಪಿ, ಡಿಸಿಪಿಯವರ ವ್ಯಾಪ್ತಿಯಲ್ಲಿ ಗಾಂಜಾ ಕೇಸುಗಳು ಮಿತಿಮೀರಿದರೆ ಅವರನ್ನೇ ಹೊಣೆಯಾಗಿಸುವುದಾಗಿ ಈಗಾಗಲೇ ಅಧಿಸೂಚನೆ ನೀಡಿದ್ದೇನೆ. ಗಾಂಜಾ ಆರೋಪಿಗಳನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದರು. ಬೆಂಗಳೂರಿನಲ್ಲಿ ನಿನ್ನೆಯಷ್ಟೆ ಒಂದೂವರೆ ಕೋಟಿ ರು.ಗಳ ಗಾಂಜಾ ವಶಪಡಿಸಿಕೊಂಡು ನೈಜೀರಿಯ ಪ್ರಜೆಯನ್ನು ಬಂಧಿಸಲಾಗಿದೆ. ವಾರದ ಹಿಂದೆ 5 ಕೋಟಿ ರು.ಗಳ ಗಾಂಜಾವನ್ನು ವಶಪಡಿಸಿಕೊಂಡಿದೆ ಎಂದರು.

ತುಮಕೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಬಗ್ಗೆ ಈಗಾಗಲೇ 3-4ಕಡೆ ಜಾಗ ಗುರುತಿಸಿದ್ದೇವೆ. ವಿಮಾನಯಾನ ಇಲಾಖೆಯ ಕೇಂದ್ರ ತಂಡ ಮತ್ತು ತಜ್ಞರ ತಂಡ ಪರಿಶೀಲನೆ ನಡೆಸಿ ಮಾಹಿತಿ ಪಡೆದು ಸೂಕ್ತ ಜಾಗ ಗುರುತಿಸುತ್ತಾರೆ ಎಂದರು.

ಎಚ್.ಎಂ.ಟಿ. ಕಾರ್ಖಾನೆಗೆ ನೀಡಿದ ಜಾಗ ಅರಣ್ಯ ಇಲಾಖೆ ವಶಪಡಿಸಿಕೊಳ್ಳುತ್ತಿದೆಯಲ್ಲ ಎಂಬ ಪ್ರಶ್ನೆಗೆ ಹಿಂದೆ ಅರಣ್ಯ ಇಲಾಖೆಯ ಜಾಗವನ್ನು ಎಚ್.ಎಂ.ಟಿ. ಕಾರ್ಖಾನೆಗೆ ನೀಡಲಾಗಿತ್ತು. ಈಗ ಕಾರ್ಖಾನೆ ನಿಂತಿದೆ. ಹಾಗಾಗಿ ಕಾನೂನಿನ ಪ್ರಕಾರ ಆ ಜಾಗವನ್ನು ಮತ್ತೆ ಅರಣ್ಯ ಇಲಾಖೆ ವಾಪಾಸು ಪಡೆಯುತ್ತದೆ ಎಂದರು.

ಹಿಂದೆ ನಾನು ಉಪಮುಖ್ಯಮಂತ್ರಿ ಇದ್ದಾಗ ಬೆಂಗಳೂರಿನ ಜನರಿಗೆ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದ್ದಾಗ ಬೆಂಗಳೂರಿಗೆ ನೀರಿನ ವಿವಿಧ ಮೂಲಗಳಿಂದ ನೀರು ಸರಬರಾಜು ಮಾಡುವ ಬಗ್ಗೆ ಚರ್ಚೆ ನಡೆದಿತ್ತು. ಹಾಗ ಶರಾವತಿ ನೀರು ಬೆಂಗಳೂರಿಗೆ ಒಯ್ಯುವ ಬಗ್ಗೆಯೂ ವಿಸ್ತಾರ ಚರ್ಚೆ ನಡೆದಿತ್ತು. ಆದರೆ ಮುಂದಿನ ಯಾವುದೇ ಕ್ರಮವಾಗಿಲ್ಲ. ಚರ್ಚೆಯಷ್ಟೇ ನಡೆದಿದೆ ಎಂದರು. ಬಿಜಾಪುರದಲ್ಲಿ ವಕ್ಫ್ ಆಡಳಿತ ಮಂಡಳಿ ತನ್ನದೇ ಜಾಗ ಎಂದು ವಶಪಡಿಸಿಕೊಳ್ಳಲು ಮುಂದಾಗಿದೆ ಎಂಬ ಪ್ರಶ್ನೆಗೆ ಕಂದಾಯ ಇಲಾಖೆಯ ಅಧಿಕಾರಿಗಳು ಎಲ್ಲಾ ದಾಖಲೆಗಳನ್ನು ಪರಿಶೀಲನೆ ನಡೆಸಿ ಅದರ ಆಧಾರದ ಮೇಲೆ ಕ್ರಮ ಕೈಗೊಳ್ಳುತ್ತಾರೆ. ಇದರಲ್ಲಿ ಯಾವುದೇ ವಿವಾದವಿಲ್ಲ ಎಂದರು.

ಈ ಸಂದರ್ಭದಲ್ಲಿ ಶಾಸಕ ಬೇಲೂರು ಗೋಪಾಲಕೃಷ್ಣ, ಬಲ್ಕೀಶ್ ಬಾನು, ಮಂಜುನಾಥ್ ಭಂಡಾರಿ, ಜಿಲ್ಲಾಧ್ಯಕ್ಷ ಆರ್.ಪ್ರಸನ್ನಕುಮಾರ್ ಇದ್ದರು.



ಸುದ್ದಿಗಾರರೊಂದಿಗೆ ಗೃಹಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿದರು.

> ಜಾತಿಗಣತಿ ವರದಿ ಮಂಡನೆ ಮುಂದಿನ ಸಂಪುಟದಲ್ಲಿ ಮಾಡುವ ಸಾಧ್ಯತೆ ಇದೆ. ಈ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇವೆ ಎಂದರು. ಶಾಸಕ ಎಸ್.ಟಿ.ಸೋಮಶೇಖರ್ ಅವರು ಬಿಜೆಪಿಯ 8 ಶಾಸಕರು, ಕಾಂಗ್ರೆಸ್ಸಿಗೆ ಬರುತ್ತಾರೆ ಎಂದು ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ನೀವು ಅವರಿಗೆ ಈ ಪ್ರಶ್ನೆ ಕೇಳಿದರೆ ಇನ್ನೂ ಹೆಚ್ಚಿನ ಮಾಹಿತಿ ಸಿಗುತ್ತದೆ.
> – ಡಾ.ಜಿ.ಪರಮೇಶ್ವರ್
> ಗೃಹಸಚಿವ

ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ

ಮೂರು ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ ಯಾವುದೇ ಸಂಶಯಬೇಡ. ಈಗಾಗಲೇ ಆಂತರಿಕ ವರದಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಅಭಿಪ್ರಾಯಕೂಡ ಗೆಲುವಿನ ಬಗ್ಗೆ ಖಚಿತವಾಗಿ ತಿಳಿಸಿದೆ. ಕಾಂಗ್ರೆಸ್ಸಿನ ಜನಪ್ರಿಯ ಗ್ಯಾರಂಟಿಗಳು ಮತ್ತು ಅಭಿವೃದ್ಧಿ ಕಾರ್ಯಗಳು ಗೆಲುವು ತರಲಿದ್ದು, ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ಸೋಲು ನಿಶ್ಚಿತ ಎಂದರು. ಶಿಗ್ಗಾಂವಿಯಲ್ಲೂ ಕೂಡ ಖಾದ್ರಿಯವರು ತಮ್ಮ ನಾಮಪತ್ರ ಹಿಂತೆಗೆದುಕೊಂಡಿದ್ದಾರೆ. ಕಾಂಗ್ರೆಸ್‌ನಲ್ಲಿ ಯಾವುದೇ ಬಂಡಾಯವಿಲ್ಲ. ಬಂಡಾಯವಿದ್ದರೆ ಅದು ಬಿಜೆಪಿಯಲ್ಲಿ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಪಠ್ಯೇತರ ಚಟುವಟಿಕೆ ಕಲಿಸಿ

ತಾಲೂಕು ಗುಂಡಶೆಟ್ಟಿಕೊಪ್ಪ ಜ್ಞಾನ ಸಹ್ಯಾದ್ರಿ ಇಂಟರ್‌ನ್ಯಾಷನಲ್ ಸ್ಕೂಲ್ ನ ಮಕ್ಕಳಿಗೆ ಆಯೋಜಿಸಿದ್ದ ಜೀವವೈವಿಧ್ಯ ಸಮತೋಲನದ ಪ್ರಾಮುಖ್ಯತೆ ಕುರಿತ ಸಾಕ್ಷ್ಯಚಿತ್ರ ಕಾರ್ಯಕ್ರಮದಲ್ಲಿ ಮೇಜರ್ ರಾಜೇಶ್ ರಣಜಿತ್ ಮಾತನಾಡಿದರು.

ಸೊರಬ: ಮಕ್ಕಳ ಜ್ಞಾನ ಕೇವಲ ಶಿಕ್ಷಣಕ್ಕೆ ಮೀಸಲಾಗದೆ, ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳನ್ನು ನೀಡುವ ಮೂಲಕ ಈ ಪ್ರಕೃತಿಯ ಜತೆಗೇ ಬದುಕಲು ಕಲಿಸಬೇಕು ಎಂದು ಜ್ಞಾನಸಹ್ಯಾದ್ರಿ ಇಂಟರ್‌ನ್ಯಾಷನಲ್ ಸ್ಕೂಲ್ ನ ಪ್ರಾಂಶುಪಾಲ ಮೇಜರ್ ರಾಜೇಶ್ ರಣಜಿತ್ ಹೇಳಿದರು.

ತಾಲೂಕು ಗುಂಡಶೆಟ್ಟಿಕೊಪ್ಪ ಜ್ಞಾನ ಸಹ್ಯಾದ್ರಿ ಇಂಟರ್‌ನ್ಯಾಷನಲ್ ಸ್ಕೂಲ್ ನ ಮಕ್ಕಳಿಗೆ ಆಯೋಜಿಸಿದ್ದ ಜೀವವೈವಿಧ್ಯ ಸಮತೋಲನದ ಪ್ರಾಮುಖ್ಯತೆ ಕುರಿತ ಸಾಕ್ಷ್ಯಚಿತ್ರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ತಜ್ಞ ಸಂಪನ್ಮೂಲ ವ್ಯಕ್ತಿಯಾಗಿ ಗೌತಮ ಬಿಚ್ಚುಗತ್ತಿ ಯಲಸಿ ಪಾಲ್ಗೊಂಡು ಸ್ಥಳೀಯ ಉರಗಪ್ರಬೇಧ, ಪ್ರಕೃತಿ ಸಮತೋಲನದಲ್ಲಿ ಅವುಗಳ ಪಾತ್ರ, ವಿಷಪೂರಿತ ಹಾವು ಕಡಿದಾಗ ಅನುಸರಿಸಬೇಕಾದ ಪ್ರಥಮ ಚಿಕಿತ್ಸೆ ಹಾಗೂ ಜೇನು ನೊಣಗಳ ಅವಶ್ಯಕತೆ, ಕಾರ್ಯವೈಖರಿ ಕುರಿತಂತೆ ಸಾಕ್ಷ್ಯಚಿತ್ರ ದ ಮೂಲಕ ವಿವರಿಸಿದರು.

ಪ್ರತಿಯೊಂದು ಜೀವಿಯೂ ಮಾನವನ ಬದುಕಿನಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಹಕರಿಸುತ್ತವೆ, ಪ್ರಕೃತಿಯ ಸಮತೋಲನದಲ್ಲಿ ಬಹುಮುಖ್ಯ ಪಾತ್ರ ವಹಿಸುವ ಮೂಲಕ ನೆರವಾಗುತ್ತವೆ. ಹಾಗಾಗಿ ಅವುಗಳನ್ನು ಹೊಸಕುವ ವಿಕೃತಿ ಸಲ್ಲದು. ಸುಸ್ಥಿರ ಕೃಷಿ ಅಭಿವೃದ್ಧಿಗೆ ಅನೇಕ ಕೀಟ, ಪ್ರಾಣಿಗಳ ಅಗತ್ಯವಿದೆ ಎಂಬುದನ್ನು ಮರೆಯಬಾರದು ಎಂದರು.

ಸ್ಕೂಲ್ ಟೀಚರ್ ಕಸ್ತೂರಿ, ಶಾಲಾ ಮಕ್ಕಳು ಶಾಲಾ ಸಿಬ್ಬಂದಿ ಮೊದಲಾದವರು ಪಾಲ್ಗೊಂಡರು.

> ಮಕ್ಕಳ ಮನಸ್ಸನ್ನು ಸ್ಥಳೀಯ ಪರಿಸರದ ಜತೆಜತೆಗೇ ವಿಕಸನ ಹೊಂದುವ ಇಂತಹ ಪಠ್ಯೇತರ ಚಟುವಟಿಕೆಯನ್ನು ಪ್ರೈಮರಿ ಶಿಕ್ಷಣದಲ್ಲೆ ನೀಡುವ ಗುರಿಯನ್ನು ಸಂಸ್ಥೆ ಇರಿಸಿಕೊಂಡಿದ್ದು ಸ್ಥಳೀಯ ತಜ್ಞರು, ಸಾಧಕರ ಮೂಲಕ ವಿಷಯ ತಿಳಿಸುವ ಪ್ರಾತ್ಯಕ್ಷಿಕೆ ಕಾರ್ಯ ನಡೆಸಲಾಗುತ್ತಿದೆ.
> – ಮೇಜರ್ ರಾಜೇಶ್ ರಣಜಿತ್
> ಪ್ರಾಂಶುಪಾಲ

ಪೊಲೀಸ್ ಸಮುದಾಯ ಭವನ ಉದ್ಘಾಟನೆ

ಶಿವಮೊಗ್ಗ : ಶಿವಮೊಗ್ಗದ ಡಿ.ಎ.ಆರ್. ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಪೊಲೀಸ್ ಸಮುದಾಯ ಭವನದ ಉದ್ಘಾಟನೆಯನ್ನು ಶನಿವಾರದಂದು ಕರ್ನಾಟಕ ಸರಕಾರದ ಗೃಹ ಸಚಿವರಾದ ಡಾ.ಜಿ.ಪರಮೇಶ್ವರ ನೆರವೇರಿಸಿದರು.

ಡಿ.ಎ.ಆರ್ ಆವರಣದಲ್ಲಿ 3.75 ಕೋಟಿ ವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ನೂತನವಾಗಿ ಪೊಲೀಸ್ ಸಮುದಾಯ ಭವನವನ್ನು ನಿರ್ಮಿಸಲಾಗಿದೆ. 500 ಸೀಟಿಂಗ್ ಸಾಮರ್ಥ್ಯ, ಊಟದ ಹಾಲ್ ಸೇರಿದಂತೆ ಸುಸಜ್ಜಿತವಾಗಿ ಭವನವನ್ನು ನಿರ್ಮಿಸಲಾಗಿದೆ.

ನಂತರ ಡಿಎಆರ್ ಸಭಾಂಗಣದಲ್ಲಿ ಗೃಹ ಸಚಿವರು ಪೂರ್ವ ವಯಲದ ಉಪ ಪೊಲೀಸ್ ಮಹಾ ನಿರೀಕ್ಷಕರಾದ ಬಿ.ರಮೇಶ್, ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಜಿ.ಕೆ. ಮಿಥುನ್ ಕುಮಾರ್ ಹಾಗೂ ಇತರೆ ಪೊಲೀಸ್ ಅಧಿಕಾರಿಗಳೊಂದಿಗೆ ಜಿಲ್ಲಾ ಪೊಲೀಸ್ ವಿಮರ್ಶನಾ ಸಭೆಯನ್ನು ನಡೆಸಿದರು.

ಡಿಎಆರ್ ಪೊಲೀಸ್ ಭವನದ ಉದ್ಘಾಟನೆ ವೇಳೆ ಶಾಸಕರಾದ ಎಸ್.ಎನ್ ಚನ್ನಬಸಪ್ಪ, ಬಿ.ಕೆ ಸಂಗಮೇಶ್ವರ್, ಗೋಪಾಲ ಕೃಷ್ಣ ಬೇಳೂರು, ವಿಧಾನ ಪರಿಷತ್ ಶಾಸಕರಾದ ಬಲ್ಕೀಶ್ ಬಾನು, ಡಿ.ಎಸ್.ಅರುಣ್, ಡಾ.ಧನಂಜಯ ಸರ್ಜಿ, ಮಂಜುನಾಥ ಭಂಡಾರಿ ಜನಪ್ರತಿನಿಧಿಗಳು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಾರ್ಗಲ್‌ನಲ್ಲಿ ಭೂ ಹಕ್ಕು ಹೋರಾಟಗಾರರು ಪೊಲೀಸರ ವಶಕ್ಕೆ

ಸಾಗರ: ಮಲೆನಾಡ ಭಾಗದ ಭೂ ಹಕ್ಕಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಿ ಎಂದು ಆಗ್ರಹಿಸಿ ಲಿಂಗನಮಕ್ಕಿ ಚಲೋ ಪಾದಯಾತ್ರೆ ಮೂಲಕ ಜಲಾಶಯಕ್ಕೆ ಮುತ್ತಿಗೆ ಹಾಕುವುದಕ್ಕೆ ಮುಂದಾಗಿದ್ದ ಪ್ರತಿಭಟನಾಕಾರರನ್ನು ಕಾರ್ಗಲ್‌ನಲ್ಲಿಯೇ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಡಾ. ಗಣಪತಪ್ಪ ಸ್ಥಾಪಿತ ಶಿವಮೊಗ್ಗ ಜಿಲ್ಲಾ ರೈತ ಸಂಘ, ಮಲೆನಾಡು ರೈತರ ಹೋರಾಟ ಸಮಿತಿ, ಮುಳುಗಡೆ ಸಂತ್ರಸ್ತರ ಹಾಗೂ ಭೂ ಹಕ್ಕು ವಂಚಿತರ ಸಂಯುಕ್ತ ವೇದಿಕೆಗಳ ಸಂಯುಕ್ತ ಆಶ್ರಯದಲ್ಲಿ 21 ರಿಂದ ಮೂರು ದಿನಗಳ ಕಾಲ ಉಪವಿಭಾಗಧಿಕಾರಿ ಸಭಾಂಗಣದಲ್ಲಿ ಪ್ರತಿಭಟಿಸಿ ನಂತರ ಗುರುವಾರ ಪಾದಯಾತ್ರೆ ಕೈಗೊಂಡ ಪ್ರತಿಭಟನಾಕಾರರ ನಡೆ ಅಣೆಕಟ್ಟಿನ ಕಡೆ ಇರುವುದನ್ನು ಗಮನಿಸಿದ ಪೊಲೀಸ್ ಇಲಾಖೆ ಶುಕ್ರವಾರ ಪ್ರತಿಭಟನೆ ವಿಕೋಪಕ್ಕೆ ತಿರುಗುವ ಮುನ್ನವೇ ಮುನ್ನೆಚ್ಚರಿಕೆಯ ಕ್ರಮವಾಗಿ ಪ್ರತಿಭಟನಾಕಾರರನ್ನು ಕಾರ್ಗಲ್‌ನಲ್ಲಿ ಬಂಧಿಸಿರುವುದಲ್ಲದೆ ಸಾಗರದಲ್ಲಿ ಠಾಣೆಗೆ ಕರೆ ತಂದು ನಿಯಮಾನುಸಾರ ಬಿಡುಗಡೆಗೊಳಿಸಿದರು. ಈ ವೇಳೆ ಸುಮಾರು 88 ರೈತ ಪ್ರಮುಖರನ್ನು ಇಲಾಖೆ ವಶಕ್ಕೆ ಪಡೆದಿತ್ತು.

ಉಸ್ತುವಾರಿ ಸಚಿವ ಭೇಟಿ

ಪಾದಯಾತ್ರೆ ಮೂಲಕ ಹೊರಟ್ಟಿದ್ದ ಪ್ರತಿಭಟನಾಕಾರರನ್ನು ಈ ನಡುವೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಕಾರ್ಗಲ್ ಸಮೀಪ ಭೇಟಿ ಮಾಡಿ ಪ್ರತಿಭಟನೆ ನಿಲ್ಲಿಸುವಂತೆ ಮನವಿ ಮಾಡಿದರು. ಮುಖ್ಯಮಂತ್ರಿಯವರೊಂದಿಗೆ ಪ್ರತ್ಯೇಕ ಸಭೆ ಏರ್ಪಡಿಸಲಾಗುವುದು ಮತ್ತು ಇಲ್ಲಿಯ ಪ್ರಮುಖರ ಸಮಕ್ಷಮವೇ ಸಮಸ್ಯೆಗಳನ್ನು ತೆರೆದಿಡಲಾಗುವುದು ಎಂದು ಪ್ರತಿಭಟನಾಕಾರರಿಗೆ ಭರವಸೆ ಕೂಡ ನೀಡಿದರು. ಆದರೆ ಭರವಸೆ ಇದುವರೆಗೂ ಕೇವಲ ಭರವಸೆಯೇ ಆಗಿದೆ ಈಗಲೂ ಅದೇ ಮುಂದುವರಿಯಲಿದೆ ಎಂದು ಭರವಸೆಗೆ ಸಮ್ಮತಿಸದೆ ಹೋರಾಟಗಾರರು ಪಾದಯಾತ್ರೆ ಮುಂದುವರಿಸಿದ ಘಟನೆ ನಡೆಯಿತು. ಅಲ್ಲದೆ ಲಿಂಗನಮಕ್ಕಿ ಜಲಾಶಯಕ್ಕೆ ಮುತ್ತಿಗೆ ಹಾಕುವ ಉದ್ದೇಶವನ್ನೂ ಆ ಸಂದರ್ಭ ಹೊಂದಲಾಗಿತ್ತು ಎನ್ನುವ ಹಿನ್ನೆಲೆಯಲ್ಲಿ ತಕ್ಷಣ ಪೊಲೀಸರು ವಶಕ್ಕೆ ಪಡೆದರು.

ಪ್ರತಿಭಟನಾಕಾರರನ್ನು ಪೊಲೀಸ್‌ರು ವಶಕ್ಕೆ ಪಡೆದರು.

> ಎಷ್ಟು ಬಾರಿಯಾದರೂ ನಮ್ಮನ್ನು ವಶಕ್ಕೆ ಪಡೆಯಲಿ, ಜೈಲಿಗೆ ಕಳಿಸಲಿ ನಮ್ಮ ಪ್ರತಿಭಟನೆ ಮಾತ್ರ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಮುಂದೂ ಕೂಡ ಮೌನ ಹೋರಾಟ ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿ ಎದುರು ನಿತ್ಯವೂ ಮಾಡಲಾಗುವುದು ಇದರಲ್ಲಿ ಯಾವುದೇ ರಾಜಿ ಇಲ್ಲ, ಮತ್ತು ಈ ಹೋರಾಟ ಯಾವುದೇ ರಾಜಕೀಯ ಪ್ರೇರಿತವೂ ಅಲ್ಲ
> -ದಿನೇಶ್ ಶಿರವಾಳ ಜಿಲ್ಲಾರೈತ ಸಂಘದ ಅಧ್ಯಕ್ಷ

ಕಾಮಗಾರಿ ವಿನ್ಯಾಸಕ್ಕೆ ಅನುಮತಿ ನೀಡಲು ಮನವಿ

ಭದ್ರಾವತಿ: ತಾಲೂಕು ವ್ಯಾಪ್ತಿಯಲ್ಲಿ ಹಾಗೂ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಕಾರದಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿರುವ ಹಿನ್ನಲೆಯಲ್ಲಿ ಮುಂದಿನ ಪ್ರಕ್ರಿಯೆಗೆ ಪೂರಕವಾಗುವಂತೆ ಕಾಮಗಾರಿಗಳ ವಿನ್ಯಾಸಕ್ಕೆ ಅನುಮತಿ ನೀಡುವಂತೆ ನಗರದ ಜನ್ನಾಪುರ ಶ್ರೀ ಡಿ.ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್, ಸುವರ್ಣ ಮಹಿಳಾ ವೇದಿಕೆ ವತಿಯಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್‌ರವರಿಗೆ ಮನವಿ ಸಲ್ಲಿಸಲಾಗಿದೆ.

ಶ್ರೀ ಡಿ.ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್, ಸುವರ್ಣ ಮಹಿಳಾ ವೇದಿಕೆ ಛೇರ್ಮನ್, ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಆರ್. ವೇಣುಗೋಪಾಲ್ ರವರು ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿರುವ ಹಿನ್ನಲೆಯಲ್ಲಿ ಕೃತಜ್ಞತೆ ಸಲ್ಲಿಸಿದ್ದು, ಶಿವಮೊಗ್ಗ ಹಾಗೂ ಭದ್ರಾವತಿ ತಾಲೂಕಿನ ಉಂಬ್ಲೆಬೈಲು ಕಲ್ಲಹಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿಯ ಇತರೆ 28 ಗ್ರಾಮಗಳನ್ನೊಳಗೊಂಡ ಸುಮಾರು 48 ಕೋಟಿ ರು ವೆಚ್ಚದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಟೆಂಡರ್ ಪ್ರಕ್ರಿಯೆ ಈಗಾಗಲೇ ಮುಗಿದಿರುವುದರಿಂದ ಈ ಯೋಜನೆಯ ವಿನ್ಯಾಸಕ್ಕೆ (ಡಿಸೈನ್) ಅನುಮತಿ ನೀಡುವಂತೆ ಮನವಿ ಮಾಡಲಾಗಿದೆ.

ತಾಲೂಕಿನ ಮಾರಶೆಟ್ಟಿಹಳ್ಳಿ ಮತ್ತು ಇತರೆ 23 ಗ್ರಾಮಗಳಿಗೆ 25 ಕೋಟಿ ರು. ವೆಚ್ಚದ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯ ಟೆಂಡರ್ ಪ್ರಕ್ರಿಯೆ ಈಗಾಗಲೇ ಮುಗಿದಿರುವು ದರಿಂದ ಯೋಜನೆಯ ವಿನ್ಯಾಸಕ್ಕೆ (ಡಿಸೈನ್) ಅನುಮತಿ ನೀಡುವಂತೆ ವಿನಂತಿಸಲಾಗಿದೆ.

ಕಾಮಗಾರಿ ವಿನ್ಯಾಸಕ್ಕೆ ಅನುಮತಿ ನೀಡಲು ಇಲಾಖೆ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್ ರವರಿಗೆ ಮನವಿ ಸಲ್ಲಿಸಲಾಗಿದೆ.

ಲಯನ್ಸ್ ಕ್ಲಬ್ ಕಾರ್ಯ ಶ್ಲಾಘನೀಯ

ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳ ಬಿಸಿಯೂಟ ಕಾರ್ಯಕ್ರಮಕ್ಕೆ ಪೂರಕವಾಗಿ ಗುಣಮಟ್ಟದ 540 ಊಟದ ತಟ್ಟೆಗಳ ಕೊಡುಗೆ ಲಯನ್ಸ್‌ಕ್ಲಬ್ ಸಹಯೋಗದಲ್ಲಿ ನೀಡಲಾಯಿತು.

ಭದ್ರಾವತಿ: ತಾಲೂಕು ಅರಳಿಹಳ್ಳಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳ ಬಿಸಿಯೂಟ ಕಾರ್ಯಕ್ರಮಕ್ಕೆ ಪೂರಕವಾಗಿ ಗುಣಮಟ್ಟದ 540 ಊಟದ ತಟ್ಟೆಗಳ ಕೊಡುಗೆ ಲಯನ್ಸ್ ಕ್ಲಬ್ ಸಹಯೋಗದಲ್ಲಿ ನೀಡಲಾಯಿತು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮಣಿಶೇಖರ್ ಕಾರ್ಯಕ್ರಮವನ್ನು ದ್ದೇಶಿ ಮಾತನಾಡಿ, ವಿದ್ಯಾರ್ಥಿಗಳ ಮಧ್ಯಾಹ್ನ ಬಿಸಿಯೂಟಕ್ಕೆ ಲಯನ್ಸ್ ಕ್ಲಬ್ ನವರು ತಟ್ಟೆ ವಿತರಣಾ ಕಾರ್ಯ ಮಾದರಿ ಹಾಗೂ ಪ್ರಶಂಸನೀಯ. ಕ್ಲಬ್ ವತಿಯಿಂದ ವಿತರಿಸಿದ ಸಾಮಗ್ರಿಗಳನ್ನು ವಿದ್ಯಾರ್ಥಿಗಳು ಸದುಪಯೋಗಮಾಡಿಕೊಳ್ಳಿ ಎಂದರಲ್ಲದೆ, ಉತ್ತಮ ಅಂಕಗಳಿಸಿ ಶಾಲೆಗೆ ಕೀರ್ತಿ ತರುವಂತಾಗ ಬೇಕು. ದೇಹದಲ್ಲಿ ಸದೃಢ ಮನಸ್ಸು ಇದ್ದರೆ ಎಲ್ಲಾ ಸಾಧನೆಗಳಿಗೂ ಪೂರಕ ವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಪ್ರೇರೇಪಿಸಿದರು.

ರಾಮಮೂರ್ತಿ ಹಾಗೂ ಚಂದ್ರ ಶೇಖರ್ ಇವರು ಲಯನ್ಸ್ ನ ಸೇವಾ ಮನೋಭಾವದ ಬಗ್ಗೆ ಪರಿಚಯಿಸಿ ಲಯನ್ಸ್ ಧ್ಯೇಯೋದ್ದೇಶ ಗಳನ್ನು ತಿಳಿಸಿದರು. ಆಯೋಜಕರಾದ ಕೆ.ವಿ. ಚಂದ್ರಶೇಖರ್ ಹಾಗೂ ಪದಾಧಿಕಾರಿಗಳು ತಟ್ಟೆಗಳನ್ನು ವಿತರಿಸಿದರು.

ಶಾಲಾಭಿವೃದ್ಧಿ ಸಮಿತಿಯ ಪ್ರಕಾಶ್, ಅಬ್ದುಲ್ ಹಬೀಬ್, ಲಯನ್ಸ್ ನ ಅಧ್ಯಕ್ಷ ಆರ್.ರಾಮ ಮೂರ್ತಿ ನಾಯ್ದು, ಮಹೇಶ್ ಕುಮಾರ್ ಶ್ರೀನಿವಾಸ್, ಮಾಜಿ ವಲಯಾಧ್ಯಕ್ಷ ಕೆ.ವಿ. ಚಂದ್ರಶೇಖರ್, ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿಗಳು ಸೇರಿದಂತೆ ಮತ್ತಿತರರಿದ್ದರು.

ಪ್ರಭಾರಿ ಮುಖ್ಯ ಶಿಕ್ಷಕ ದಿವಾಕರ್ ಅಧ್ಯಕ್ಷತೆ ವಹಿಸಿದ್ದರು. ರಂಗರಾಜ್ ಸ್ವಾಗತಿಸಿದರೆ, ಮಮತಾ ನಿರೂಪಿಸಿ, ಜಾನಕಿ ವಂದಿಸಿದರು.

ಸಕಾಲದಲ್ಲಿ ಆರೋಗ್ಯ ತಪಾಸಣೆ ಮುಖ್ಯ

ಶಿವಮೊಗ್ಗ: ಪ್ರತಿಯೊಬ್ಬರೂ ಸಕಾಲದಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಆರೋಗ್ಯ ರಕ್ಷಣೆ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಮಾಜಿ ಶಾಸಕ ಡಿ.ಬಿ.ಗಂಗಪ್ಪ ಹೇಳಿದರು. ಭಾವಸಾರ ವಿಷನ್ ಇಂಡಿಯಾ ಪ್ರೇರಣಾ ಶಿವಮೊಗ್ಗ ಸಂಸ್ಥೆ ಹಾಗೂ ಸಹ್ಯಾದ್ರಿ ನಾರಾಯಣ ಹೃದಯಾಲಯದ ಸಹಯೋಗದಲ್ಲಿ ನ್ಯಾಮತಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಮಕ್ಕಳು ಹಾಗೂ ಸಾರ್ವಜನಿಕರಿಗೆ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ, ದಂತ ತಪಾಸಣೆ ಹಾಗೂ ಹೃದಯ ತಪಾಸಣಾ ಶಿಬಿರದಲ್ಲಿ ಮಾತನಾಡಿ, ಆರೋಗ್ಯ ಸಂಪತ್ತು ಜೀವನದಲ್ಲಿ ಬಹಳ ಮುಖ್ಯ. ಭಾವಸಾರ ವಿಷನ್ ಇಂಡಿಯಾ ಪ್ರೇರಣಾ ಸಂಸ್ಥೆ ಅಧ್ಯಕ್ಷೆ ಉಮಾ ವೆಂಕಟೇಶ್ ಮಾತನಾಡಿ, ಸಂಸ್ಥೆ ವತಿಯಿಂದ ಈಗಾಗಲೇ ಸಾಕಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡುವುದರ ಜತೆಗೆ ಗ್ರಾಮೀಣ ಪ್ರದೇಶ ಹಾಗೂ ಬೇರೆ ಬೇರೆ ಜಿಲ್ಲೆಗಳಲ್ಲಿ ನಮ್ಮ ಸಮಾಜಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ ಎಂದರು. ಡಾ. ನಿತಿನ್, ತಜ್ಞ ಡಾ. ಮನೋಹರ್, ಶಿವರಾಜ್ ಹೊಮ್ಮರಡಿ, ರವಿ ತೋಂಟದಾರ್ಯ, ಅರವಿಂದ ಕೋರಿ, ಮಾಲತೇಶ ರೆಟ್ಟಿ, ಎಚ್. ಶಕುಂತಲಾ, ಡಿ.ಶಂಕರಪ್ಪ, ಶೋಭಾ ಇತರರಿದ್ದರು.

ಮಹಾಭಾರತ ಅಂತಃ ಸತ್ವ ಕಾಪಾಡುವ ಕಥೆ

ಸೊರಬ: ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಬಾರತೀಯ ಅಂತಃ ಸತ್ವ ಕಾಪಾಡುವ ಕಥೆಗಳಾಗಿವೆ ಮತ್ತು ಸಮಗ್ರ ಭಾರತದ ಏಕತೆಗೆ ಪುರಾಣ ಕಾಲದಿಂದ ಹಿಡಿದು ಸ್ವತಂತ್ರ ಪೂರ್ವಕಾಲದ ವರೆಗೆ ತಮ್ಮ ಕೊಡುಗೆಯನ್ನು ನೀಡಿವೆ ಎಂದು ದಂತ ವೈದ್ಯ ಡಾ.ಜ್ಞಾನೇಶ್ ಹೆಚ್ ಇ ಹೇಳಿದರು. ತಾಲೂಕಿನ ಹರೀಶಿಯ ಸರಕಾರಿ ಪ್ರೌಢಶಾಲೆಯಲ್ಲಿ ನಡೆದ ಅಂತರ್ ಶಾಲಾಮಟ್ಟದ ಮಹಾಭಾರತ ಪರೀಕ್ಷೆ ಮತ್ತು ಚರ್ಚಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳು ಚಿಕ್ಕವಯ್ಯಸ್ಸಿನಲ್ಲಿ ಮಹಾಭಾರತದಂತ ಪುರಾಣ ಕಥೆಗಳನ್ನು ಅಭ್ಯಾಸಿಸಿದರೆ ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚುವುದಲ್ಲದೆ ಜೀವನ ಮೌಲ್ಯ ಅರ್ಥವಾಗುವುದು ಎಂದರು. ಈ ತರಹದ ಪರೀಕ್ಷೆಗಳು ಚರ್ಚಾಕೂಟಗಳು ಪ್ರತೀ ಶಾಲೆಯಲ್ಲೂ ಆಗಬೇಕು, ಹಾಗಾದಾಗ ಮಕ್ಕಳಲ್ಲಿ ಚಿಂತನಾಶಕ್ತಿ ತತ್ವ ಜ್ಞಾನ ಬೆಳೆದು ಉತ್ತಮ ಸಮಾಜದ ನಿರ್ಮಾಣಕ್ಕೆ ಅನುಕೂಲ ಆಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೆಂಕಟೇಶ್ ಗವಾಡಿ ವಹಿಸಿದ್ದರು. ಅಭ್ಯಾಗತರಾಗಿ ಹರೀಶಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಾದ ಮಂಜುನಾಥ್ ಹಾಗೂ ಎಸ್ಡಿಎಂಸಿ ಸದಸ್ಯರಾದ ಪ್ರೇರಣಾ ಬಾಪಟ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಅಚ್ಯುತ್ ರಾವ್ ಹರೀಶಿ ಹಾಗೂ ವಸಂತ ಶೇಟ್ ಚಂದ್ರಗುತ್ತಿ ನಿರ್ವಹಿಸಿದರು, ಮಂಜುನಾಥ್ ಸ್ವಾಗತಿಸಿದರು.

ಮಂಗಗಳ ಹಾವಳಿ: ಜನರಿಗೆ ಮುಕ್ತಿ ಕೊಡಿ

ಹೊಸನಗರ: ನಾಯಿ ಮತ್ತು ಮಂಗಗಳ ಹಾವಾಳಿಯಿಂದ ಹೊಸನಗರ ಪಟ್ಟಣದಲ್ಲಿ ಮಕ್ಕಳು ಓಡಾಟ ನಡೆಸುವುದು ಶಾಲೆಗೆ ಹೋಗುವುದೇ ಕಷ್ಟಕರವಾದ ಪರಿಸ್ಥಿತಿ ನಿರ್ಮಾಣವಾಗಿದ್ದು ಇದರ ಜತೆಗೆ ಮಂಗಗಳು ಎಲ್ಲ ಹಂಚನ್ನು ತೆಗೆದು ಮನೆಯ ಯಜಮಾನ-ಯಜಮಾನಿಗೆ ಹೆದರಿಸಿ ಮನೆ ಒಳಗಿನ ದಿನಸಿ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದು ನಾಯಿ ಮತ್ತು ಮಂಗಗಳಿಂದ ಮುಕ್ತಿ ನೀಡಿ ಎಂದು ಪಟ್ಟಣ ಪಂಚಾಯಿತಿಯವರಿಗೆ ಮನವಿ ಸಲ್ಲಿಸುತ್ತಿದ್ದರೂ ಏನೂ ಪ್ರಯೋಜನವಾಗುತ್ತಿಲ್ಲ ಎಂದು ಪಟ್ಟಣ ನಿವಾಸಿಗಳು ತಮ್ಮ ಗೋಳು ಕೇಳುವವರಿಲ್ಲ ಇವುಗಳ ಕಾಟದಿಂದ ಕಷ್ಟದಿಂದಲೇ ಜೀವನ ಸಾಗಿಸುತ್ತಿದ್ದಾರೆ. ಹಿಂಗಾರು ಮಳೆಯಿಂದ ಮಂಗಗಳು ಹಂಚು ಒಡೆಯುವುದು ಮತ್ತು ತೆಗೆಯುತ್ತಿರುವುದರಿಂದ ಮನೆಗಳು ಸೋರುತ್ತಿದೆ ಕಾಲು ಇಡಲು ಜಾಗವಿಲ್ಲದಂತೆ ಮಳೆಯ ನೀರು ಹಂಚುಗಳು ಒಡೆದಿದ್ದರಿಂದ ನೀರು ಮನೆಯ ಒಳಗೆ ಬರುತ್ತಿದೆ ಇದರ ಜೊತೆಗೆ ಮನೆಯೊಳಗೆ ಎನೂ ಇಡಲು ಬಿಡುತ್ತಿಲ್ಲ ಓಡಿಸಲು ಹೋದರೇ ಮೈಮೇಲೆ ಬರುತ್ತದೆ ಒಂದು ಕಡೇ ಮಳೆಯ ಗೋಳಾದರೆ ಇನ್ನೊಂದು ಕಡೆ ಮಂಗಗಳ ಕಾಟ ಜೋರಾಗಿದೆ ಇದರಿಂದ ನಮ್ಮನ್ನು ಮಂಗಗಳಿಂದ ಮುಕ್ತಿ ಗೊಳಿಸಿಕೊಡಿ ಒಳಗಡೆ ಮಂಗಗಳ ಕಾಟ ಹೊರಗೆ ಹೋದರೆ ಪಟ್ಟಣ ರಸ್ತೆಯ ತುಂಬೆಲ್ಲ ನಾಯಿಗಳ ಕಾಟ ಇವುಗಳನ್ನು ಪಟ್ಟಣದಿಂದ ಹೊರಗೆ ಕಳುಹಿಸಿ ಎಂದು ಅಧಿಕಾರಿಗಳನ್ನು ಬೇಡುವ ಪರಿಸ್ಥಿತಿ ಬಂದಿದೆ.

ಕನ್ನಡ ರಥಯಾತ್ರೆ ನಗರಕ್ಕೆ ಆಗಮನ ನಾಳೆ

ಶಿವಮೊಗ್ಗ : 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆಯು ಅಕ್ಟೋಬರ್ 28 ರಂದು ಬೆಳಗ್ಗೆ 11 ಕ್ಕೆ ನಗರದ ಅಶೋಕ ವೃತ್ತದ ಬಳಿ ಆಗಮಿಸಲಿದ್ದು ರಥವನ್ನು ಸ್ವಾಗತಿಸಿ, ಕುವೆಂಪು ರಂಗಮಂದಿರದವರೆಗೆ ಮೆರವಣಿಗೆಯಲ್ಲಿ ಸಾಗಲಿದೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮಂಡ್ಯದಲ್ಲಿ ಡಿ. 20, 21 ಮತ್ತು 22, ನಡೆಯಲಿದ್ದು, ಸಮ್ಮೇಳನದಲ್ಲಿ ಭಾಗವಹಿಸಲು ಅರಿವು ಮೂಡಿಸುವ ದೃಷ್ಟಿಯಿಂದ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆ ಕನ್ನಡದ ನಾಡದೇವತೆಯಾದ ಶ್ರೀಭುವನೇಶ್ವರಿ ದೇವಿ ದೇವಾಲಯಯವಿರುವ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಭುವನಗಿರಿಯಿಂದ ಸೆ.22 ರಂದು ಹೊರಟು ನಾಡಿನಾದ್ಯಂತ ಎಲ್ಲಾ ಜಿಲ್ಲೆಗಳನ್ನು ಸಂಚರಿಸಲಿದೆ. ಕನ್ನಡಜ್ಯೋತಿ ಹೊತ್ತ ರಥಯಾತ್ರೆಯನ್ನು ಶಿವಮೊಗ್ಗದ ಅಶೋಕ ವೃತ್ತದ ಬಳಿ ಸ್ವಾಗತಿಸಲು ಹಾಗೂ ಕುವೆಂಪು ರಂಗಮಂದಿರದವರೆಗೆ ಮೆರವಣಿಗೆಯಲ್ಲಿ ಸಾಗಲು ಎಲ್ಲ ಕನ್ನಡದ ಮನುಸುಗಳು ಭಾಗವಹಿಸಬೇಕೆಂದು ಕೋರಲಾಗಿದೆ. ಕನ್ನಡ ರಥ ಸಂಚರಿಸುವ ವೇಳೆಯಲ್ಲಿ ಆಯಾ ಜಿಲ್ಲೆಯಲ್ಲಿ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು, ಜಿಲ್ಲೆಯ ಗಡಿಭಾಗಗಳಲ್ಲಿ ಬೀಳ್ಕೊಡಲು ಆಯಾ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮುಂದಾಳತ್ವ ನೀಡಲಾಗಿದೆ.

ಬಂಜಾರ ಸಂಘದ ಹಣ ದುರುಪಯೋಗ

ಶಿವಮೊಗ್ಗ : ಶಿವಮೊಗ್ಗ ಜಿಲ್ಲಾ ಬಂಜಾರ ಸಂಘಕ್ಕೆ ಸರಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದು, ಇದರಿಂದ ಸಂಘಕ್ಕೆ ಸ್ವಯಂ ಘೋಷಿತ ಅಧ್ಯಕ್ಷರಾಗಿದ್ದ ಮಾಜಿ ಶಾಸಕ ಕೆ.ಬಿ. ಅಶೋಕ್ ನಾಯ್ಕ ಅವರ ಬಣದ ಪದಾಧಿಕಾರಿಗಳ ನೇಮಕ ರದ್ದಾಗಿದೆ ಎಂದು ಸಂಘದ ಅಜೀವ ಸದಸ್ಯರಾದ ಶಿವಕುಮಾರ್ ತಿಳಿಸಿದ್ದಾರೆ. ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂಘದ ಹಣ ದುರುಪಯೋಗ ಪಡಿಸಿ ಭ್ರಷ್ಟಚಾರ ಮಾಡಿದ್ದು, ಕಳೆದ ಜುಲೈ 13ರಂದು ನಡೆದ ಸಂಘದ ಸರ್ವ ಸದಸ್ಯರ ಸಭೆಗೆ ಸಂಘದಲ್ಲಿ 700ಕ್ಕೂ ಹೆಚ್ಚು ಸದಸ್ಯರಿದ್ದರು ಸಹ ಕೆಲವೇ ಸದಸ್ಯರಿಗೆ ಆಹ್ವಾನ ಪತ್ರಿಕೆ ಕಳುಹಿಸಿ ಸಭೆ ನಡೆಸಿದ್ದು ಅಲ್ಲದೆ ಕೇವಲ 19 ಜನ ಸೇರಿ ಅವಿರೋಧವಾಗಿ ಆಡಳಿತ ಮಂಡಳಿಗೆ ಆಯ್ಕೆಯಾಗಿದ್ದು, ಸದರಿ ಆಡಳಿತ ಮಂಡಳಿಗೆ ಅನುಮೋದನೆ ನೀಡಬಾರದು ಎಂದು 45 ಅಜೀವ ಸದಸ್ಯರು ದೂರು ನೀಡಿ, ಸಂಘದ ಬೈಲಾ ಮತ್ತು ಕಾಯ್ದೆ ಉಲ್ಲಂಘನೆಯಾಗಿದೆ. ನಿಯಮಾನುಸಾರ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿದ್ದು, ಏಕಪಕ್ಷೀಯವಾಗಿ ಸಂಘಕ್ಕೆ ಆಯ್ಕೆ ಮಾಡಿರುವುದು ದೃಢಪಟ್ಟ ಹಿನ್ನಲೆಯಲ್ಲಿ ಆಡಳಿತಾಧಿಕಾರಿಗಳನ್ನು ಸರಕಾರ ನೇಮಕ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಅಜೀವ ಸದಸ್ಯರಾದ ರೇಣುನಾಯ್ಕ, ಹರೀಶ್ ವೈ. ಅಂಜನಾಪುರ, ಹನುಮಂತನಾಯ್ಕ, ಜಯಾನಾಯ್ಕ, ಶಿವರಾಜಕುಮಾರ ನಾಯ್ಕ, ಕುಮಾರ ನಾಯ್ಕ, ಗೇಮ್ಯಾನಾಯ್ಕ, ಶೇಖರ ನಾಯ್ಕ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಅತ್ಯಾಚಾರ ಪ್ರಕರಣ: 10 ವರ್ಷ ಜೈಲು

ಅಪರಾಧ ಸುದ್ದಿಗಳು

ದಾವಣಗೆರೆ: ವಿವಾಹವಾಗುವುದಾಗಿ ನಂಬಿಸಿ ಸ್ನೇಹಿತೆಯ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿಗೆ ದಾವಣಗೆರೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 10 ವರ್ಷ ಜೈಲು ಹಾಗೂ 40 ಸಾವಿರ ರು. ದಂಡ ವಿಧಿಸಿದೆ. ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ಇಮ್ರಾನ್ ಖಾನ್ ದೇವಡಿ ಶಿಕ್ಷೆಗೆ ಗುರಿಯಾದ ಅತ್ಯಾಚಾರಿ. ದಂಡದ ಮೊತ್ತವನ್ನು ಸಂತ್ರಸ್ತ ಯುವತಿಗೆ ನೀಡಲು ನ್ಯಾಯಾಧೀಶ ಶ್ರೀರಾಮ ನಾರಾಯಣ ಹೆಗಡೆ ಆದೇಶಿಸಿದ್ದಾರೆ. ವಿವಾಹವಾಗುವುದಾಗಿ ಸ್ನೇಹಿತೆ ಯನ್ನು ನಂಬಿಸಿದ್ದ ಇಮ್ರಾನ್, ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿರುವ ಮನೆಗೆ 2018ರ ಡಿ.2ರಂದು ಕರೆದೊಯ್ದು ಅತ್ಯಾಚಾರ ಎಸಗಿ, ತನ್ನ ಬಳಿ ದೃಶ್ಯಗಳಿವೆ ಎಂದು ಕೊಲೆ ಬೆದರಿಕೆ ಹಾಕಿದ್ದಾಗಿ ಆರೋಪಿಸಲಾಗಿತ್ತು. ಮಹಿಳಾ ಠಾಣೆಯ ಇನ್ಸ್‌ಪೆಕ್ಟರ್ ಕೆ.ನಾಗಮ್ಮ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು.

ಚಿಕಿತ್ಸೆ ಫಲಕಾರಿಯಾಗದೇ ಉಪತಹಸೀಲ್ದಾರ್ ಸಾವು

ಮಂಡ್ಯ: ರಸ್ತೆ ದಾಟುವಾಗ ಬೈಕ್ ಡಿಕ್ಕಿಯಾಗಿ ಗಾಯಗೊಂಡಿದ್ದ ಉಪತಹಸೀಲ್ದಾರ್ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಯ ಮಳವಳ್ಳಿ ಪಟ್ಟಣದಲ್ಲಿ ನಡೆದಿದೆ.

ಮೃತ ವ್ಯಕ್ತಿಯನ್ನು ಚಿಕ್ಕಮಗಳೂರು ಜಿಲ್ಲೆಯ ಬೀರೂರು ಮೂಲದ ಎನ್.ಟಿ.ಸುನೀಲ್ (55) ಎಂದು ಗುರುತಿಸಲಾಗಿದೆ. ಮಳವಳ್ಳಿ ತಾಲೂಕಿನ ಹಲಗೂರಿನಲ್ಲಿ ಉಪ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅ.19ರಂದು ರಾತ್ರಿ 9:30ಕ್ಕೆ ಕೊಳ್ಳೇಗಾಲ ರಸ್ತೆಯ ಸಾರ್ವಜನಿಕ ಆಸ್ಪತ್ರೆಯ ಬಳಿ ರಸ್ತೆ ದಾಟುತ್ತಿದ್ದಾಗ ಬೈಕ್ ಡಿಕ್ಕಿ ಹೊಡೆದಿತ್ತು. ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಮೃತಪಟ್ಟಿದ್ದಾರೆ. ಸದ್ಯ ಮಳವಳ್ಳಿ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದರ್ಶನ್‌ಗೆ ಬೆನ್ನುನೋವು: ಕೋರ್ಟ್‌ಗೆ ವರದಿ

ಬಳ್ಳಾರಿ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ಚಿತ್ರನಟ ದರ್ಶನ್ ಬೆನ್ನುನೋವಿನಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ ವಿಮ್ಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲು ಅಗತ್ಯ ಸೌಲಭ್ಯವಿದೆಯೇ, ಇಲ್ಲವೇ ಎಂಬ ಕುರಿತು

ಕೋರ್ಟ್‌ಗೆ ವರದಿ ಸಲ್ಲಿಸಲಾಗಿದೆ. ನಟ ದರ್ಶನ್ ಗೆ ಬೆನ್ನುನೋವು ಕಾಣಿಸಿಕೊಂಡಿದ್ದರಿಂದ ಅ.22ರಂದು ವಿಮ್ಸ್ ಆಸ್ಪತ್ರೆಯಲ್ಲಿ ಎಂಆರ್ಐ ಸ್ಕ್ಯಾನಿಂಗ್ ಮಾಡಲಾಗಿತ್ತು. ಬಳಿಕ ವೈದ್ಯರು ನೀಡಿದ ವರದಿಯಲ್ಲಿ ಶಸ್ತ್ರಚಿಕಿತ್ಸೆ ಅಗತ್ಯತೆ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ. ದರ್ಶನ್‌ನನ್ನು ಅವರ ಕುಟುಂಬಸ್ಥರು, ಆಪ್ತರು ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಕುಟುಂಬದ ಸದಸ್ಯ ಸುಶಾಂತ್ ನಾಯ್ಡು, ಆಪ್ತ ಧನ್ವಿರ್ ಭೇಟಿ ನೀಡಿ ಕೆಲಕಾಲ ಮಾತನಾಡಿದರು. ಇದೇ ವೇಳೆ ಮುಂದಿನ ಕಾನೂನು ಹೋರಾಟದ ಬಗ್ಗೆಯೂ ಚರ್ಚೆ ನಡೆಸಿದ್ದಾರಂತೆ. ನಟ ದರ್ಶನ್ ಸ್ಕ್ಯಾನಿಂಗ್ ವರದಿಯ ಪ್ರತಿಯನ್ನು ಕುಟುಂಬಸ್ಥರು ಜೈಲಾಧಿಕಾರಿಗಳಿಂದ ಪಡೆದಿದ್ದಾರೆ.

ಹೃದಯಾಘಾತದಿಂದ ಕೈ ಕಾರ್ಯಕರ್ತ ಸಾವು

ಚನ್ನಪಟ್ಟಣ: ಕಾಂಗ್ರೆಸ್ ಸಮನ್ವಯ ಸಭೆಗೆ ಆಗಮಿಸಿದ್ದ ಕಾರ್ಯಕರ್ತ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ತಾಲೂಕಿನ ದೊಡ್ಡಮಳೂರು ಗ್ರಾಮದ ಖಾಸಗಿ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದಿದೆ. ಮಿಣಕೆರೆದೊಡ್ಡಿ ಗ್ರಾಮದ ಕರಿಯಪ್ಪ (50) ಮೃತಪಟ್ಟವರು. ಗ್ರಾ.ಪಂ. ಮಾಜಿ ಅಧ್ಯಕ್ಷರಾಗಿದ್ದ ಅವರು ಸಭೆಯಲ್ಲಿ ಭಾಗವಹಿಸಿದ್ದ ವೇಳೆ ಹೃದಯಾಘಾತ ಸಂಭವಿಸಿ ಕುರ್ಚಿಯಲ್ಲಿ ಕುಸಿದುಬಿದ್ದಿದ್ದಾರೆ. ತಕ್ಷಣ ಅವರನ್ನುಪಟ್ಟಣದ ಸರಕಾರಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಸಾವನ್ನಪ್ಪಿದ್ದಾರೆ. ಆಸ್ಪತ್ರೆಗೆ ದಾಖಲಿಸಿದ ನಂತರ ಪರೀಕ್ಷೆ ನಡೆಸಿದ ವೈದ್ಯರು ಅವರು ಮೃತಪಟ್ಟ ವಿಷಯ ತಿಳಿಸಿದ್ದಾರೆ. ನಂತರ ಗ್ರಾಮಕ್ಕೆ ಮೃತದೇಹ ಕೊಂಡೊಯ್ದು ಅಂತ್ಯಕ್ರಿಯೆ ನೆರವೇರಿಸಲಾಯಿತು.

{ **ಗಂಗರಾಜು** } ಆರ್‌ಟಿಐ ಕಾರ್ಯಕರ್ತ

ಮುಡಾ ಪ್ರಕರಣದ ಬಗ್ಗೆ ಇ.ಡಿ. ಮತ್ತು ಲೋಕಾಯುಕ್ತದಿಂದ ತನಿಖೆ ನಡೆಯುತ್ತಿದೆ. ಆದರೆ ಲೋಕಾಯುಕ್ತದ ಮೇಲೆ ನನಗೆ ನಂಬಿಕೆ ಇಲ್ಲ. ಇ.ಡಿ. ತನಿಖೆ ಮೇಲೆ ನಂಬಿಕೆಯಿದೆ. ನನಗೆ ಇ.ಡಿ. ನೋಟಿಸ್ ನೀಡಿದೆ. ಸೋಮವಾರ ವಿಚಾರಣೆಗೆ ಹಾಜರಾಗುತ್ತೇನೆ.

ಎಚ್‌ಎಂಟಿ ಭೂಮಿ ವಶಕ್ಕೆ ಎಚ್‌ಡಿಕುಮಾರಸ್ವಾಮಿ ಕಿಡಿ

ಶ್ರೀನಿವಾಸಪುರದ ಮಾಜಿ ಸ್ಪೀಕರ್ ಅರಣ್ಯ ಭೂಮಿ ಒತ್ತುವರಿ ಬಗ್ಗೆ ಕೇಂದ್ರ ಸಚಿವರ ಕಿಡಿ

ಬೆಂಗಳೂರು: ಬೆಂಗಳೂರಿನ ಜಾಲಹಳ್ಳಿಯಲ್ಲಿ ಎಚ್‌ಎಂಟಿ ಕಂಪನಿಗೆ ಸೇರಿದ ಐದು ಎಕರೆ ವಶಕ್ಕೆ ತೆಗೆದುಕೊಂಡಿರುವ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಜಮೀನು ವಶ ವಿರುದ್ಧ ಕಾನೂನು ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

- **ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಸರಕಾರ ದಬ್ಬಾಳಿಕೆ.**
- **ನಮ್ಮ ಪಕ್ಷದ ಅಧ್ಯಕ್ಷರಿಗೆ ನೋಟಿಸ್ ನೀಡಿದ್ದು, ಇದಕ್ಕೆಲ್ಲಾ ಹೆದರುವುದಿಲ್ಲ.**
- **ಕಾಂಗ್ರೆಸ್ ಅಧಿಕಾರ ದುರುಪಯೋಗ ಮಾಡುತ್ತಿದೆ.**

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಶ್ರೀನಿವಾಸಪುರದಲ್ಲಿ ಮಾಜಿ ಸ್ಪೀಕರ್ ಒಬ್ಬರು ನೂರಾರು ಎಕರೆ ಅರಣ್ಯ ಭೂಮಿ ಲೂಟಿ ಹೊಡೆದಿದ್ದಾರೆ. ಮೊದಲು ಅದರ ಬಗ್ಗೆ ನೋಡಲಿ ಸಚಿವ ಈಶ್ವರ್ ಖಂಡ್ರೆ ನೋಡಲಿ. ಇದರ ಬಗ್ಗೆ ನ್ಯಾಯಾಲಯ ಕೊಟ್ಟಿರುವ ತೀರ್ಪನ್ನು ಕುರ್ಚಿ ಕೆಳಗೆ ಹಾಕಿಕೊಂಡು ಕೂತಿದ್ದಾರೆ. ಆದರೆ ಎಚ್‌ಎಂಟಿಯ ಐದು ಎಕರೆಗೆ ಬಲವಂತವಾಗಿ ಹೋಗಿ ಬೇಲಿ ಹಾಕಿಕೊಂಡಿದ್ದಾರೆ. ನ್ಯಾಯಾಲಯದ ಆದೇಶಕ್ಕೆ ಎಚ್‌ಎಂಟಿ ಹಾಗೂ ಅಧಿಕಾರಿಗಳು ತಲೆ ಬಾಗಬೇಕಾಗುತ್ತದೆ ಎಂದರು.

ಕಾಂಗ್ರೆಸ್ ಸರಕಾರದಿಂದ ದಬ್ಬಾಳಿಕೆ: ಉಪ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ವಿರೋಧ ಪಕ್ಷಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ನಾಮಪತ್ರ ಸಲ್ಲಿಸಿದ್ದಾರೆ. ಆ ಸಂದರ್ಭದಲ್ಲಿ ಕ್ಷೇತ್ರದ ಕಾರ್ಯಕರ್ತರು, ಸಾರ್ವಜನಿಕರು ಸೇರಿದ್ದರು. ಎನ್‌ಡಿಎ ಮೈತ್ರಿಕೂಟದ ನಾಯಕರು ದೊಡ್ಡ ಪ್ರಮಾಣದಲ್ಲಿ ಸೇರಿದ್ದರು. ಇದು ಐತಿಹಾಸಿಕ ಸಭೆ ಆಗಿತ್ತು. ಇದು ಕಾಂಗ್ರೆಸ್ ನಾಯಕರ ಕಣ್ಣು ಕುಕ್ಕಿದೆ ಎಂದರು.

ಕಾಂಗ್ರೆಸ್ ಸರಕಾರ ದಬ್ಬಾಳಿಕೆ ನಡೆಸುತ್ತಿದೆ. ಜನ ಕಾರ್ಯಕ್ರಮಕ್ಕೆ ಬರಬಾರದಾ ? ಶುಕ್ರವಾರ ನಾಮಪತ್ರ ಸಲ್ಲಿಕೆಯ ನಂತರ ಒಂದು ನೋಟಿಸ್ ಕೊಟ್ಟಿದ್ದಾರೆ. ಬರುವವರ ಮೇಲೆ ಕೇಸ್ ಹಾಕಿಕೊಂಡು ಚುನಾವಣೆ ನಡೆಸಲು ಹೊರಟಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರಿಗೆ ನೋಟಿಸ್ ನೀಡಿದ್ದು, ಇದಕ್ಕೆಲ್ಲಾ ಹೆದರುವುದಿಲ್ಲ. ಜನರ ಬಳಿ ನಾವು ಮತ ಕೇಳುತ್ತೇವೆ. ಅವರೇ ತೀರ್ಪು ಕೊಡುತ್ತಾರೆ ಎಂದರು.

ಮೂರೂ ಕ್ಷೇತ್ರದಲ್ಲಿ ಗೆಲುವು

ಮೂರೂ ಕ್ಷೇತ್ರಗಳಲ್ಲೂ ನಮ್ಮ ಅಭ್ಯರ್ಥಿಗಳು ದೊಡ್ಡ ಅಂತರದಲ್ಲಿ ಗೆಲುವು ಸಾಧಿಸುತ್ತಾರೆ. ಆದರೆ ಮೂರೂ ಕ್ಷೇತ್ರ ಗೆದ್ದಾಗಿದೆ ಎಂದು ಸಿಎಂ ಹೇಳುತ್ತಿದ್ದಾರೆ. ಕುಮಾರಸ್ವಾಮಿ ಭಾವನಾತ್ಮಕ ಮಾತು ಮತ್ತು ಕಣ್ಣೀರು ಜನರಿಗೆ ಬೇಸರವಾಗಿ ಹೋಗಿದೆ ಎಂದು ಸಿಎಂ ಹೇಳಿದ್ದಾರೆ. ಅವರು ಎಂದೂ ಜನರ ಮುಂದೆ ಕಣ್ಣೀರೇ ಹಾಕಿಲ್ಲವೇ? ಅಧಿಕಾರ, ಹಣದ ದುರ್ಬಳಕೆಯಿಂದ ಗೆದ್ದಾಗಿದೆ ಎಂದು ಕಾಂಗ್ರೆಸ್‌ನವರು ಬೀಗುತ್ತಿದ್ದಾರೆ. ಅವರಿಗೆ ಚನ್ನಪಟ್ಟಣದಲ್ಲಿ ನಿಲ್ಲಿಸಲು ಪಕ್ಷದಿಂದ ಒಬ್ಬ ಅಭ್ಯರ್ಥಿ ಸಿಗಲಿಲ್ಲ. ಬಿಜೆಪಿಯಿಂದ ಅಭ್ಯರ್ಥಿ ಹೈಜಾಕ್ ಮಾಡಿಕೊಂಡು ಹೋಗಿ ಕುತಂತ್ರ ಮಾಡಿದ್ದಾರೆಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಇಲಾಖೆಗೆ ಸಂಬಂಧಿಸಿ ಹಲವು ರಾಜ್ಯಗಳಿಗೆ ಹೋಗಿದ್ದೇನೆ. ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಅಸ್ಸಾಂ, ಛತ್ತೀಸಗಢ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡಿಗೆ ಹೋಗಿ ಬಂದಿದ್ದೇನೆ. ದೆಹಲಿಯಲ್ಲಿ ಸಮಯ ವ್ಯರ್ಥ ಮಾಡದೇ ಕೆಲಸ ಮಾಡುತ್ತಿದ್ದೇನೆ. ಕಾಂಗ್ರೆಸ್ ನವರಿಂದ ನಾನು ಸರ್ಟಿಫಿಕೇಟ್ ತೆಗೆದುಕೊಳ್ಳುವ ಅಗತ್ಯ ಇಲ್ಲ

-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ನಾಮಪತ್ರ ಸಲ್ಲಿಕೆಗೆ ಬಂದ ವಾಹನಗಳಿಗೆ ನೋಟಿಸ್ ನೀಡಲಾಗಿದೆ. ನಮ್ಮ ಕಾರ್ಯಕ್ರಮಕ್ಕೆ ಬಂದವರ ವಿಡಿಯೊ ಮಾಡಿಕೊಂಡು, ಅಧಿಕಾರಿಗಳಿಗೆ ಹೇಳಿ ಕೇಸ್ ಹಾಕಿಸಿ ಯಾವ ಚುನಾವಣೆ ನಡೆಸಲು ಹೋಗುತ್ತಿದ್ದಾರೆ ಎಂದು ಪ್ರಶ್ನಿಸಿದ ಅವರು, ನಮ್ಮ ಪಕ್ಷದ ಅಧ್ಯಕ್ಷರಿಗೆ ಇದರ ಬಗ್ಗೆ ಒಂದು ನೋಟಿಸ್ ಕೊಟ್ಟಿದ್ದಾರೆ. ದಬ್ಬಾಳಿಕೆ ಮೂಲಕ ಇವರು ಚುನಾವಣೆ ನಡೆಸಲು ಹೋಗುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರ ದುರುಪಯೋಗ ಮಾಡುತ್ತಿದೆ. ನಾವು ಮೊದಲೇ ನಿರೀಕ್ಷೆ ಮಾಡಿದ್ದೆವು ಎಂದರು.

ಮಳೆ ಹಾನಿ; 2 ದಿನದಲ್ಲಿ ಪರಿಹಾರಕ್ಕೆ ಸಿಎಂ ಸೂಚನೆ

← ಮೊದಲಪುಟದಿಂದ

ರಾಜ್ಯದ ಪ್ರಮುಖ ಜಲಾಶಯಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ 895.62 ಟಿಎಂಸಿ ಆಗಿದ್ದು, ಪ್ರಸ್ತುತ 871.26 ಟಿಎಂಸಿ ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದು 505.81 ಟಿಎಂಸಿ ಇತ್ತು. ಹಿಂಗಾರು ಅವಧಿಯಲ್ಲಿ ಅತಿವೃಷ್ಟಿಯಿಂದಾಗಿ ಒಟ್ಟು 25 ಸಾವು ಸಂಭವಿಸಿದ್ದು, ತುರ್ತು ಪರಿಹಾರ ಪಾವತಿಸಲಾಗಿದೆ. ಈ ಅವಧಿಯಲ್ಲಿ ಅಧಿಕ ಮಳೆಯಿಂದಾಗಿ 84 ಮನೆಗಳು ಸಂಪೂರ್ಣ ಹಾನಿಗೀಡಾಗಿದ್ದು, 2077 ಮನೆಗಳು ಭಾಗಶಃ ಹಾನಿಗೀಡಾಗಿವೆ. ಪೂರ್ತಿ ಮನೆಗೆ 1.20 ಲಕ್ಷ ರು. ಪರಿಹಾರ ಹಾಗೂ ಮನೆ ನಿರ್ಮಿಸಿ ಕೊಡಲು ಈಗಾಗಲೇ ಆದೇಶಿಸಲಾಗಿದೆ. ಭಾಗಶಃ ಹಾನಿಗೀಡಾದ ಮನೆಗಳಿಗೆ ಮುಂಗಾರು ಹಂಗಾಮಿನಲ್ಲಿ ಸೂಚಿಸಿರುವಂತೆ 50 ಸಾವಿರದವರೆಗೆ ಪರಿಹಾರ ಒದಗಿಸಲು ಆದೇಶಿಸಲಾಗಿದೆ ಎಂದು ಹೇಳಿದರು.

ಅತಿವೃಷ್ಟಿ, ಪ್ರವಾಹ, ನೆರೆ ಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಸ್ವತಃ ಭೇಟಿ ನೀಡಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಹಾನಿಗೀಡಾದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನಿಯಮಾವಳಿ ಪ್ರಕಾರ ತಕ್ಷಣ ಪರಿಹಾರ ಒದಗಿಸಿ ಜನರಿಗೆ ಸಾಂತ್ವನ ಹೇಳುಬೇಕು ಎಂದು ಸೂಚಿಸಿದರು.

ನಾಲ್ಕು ದಿನಗಳಲ್ಲಿ ಸಮೀಕ್ಷೆ ಪೂರ್ಣ: ಬೆಳೆ ಹಾನಿ ಕುರಿತು ಸ್ಥಳ ಪರಿಶೀಲನೆ ನಡೆಸಿದ ಆಧಾರದಲ್ಲಿ ಪ್ರಾಥಮಿಕ ವರದಿಯನ್ನು ಪಡೆಯಲಾಗಿದೆ. ಅತಿವೃಷ್ಟಿಯಿಂದಾಗಿ ಒಟ್ಟು 74,993 ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು ಕೃಷಿ ಬೆಳೆ ಹಾನಿ, 30,941 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆ ಹಾನಿ ಅಂದಾಜಿಸಲಾಗಿದೆ. ಒಟ್ಟು 1,05,937ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಅಂದಾಜಿಸಲಾಗಿದೆ. ಬೆಳೆ ಹಾನಿಯ ಕುರಿತು ಜಂಟಿ ಸಮೀಕ್ಷೆ ನಡೆಯುತ್ತಿದ್ದು, 3-4 ದಿನಗಳಲ್ಲಿ ಸಮೀಕ್ಷೆ ಕಾರ್ಯ ಪೂರ್ಣಗೊಳ್ಳಲಿದೆ. ಜಂಟಿ ಸಮೀಕ್ಷೆ ಕಾರ್ಯವನ್ನು ಒಂದು ವಾರದ ಒಳಗಾಗಿ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮನೆ ಹಾನಿ ಮತ್ತು ಪ್ರಾಣ ಹಾನಿ ಪ್ರಕರಣಗಳಲ್ಲಿ 48 ಗಂಟೆಗಳ ಒಳಗಾಗಿ ಪರಿಹಾರವನ್ನು ಒದಗಿಸಬೇಕು ಎಂದರು.

ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅನುದಾನ ಲಭ್ಯವಿದ್ದು, ಅನುದಾನ ಕೊರತೆ ಇರುವುದಿಲ್ಲ. ಡಿಸಿ ಖಾತೆಯಲ್ಲಿ 551.25 ಕೋಟಿ ಹಾಗೂ ತಹಶೀಲ್ದಾರ್ ಖಾತೆಯಲ್ಲಿ 115.71 ಕೋಟಿ ಸೇರಿ ಒಟ್ಟು 666.96 ಕೋಟಿ ಹಣ ಲಭ್ಯವಿದೆ. ಮುಂಗಾರಿನಲ್ಲಿ 80 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಬೆಳೆ ಪರಿಹಾರ ನೀಡಲಾಗುತ್ತಿದೆ. ಕೆರೆಗಳ ಒತ್ತುವರಿ ತೆರವುಗೊಳಿಸಲು ಎಲ್ಲ ಡಿಸಿಗಳಿಗೆ ಗಡುವು ವಿಧಿಸಲಾಗಿತ್ತು. ಬೆಂಗಳೂರು ಸುತ್ತ ಬಹುತೇಕ ಕೆರೆಗಳು ಕೇವಲ ಶೇ. 30ರಷ್ಟು ಮಾತ್ರ ತುಂಬಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲು ಸೂಚಿಸಲಾಗಿದೆ ಎಂದರು.

ಕೈ ನಾಯಕಿಯಿಂದಲೇ ಹನಿಟ್ರ್ಯಾಪ್ | ಬೆಂಗಳೂರಿನ ಸಿಸಿಬಿ ಪೊಲೀಸ್ ಬಲೆಗೆ ಬಿದ್ದ ಗಂಡ-ಹೆಂಡತಿ

ಹನಿಟ್ರ್ಯಾಪ್ ಬಲೆಗೆ ಬಿದ್ದ ಮಾಜಿ ಸಚಿವ!

ಕಲಬುರಗಿ: ಜಿಲ್ಲೆಯಲ್ಲಿ ದಿನೇದಿನೇ ಒಂದಿಲ್ಲೊಂದು ಹನಿಟ್ರ್ಯಾಪ್ ಪ್ರಕರಣ ಬೆಳಕಿಗೆ ಬರುತ್ತಿದ್ದು, ಒಬ್ಬರ ಹಿಂದೆ ಒಬ್ಬರು ಕಂಬಿಹಿಂದೆ ಹೋಗುತ್ತಿದ್ದಾರೆ. ಇದೀಗ, ಮಾಜಿ ಸಚಿವರೊಬ್ಬರಿಗೆ ಸ್ವಪಕ್ಷಿಯ ನಾಯಕಿಯೇ ತನ್ನ ಮೋಹಜಾಲದಲ್ಲಿ ಬೀಳಿಸಿ 20 ಲಕ್ಷ ರು.ಗಳಿಗೆ ಬೇಡಿಕೆ ಇಟ್ಟು, ಸಿಸಿಬಿ ಪೊಲೀಸರ ಬಲೆಗೆ ಬಿದ್ದಿರುವ ಪ್ರಕರಣ ಶುಕ್ರವಾರ ಸಾಯಂಕಾಲ ಬೆಳಕಿಗೆ ಬಂದಿದೆ.

ಜಿಲ್ಲೆಯ ಕಾಂಗ್ರೆಸ್ ಪ್ರಭಾವಿ ಮುಖಂಡ, ಮಾಜಿ ಸಚಿವರ ಮೇಲೆ ನಡೆದ ಹನಿಟ್ರ್ಯಾಪ್ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿ ಕಾಂಗ್ರೆಸ್ ನಾಯಕಿ ಮತ್ತು ಆಕೆಯ ಪತಿಯನ್ನು ಬೆಂಗಳೂರಿನ ಸಿಸಿಬಿ ಪೊಲೀಸರು ಶುಕ್ರವಾರ ಸಂಜೆ ಬಂಧಿಸಿದ್ದಾರೆ.

ಕಲಬುರಗಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷೆ ಹಾಗೂ ನಲಪಾಡ ಬ್ರಿಗೇಡ್ ಅಧ್ಯಕ್ಷೆ ಮಂಜುಳಾ ಪಾಟೀಲ್ ಮತ್ತು ಆಕೆಯ ಪತಿ ಶಿವರಾಜ ಪಾಟೀಲ್‌ನನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಆರೋಪಿಗಳನ್ನು ನ್ಯಾಯಾಲಯ 8 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿದ್ದು, ಪೊಲೀಸ್ ವಿಚಾರಣೆ ನಡೆಯುತ್ತಿದೆ.

ಮಾಜಿ ಸಚಿವ ಪುತ್ರನಿಗೆ ವಾಟ್ಸಾಪ್ ಕರೆ : ಅ.21ರಂದು ರಾತ್ರಿ ಮಂಜುಳಾ ಪಾಟೀಲ್, ಮಾಜಿ ಸಚಿವರ ಪುತ್ರನಿಗೆ ವಾಟ್ಸಾಪ್ ಕರೆ ಮಾಡಿ ತಾನು ನಲಪಾಡ್ ಬ್ರಿಗೇಡ್ ಅಧ್ಯಕ್ಷೆ ಮಂಜುಳಾ ಪಾಟೀಲ್ ಎಂದು ಪರಿಚಯ ಮಾಡಿಕೊಂಡಿದ್ದಾಳೆ. ನಿಮ್ಮ ತಂದೆಯವರು ನನಗೆ ಕೆಟ್ಟ ಸಂದೇಶಗಳನ್ನು ಕಳುಹಿಸಿದ್ದಾರೆ ಎಂದು ಹೇಳಿ, ನಿಮ್ಮನ್ನು ತುರ್ತಾಗಿ ಭೇಟಿಯಾಗಿ ಚರ್ಚಿಸಬೇಕು ಎಂದು ಹೇಳಿದ್ದಾಳೆ

ಇದಾದ, ಬಳಿಕ ಮತ್ತೆ ಅ.22ರಂದು ಮಧ್ಯಾಹ್ನ ಮಂಜುಳಾ ಪಾಟೀಲ್ ಹಾಗೂ ಆಕೆಯ ಪತಿ ಶಿವರಾಜ ಪಾಟೀಲ್ ಎರಡು ಬಾರಿ ಕರೆ ಮಾಡಿ ಸಂಜೆ ಬೆಂಗಳೂರಿನ ಕೊಡಿಗೇಹಳ್ಳಿಯ ಸ್ವಾತಿ ಗಾರ್ಡೇನಿಯಾ ಹೋಟೆಲ್‌ನಲ್ಲಿ ಭೇಟಿಯಾಗಬೇಕು ಎಂದು ತಿಳಿಸಿದ್ದಾರೆ. ಅದರಂತೆ ಸಂಜೆ 7.30ಕ್ಕೆ, ಮಾಜಿ ಸಚಿವರ ಮಗನನ್ನು ಭೇಟಿಮಾಡಿ ನಿಮ್ಮ ತಂದೆ ವಿರುದ್ಧ ದೂರು ದಾಖಲು ಮಾಡದಿರಲು ಹಾಗೂ ಯಾವುದೇ ಮಾಧ್ಯಮಗಳಲ್ಲಿ ವಿಷಯ ಹೇಳದೆ ಇರಲು 20 ಲಕ್ಷ ರು. ನೀಡುವಂತೆ ಬೇಡಿಕೆ ಮುಂದಿಟ್ಟಿದ್ದಾರೆ. ಅಲ್ಲದೆ ಹಣ ನೀಡಿದ ನಂತರ ನಿಂದನೀಯ ಮೆಸೇಜ್‌ಗಳನ್ನು ಅಳಿಸಿ ಹಾಕಲಾಗುವ ಭರವಸೆ ನೀಡಿದ್ದರು.

ಪುತ್ರನಿಂದ ದೂರು

ಆರೋಪಿಗಳನ್ನು ಭೇಟಿ ಮಾಡಿದ ಮಾಜಿ ಸಚಿವರ ಮಗ ಪ್ರಕರಣದ ಕುರಿತು ಬೆಂಗಳೂರಿನ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಅ.25ರಂದು ದೂರು ನೀಡಿದ್ದಾರೆ. ತಂದೆಯವರು ಯಾವುದೇ ತಪ್ಪು ಮಾಡಿಲ್ಲ, ಅವರ ಹೆಸರು ಹಾಳುಮಾಡಲೆಂದೇ ಈ ರೀತಿಯ ಕೃತ್ಯ ಎಸಗಿದ್ದಾರೆ ಎಂದು ದೂರಿದ್ದಾರೆ. ದೂರು ದಾಖಲಾಗುತ್ತಲೇ ಬೆಂಗಳೂರಿನ ಪೊಲೀಸ್ ಸಿಬ್ಬಂದಿ ಚುರುಕಾಗಿದ್ದಾರೆ. ಹಣ ನೀಡುವುದಾಗಿ ಹೇಳಿ ಮಹಿಳೆ ಮತ್ತು ಆಕೆಯ ಪತಿಯನ್ನು ಮಾಜಿ ಸಚಿವರ ಪುತ್ರನ ಮೂಲಕ ಸ್ಥಳವೊಂದಕ್ಕೆ ಕರೆಸಿದ್ದಾರೆ. ಹಣ ಪಡೆಯುವಾಗ ದಾಳಿ ನಡೆಸಿದ ಪೊಲೀಸ್ ಸಿಬ್ಬಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಕಲಬುರಗಿ ಹನಿಟ್ರ್ಯಾಪ್ ಹಾಟ್‌ಸ್ಪಾಟ್

ಕಲಬುರಗಿ ಜಿಲ್ಲೆ ಇತ್ತೀಚಿಗೆ ರಾಜ್ಯದಲ್ಲಿ ಒಂದಿಲ್ಲೊಂದು ಪ್ರಕರಣದಲ್ಲಿ ಭಾರಿ ಕುಖ್ಯಾತಿಗೆ ಒಳಗಾಗುತ್ತಿದೆ. ಎರಡು ವರ್ಷಗಳ ಹಿಂದೆ ಪಿಎಸ್‌ಐ ನೇಮಕಾತಿ ಪರೀಕ್ಷೆ ಸೇರಿ ವಿವಿಧ ಪರೀಕ್ಷೆಗಳ ಅಕ್ರಮದಲ್ಲಿ ರಾಜ್ಯದಲ್ಲಿ ಬಾರಿ ಸದ್ದು ಮಾಡಿತ್ತು. ಅಲ್ಲದೇ, ಹನಿಟ್ರ್ಯಾಪ್ ಪ್ರಕರಣದಿಂದಾಗಿ ಜಿಲ್ಲೆಯ ರಾಜ್ಯ ಅಲ್ಲದೆ ರಾಷ್ಟ್ರಮಟ್ಟದಲ್ಲಿಯೂ ಬಾರಿ ಚರ್ಚೆಗೆ ಗ್ರಾಸವಾಗಿತ್ತು. ಇದೀಗ, ಮಾಜಿ ಸಚಿವರಿಗೆ ಹನಿಟ್ರ್ಯಾಪ್ ಬಲೆಗೆ ಬೀಳಿಸಿದ ಪ್ರಕರಣದಲ್ಲಿ ಮಂಜುಳಾ ಪಾಟೀಲ್ ಎಂಬಕಾಂಗ್ರೆಸ್ ನಾಯಕಿಯನ್ನು ಸಿಸಿಬಿ ಪೊಲೀಸರು ಬಂಧಿಸುವ ಮೂಲಕ ಮತ್ತೊಮ್ಮೆ ಕಲಬುರಗಿ ರಾಜ್ಯಮಟ್ಟದಲ್ಲಿ ಸುದ್ದಿ ಮಾಡಿದೆ.ಇದರಿಂದಾಗಿ ಕಲಬುರಗಿ ಜಿಲ್ಲೆಯು ಹನಿಟ್ರ್ಯಾಪ್ ಪ್ರಕರಣಗಳ ಹಾಟ್‌ಸ್ಪಾಟ್ ಆಗಿ ಪರಿವರ್ತನೆ ಪಡೆದುಕೊಂಡಿದೆ ಎಂದರು ತಪ್ಪಾಗಲಾರದು.

ರಾಯರ ಮಠಕ್ಕೆ 3.38 ಕೋಟಿ ರುಪಾಯಿ ಕಾಣಿಕೆ ಸಂಗ್ರಹ

ಮಂತ್ರಾಲಯದ ಶ್ರೀಗುರು ರಾಘವೇಂದ್ರ ಸ್ವಾಮಿ ಮಠದ ಕಾಣಿಕೆ ಹುಂಡಿ ಎಣಿಕೆ ಕಾರ್ಯದಲ್ಲಿ ನೂರಾರು ಸಿಬ್ಬಂದಿ, ಕರಸೇವಕರು ಭಾಗವಹಿಸಿದ್ದರು

ರಾಯಚೂರು: ಮಂತ್ರಾಲಯ ಶ್ರೀಗುರು ರಾಘವೇಂದ್ರ ಸ್ವಾಮಿ ಮಠದ ಕಾಣಿಕೆ ಹುಂಡಿ ಎಣಿಕೆ ಮುಗಿದ್ದು, ಕಳೆದ 31 ದಿನಗಳಲ್ಲಿ 3.38 ಕೋಟಿ ರು. ಕಾಣಿಕೆ ಸಂಗ್ರಹವಾಗಿದೆ.

ಕರ್ನಾಟಕ, ಆಂಧ್ರಪ್ರದೇಶದ ಶಕ್ತಿ ಯೋಜನೆ ಪ್ರಭಾವದಿಂದ ಮಂತ್ರಾಲಯದ ರಾಯರ ಮಠಕ್ಕೆ ಹೆಚ್ಚಿನ ಕಾಣಿಕೆ ಹರಿದುಬಂದಿದೆ. ದಸರಾ ರಜೆ, ಹಬ್ಬದ ಹಿನ್ನೆಲೆ ಮಂತ್ರಾಲಯ ಮಠಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಕಾಣಿಕೆಯಲ್ಲಿ 3.30 ಕೋಟಿ ರು. ನೋಟುಗಳು, 7.44 ಲಕ್ಷ ರು.ನಾಣ್ಯಗಳು, 136 ಗ್ರಾಂ ಚಿನ್ನ, 1180 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. ಮಠದ ನೂರಾರು ಸಿಬ್ಬಂದಿ, ಕರಸೇವಕರು ಹುಂಡಿ ಎಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಉದ್ಯಮಿಯ ಕೊಂದು ಸುಟ್ಟು ಹಾಕಿದ ಟೆಕ್ಕಿ

ಮಡಿಕೇರಿ: ಸುಂಟಿಕೊಪ್ಪ ಸಮೀಪದ ಪನ್ಯ ತೋಟದ ಮಾರಿಗುಡಿ ಬಳಿಯ ಕಾಫಿತೋಟದಲ್ಲಿ ಅ.8ರಂದು ಮೃತದೇಹ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈ ಪ್ರಕರಣವನ್ನು ಭೇದಿಸುವಲ್ಲಿ ಕೊಡಗಿನ ಪೊಲೀಸರು ಯಶಸ್ವಿಯಾಗಿದ್ದಾರೆ. ಹೈದರಬಾದ್ ಮೂಲದ ರಮೇಶ್ ಕುಮಾರ್(54) ಕೊಲೆಯಾದ ವ್ಯಕ್ತಿ. ಈತನ 2ನೇ ಪತ್ನಿ ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ ವಾಸವಿದ್ದ ನಿಹಾರಿಕಾ, ಆಕೆಯ ಸ್ನೇಹಿತರಾದ ಹರಿಯಾಣದ ಕರ್ನಾಲ್‌ನ ಅಂಕುರ್ ರಾಣಾ, ಬೆಂಗಳೂರಿನ ರಾಮಮೂರ್ತಿ ನಗರ ನಿವಾಸಿ ನಿಖಿಲ್ ಮೈರೆಡ್ಡಿ ಬಂಧಿತರು. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಮರ್ಸಿಡೀಸ್ ಬೆಂಝ್ ಕಾರನ್ನು ವಶಕ್ಕೆ ಪಡೆಯಲಾಗಿದೆ. ಹಣಕಾಸಿನ ವ್ಯವಹಾರವೇ ಉದ್ಯಮಿ ರಮೇಶ್ ಕುಮಾರ್ ಕೊಲೆಗೆ ಕಾರಣ ಎಂದು ತಿಳಿದುಬಂದಿದೆ.

ಪ್ರಕರಣ ಹಿನ್ನೆಲೆ: ಸುಂಟಿಕೊಪ್ಪದ ಪನ್ಯದ ಸಂದೇಶ್‌ಗೆ ಸೇರಿದ ಮಾರಿಗುಡಿ ಸಮೀಪದ ಕಾಫಿತೋಟದಲ್ಲಿ ಅ.8ರಂದು ಪುರುಷನ ಮೃತದೇಹ ಕಂಡು ಬಂದ ಬಗ್ಗೆ ಮಾಲೀಕರು ಸುಂಟಿಕೊಪ್ಪ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ ಮೇರೆಗೆ ಠಾಣಾಧಿಕಾರಿ ಚಂದ್ರಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಡಿವೈಎಸ್‌ಪಿ ಗಂಗಾಧರಪ್ಪ, ಕುಶಾಲನಗರ ಗ್ರಾಮಾಂತರ ವೃತ್ತ ನಿರೀಕ್ಷಕ ರಾಜೇಶ್ ಕೋಟ್ಯಾನ್ ಭೇಟಿ ನೀಡಿ ತನಿಖೆ ಕೈಗೊಂಡಿದ್ದರು. ಪ್ರಕರಣದ ಪತ್ತೆಗಾಗಿ 4 ವಿಶೇಷ ತಂಡ ರಚಿಸಲಾಗಿತ್ತು. ಸುಂಟಿಕೊಪ್ಪದಿಂದ ತುಮಕೂರುವರೆಗೆ 500 ಸಿ.ಸಿ. ಕ್ಯಾಮೆರಾಗಳನ್ನು ಪೊಲೀಸರು ಪರಿಶೀಲಿಸಿದ್ದರು. ಈ ವೇಳೆ, ಕೆಂಪುಬಣ್ಣದ ಬೆಂಝ್ ಕಾರಿನ(ಟಿಎಸ್.07ಎಫ್ಎಸ್-5679) ಮೇಲೆ ಶಂಕೆ ವ್ಯಕ್ತವಾಗಿತ್ತು. ಕಾರಿನ ಮೂಲ ಮಾಲೀಕರನ್ನು ಪತ್ತೆಹಚ್ಚಿದಾಗ ತೆಲಂಗಾಣದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ರಮೇಶ್ ಕುಮಾರ್ ಎಂದು ಗೊತ್ತಾಯಿತು.

ಹಾಸನಾಂಬೆ ದೇವಿಯ ದರ್ಶನ ಪಡೆದ ಭಕ್ತಾಧಿಗಳು

ಹಾಸನ: ಹಾಸನಾಂಬೆ ಸಾರ್ವಜನಿಕ ದರ್ಶನದ 2ನೇ ದಿನವಾದ ಶನಿವಾರ, ದೇವಿಯ ದರ್ಶನಕ್ಕೆ ಅಪಾರ ಮಂದಿ ಭಕ್ತರು ಆಗಮಿಸಿದ್ದರು.

ಮುಂಜಾನೆಯಿಂದಲೇ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ ಹಾಸನಾಂಬೆ ದರ್ಶನ ಪಡೆದು ಪಾವನರಾದರು. ಮುಂಜಾನೆ 4 ಗಂಟೆಯಿಂದ ದೇವಿಯ ದರ್ಶನ ಆರಂಭಗೊಂಡಿತು. ಕೆಲವರು ಮಧ್ಯರಾತ್ರಿಯಿಂದಲೇ ಸರತಿ ಸಾಲಿನಲ್ಲಿ ನಿಂತು ದರ್ಶನಕ್ಕೆ ಕಾದು ನಿಂತಿದ್ದರು.

ವಾರಾಂತ್ಯದ ಹಿನ್ನೆಲೆಯಲ್ಲಿ ಭಕ್ತರ ಸಂಖ್ಯೆ ಸಹಜವಾಗಿಯೇ ಹೆಚ್ಚು ಇತ್ತು.1 ಸಾವಿರ ಹಾಗೂ 300 ರು. ವಿಶೇಷ ದರ್ಶನದ ಸರತಿ ಸಾಲುಗಳೂ ಸಹ ಭರ್ತಿಯಾಗಿದ್ದವು. ಹೊರಜಿಲ್ಲೆಗಳಿಂದಲೂ ಹೆಚ್ಚಿನ ಸಂಖ್ಯೆಯ ಭಕ್ತರು ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ನಾಗಮಂಗಲ ಮಾಜಿ ಶಾಸಕ ಸುರೇಶ್ ಗೌಡ ಮೊದಲಾದವರು ದೇವಿಯ ದರ್ಶನ ಪಡೆದರು. ಉಳಿದಂತೆ ಜಿಲ್ಲೆ, ರಾಜ್ಯ ಹಾಗೂ ಇತರೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದರು. ಗಂಟೆಗಟ್ಟಲೆ ಸಾಲಿನಲ್ಲಿ ನಿಂತು ಅಧಿದೇವತೆಯನ್ನು ಎದುರುಗೊಂಡು ಭಾವಪರವಶರಾದರು. ಬಂದ ಭಕ್ತರಿಗೆ ಅಚ್ಚುಕಟ್ಟು ರೀತಿಯಲ್ಲಿ ಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಲಾಗಿತ್ತು.

ಸೈಲ್‌ಗೆ 7 ವರ್ಷ ಸೆಲ್

← ಮೊದಲಪುಟದಿಂದ

ಮೂರು ಪ್ರಕರಣದ ಶಿಕ್ಷೆ ಪ್ರಮಾಣ: ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಒಟ್ಟು 4 ಪ್ರಕರಣದಲ್ಲಿ ಶಿಕ್ಷೆ ಪ್ರಕಟ ಮಾಡಿದೆ. ಒಂದು ಪ್ರಕರಣದಲ್ಲಿ 7 ವರ್ಷ, ಮತ್ತೊಂದು ಪ್ರಕರಣದಲ್ಲಿ 5 ಹಾಗೂ ಇನ್ನೊಂದು ಪ್ರಕರಣದಲ್ಲಿ 3 ವರ್ಷ ಶಿಕ್ಷೆ ವಿಧಿಸಿದೆ. ಇಷ್ಟು ಮಾತ್ರವಲ್ಲದೆ 9 ಕೋಟಿ 60 ಲಕ್ಷ ರು. ದಂಡ ಪಾವತಿ ಮಾಡುವಂತೆ ನ್ಯಾಯಾಲಯ ಆದೇಶ ಹೊರಡಿಸಿದೆ. 420 ವಂಚನೆ ಪ್ರಕರಣದಲ್ಲಿ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ. ಅದಿರು ಕಳ್ಳತನ ಪ್ರಕರಣದಲ್ಲಿ 3 ವರ್ಷ ಹಾಗೂ ಒಳಸಂಚು ಪ್ರಕರಣದಲ್ಲಿ 5 ವರ್ಷ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಬೇಲೆಕೇರಿ ಬಂದರಿನಿಂದ ಅದಿರು ಅಕ್ರಮ ಸಾಗಾಟ ಪ್ರಕರಣಕ್ಕೆ ಲೋಕಾಯುಕ್ತ ಹಾಗೂ ಅರಣ್ಯಾಧಿಕಾರಿಗಳು 2010 ರಲ್ಲಿ ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಂಡಿದ್ದರು. ನೂರಾರು ಕೋಟಿ ಬೆಲೆ ಬಾಳುವ ಅಕ್ರಮ ಅದಿರನ್ನು ಜಪ್ತಿ ಮಾಡಲಾಗಿತ್ತು. ಸುದೀರ್ಘ 14 ವರ್ಷಗಳ ವಿಚಾರಣೆಯ ಬಳಿಕ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಹಾಗೂ ಇತರ ಆರೋಪಿಗಳನ್ನು ಜನಪ್ರತಿನಿಧಿಗಳ ನ್ಯಾಯಾಲಯ ತಪ್ಪಿತಸ್ಥರೆಂದು ಆದೇಶಿಸಿ ಶಿಕ್ಷೆ ಪ್ರಕಟಿಸಿದೆ.

ದಂಡ

- **ಮೊದಲ ಪ್ರಕರಣ 6 ಕೋಟಿ ರು.**
- **ಎರಡನೇ ಪ್ರಕರಣ 9.60 ಕೋಟಿ ರು.**
- **ಮೂರನೇ ಪ್ರಕರಣ 9.36, ಕೋಟಿ ರು.**
- **ನಾಲ್ಕನೇ ಪ್ರಕರಣ 9.54 ಕೋಟಿ ರು.**
- **ಐದನೇ ಪ್ರಕರಣ 9.25 ಕೋಟಿ ರು.**
- **ಆರನೇ ಪ್ರಕರಣ 90 ಲಕ್ಷ ರು.**

ಯಾವ್ಯಾವ ಕೇಸ್‌ನಲ್ಲಿ ಏನು ಶಿಕ್ಷೆ?

- **ವಂಚನೆ ಪ್ರಕರಣದಲ್ಲಿ 7 ವರ್ಷ ಶಿಕ್ಷೆ ಪ್ರಕಟ.**
- **ಕಳ್ಳತನ ಕೇಸ್ 3 ವರ್ಷ ಶಿಕ್ಷೆ**
- **ಒಳಸಂಚು ಆರೋಪ 5 ವರ್ಷ ಶಿಕ್ಷೆ**
- **2ನೇ ಕೇಸ್‌ನಲ್ಲಿ ಸತೀಶ್ ಸೈಲ್‌ಗೆ 5 ವರ್ಷ ಶಿಕ್ಷೆ**
- **3ನೇ ಕೇಸ್‌ನಲ್ಲಿ ಒಳಸಂಚು ಆರೋಪದಲ್ಲಿ ಎಲ್ಲ ಅಪರಾಧಿಗಳಿಗೆ ಐದು ವರ್ಷ ಶಿಕ್ಷೆ**
- **4ನೇ ಪ್ರಕರಣದಲ್ಲಿ 5 ವರ್ಷ ಶಿಕ್ಷೆ ಪ್ರಕಟ**

ಮೊದಲನೇ ಪ್ರಕರಣ: ಎಷ್ಟೆಷ್ಟು ವರ್ಷ ಶಿಕ್ಷೆ?

- **ಮೊದಲನೇ ಕೇಸ್ ಸತೀಶ್ ಸೈಲ್ ಗೆ 7 ವರ್ಷ ಶಿಕ್ಷೆ**
- **ಅಪರಾಧಿ ಮಹೇಶ್ ಬಿಳಿಯೇ ಗೆ 7 ವರ್ಷ ಶಿಕ್ಷೆ**
- **ಅಪರಾಧಿಗಳಿಗೆ 6 ಕೋಟಿ ರೂಪಾಯಿ ದಂಡ**

2ನೇ ಪ್ರಕರಣ

- **ಎರಡನೇ ಪ್ರಕರಣದಲ್ಲಿ ಸತೀಶ್ ಸೈಲ್‌ಗೆ ಐದು ವರ್ಷ ಶಿಕ್ಷೆ**
- **50 ಸಾವಿರ ರುಪಾಯಿ ದಂಡ**
- **ಮಹೇಶ್ ಬಿಳಿಯೇ ಸತೀಶ್ ಸೈಲ್ ಗೆ ಏಳು ವರ್ಷ**
- **ದಂಡದ ಮೊತ್ತ ಸರಕಾರಕ್ಕೆ ಜಪ್ತಿ ಮಾಡಲು ಆದೇಶ**
- **ಎರಡು ಪ್ರಕರಣಗಳಲ್ಲಿ ಏಳು ವರ್ಷ ಕಠಿಣ ಕಾರಾಗೃಹ ವಾಸ.**

3ನೇ ಪ್ರಕರಣ

- **ಒಳಸಂಚು ಆರೋಪದಲ್ಲಿ ಎಲ್ಲ ಅಪರಾಧಿಗಳಿಗೆ ಐದು ವರ್ಷ ಶಿಕ್ಷೆ**
- **ತಲಾ 20 ಸಾವಿರ ರೂಪಾಯಿ ದಂಡ**

ವಂಚನೆ ಆರೋಪ ಏಳು ವರ್ಷ ಶಿಕ್ಷೆ

- **ಮಹೇಶ್ ಬಿಳಿಯೇ, ಸತೀಶ್ ಸೈಲ್‌ಗೆ 7 ವರ್ಷ ಜೈಲು**
- **ಮಹೇಶ್ ಬಿಳಿಯೇ ಗೆ ಸೆಕ್ಷನ್ 409 ಅಡಿಯಲ್ಲಿ 7 ವರ್ಷ ಜೈಲು**
- **ಕಳ್ಳತನ ಕೇಸಲ್ಲಿ 3 ವರ್ಷ ಜೈಲು**

4ನೇ ಪ್ರಕರಣ

- **ಮಹೇಶ್ ಬಿಳಿಯೇ, ಸ್ವಸ್ತಿಕ್ ನಾಗರಾಜ್, ಸತೀಶ್ ಸೈಲ್‌ಗೆ 5 ವರ್ಷ ಜೈಲು ಶಿಕ್ಷೆ**
- **ವಂಚನೆ ಆರೋಪದಲ್ಲಿ ಏಳು ವರ್ಷ ಜೈಲು ಶಿಕ್ಷೆ**
- **ಮಹೇಶ್ ಬಿಳಿಯೇ ಗೆ 409 ಅಡಿ 7 ವರ್ಷ ಜೈಲು ಶಿಕ್ಷೆ.**

ಐದನೇ ಪ್ರಕರಣ

- **ಮಹೇಶ್ ಬಿಳಿಯೇ, ಖಾರದಪುಡಿ ಮಹೇಶ್, ಸತೀಶ್ ಸೈಲ್ ಗೆ ಒಳಸಂಚು ಆರೋಪದಲ್ಲಿ ಐದು ವರ್ಷ ಶಿಕ್ಷೆ**

ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ

- **ವಂಚನೆ ಆರೋಪದಲ್ಲಿ ಏಳು ವರ್ಷ ಶಿಕ್ಷೆ**
- **ಮಹೇಶ್ ಬಿಳಿಯೇ, ಖಾರದಪುಡಿ ಮಹೇಶ್, ಸತೀಶ್ ಸೈಲ್‌ಗೆ ಏಳು ವರ್ಷ ಶಿಕ್ಷೆ**
- **ಕಳ್ಳತನ ಆರೋಪದಲ್ಲಿ ಮೂರು ವರ್ಷ ಶಿಕ್ಷೆ, ಆರನೇ ಪ್ರಕರಣ**
- **ಒಳಸಂಚಿಗೆ 5 ವರ್ಷ, ವಂಚನೆಗೆ 7 ವರ್ಷ, ಕಳ್ಳತನಕ್ಕೆ 3 ವರ್ಷ ಶಿಕ್ಷೆ**
- **ಮಹೇಶ್ ಬಿಳಿಯೇ, ಪ್ರೇಮ್ ಚಂದ್ ಗರ್ಗ್, ಸತೀಶ್ ಸೈಲ್ ಏಳು ವರ್ಷ ಶಿಕ್ಷೆ**

ಹಿಂದೆಯೂ ಜೈಲು ವಾಸ: 2012ರ ಸೆಪ್ಟೆಂಬರ್ 16ರಂದು ಸಿಬಿಐ ಸತೀಶ್ ಸೈಲ್ ಮನೆ ಮೇಲೆ ದಾಳಿ ಮಾಡಿ ಮಹತ್ವದ ದಾಖಲೆ ವಶಪಡಿಸಿಕೊಂಡಿತ್ತು. ಇದಾದ ಬಳಿಕ 2013ರ ಸೆಪ್ಟೆಂಬರ್ 20ರಂದು ಸೈಲ್ ಬಂಧನವಾಗಿತ್ತು. ವರ್ಷಕ್ಕೂ ಅಧಿಕ ಕಾಲ ಜೈಲುವಾಸ ಅನುಭವಿಸಿ 2014ರ ಡಿಸೆಂಬರ್ 16ಕ್ಕೆ ಜಾಮಿನು ಪಡೆದು ಹೊರ ಬಂದಿದ್ದರು. ಈ ಎಲ್ಲ ಬೆಳವಣಿಗೆಗಳ ನಂತರ ಕಾಂಗ್ರೆಸ್ ಪಕ್ಷದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸತೀಶ್ ಸೈಲ್, ಬಿಜೆಪಿಯ ರೂಪಾಲಿ ನಾಯ್ಕ ವಿರುದ್ಧ ಸೋತಿದ್ದರು. ಈ ಭಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಪಡೆದು ಕಾರವಾರ ವಿಧಾನಸಭಾ ಕ್ಷೇತ್ರದಿಂದ ಗೆಲುವು ಕಂಡಿದ್ದರು.

60 ಸಾವಿರ ಕೋಟಿ ನಷ್ಟ: ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ಸತೀಶ್ ಕೃಷ್ಣ ಸೈಲ್ ಮತ್ತು ಇತರ ಸಹವರ್ತಿಗಳು ಕರ್ನಾಟಕದ ಅತಿ ದೊಡ್ಡ ಅಕ್ರಮ ಗಣಿಗಾರಿಕೆ ಹಗರಣದಲ್ಲಿ ಭಾಗಿಯಾಗಿದ್ದಾರೆ. 2006 ರಿಂದ 2011ರ ನಡುವೆ ಸುಮಾರು 7.74 ಮಿಲಿಯನ್ ಟನ್ ಕಬ್ಬಿಣದ ಅದಿರನ್ನು ರಾಜ್ಯದ ಬಳ್ಳಾರಿ ಜಿಲ್ಲೆಯಿಂದ ಬೇಲೆಕೇರಿ ಮತ್ತು ಕಾರವಾರ ಬಂದರುಗಳ ಮೂಲಕ ಅಕ್ರಮವಾಗಿ ರಫ್ತು ಮಾಡಲಾಗಿದೆ ಎಂದು ಅಕ್ರಮ ಗಣಿಗಾರಿಕೆ ತನಿಖೆ ವೇಳೆ ಈ ಪ್ರಕರಣ ಬೆಳಕಿಗೆ ತಂದಿದ್ದ ಅಂದಿನ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರು 2010 ರಲ್ಲಿ ಸಮಗ್ರ ತನಿಖೆ ನಡೆಸಿ. ಕರ್ನಾಟಕದ ಬೊಕ್ಕಸಕ್ಕೆ ಸರಿಸುಮಾರು 60,000 ಕೋಟಿ ರು. ನಷ್ಟ ಉಂಟಾಗಿದೆ ಎಂದು ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸಿದ್ದರು.

ಸಿಬಿಐ ಚಾರ್ಜ್‌ಶೀಟ್‌ನಲ್ಲಿ ಏನಿದೆ?: ಪ್ರಕರಣದ ತನಿಖೆಯ ಹೊಣೆ ಹೊತ್ತ ಸಿಬಿಐ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಮಿನರಲ್ಸ್ ಹಾಗೂ ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳು 2010ರಲ್ಲಿ 39,700 ಮೆಟ್ರಿಕ್ ಟನ್ ಕಬ್ಬಿಣದ ಅದಿರು ಅಕ್ರಮವಾಗಿ ಚೀನಾಕ್ಕೆ ರಫ್ತು ಮಾಡಿ ಸರಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವುದನ್ನು ಪತ್ತೆ ಹಚ್ಚಿತ್ತು. ನಿವೃತ್ತ ಅರಣ್ಯ ಅಧಿಕಾರಿ ಮಹೇಶ್ ಬಿಳಿಯೆ ಸೇರಿದಂತೆ ಸತೀಶ್ ಸೈಲ್ ಮತ್ತು ಇತರ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು 11,000 ಮೆಟ್ರಿಕ್ ಟನ್ ಕಬ್ಬಿಣದ ಅದಿರು ಅನುಮತಿಯಿಲ್ಲದೆ ಸಾಗಿಸಿದ್ದರು. ಸೈಲ್ ಕಂಪನಿ, ಮಲ್ಲಿಕಾರ್ಜುನ ಶಿಪ್ಪಿಂಗ್ ಕಾರ್ಪೊರೇಷನ್, ಈ ವ್ಯಾಪಕ ಕಳ್ಳಸಾಗಣೆ ಜಾಲದಲ್ಲಿ ಪ್ರಮುಖ ಭಾಗಿತ್ವ ಹೊಂದಿತ್ತು ಎಂದು ಪತ್ತೆ ಮಾಡಲಾಗಿತ್ತು. ಅವರ ವಿರುದ್ಧ ಸಿಬಿಐ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಕ್ರಿಮಿನಲ್ ಪಿತೂರಿ, ವಂಚನೆ, ಫೋರ್ಜರಿ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯಡಿ ಉಲ್ಲಂಘನೆಯ ಆರೋಪಗಳು ಸೇರಿವೆ.

ಅದಿರು ಅಕ್ರಮ ಸಾಗಾಟ ಪ್ರಕರಣದಲ್ಲಿ ಶಿಕ್ಷೆಯಾಗಿರುವುದು ಉತ್ತಮ ಬೆಳವಣಿಗೆ. ಇದು ನ್ಯಾಯಾಂಗದ ಶಕ್ತಿ ತೋರಿಸಿದಂತಾಗುತ್ತದೆ. ಶಿಕ್ಷೆ ಆಗಿರುವುದರಿಂದ ನ್ಯಾಯಾಂಗದ ಮೇಲೆ ಗೌರವ ಬರುತ್ತದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗೇ ಆಗುತ್ತದೆ. ದೊಡ್ಡ ದೊಡ್ಡ ರಾಜಕಾರಣಿಗಳ ವಿರುದ್ಧ ತನಿಖೆ ವೇಳೆ ಅಡೆತಡೆಯಾಗುತ್ತಿತ್ತು. ನನ್ನ ಜತೆ ಕೆಲಸ ಮಾಡಿದ ಅಧಿಕಾರಿಗಳಿಗೆ ಸಂತೃಪ್ತಿ ಸಿಕ್ಕಂತಾಗಿದೆ. ಅಕ್ರಮದಲ್ಲಿ ಇನ್ನೂ ಹಲವರು ಇದ್ದಾರೆ. ಅವರಿಗೂ ಶಿಕ್ಷೆಯಾಗಬೇಕು.

- ನ್ಯಾಯಮೂರ್ತಿ ಸಂತೋಷ್ ಹೆಗ್ಡೆ
ನಿವೃತ್ತ ಲೋಕಾಯುಕ್ತ

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ನಾಡಿನ ರೈತರ ನ್ಯಾಯಯುತ , ಪೂರ್ವಜರ ಆಸ್ತಿಯ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ ಕಾಂಗ್ರೆಸ್ ಪಕ್ಷ. ತಮ್ಮ ರಾಜಕೀಯ ದುರಾಸೆಗೆ ರಾಜ್ಯವನ್ನೇ ವಕ್ಫ್‌ಗೆ ಮಾರಲು ಮುಂದಾಗಿದೆ ಕಾಂಗ್ರೆಸ್. ವಕ್ಫ್ ಸಚಿವ ಜಮೀರ್ ಅಹಮದ್ ವಿವಿಧ ಉದ್ದೇಶಿತ ಭೂಮಿಯನ್ನು ವಕ್ಫ್‌ಗೆ ನೋಂದಾಯಿಸಲು ಸೂಚನೆ ನೀಡುತ್ತಿದ್ದರೆ, ಅತ್ತ ರೈತರ ಜಮೀನಿಗೆ ವಕ್ಫ್ ಮಂಡಳಿ ನೋಟಿಸ್ ನೀಡಿದೆ ಅಂತ ಸರಕಾರದ ಇನ್ನೊಬ್ಬ ಸಚಿವರು ಟ್ವೀಟ್ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ.

ಡಾಕ್ಟರ್ ಕೊಟ್ಲೆಯಾ, ಬೆಂಗಳೂರು

ಬರೀ ಟ್ವೀಟ್ ಮಾಡುವುದನ್ನು ಬಿಟ್ಟು ಕಾನೂನಾತ್ಮಕವಾಗಿ ಹೋರಾಡ್ರಿ.. ಇಂಥಾ ಬಿಜೆಪಿ ನಾಯಕರನ್ನು ಪಡೆದ ನಾವೇ ಧನ್ಯರು...!

ಸಮಾಚಾರ ಸಣ್ಣದಲ್ಲ

ಬ್ರಿಜೇಶ್ ಚೌಟ ರಕ್ಷಣಾ ಸಲಹಾ ಸಮಿತಿ ಸದಸ್ಯ

ಮಂಗಳೂರು: ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರನ್ನು ರಕ್ಷಣಾ ಸಚಿವಾಲಯದ ಸಲಹಾ ಸಮಿತಿಯ ಸದಸ್ಯರಾಗಿ ನೇಮಕಗೊಳಿಸಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ರಾಜ್ಯ

ಸಚಿವಸಂಜಯ್ ಸೇತ್ ಅಧ್ಯಕ್ಷತೆಯ ಈ ಸಲಹಾ ಸಮಿತಿಯಲ್ಲಿ ಲೋಕಸಭೆಯ 14 ಹಾಗೂ ರಾಜ್ಯಸಭೆಯ 6 ಮತ್ತು ಇಬ್ಬರು ಪದನಿಮಿತ್ತ ಸದಸ್ಯರು ಇದ್ದಾರೆ. ಈ ಸಲಹಾ ಸಮಿತಿ ಸರಕಾರದ ರಕ್ಷಣಾ ನೀತಿಗಳು, ವಿವಿಧ ಯೋಜನೆ- ಕಾರ್ಯಕ್ರಮಗಳ ಅನುಷ್ಠಾನದ ವಿಧಾನ ಹಾಗೂ ದೇಶದ ರಕ್ಷಣೆಗೆ ಸಂಬಂಧಿಸಿದ ವಿಚಾರಗಳ ಕುರಿತು ಸಲಹೆ ನೀಡಲಿದೆ.ರಾಷ್ಟ್ರದ ಭದ್ರತೆಯನ್ನು ಬಲಪಡಿಸುವ ರಕ್ಷಣಾ ನೀತಿಗಳ ರಚನೆ ಮತ್ತು ಅನುಷ್ಠಾನಕ್ಕೆ ಮಾರ್ಗದರ್ಶನ ಮಾಡಲಿದೆ.

ನಿಖಿಲ್ ಗೆಲುವಿಗೆ ಅನುಮಾನ ಬೇಡ

ಹಾಸನ: ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಗೆಲುವಿನಲ್ಲಿ ಯಾವುದೇ ಅನುಮಾನ ಇಲ್ಲ ಎಂದು

ಮಾಜಿ ಶಾಸಕ ಸುರೇಶ್‌ಗೌಡ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪಕ್ಷದ ನಿಖಿಲ್ ಎನ್‌ಡಿಎ ಅಭ್ಯಥಿರ್ಯಾಗಿ ಸ್ಪರ್ಧೆ ಮಾಡಿದ್ದಾರೆ. ಎನ್‌ಡಿಎಯಿಂದ ಟಿಕೆಟ್ ತೀರ್ಮಾನ ಆಗಿತ್ತು. ಅದರ ಪ್ರಕಾರ ನಿಖಿಲ್ ಕುಮಾರಸ್ವಾಮಿ ಅವರು ಸ್ಪರ್ಧೆ ಮಾಡಿದ್ದಾರೆ. ನಿನ್ನೆ ಅವರು ನಾಮಪತ್ರ ಸಹ ಸಲ್ಲಿಕೆ ಮಾಡಿ ಆಗಿದೆ. ಅವರ ಗೆಲುವಿನಲ್ಲಿ ಯಾವುದೇ ಅನುಮಾನವಿಲ್ಲ ಎಂದರು. ಚನ್ನಪಟ್ಟಣ ಜನತೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದು, ಅತಿ ಹೆಚ್ಚು ಅಂತರದಿಂದ ಗೆಲ್ತಾರೆ. ದೇವೇಗೌಡರು, ಕುಮಾರಸ್ವಾಮಿ ಮಾಡಿರುವ ಕೆಲಸಕ್ಕೆ ಪ್ರತಿಫಲ ಸಿಗುತ್ತೆ ಎನ್ನುವ ನಂಬಿಕೆ ಇದೆ. ಎನ್‌ಡಿಎ ಪಕ್ಷದ ಪ್ರತಿಯೊಬ್ಬರು ನಿಖಿಲ್ ಪರ ಕೆಲಸ ಮಾಡ್ತಾರೆ.ಎನ್‌ಡಿಎ ಪಕ್ಷ ಅಂದರೆ ಬಿಜೆಪಿ ಹಾಗೂ ಜಾತ್ಯಾತೀತ ಜನತಾದಳ. ಇಬ್ಬರೂ ಒಗ್ಗಟ್ಟಾಗಿ ಚುನಾವಣೆ ಎದುರಿಸುತ್ತಿದ್ದೇವೆ ಎಂದು ತಿಳಿಸಿದರು.

ಮೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಗೆಲುವು

ಶಿವಮೊಗ್ಗ: ಉಪಚುನಾವಣೆ ಈ ಬಾರಿ ಜಿದ್ದಾಜಿದ್ದಿನ ಕಣವಾಗಿದೆ. ನಮ್ಮದೇ ಸರಕಾರ ಇರುವುದರಿಂದ ಮೂರೂ ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲ್ಲುವ ಲಕ್ಷಣವಿದೆ

ಎಂದು ಶಾಸಕ ಬೇಳೂರು ಗೋಪಾಲಕೃಷ್ಣ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ-ಡಿಸಿಎಂ ಸೇರಿ ಎಲ್ಲಾ ಸಚಿವರು ಚನ್ನಪಟ್ಟಣವನ್ನು ಜಿದ್ದಾಜಿದ್ದಿಯ ಕಣ ಎಂದು ಪರಿಗಣಿಸಿದ್ದಾರೆ. ಬಳ್ಳಾರಿ ಮತ್ತು ಶಿಗ್ಗಾವಿಯಲ್ಲೂ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ. ಸದ್ಯದ ಸ್ಥಿತಿಯಲ್ಲಿ ಮೂರು ಕ್ಷೇತ್ರದಲ್ಲೂ ಗೆಲುವು ನಮ್ಮದೇ. ಆದರೆ ರಾಜಕೀಯದಲ್ಲಿ ಮುಂದೆ ಏನು ಅಂತಾ ಗೊತ್ತಿಲ್ಲ ಎಂದರು. ಕಾಂಗ್ರೆಸ್‌ಗೆ ಅಭ್ಯರ್ಥಿ ಇಲ್ಲದ ಸ್ಥಿತಿ ಬಂದಿದೆ ಎಂಬ ಆರೋಪ ಸುಳ್ಳು. ರಾಜಕೀಯ ನಿಂತ ನೀರಲ್ಲ ಎಂದು ಹೇಳಿದರು.



ಖಾದ್ರಿಗೆ ಸೂಕ್ತ ಸ್ಥಾನಮಾನ ಸಿಎಂ, ಡಿಸಿಎಂ ಭರವಸೆ। 30ರಂದು ಅಜ್ಜಂಪೀರ್ ನಾಮಪತ್ರ ವಾಪಸ್

ಶಿಗ್ಗಾವಿ ಬಂಡಾಯ ಶಮನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಶಿಗ್ಗಾವಿ ಕ್ಷೇತ್ರದ ಬಂಡಾಯದ ತಲೆಬಿಸಿ ಆರಿಸುವಲ್ಲಿ ರಾಜ್ಯ ನಾಯಕರು ಯಶಸ್ವಿಯಾಗಿದ್ದು, ಸಚಿವ ಜಮೀರ್ ಅಹ್ಮದ್‌ಗೆ ನೀಡಿದ್ದ ಟಾಸ್ಕ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಶುಕ್ರವಾರವೇ ಅಜ್ಜಂಪೀರ್ ನಾಮಪತ್ರ ಸಲ್ಲಿಸದಂತೆ ನೋಡಿಕೊಳ್ಳುವಂತೆ ರಾಜ್ಯ ನಾಯಕರು ಸೂಚನೆ ನೀಡಿದ್ದರು. ಆದರೆ ಜಮೀರ್ ಸಂಧಾನದ ಹೊರತಾಗಿಯೂ ಅಜ್ಜಂಪೀರ್ ಖಾದ್ರಿ ನಾಮಪತ್ರ ಸಲ್ಲಿಸಿದ್ದರು. ಶನಿವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗಿನ ಸಭೆಯ ಬಳಿಕ ನಾಮಪತ್ರ ಹಿಂಪಡೆಯುವುದಾಗಿ ಖಾದ್ರಿ ಭರವಸೆ ನೀಡಿದ್ದಾರೆ.

ಶನಿವಾರ ಬೆಳಗ್ಗೆ ಸಿಎಂ ಅಧಿಕೃತ ನಿವಾಸ ಕಾವೇರಿಗೆ ಸಚಿವ ಜಮೀರ್ ಅವರೊಂದಿಗೆ ಆಗಮಿಸಿದ ಅಜ್ಜಂಪೀರ್ ಖಾದ್ರಿ, ಮಾಜಿ ಶಾಸಕ ಮಂಜುನಾಥ್ ಕುನ್ನೂರ್ ಸಿಎಂ ಜತೆ ಚರ್ಚೆ ನಡೆಸಿದರು.

ಈ ವೇಳೆ ಖಾದ್ರಿ ಅವರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಯಾಸೀರ್ ಪಠಾಣ್ ಅವರನ್ನು ಪಕ್ಷ ಅಭ್ಯರ್ಥಿಯನ್ನಾಗಿಸಿದೆ. ನಿಮ್ಮ ನಾಮಪತ್ರವನ್ನು ವಾಪಸ್ ತೆಗೆದುಕೊಳ್ಳಿ, ಮುಂದೆ ನಿಮಗೆ ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡಲಾಗುವುದು ಎಂದು ಭರವಸೆ ನೀಡಿದರು. ಶಿಗ್ಗಾವಿಯಲ್ಲಿ ಖಾದ್ರಿ ಜತೆ ಮಂಜುನಾಥ್ ಕುನ್ನೂರ್ ಸಹ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದು, ಅವರನ್ನು ಮನವೊಲಿಸುವ ಕಾರ್ಯವನ್ನು ಕೈ ನಾಯಕರು ನಡೆಸಿದ್ದಾರೆ.

ಡಿಸಿಎಂ ಭೇಟಿ; ಘೋಷಣೆ: ಬಳಿಕ ಸಂಜೆ ವೇಳೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾದ ಖಾದ್ರಿ ಅವರೊಂದಿಗೆ ಡಿಕೆಶಿ ಚರ್ಚಿಸಿ, ಉಪಚುನಾವಣೆಯ ಬಳಿಕ ಸೂಕ್ತ ಸ್ಥಾನಮಾನವನ್ನು ನೀಡುವ ಭರವಸೆ ನೀಡಿದರು. ಈ ಮಾತಿಗೆ ಸಮ್ಮತಿಸಿದ ಖಾದ್ರಿ 30ರಂದು ನಾಮಪತ್ರ ಹಿಂಪಡೆಯುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ. ಶಿವಕುಮಾರ್ ಅವರು, ಖಾದ್ರಿ ಅವರು ನಮ್ಮೊಂದಿಗಿದ್ದಾರೆ. ಅವರ ದುಃಖ ದುಮ್ಮಾನಗಳನ್ನು ನಮ್ಮ ಬಳಿ ಚರ್ಚೆ ಮಾಡಿದ್ದಾರೆ. ಚುನಾವಣಾ ನೀತಿ ಸಂಹಿತೆ ಇರುವ ಕಾರಣಕ್ಕೆ ಅವರಿಗೆ ನೀಡಿರುವ ಭರವಸೆಗಳನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ಖಾದ್ರಿ ಅವರ ಬಳಿ ಗೌಪ್ಯವಾಗಿ ಮಾತನಾಡಿದ್ದೇನೆ. ಉತ್ತಮ ಸ್ಥಾನವನ್ನು ನೀಡುವುದಾಗಿ ಹಿಂದೆಯೂ ಹೇಳಿದ್ದೆವು, ಈಗಲೂ ಹಾಗೂ ಮುಂದಕ್ಕೂ ಹೇಳುತ್ತೇವೆ ಎಂದರು.

ನಾಮಪತ್ರ ಹಿಂಪಡೆಯುವಂತೆ ಖಾದ್ರಿ ಮನವೊಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

> ನಾನು ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ. ನಾನು ಐದು ಚುನಾವಣೆಗಳನ್ನು ಎದುರಿಸಿದ್ದು, ನಾಲ್ಕು ಬಾರಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದೇನೆ. ಪ್ರತಿ ಬಾರಿಯೂ ಅತ್ಯಂತ ಕಡಿಮೆ ಅಂತರಗಳ ಮತದಿಂದ ಸೋತಿದ್ದೇನೆ. ಒಂದು ಚುನಾವಣೆಯನ್ನು 787 ಮತಗಳ ಅಂತರದಿಂದ ಸೋತಿದ್ದೇನೆ. ಕ್ಷೇತ್ರದಲ್ಲಿ ಕಾಂಗ್ರೆಸ್‌ನ್ನು ತಳಮಟ್ಟದಿಂದ ಕಟ್ಟಿದ್ದೇನೆ.
> -**ಅಜ್ಜಂಪೀರ್ ಖಾದ್ರಿ,** ಬಂಡಾಯ ಅಭ್ಯರ್ಥಿ

- ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭೇಟಿಯಾದ ಖಾದ್ರಿ
- ಸಚಿವ ಜಮೀರ್ ಅಹ್ಮದ್‌ಗೆ ನೀಡಿದ್ದ ಟಾಸ್ಕ್ ಯಶಸ್ವಿ
- ಖಾದ್ರಿ ಜತೆ ಮಂಜುನಾಥ್ ಕುನ್ನೂರ್ ಮನವೊಲಿಸಲು ಕೈ ನಾಯಕರ ಕಸರತ್ತು

ಖಾದ್ರಿ ಪ್ರಾಮಾಣಿಕ ವ್ಯಕ್ತಿ

ಅತ್ಯಂತ ಪ್ರಾಮಾಣಿಕ ವ್ಯಕ್ತಿಯಾದ ಖಾದ್ರಿ ಅವರು ಜಾತ್ಯತೀತ ತತ್ವಗಳಿಗೆ ಹಾಗೂ ಕಾಂಗ್ರೆಸ್ ಪಕ್ಷದ ನಿಲುವಿಗೆ ಬದ್ಧರಾಗಿದ್ದಾರೆ. ಸಚಿವರಾದ ಜಮೀರ್ ಅವರು, ವಿಧಾನಪರಿಷತ್ ಸದಸ್ಯ ನಜೀರ್ ಅಹ್ಮದ್, ಬಿಡಿಎ ಅಧ್ಯಕ್ಷ ಹ್ಯಾರಿಸ್ ಸೇರಿ ಖಾದ್ರಿ ಅವರ ಮನವೊಲಿಸಿದ್ದಾರೆ. ಶನಿವಾರ ಬೆಳಗ್ಗೆ ಮುಖ್ಯಮಂತ್ರಿಗಳ ಬಳಿಯೂ ಟಿಕೆಟ್ ಹಿಂಪಡೆಯುವ ವಿಚಾರವಾಗಿ ಚರ್ಚೆ ನಡೆಸಿದ್ದರು ಎಂದು ಹೇಳಿದರು. ಭಾನುವಾರ ಶಿಗ್ಗಾವಿ ಕ್ಷೇತ್ರದ ಮುಖಂಡರ ಬಳಿ ಚರ್ಚೆ ಮಾಡಲಾಗುವುದು. ಎಲ್ಲರೂ ಪಕ್ಷದ ಗೆಲುವಿಗೆ ಒಗ್ಗಟ್ಟಾಗಿ ಕೆಲಸ ಮಾಡಲಿದ್ದಾರೆ. ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರುತ್ತಾರೆ. ಖಾದ್ರಿ ಅವರ ತ್ಯಾಗವನ್ನು ಕಾಂಗ್ರೆಸ್ ಪಕ್ಷ ಮರೆಯುವುದಿಲ್ಲ, ಗುರುತಿಸುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪುನರುಚ್ಚರಿಸಿದರು.

ಮಗನನ್ನು ನಿಲ್ಲಿಸಲೆಂದೇ ಯೋಗಿಯನ್ನು ಹೊರ ದಬ್ಬಿದರು: ಡಿಕೆಸು

ಯೋಗೇಶ್ವರ್‌ರನ್ನು ಹೈಜಾಕ್ ಮಾಡಿಲ್ಲ

ಚನ್ನಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಸಮನ್ವಯ ಸಮಿತಿ ಸಭೆಯನ್ನು ಮಾಜಿ ಸಂಸದ ಡಿ ಕೆ ಸುರೇಶ್, ಉಪಚುನಾವಣೆಯ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಉದ್ಘಾಟಿಸಿದರು.

ರಾಮನಗರ: ತಮ್ಮ ಮಗನನ್ನು ಚುನಾವಣೆಗೆ ನಿಲ್ಲಿಸಲು ಯೋಗೇಶ್ವರ್ ಅವರನ್ನು ಕುಮಾರಸ್ವಾಮಿ ಆಚೆ ಕಳುಹಿಸಿದರು. ಅವರೇ ಆಚೆ ಕಳುಹಿಸಿ ಈಗ ಕಾಂಗ್ರೆಸ್ ಮೇಲೆ ದೂರುತ್ತಿದ್ದಾರೆ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಆರೋಪಿಸಿದರು.

ಚನ್ನಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಯೋಗೇಶ್ವರ್ ಅವರನ್ನು ಕಾಂಗ್ರೆಸ್ ನವರು ಹೈಜಾಕ್ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ, ಯೋಗೇಶ್ವರ್ 9 ಬಾರಿ ಚುನಾವಣೆ ಎದುರಿಸಿದ್ದಾರೆ, ಅವರು ಹೊಸಬರಲ್ಲ, ಹೈಜಾಕ್ ಮಾಡುವ ಅಗತ್ಯವಿಲ್ಲ.

ಇನ್ನು ಚುನಾವಣಾಧಿಕಾರಿಗಳು ತೆಗೆದುಕೊಂಡಿರುವ ಕ್ರಮಕ್ಕೆ ನಮ್ಮ ಮೇಲೆ ಗೂಬೆ ಕೂರಿಸುತ್ತಿದ್ದಾರೆ, ಚುನಾವಣಾ ನೀತಿಸಂಹಿತೆ ಅವರಿಗೂ ಗೊತ್ತಿದೆ. ಹಲವಾರು ಚುನಾವಣೆ ಮಾಡಿದ್ದಾರೆ. ಕಾರ್ಯಕರ್ತರನ್ನು ಕರೆತರುವ ಬಸ್ ಗೆ ಅನುಮತಿ ತೆಗೆದುಕೊಳ್ಳಬೇಕು ಎನ್ನುವುದು ಸಾಮಾನ್ಯ ಜ್ಞಾನ. ಅದರ ಅರಿವಿಲ್ಲದೆ ಕುಮಾರಸ್ವಾಮಿ ಹೇಗೆ ಕೇಂದ್ರದ ಮಂತ್ರಿ ಆಗಿದ್ದಾರೋ ಗೊತ್ತಿಲ್ಲ ಎಂದು ಹರಿಹಾಯ್ದರು. ಕುಮಾರಸ್ವಾಮಿಗೆ ಆರೋಪ ಮಾಡುವುದೇ ಹವ್ಯಾಸ, ಆರೋಪ ಮಾಡೋದನ್ನು ಬಿಟ್ಟು ಚುನಾವಣೆ ಮಾಡಲಿ ಎಂದರು. ಈ ಸಂದರ್ಭದಲ್ಲಿ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್, ಶಾಸಕರಾದ ಉದಯ್, ಎಸ್. ರವಿ ಇದ್ದರು.

ಕಾಂಗ್ರೆಸ್‌ನಲ್ಲಿ ಅಸಮಾಧಾನ ಇಲ್ಲ

ನಮ್ಮಲ್ಲಿ ಯಾವುದೇ ಅಸಮಧಾನ ಇಲ್ಲ, ಎಲ್ಲ ಒಟ್ಟಾಗಿದ್ದೇವೆ ಯಾರೇ ಅಭ್ಯರ್ಥಿ ಆದರೂ ನಾನೇ ಅಭ್ಯರ್ಥಿ ಎಂದು ಡಿಸಿಎಂ ಡಿಕೆ ಶಿವಕುಮಾರ್ ಈಗಾಗಲೇ ಹೇಳಿದ್ದಾರೆ. ಇಲ್ಲಿ ಯೋಗೇಶ್ವರ್ ಅಭ್ಯರ್ಥಿ ಅಲ್ಲ, ಡಿ.ಕೆ. ಶಿವಕುಮಾರ್. ಅವರನ್ನು ಗೆಲ್ಲಿಸುವುದೇ ನಮ್ಮ ಗುರಿ, ಅವರ ಕೆಲಸ ಅವರು ಮಾಡುತ್ತಾರೆ, ನಮ್ಮ ಕೆಲಸ ನಾವು ಮಾಡುತ್ತೇವೆ. ಮಗನನ್ನು ಚುನಾವಣೆಗೆ ನಿಲ್ಲಿಸಿದ್ದಾರೆ ಅವರು ಹೋರಾಟ ಮಾಡಲಿ ನಾವು ಮಾಡುತ್ತೇವೆ ಎಂದು ಸುರೇಶ್ ಕಾಂಗ್ರೆಸ್ ಕಾರ್ಯಕರ್ತರಿಗೆ ತಿಳಿಸಿದರು.

ಯಾವುದೇ ರೈತರ ಖಾಸಗಿ ಜಮೀನು ಒಳಪಟ್ಟಿಲ್ಲ: ಎಂಬಿಪಾ

ಹೊನವಾಡದ 11 ಎಕರೆ ವಕ್ಫ್ ಆಸ್ತಿ

ವಿಜಯಪುರ: ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಹೊನವಾಡ ಗ್ರಾಮದ 10 ಸರ್ವೇ ನಂಬರುಗಳ 11 ಎಕರೆ ಆಸ್ತಿ ಮಾತ್ರ ವಕ್ಫ್ ಆಸ್ತಿ ಎಂದು ಗೆಜೆಟ್ ನೋಟಿಫಿಕೇಷನ್ ಆಗಿದ್ದು, ಅದರಲ್ಲಿ 10 ಎಕರೆ 14 ಗುಂಟೆ ಖಬರಸ್ತಾನ ಇದೆ. ಉಳಿದದ್ದು ಈದ್ಗಾ, ಮಸೀದಿ ಇತ್ಯಾದಿ ಕಟ್ಟಡಗಳಿವೆ ಹಾಗೂ ಈ ಭೂಮಿಯು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದ್ದು, ಯಾವುದೇ ರೈತರ ಖಾಸಗಿ ಜಮೀನು ಒಳಪಟ್ಟಿಲ್ಲ ಎಂಬುದನ್ನು ಗಮನಿಸಬೇಕು ಎಂದು ಕೈಗಾರಿಕೆ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ್ ಹೇಳಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು ಹಜರತ್ ಪೀರ ದಸ್ತಿಗೀರ ಸಾಬ್ ಮೊಹಮ್ಮದ ಚಿಂಗ್ ಸಿಯಾ ತಖಿಯಾ ದರ್ಗಾ ವಿಜಯಪುರ ಮಹಾಲಬಾಗಯತ ಸೇರಿದ ಆಸ್ತಿಯಾಗಿದ್ದು, ಕೆಳಗಡೆ ತಪ್ಪಾಗಿ ಹೊನವಾಡ ಎಂದು ಸೇರಿದೆ. ಇದು ಗೊಂದಲಕ್ಕೆ ಕಾರಣವಾಗಿದೆ. ಈ ಯಾವ ರೈತರಿಗೂ ವಕ್ಫ್ ಸಮಿತಿ ಅಥವಾ ಸರಕಾರದ ಇಲಾಖೆಯಿಂದ ಯಾವುದೇ ನೋಟಿಸ್‌ಗಳು ಬಂದಿಲ್ಲ.

> ಸಭೆಯನ್ನು ನಡೆಸಿ, ಎಲ್ಲ ಗೊಂದಲಗಳಿಗೆ ಉತ್ತರ ನೀಡಲಾಗುವುದು. ಈ ನಿಟ್ಟಿನಲ್ಲಿ ಸಂಸದ ಶ್ರೀತೇಜಸ್ವಿ ಸೂರ್ಯ ಅವರಾಗಲಿ ಮತ್ತೊಬ್ಬರಾಗಲಿ ರಾಜಕಾರಣ ಮಾಡಿ ಜನಸಾಮಾನ್ಯರಲ್ಲಿ ಇಲ್ಲದ ಗೊಂದಲ, ಆತಂಕ ಮೂಡಿಸುವುದು ಬೇಡ .
> **ಎಂ.ಬಿ.ಪಾಟೀಲ್,** ಸಚಿವ

ಈಗಾಗಲೇ ಜಿಲ್ಲೆಯಲ್ಲಿ ಹಲವು ರೈತರಿಗೆ ವಕ್ಫ್ ಆಸ್ತಿ ನೋಟಿಸ್ ಬಂದಿದೆ ಎಂಬ ದೂರುಗಳಿದ್ದು, ವಕ್ಫ್ ಸಮಿತಿ ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಂದಾಯ ಇಲಾಖೆಯಲ್ಲಿ ಎಲ್ಲ ದಾಖಲೆಗಳನ್ನು ಕೂಲಕುಂಷವಾಗಿ ಪರಿಶೀಲಿಸುತ್ತಾರೆ. ಒಂದೆ ಒಂದು ಇಂಚು ರೈತರ ಜಾಗವು ಅನಗತ್ಯವಾಗಿ, ಆಧಾರ, ದಾಖಲೆಗಳಿಲ್ಲದೆ ವಕ್ಫ್ ಆಸ್ತಿ ಎಂದು ಸೇರಿಸಲಾಗುವುದಿಲ್ಲ.

ಹಿರಿಯ ಜೆಡಿಎಸ್ ನಾಯಕ ಸಾ.ರಾ. ಮಹೇಶ್ ಸ್ಪಷ್ಟನೆ

ಕಾರ್ಯಕರ್ತರ ಒತ್ತಡದಿಂದ ನಿಖಿಲ್ ಸ್ಪರ್ಧೆ

ರಾಮನಗರ: ಯೋಗೇಶ್ವರ್ ಅವರನ್ನು ನಾವು ಅಭ್ಯರ್ಥಿ ಮಾಡುತ್ತೇವೆ ಎಂದಾಗ

ಕುಮಾರಸ್ವಾಮಿಗೆ ಇಂಥ ದುರ್ದೈವ ಬರಬಾರದಿತ್ತು ಎಂದು ಡಿಸಿಎಂ ಹೇಳಿದ್ದರು. ಈಗ ಡಿಸಿಎಂ ಅವರಿಗೆ ಯಾವ ದೈವ ಬಂದಿದೆ ಎಂಬುದನ್ನು ಹೇಳಲಿ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಅವರು, ಡಿ.ಕೆ. ಶಿವಕುಮಾರ್ ಚನ್ನಪಟ್ಟಣಕ್ಕೆ ನಾನೇ ಅಭ್ಯರ್ಥಿ ಅಂದಿದ್ದರು, ನಾವು ಅವರ ತಮ್ಮ ಡಿ.ಕೆ. ಸುರೇಶ್ ಅಭ್ಯರ್ಥಿ ಆಗುತ್ತಾರೆ ಎಂದುಕೊಂಡಿದ್ದೆವು. ಆದರೆ ಈಗ ಯೋಗೇಶ್ವರ್ ಅವರನ್ನು ಕರೆತಂದಿದ್ದಾರೆ. ಯೋಗೇಶ್ವರ್ ನಿಮ್ಮ ವಿರುದ್ಧ ಎಷ್ಟೆಲ್ಲ ಮಾತನಾಡಿದ್ದಾರೆ ಎಂಬುದನ್ನು ಮರೆತಿದ್ದೀರಿ, ಅಂತಹವರನ್ನು ಅಭ್ಯರ್ಥಿ ಮಾಡಿದ್ದೀರಿ. ಹೀಗಾಗಿ ನೀವು ಮೊದಲು ಯೋಚನೆ ಮಾಡಿ ಎಂದರು.

ನಿಖಿಲ್ ಗೆಲುವಿಗೆ ಕಾರ್ಯಕರ್ತರ ನಿರ್ಧಾರ

ಕಾರ್ಯಕರ್ತರ ಒತ್ತಡದಿಂದ ನಿಖಿಲ್ ಎನ್‌ಡಿಎ ಅಭ್ಯರ್ಥಿಯಾಗಿದ್ದಾರೆ. ಯೋಗೇಶ್ವರ್ ಅಭ್ಯರ್ಥಿ ಆಗುತ್ತಾರೆ ಎಂದು ನಾವು ಚುನಾವಣೆಗೆ ತಯಾರಾಗಿರಲಿಲ್ಲ. ನಮ್ಮ ಅಭ್ಯರ್ಥಿ ಆರೋಪಮುಕ್ತವಾಗಿದ್ದಾರೆ. ಹಾಗಾಗಿ ಯುವ ನಾಯಕನನ್ನು ಗೆಲಿಸಲು ಕಾರ್ಯಕರ್ತರು ತೀರ್ಮಾನ ಮಾಡಿದ್ದಾರೆ ಎಂದು ಹೇಳಿದರು.

ಯೋಗೇಶ್ವರ್ ವಿರುದ್ಧ ಸಾಕಷ್ಟು ಆರೋಪ

ಕಾಂಗ್ರೆಸ್ ಅಭ್ಯರ್ಥಿ ಪರ ಸರಕಾರ ಇದೆ. ಆದರೆ ಅವರ ವಿರುದ್ಧ ಸಾಕಷ್ಟು ಆರೋಪಗಳಿವೆ. ನಮ್ಮದು ಪ್ರಾದೇಶಿಕ ಪಕ್ಷ, ಈಗ ಎನ್‌ಡಿಎ ಜತೆ ಇದ್ದೇವೆ, ಚುನಾವಣೆಯಲ್ಲಿ ನಮ್ಮ ಎದುರಾಳಿ ಕಾಂಗ್ರೆಸ್, ಅದನ್ನು ಸೋಲಿಸಲು ಬಲವಾದ ಹೋರಾಟ ಮಾಡುತ್ತೇವೆ. ಮಾಜಿ ಸಚಿವರು, ಶಾಸಕರು, ಪಾಲಿಕೆ ಸದಸ್ಯರು ಮತದಾರರ ಬಳಿ ತೆರಳಿ ಮತ ಕೇಳಲು ಮುಂದಾಗಿದ್ದೇವೆ ಎಂದು ಮಾಜಿ ಸಚಿವ ಸಾ.ರಾ . ಮಹೇಶ್ ಅವರು ಹೇಳಿದರು.

ಜೆಡಿಎಸ್ ನುಂಗುವ ಬಿಜೆಪಿ ಬಕಾಸುರ: ಮಧು ಬಂಗಾರಪ್ಪ

ಶಿರಸಿ: ಬಿಜೆಪಿ ಬಕಾಸುರ ಇದ್ದಂತೆ. ಚನ್ನಪಟ್ಟಣ ಸೇರಿ ಇತರೆ ಉಪಚುನಾವಣೆಯಲ್ಲಿ ಜೆಡಿಎಸ್ ನಾಯಕರನ್ನು ಬಿಜೆಪಿಯವರು ನುಂಗಿ ಜೀರ್ಣಿಸಿಕೊಳ್ಳುತ್ತಾರೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹೊಂದಾಣಿಕೆ ರಾಜಕಾರಣ ಮಾಡಿಕೊಂಡರೂ ಜೆಡಿಎಸ್‌ನ ಚಿಕ್ಕಪುಟ್ಟ ನಾಯಕರನ್ನು ಈ ಉಪಚುನಾವಣೆಯಲ್ಲಿ ಬಿಜೆಪಿಯವರು ಇನ್ನಿಲ್ಲದಂತೆ ಮಾಡುವರು ಎಂದು ತಿಳಿಸಿದರು. ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಮಕ್ಕಳನ್ನು ಅಸಾಂವಿಧಾನಿಕ ಪದಗಳಿಂದ ಟೀಕಿಸಿದ್ದ ಎಚ್.ಡಿ.ಕುಮಾರಸ್ವಾಮಿ ಅವರು ಮಗ ನಿಖಿಲ್‌ಗಾಗಿ ಚನ್ನಪಟ್ಟಣ ಟಿಕೆಟ್ ಪಡೆಯಲು ಯಡಿಯೂರಪ್ಪ ಅವರ ಕಾಲಿಗೆ ಬಿದ್ದಿದ್ದಾರೆ. ಈಗ ಅವರಿಗೆ ತತ್ವ, ಸಿದ್ಧಾಂತಗಳು ಕಾಣುತ್ತಿಲ್ಲವೇ' ಎಂದು ಅವರು ಪ್ರಶ್ನಿಸಿದರು.

ಕಾಂಗ್ರೆಸ್‌ಗೆ 18 ಶಾಸಕರ ಸೇರ್ಪಡೆ

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಇಳಿಸಲು ಅವರ ಪಕ್ಷದವರೇ ಪ್ರಯತ್ನಿಸುತ್ತಿದ್ದಾರೆ. ಶಿವರಾಮ ಹೆಬ್ಬಾರ್‌ಅವರು ಬರಲು ವಿಳಂಬ ಮಾಡುತ್ತಿದ್ದಾರೆ. ಅವರು ಕಾಂಗ್ರೆಸ್ನಿಂದಲೇ ಬಿಜೆಪಿಗೆ ಹೋದವರು. ಅವರಂತೆ ಈ ಹಿಂದೆ ಕಾಂಗ್ರೆಸ್ ತೊರೆದು ಹೋದ ಎಲ್ಲರೂ ಮರಳುತ್ತಾರೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿಕೆ

ಉಪಚುನಾವಣೆ ಫಲಿತಾಂಶದ ಬಳಿಕ ಯೋಗಿಗೆ ಜ್ಞಾನೋದಯ

ಬಳ್ಳಾರಿ: ಹಿಂದೆ ನಮ್ಮ ಜತೆಯಿದ್ದ ಚನ್ನಪಟ್ಟಣ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್

ಈಗ ನನ್ನ ಜತೆಗಿಲ್ಲ. ಅವರ ಬಗ್ಗೆ ಮಾತನಾಡಲ್ಲ, ಉಪಚುನಾವಣೆ ಫಲಿತಾಂಶ ಬಂದ ಬಳಿಕ ಅವರಿಗೆ ಗೊತ್ತಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ಬಿ. ಶ್ರೀರಾಮುಲು ಅಸಮಾಧಾನಗೊಂಡಿಲ್ಲ. ಗುರುವಾರ ನಾನು, ಶ್ರೀರಾಮುಲು, ಜನಾರ್ದನ ರೆಡ್ಡಿ ಸೇರಿ ಚುನಾವಣೆ ಕುರಿತು ಚರ್ಚೆ ನಡೆಸಿದ್ದೇವೆ. ಉಪ ಚುನಾವಣೆಯಲ್ಲಿ ಶಾಸಕ ಜನಾರ್ದನ ರೆಡ್ಡಿ, ಮಾಜಿ ಸಚಿವ ಬಿ. ಶ್ರೀರಾಮುಲು ಎಲ್ಲರೂ ಸೇರಿ ಎದುರಿಸುತ್ತಾರೆ ಎಂದರು.

> ಸಂಡೂರಿನಲ್ಲಿ ಈವರೆಗೆ ಬಿಜೆಪಿ ಕಮಲ ಅರಳಿಲ್ಲ. ಈ ಬಾರಿ ಗೆಲ್ಲುವ ವಿಶ್ವಾಸವಿದೆ. ನಮ್ಮ ಜತೆಗೆ ಶಾಸಕರಿದ್ದಾರೆ ಎನ್ನುವ ಎಸ್.ಟಿ. ಸೋಮಶೇಖರ್‌ಗೆ ಉಪಚುನಾವಣೆ ಫಲಿತಾಂಶ ಬಂದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಗೊತ್ತಾಗಲಿದೆ.
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಎಸ್ಟಿ ನಿಗಮಕ್ಕೆ ಸಂಬಂಧಿಸಿ ದೂರು ನೀಡಿದ್ದು, ಮುಂದಿನ ದಿನಗಳಲ್ಲಿ ಹೋರಾಟ ಮಾಡುತ್ತೇವೆ. ಆಡಳಿತ ಪಕ್ಷದ ಶಾಸಕರೇ ಸರಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ. ಸಚಿವ ಆರ್.ವಿ. ದೇಶಪಾಂಡೆ ಸರಕಾರದ ವಿರುದ್ಧ ಅಸಮಾಧಾನ ತೋಡಿಕೊಂಡಿದ್ದಾರೆ. ಸರಕಾರ ತಮ್ಮ ಶಾಸಕರ ವಿರೋಧವನ್ನು ಎದುರಿಸುತ್ತಿದೆ ಎಂದು ಆರೋಪಿಸಿದರು.

ಶಿಗ್ಗಾವಿಯಲ್ಲಿ ನ.5ರಿಂದ ಪ್ರಚಾರ ಆರಂಭ

ಯಾಸೀರ್ ಪಠಾಣ್ ಪ್ರಚಾರಕ್ಕೆ ಸಿದ್ದರಾಮಯ್ಯ, ಡಿಕೆಶಿ ಆಗಮನ

ಹಾವೇರಿ: ಜಿಲ್ಲೆಯ ಶಿಗ್ಗಾವಿ ವಿಧಾನಸಭೆಯ ಉಪಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಪರ

ಮತಪ್ರಚಾರಕ್ಕೆ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ. ಕೆ ಶಿವಕುಮಾರ್ ಆಗಮಿಸಲಿದ್ದಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ಪರ ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆಶಿ ಪ್ರಚಾರ ಮಾಡಲಿದ್ದಾರೆ. ನವೆಂಬರ್ 5, 6 ಹಾಗೂ 11 ನೇ ತಾರೀಖು ಪ್ರಚಾರಕ್ಕೆ ಬರಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಅಜ್ಜಂಫೀರ್ ಖಾದ್ರಿ ಮನವೊಲಿಕೆ ವಿಫಲವಾದ ವಿಚಾರ ಕುರಿತು ಮಾತನಾಡಿದ ಅವರು, ಈ ವಿಚಾರ ನಮ್ಮ ಗಮನಕ್ಕಂತೂ ಬಂದಿಲ್ಲ. ಅದರ ಬಗ್ಗೆ ಮಾಹಿತಿ ಇಲ್ಲ, ಮನವೊಲಿಕೆ ಮಾಡಲು ಟೀಂ ಬೇರೆ ಇದೆ. ಕಾದು ನೋಡೋಣ, ಇನ್ನೂ ಟೈಂ ಇದೆ ಎಂದು ತಿಳಿಸಿದರು.

ನಾವು ಮೂರೂ ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ

ಉಪಚುನಾವಣೆ ಫಲಿತಾಂಶ ಕಾಂಗ್ರೆಸ್‌ಗೆ ಎಚ್ಚರಿಕೆ ಘಂಟೆ ಆಗಲಿದೆ ಎಂಬ ಬಿಜೆಪಿ ನಾಯಕರ ಹೇಳಿಕೆ ವಿಚಾರ ಕುರಿತಂತೆ ಮಾತನಾಡಿದ ಜಾರಕಿಹೊಳಿ, ಈ ಫಲಿತಾಂಶ ಅವರಿಗೆ ಎಚ್ಚರಿಕೆ ಘಂಟೆ, ನಮಗೆ ಅಲ್ಲ. ನಾವು ಮೂರೂ ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ. ಈ ಚುನಾವಣೆ ಫಲಿತಾಂಶ ನಾಯಕತ್ವದ ಮೇಲೆ ಪರಿಣಾಮ ಬೀರಲ್ಲ. ನಾವು 136 ಜನ ಶಾಸಕರಿದ್ದೇವೆ. ಪ್ಲಸ್ ಮೈನಸ್ ಒಂದು ಎರಡು ಸ್ಥಾನ ಆದಾಗ ಏನೂ ಪರಿಣಾಮ ಆಗಲ್ಲ ಎಂದು ಹೇಳಿದರು.

ಗ್ಯಾರಂಟಿಗಳು ಕೆಲಸ ಮಾಡದು: ಬಸವರಾಜ ಬೊಮ್ಮಾಯಿ

ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕ ಉತ್ತರ

ಹಾವೇರಿ: ಕಳೆದ ಒಂದೂವರೆ ವರ್ಷದ ಕಾಂಗ್ರೆಸ್‌ನ ದುರಾಡಳಿತ ಮತ್ತು ದೌರ್ಜನಕ್ಕೆ ಈ ಉಪ ಚುನಾವಣೆಯಲ್ಲಿ ಜನರು ತಕ್ಕ ಉತ್ತರ ಕೊಡುತ್ತಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು,

ಗ್ಯಾರಂಟಿಗಳು ಕೈ ಹಿಡಿಯುತ್ತವೆ ಎಂದು ಕಾಂಗ್ರೆಸ್ ನವರು ಕನಸು ಕಾಣುತ್ತಿ ದ್ದಾರೆ. ಅವರ ಕನಸು ನನಸಾಗುವುದಿಲ್ಲ, ಕಳೆದ ಲೋಕಸಭೆ ಚುನಾವಣೆಯಲ್ಲಿ ನಾನು ಹಾವೇರಿ ಗದಗ ಜಿಲ್ಲೆಯ ಕಡೆಗೆ ಹೆಚ್ಚಿನ ಗಮನ ಹರಿಸಿದ್ದೆ, ಆಗ ಸ್ವಲ್ಪ ವ್ಯತ್ಯಾಸ ಆಗಿದೆ. ಆದರೆ, ನಮ್ಮ ಕಾರ್ಯಕರ್ತರಿಗೆ ಈಗಾಗಲೇ ಅದರ ಅರಿವಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಯಾವ ರೀತಿ ಜನರು ಬೆಂಬಲ ಕೊಟ್ಟಿದ್ದರೋ ಅದೇ ರೀತಿ ಈಗ ಜನ ಬೆಂಬಲ ಸಿಗಲಿದೆ. ನಮ್ಮ ಕಾರ್ಯಕರ್ತರು ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದರು.

ಕಾಂಗ್ರೆಸ್‌ನವರು ರೌಡಿ ಶೀಟರ್ ಗೆ ಟಿಕೆಟ್ ಕೊಟ್ಟಿದ್ದಾರೆ ಎಂದು ಕಾಂಗ್ರೆಸ್‌ನವರೇ ಆರೋಪ ಮಾಡಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ನಾಯಕರು ಸ್ಪಷ್ಟೀಕರಣ ನೀಡಬೇಕು ಎಂದರು.

ನನಗಿಂತ ಹೆಚ್ಚು ಭರತ್ ಬೊಮ್ಮಾಯಿಗೆ ಬೆಂಬಲ: ಶಿಗ್ಗಾವಿ ಕ್ಷೇತ್ರದಲ್ಲಿ ಜಾತಿ ಲೆಕ್ಕಾಚಾರ ನಡೆಯುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಎಲ್ಲ ಸಮುದಾಯದವರು ನಮಗೆ ಬೆಂಬಲ ಸೂಚಿಸಿದ್ದಾರೆ. ಈ ಚುನಾವಣೆಯಲ್ಲಿ ನನಗಿಂತ ಹೆಚ್ಚು ಬೆಂಬಲ ಭರತ್ ಬೊಮ್ಮಾಯಿಗೆ ಸಿಗಲಿದೆ. ಅಜ್ಜಂಪೀರ್ ಖಾದ್ರಿಯವರ ಮನವೊಲಿಕೆಯಿಂದ ನಮಗೇನು ಪರಿಣಾಮ ಬೀರುವುದಿಲ್ಲ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್ ನಾಯಕರ ಭಾಷಣ ಸುಳ್ಳಿನ ಕಂತೆ

ಶಿಗ್ಗಾವಿ ಕ್ಷೇತ್ರದಲ್ಲಿ ಬೊಮ್ಮಾಯಿ ಒಂದೇ ಒಂದು ಮನೆ ಕೊಟ್ಟಿಲ್ಲ ಎಂಬ ಸಚಿವ ಜಮೀರ್ ಅಹ್ಮದ್ ಹೇಳಿಕೆಯನ್ನು ಖಂಡಿಸಿದ ಅವರು, ಇದು ಹಾಸ್ಯಾಸ್ಪದ. ಹೋಗಿ ನೋಡಿ ಬರಲಿ. ಕಾಂಗ್ರೆಸ್ ನಾಯಕರ ಭಾಷಣ ಸುಳ್ಳಿನ ಕಂತೆ ಅಷ್ಟೇ. ನಾವು ಎಲ್ಲರೂ ಒಗ್ಗಟ್ಟಿನಲ್ಲಿದ್ದೇವೆ. ಭರತ್‌ಗೆ ಎಲ್ಲ ಸಮುದಾಯದವರಿಂದಲೂ ಹೆಚ್ಚಿನ ಬೆಂಬಲ ಸಿಕ್ಕಿದೆ. ಹೆಚ್ಚು ಮತಗಳ ಅಂತರದಿಂದ ಭರತ್ ಗೆಲ್ಲುತ್ತಾನೆ. ಖಾದ್ರಿ ಮನವೊಲಿಕೆಯಾದರೆ, ಬಿಜೆಪಿ ಮೇಲೆ ಪರಿಣಾಮ ಬೀರಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

ಚನ್ನಪಟ್ಟಣದಲ್ಲಿ ಸಿ.ಪಿ ಯೋಗೇಶ್ವರ್ ಗೆಲುವು ನಿಶ್ಚಿತ

ಕುಟುಂಬದವರನ್ನು ಅಧಿಕಾರಕ್ಕೆ ತರಲು ನರಬಲಿ

ಮಂಡ್ಯ: ತಮ್ಮ ಕುಟುಂಬದವರನ್ನು ಅಧಿಕಾರಕ್ಕೆ ತರಲು ದೇವೇಗೌಡರ ಕುಟುಂಬದವರು ಒಂದೊಂದು ನರಬಲಿ ತೆಗೆದುಕೊಳ್ಳುತ್ತಾರೆ ಎಂದು ಮಾಜಿ ಸಂಸದ ಶಿವರಾಮೇಗೌಡ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಮಂಜುನಾಥ್ ಅವರನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ ಮಾಡಲು ಯೋಗೇಶ್ವರ್ ಶ್ರಮಪಟ್ಟಿದ್ದರು. ಆದರೆ, ಯೋಗೇಶ್ವರ್ ಬಲಿಯಾಗಿ ಹೋದರು. ಚನ್ನಪಟ್ಟಣ ಜನ ದಡ್ಡರಲ್ಲ, ಯೋಗೇಶ್ವರ್ ಗೆಲುವು ನಿಶ್ಚಿತ ಎಂದು ಭವಿಷ್ಯ ನುಡಿದರು.

ಚನ್ನಪಟ್ಟಣದಲ್ಲಿ ನಿಖಿಲ್ ಅಲ್ಲ, ಕುಮಾರಸ್ವಾಮಿ ನಿಂತರೂ ಏನು ಮಾಡಲಾಗಲ್ಲ. ಯೋಗೇಶ್ವರ್ ಆಚೆ ಕಳುಹಿಸಲು ಬಿ ವೈ ವಿಜಯೇಂದ್ರ, ಬಿ.ಎಸ್ ಯಡಿಯೂರಪ್ಪ ಕಾರಣ. ಬಿಜೆಪಿ ಗುಂಪುಗಾರಿಕೆಯಿಂದ ಯೋಗೇಶ್ವರ್ ಆಚೆ ಹೋದರು. ಪಾಪ ನಿಖಿಲ್‌ನನ್ನು ಮೂರನೇ ಸರಿ ಆಹುತಿ ಕೊಡ್ತಾವ್ರೆ ಎಂದು ಹೇಳಿದರು.

> ಕುಮಾರಸ್ವಾಮಿ ಅವರು ಈಗಾಗಲೇ ರಾಮನಗರದ ಬಂಡೆಗೆ ಹೆದರಿ ಮಂಡ್ಯಕ್ಕೆ ಬಂದಿದ್ದಾರೆ ಯಾಕೆ?. ಮಂಡ್ಯದಲ್ಲಿ ಗಂಡಸರಿಲ್ವಾ?. ಮುಂದಿನ ಚುನಾವಣೆಗೆ ಮಂಡ್ಯ ಜೆಡಿಎಸ್‌ನಲ್ಲಿ ಯಾರಾದರೂ ಬಲಿಯಾಗ್ತಾರೆ ಅಷ್ಟೇ. ಜಿಲ್ಲೆಯ ಮುಖಂಡರು ಈಗಲಾದರೂ ಎಚ್ಚೆತ್ತುಕೊಳ್ಳಿ. ನಿಮ್ಮಲ್ಲೂ ಗಂಡಸರಿದ್ದಾರೆ. ಹಾಸನದಿಂದ ಕರೆತಂದು ಮಂಡ್ಯದಲ್ಲಿ ಗಂಡಸ್ತನ ಮಾಡುವ ಅಗತ್ಯವಿಲ್ಲ, ಗಂಡಸರಾಗ್ರಪ್ಪ, ಕೈಗೆ ಬಳೆ ತೊಟ್ಟುಕೊಳ್ಳಬೇಡಿ.
> -**ಶಿವರಾಮೇಗೌಡ,** ಮಾಜಿ ಸಂಸದ

ಎಚ್‌ಡಿಕೆ ವಿರುದ್ಧ ವಾಗ್ದಾಳಿ

ಕುಮಾರಸ್ವಾಮಿ 2 ಬಾರಿ ಲಾಟರಿಯಲ್ಲಿ ಸಿಎಂ ಆದವರು. ಕಳೆದ ಚುನಾವಣೆಯಲ್ಲಿ ಎಚ್‌ಡಿಕೆ ಗಾಡಿ ನಿಂತು ಹೋಗಿತ್ತು. ಪಾಪ ಮುಳುಗುವ ಹಡಗು ಎಂದು ಮಂಡ್ಯ ಜನ ಕೈ ಹಿಡಿದರು. ಉನ್ನತ ಹುದ್ದೆಯಲ್ಲಿದ್ದು ಕುಮಾರಸ್ವಾಮಿ ಏನ್ ಮಾಡ್ತಿದ್ದಾರೆ. ಮಂಡ್ಯದಲ್ಲಿ 4 ದಿನ ಬೆಂಗಳೂರಲ್ಲಿ 4 ದಿನ ಇರ್ತಾರೆ. ದೇಶ-ವಿದೇಶ ಸುತ್ತಿ ಬೃಹತ್ ಕೈಗಾರಿಕಾಗಳ ಸ್ಥಾಪನೆ ಮಾಡಬೇಕಿತ್ತು. ಆದರೆ ರಾಜ್ಯಕ್ಕೆ ಬಂದಾಗಲೆಲ್ಲಾ ಮುಡಾ ಕೇಸು, ಡಿಕೆಶಿ ಮುಖ ಕೆರೆಯುವ ಕೆಲಸ ಮಾಡ್ತಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕಾ ತಂದು ಮಂಡ್ಯ ಜನರ ಋಣ ತೀರಿಸುವ ಕೆಲಸವನ್ನು ಕುಮಾರಸ್ವಾಮಿ ಮಾಡಬೇಕು ಎಂದು ವಾಗ್ದಾಳಿ ನಡೆಸಿದರು.

ಪ್ರಧಾನಿ ಶಾಸ್ತ್ರಿ ತಮ್ಮ ಜೀವನದಲ್ಲಿ ಒಂದೇ ಒಂದು ಸಿನಿಮಾವನ್ನೂ ನೋಡಿರಲಿಲ್ಲ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಿಯಾಗಿದ್ದಾಗ, ವಸಂತರಾವ್ ನಾಯಕ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದರು. ಅವರು ಆ ರಾಜ್ಯದ ಮುಖ್ಯಮಂತ್ರಿಯಾಗಿ ಸುದೀರ್ಘ ಅವಧಿಗೆ ಅಂದರೆ ಹನ್ನೆರಡು ವರ್ಷಗಳ ಕಾಲ (1963ರಿಂದ 1975) ಅಧಿಕಾರದಲ್ಲಿದ್ದರು.

ಒಮ್ಮೆ ಅವರು ಶಾಸ್ತ್ರಿಯವರನ್ನು ದಿಲ್ಲಿಯಲ್ಲಿ ಭೇಟಿಯಾದಾಗ ಅನೌಪಚಾರಿಕವಾಗಿ ಮಾತಾಡುತ್ತಾ, 'ನೀವು ಮುಂಬೈಗೆ ಬಂದಾಗ ನಿಮ್ಮನ್ನು ಸಿನಿಮಾ ಶೂಟಿಂಗ್ ನಡೆಯುವ ತಾಣಕ್ಕೆ ಕರೆದುಕೊಂಡು ಹೋಗುತ್ತೇನೆ. ನೀವು ಅದನ್ನು ನೋಡಬೇಕು' ಎಂದು ಹೇಳಿದರು. ಅದಕ್ಕೆ ಶಾಸ್ತ್ರಿಯವರು ಒಪ್ಪಿಕೊಂಡರು.

ಅದಾಗಿ ನಾಲ್ಕು ತಿಂಗಳ ಬಳಿಕ, ಮೀನಾಕುಮಾರಿ, ಅಶೋಕ್ ಕುಮಾರ್, ರಾಜ್‌ಕುಮಾರ್ ಅಭಿನಯದ, ಕಮಲ್ ಅಮ್ರೋಹಿ ನಿರ್ದೇಶನದ 'ಪಾಕೀಜಾ' ಸಿನಿಮಾದ ಶೂಟಿಂಗ್ ನಡೆಯುತ್ತಿರುವುದು ವಸಂತರಾವ್ ನಾಯಕ್ ಅವರ ಗಮನಕ್ಕೆ ಬಂದಿತು. ಆ ದಿನಗಳಲ್ಲಿ ಮೀನಾಕುಮಾರಿ ಜನಪ್ರಿಯತೆಯ ಉತ್ತುಂಗದಲ್ಲಿದ್ದರು. ಆಕೆಯ ಅಭಿನಯದ ಸಿನಿಮಾ ಚಿತ್ರೀಕರಣವನ್ನು ಪ್ರಧಾನಿಯವರು ವೀಕ್ಷಿಸಲಿ ಎಂದು ನಾಯಕ್ ಅವರಿಗೆ ಅನಿಸಿತು. ನಾಯಕ್ ಅವರ ಒತ್ತಾಯಕ್ಕೆ ಪ್ರಧಾನಿಯವರು ಸಮ್ಮತಿಸಿದರು.

ದೇಶದ ಪ್ರಧಾನಿ ಸಿನಿಮಾ ಶೂಟಿಂಗ್ ವೀಕ್ಷಿಸಲು ಬರುತ್ತಾರೆಂದರೆ ಕೇಳಬೇಕೆ? ಹಿಂದಿ ಚಿತ್ರರಂಗದ ದಿಗ್ಗಜರು, ಗಣ್ಯರು, ಪ್ರತಿಷ್ಠಿತ ವ್ಯಕ್ತಿಗಳೆಲ್ಲ ಹಾಜರಿದ್ದರು. 'ಪಾಕೀಜಾ' ಚಿತ್ರದ ನಾಯಕಿ ಮೀನಾಕುಮಾರಿ ಬಂದು, ಶಾಸ್ತ್ರಿಯವರಿಗೆ ಮಾಲಾರ್ಪಣೆ ಮಾಡಿದರು. ಅವರ ಪಕ್ಕದಲ್ಲಿ ಶಾಸ್ತ್ರಿಯವರ ಪತ್ರಿಕಾ ಕಾರ್ಯದರ್ಶಿ ಕುಲದೀಪ್ ನಯ್ಯರ್ ಇದ್ದರು. ಶಾಸ್ತ್ರಿಯವರು ನಯ್ಯರ್ ಅವರ ಕಿವಿಯಲ್ಲಿ, 'ನನಗೆ ಮಾಲಾರ್ಪಣೆ ಮಾಡಿದ ಯುವತಿ ಯಾರು?' ಎಂದು ಕೇಳಿದರು.



ನಯ್ಯರ್ ಮೆಲ್ಲಗೆ, 'ಅವರೇ ಮೀನಾಕುಮಾರಿ.... ಮೀನಾಕುಮಾರಿ. ಈ ಚಿತ್ರದ ನಾಯಕಿ. ದೇಶದ ಖ್ಯಾತ ಅಭಿನೇತ್ರಿ' ಎಂದು ಉಸುರಿದರು. ಶಾಸ್ತ್ರಿಯವರ ಮುಖದಲ್ಲಿ ಯಾವ ಏರಿಳಿತಗಳೂ ಇರಲಿಲ್ಲ.

ಅಷ್ಟಕ್ಕೇ ಸುಮ್ಮನಾಗದ ನಯ್ಯರ್, ಮೀನಾಕುಮಾರಿ ನಟಿಸಿದ ಪ್ರಸಿದ್ಧ ಸಿನಿಮಾಗಳ ಹೆಸರುಗಳನ್ನು ಒಂದೊಂದಾಗಿ ಮೆಲುದನಿಯಲ್ಲಿ ಹೇಳಿದರು.

ಆಗ ಶಾಸ್ತ್ರಿಯವರು, 'ಸಾರಿ ಕುಲದೀಪ್, ನಾನು ಇಲ್ಲಿ ತನಕ ಯಾವ ಸಿನಿಮಾವನ್ನೂ ನೋಡಿಲ್ಲ. ನಾನು ಮೀನಾಕುಮಾರಿ ಹೆಸರನ್ನೂ ಕೇಳಿಲ್ಲ' ಎಂದು ಮುಚ್ಚುಮರೆಯಿಲ್ಲದೇ ಹೇಳಿದರು.

ಆ ಮಾತನ್ನು ಕೇಳಿ ನಯ್ಯರ್ ಆಶ್ಚರ್ಯಚಕಿತರಾದರು. ಅದಕ್ಕಿಂತ, 'ನನಗೆ ಮಾಲಾರ್ಪಣೆ ಮಾಡಿದ ಮಹಿಳೆ ಯಾರು?' ಎಂಬ ಪ್ರಶ್ನೆಯನ್ನು ಶಾಸ್ತ್ರಿಯವರು ಎಲ್ಲರ ಎದುರಿಗೇ ಕೇಳಬಹುದು ಎಂದು ನಯ್ಯರ್ ನಿರೀಕ್ಷಿಸಿರಲಿಲ್ಲ.

ನಂತರ ಶಾಸ್ತ್ರಿಯವರ ಭಾಷಣ.

'ಮೀನಾಕುಮಾರಿ ಅವರೇ, ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ನಿಮ್ಮ ಹೆಸರನ್ನು ಕೇಳಿದ್ದು ಇದೇ ಮೊದಲು. ನಿಮ್ಮನ್ನು ನೋಡಿದ್ದೂ ಇದೇ ಮೊದಲು. ನಾನು ಇಲ್ಲಿ ತನಕ ನನ್ನ ಜೀವನದಲ್ಲಿ ಒಂದೇ ಒಂದು ಸಿನಿಮಾವನ್ನೂ ನೋಡಿಲ್ಲ. ಮುಖ್ಯಮಂತ್ರಿಯವರ ಆಹ್ವಾನದ ಮೇರೆಗೆ ನಾನು ಚಿತ್ರೀಕರಣವನ್ನು ನೋಡಲು ಬಂದಿದ್ದೇನೆ' ಎಂದು ಹೇಳಿದರು.

ಆ ದಿನಗಳಲ್ಲಿ ಮನೆಮಾತಾಗಿದ್ದ, ಕೋಟ್ಯಂತರ ಅಭಿಮಾನಿಗಳ ಆರಾಧ್ಯ ದೈವವಾಗಿದ್ದ ಮೀನಾಕುಮಾರಿ, ಶಾಸ್ತ್ರಿಯವರ ಮಾತಿನಿಂದ ಪೆಚ್ಚಾಗಿ ಹೋದರು. ಅವಮಾನದಿಂದ ಅವರ ಮುಖ ಬಿಳುಚಿಕೊಂಡಿತು. ಅದು ಶಾಸ್ತ್ರಿಯವರ ಅಜ್ಞಾನವಿರ ಬಹುದು, ಆದರೆ ಅವರ ಪ್ರಾಮಾಣಿಕತೆಗೆ ಸಭೆಯಲ್ಲಿದ್ದವರೆಲ್ಲ ಪ್ರಶಂಸೆ ವ್ಯಕ್ತಪಡಿಸಿದರು. ಸಾರ್ವಜನಿಕವಾಗಿ ಮೀನಾಕುಮಾರಿಗೆ ಕ್ಷಮೆಯಾಚಿಸಿದ ಪರಿ ಇನ್ನೂ ಇಷ್ಟವಾಗಿತ್ತು.

ಈ ವಿಷಯವನ್ನು ನಯ್ಯರ್ ತಮ್ಮ 'On Leaders and Icons: From Jinnah to Modi' ಕೃತಿಯಲ್ಲಿ ಬರೆದಿದ್ದಾರೆ. 'ಶಾಸ್ತ್ರಿಯವರ ಅಜ್ಞಾನ ಮತ್ತು ಪ್ರಾಮಾಣಿಕತೆ ಕಂಡು ನಾನು ಬೆರಗಾದೆ' ಎಂದೂ ಅವರು ಹೇಳಿದ್ದಾರೆ.

ಕೋಸಂಬರಿ ಕುರಿತು

ವಿಶೇಷ ಸಂದರ್ಭದಲ್ಲಿ ಊಟದಲ್ಲಿ ಕೋಸಂಬರಿ ಇರಬೇಕು ತಾನೇ? ಈಗಂತೂ ವೈದ್ಯರು ಕುರುಕಲು ತಿಂಡಿಯನ್ನು ಸೇವಿಸುವ ಬದಲು, ಬಾಯಿ ಬೇಡಿದಾಗ, ಕೋಸಂಬರಿ ಸೇವಿಸಿ ಎಂದು ಹೇಳುವುದುಂಟು. ಕಾರಣ ಇದು ಆರೋಗ್ಯಕ್ಕೆ ಉತ್ತಮ ಮತ್ತು ಅದನ್ನು ಸೇವಿಸುವುದರಿಂದ ಯಾವ ಅಡ್ಡ ಪರಿಣಾಮವೂ ಆಗುವುದಿಲ್ಲ. ಅಷ್ಟಕ್ಕೂ ಕೋಸಂಬರಿ ಒಂದು ಸಲಾಡ್.

ಈ ಕೋಸಂಬರಿ ಹೆಸರಿನ ಮೂಲವೇನು? ಯಾವಾಗಿನಿಂದ ಈ ಹೆಸರು ಬಂತು? ಎಂಬ ಪ್ರಶ್ನೆಯನ್ನು ಯಾರೋ 'ಕೋರ' ವೆಬ್ ಸೈಟಿನಲ್ಲಿ ಕೇಳಿದ್ದರು. ಅದಕ್ಕೆ ನಂದೀಶ್ ಎಚ್.ಎನ್. ಎಂಬುವವರು ಉತ್ತರಿಸಿದ್ದರು. ಅವರ ಪ್ರಕಾರ, ಸಂಸ್ಕೃತದ ಕುಸ್ತುಂಬರೀ/ಕುಸ್ತುಂಬುರು ಪದದ ಅರ್ಥ ಧನಿಯಾ ಗಿಡ. ಈ ಪದ ಕನ್ನಡಕ್ಕೆ ಬಂದು, ಅದೇ ಅರ್ಥದ ಕೊತ್ತಂಬರಿ ಆಯಿತು. ಆದರೆ ಇದೇ ಪದ ಮರಾಠಿಗೆ ಹೋದಾಗ, ಕೋಶಿಂಬೀರ್/ಕೋಶಿಂಬರೀ/ಕೋಶಿಂಬೀರಿಕಾ ಎಂದು ಬದಲಾಯಿತು. ಅಷ್ಟೇ ಅಲ್ಲ, ಅದರ ಅರ್ಥವೂ ಸಲಾಡ್ ಅಥವಾ ಪಚಿದ್ಯ ಎಂದು ಬದಲಾಯಿತು. ಮರಾಠಿಯಿಂದ ಕನ್ನಡಕ್ಕೆ, ತಮಿಳಿಗೆ, ತುಳುಗೆ ಅದೇ ಅರ್ಥದಲ್ಲಿ ಬಂದದ್ದು ಕೋಸಂಬರಿ/ಕೋಸುಂಬರಿ/ಕುಸುಂಬರಿ ಆಯಿತು.

ಕಿಟ್ಟೆಲ್ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು, ಮರಾಠಿ-ಕನ್ನಡ ನಿಘಂಟು, ಸಂಸ್ಕೃತ ನಿಘಂಟು, ಮರಾಠಿ-ಹಿಂದಿ-ಇಂಗ್ಲಿಷ್ ನಿಘಂಟುಗಳಲ್ಲಿ ಸಹ ಕೋಸಂಬರಿ ಬಗ್ಗೆ ಪ್ರಸ್ತಾಪವಿದೆ. ಕಡಲೆಬೇಳೆ ಅಥವಾ ಹೆಸರುಬೇಳೆಯನ್ನು ನೀರಲ್ಲಿ ನೆನಸಿ, ಸೌತೆಕಾಯಿ, ತೆಂಗಿನ ತುರಿ, ಹಸಿರು ಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ನಿಂಬೆಹಣ್ಣಿನ ರಸ, ಉಪ್ಪು ಇವುಗಳನ್ನು ಕೂಡಿಸಿ ಒಗ್ಗರಣೆ ಹಾಕಿ ತಯಾರಿಸುವ ಒಂದು ಬಗೆಯ ತಿನಿಸೇ ಕೋಸುಂಬರಿ, ಕುಸುಂಬರಿ ಅಥವಾ ಕೋಸಂಬರಿ.

ಕೋಸಂಬರಿ ಒಂದು ಸಾಂಪ್ರದಾಯಿಕ ಸಲಾಡ್ ಕೂಡ ಹೌದು. ಇದರಲ್ಲಿ ಸಾಸಿವೆ, ಉದ್ದಿನಕೊತ್ತಂಬರಿ, ಈರುಳ್ಳಿ, ತೆಂಗಿನಕಾಯಿ, ನಿಂಬೆ ರಸ ಮತ್ತು ಉಪ್ಪು ಸೇರಿಸಲಾಗುತ್ತದೆ. ಕೋಸಂಬರಿಯನ್ನು ಸಾಮಾನ್ಯವಾಗಿ ಊಟದೊಂದಿಗೆ ಸೇವಿಸಲಾಗುತ್ತದೆ. ಇದು ರುಚಿಕರ ಮತ್ತು ಆರೋಗ್ಯಕರ ಆಹಾರವಾಗಿದೆ. ಕೋಸಂಬರಿಯು ಹೆಸರು ಬೇಳೆ ಮತ್ತು ತರಕಾರಿಗಳಿಂದ ತಯಾರಾಗುವ ಕಾರಣ, ಇದರಲ್ಲಿ ಪ್ರೊಟೀನ್, ಕಬ್ಬಿಣ, ವಿಟಮಿನ್ 'ಎ' ಮತ್ತು 'ಸಿ' ಇತ್ಯಾದಿ ಪೋಷಕಾಂಶಗಳಿದ್ದು, ಹಸಿವು ತಣಿಸಲು ಮತ್ತು ದೇಹಕ್ಕೆ ಪೋಷಣೆಯನ್ನು ಒದಗಿಸಲು ಸಹಾಯಕವಾಗಿದೆ. ಕೋಸಂಬರಿ ತಯಾರಿಸಲು, ಮೊದಲು ಬೇಳೆಯನ್ನು ನೆನೆಸಿ, ನಂತರ ಅದನ್ನು ಬೇಯಿಸಿ ತಣಿಸಿಕೊಳ್ಳಬೇಕು. ನಂತರ, ಸಾಸಿವೆ, ಉದ್ದಿನಕೊತ್ತಂಬರಿ, ಈರುಳ್ಳಿ, ತೆಂಗಿನಕಾಯಿ, ನಿಂಬೆ ರಸ ಮತ್ತು ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಕೋಸಂಬರಿಯನ್ನು ತಣಿಸಿ ಸೇವಿಸಬೇಕು ಎಂಬ ವಿವರಗಳಿವೆ.

ಕೋಸಂಬರಿಯನ್ನು ವಿವಿಧ ರೀತಿಯಲ್ಲಿ ತಯಾರಿಸಬಹುದು. ಕೆಲವರು ಕೋಸಂಬರಿಗೆ ಕ್ಯಾರೆಟ್, ಸೌತೆಕಾಯಿ, ಬೆಳ್ಳುಳ್ಳಿ ಅಥವಾ ಮೆಣಸಿನಕಾಯಿಯನ್ನೂ ಸೇರಿಸುತ್ತಾರೆ. ಕೋಸಂಬರಿಯನ್ನು ಸಾಮಾನ್ಯವಾಗಿ ಉಡುಪಿ ಪಾಕಪದ್ಧತಿಯಲ್ಲಿ ಸೇವಿಸಲಾಗುತ್ತದೆ.

ಶಂಖಪಾಷಾಣ ಅಂದ್ರೆ ಏನು?

ಇತ್ತೀಚೆಗೆ ಓದುಗರೊಬ್ಬರು, Ask The Editor ಅಂಕಣಕ್ಕೆಂದು 'ಶಂಖಪಾಷಾಣ ಎಂದರೆ ಏನು?' ಎಂಬ ಪ್ರಶ್ನೆ ಕಳಿಸಿದ್ದರು. ಆದರೆ ಆ ಅಂಕಣದಲ್ಲಿ ಈ ಪ್ರಶ್ನೆ ಸೂಕ್ತವಾಗದ್ದರಿಂದ ಅದಕ್ಕೆ ಇಲ್ಲಿ ಉತ್ತರಿಸುತ್ತಿದ್ದೇನೆ. ಅವರು ಆ ಪದದ ಅರ್ಥ ಕೇಳುವ ಬದಲು ಅದನ್ನು ಸೇವಿಸುವ ಬಗ್ಗೆ ಕೇಳಿದ್ದರೆ ಆ ಅಂಕಣದಲ್ಲಿಯೇ ಉತ್ತರಿಸುತ್ತಿದ್ದೆ, ಇರಲಿ.

ನಾನು ಶಿರಸಿ ಸಮೀಪದ ಹೈಸ್ಕೂಲಿನಲ್ಲಿ ಓದುವಾಗ ನಮಗೆ ಎಸ್.ಪಿ.ಭಟ್ ಎಂಬ ಹೆಡ್ ಮಾಸ್ತರರಿದ್ದರು. ಅವರು ಸಂಸ್ಕೃತ ಪಾಠ ಮಾಡುತ್ತಿದ್ದರು. ಅವರ ಬಾಯಿಂದ ವಿಶೇಷ ಪದಗಳು ಉದುರುತ್ತಿದ್ದವು. ನಾವು ತಡವಾಗಿ ಕ್ಲಾಸಿಗೆ ಬಂದರೆ, ಗದರುತ್ತಿದ್ದರು. 'ತಡವಾಗಿ ಬಂದಿದ್ದು ಯಾಕೆ?' ಎಂದು ಕೇಳಿದರೆ, ನಾವು ತಲೆ ತಗ್ಗಿಸಿ ಸುಮ್ಮನೆ ನಿಂತಿರುತ್ತಿದ್ದೆವು.

'ಏನ್ರಯ್ಯಾ, ಯಾಕೆ ತಡವಾಯ್ತು ಅಂತ ಬೊಗಳಿ, ಶಂಖಪಾಷಾಣ ಕುಡಿದವರಂತೆ ನಿಂತಿದ್ದೀರಲ್ಲ?' ಎಂದು ದಬಾಯಿಸುತ್ತಿದ್ದರು. ಆಗ ನನಗೆ ಶಂಖಪಾಷಾಣ ಪದದ ಅರ್ಥ ಗೊತ್ತಿರಲಿಲ್ಲ. (ಇಲಿ) ಪಾಷಾಣ ಅಂದ್ರೆ ವಿಷ ಎಂದಷ್ಟೇ ಗೊತ್ತಿತ್ತು. ಶಂಖಪಾಷಾಣ ಅಂದರೂ ಏನೋ ಒಂದು ರೀತಿಯ ವಿಷ ಇದ್ದಿರಬಹುದು ಎಂದು ಅಂದುಕೊಂಡಿದ್ದೆ. ಆ ಪಾಷಾಣಕ್ಕೆ ಶಂಖವೇಕೆ ಸೇರಿಕೊಂಡಿತು ಎಂಬುದನ್ನು ತಿಳಿಯುವ ಕುತೂಹಲವಿತ್ತು. ಆದರೆ ಹೆಡ್ ಮಾಸ್ತರರಿಂದ ಬೈಸಿಕೊಳ್ಳುವಾಗ ಆ ಪದದ ಅರ್ಥವನ್ನು ಹೇಗೆ ಕೇಳುವುದು? ಅದಾದ ಬಳಿಕ ಆ ಪದ ಮರೆತೇ ಹೋಗಿತ್ತು. ಕಾರಣ ನಂತರ ಯಾರೂ ಆ ಪದ ಬಳಸಿದ್ದನ್ನು ನಾನು ಓದಿರಲಿಲ್ಲ, ಕೇಳಿರಲಿಲ್ಲ.

ನಾನು 'ವಿಜಯ ಕರ್ನಾಟಕ' ಸಂಪಾದಕನಾಗಿದ್ದಾಗ, ತಮ್ಮ ಅಂಕಣ ಬರಹವೊಂದರಲ್ಲಿ, ಶತಾವಧಾನಿ ಆರ್.ಗಣೇಶ್ ಅವರು 'ಶಂಖಪಾಷಾಣ' ಎಂಬ ಪದವನ್ನು ಬಳಸಿದ್ದರು. ನನಗೆ ಆಗ ಥಟ್ಟನೆ ನೆನಪಾದವರು ನನ್ನ ಹೆಡ್ ಮಾಸ್ಟರ್ ಎಸ್.ಪಿ.ಭಟ್ಟರು. ನಾನು ಅದರ ಅರ್ಥವನ್ನು ತಿಳಿದುಕೊಳ್ಳಲು ಶತಾವಧಾನಿಗಳಿಗೆ ಫೋನ್ ಮಾಡಿದೆ. ಆ ದಿನಗಳಲ್ಲಿ ಅವರು ಮೊಬೈಲ್ ಬಳಸುತ್ತಿರಲಿಲ್ಲ. ಲ್ಯಾಂಡ್ ಲೈನ್‌ಗೆ ಸಂಪರ್ಕಿಸಿದಾಗ, ಅವರ ತಾಯಿ ಫೋನ್ ಎತ್ತಿಕೊಂಡರು. 'ಗಣೇಶ್ ಹೊರಹೋಗಿದ್ದಾನೆ' ಎಂದು ಹೇಳಿದರು. ನನಗೆ ನಿರಾಸೆಯಾಯಿತು. ನಂತರ ನಾನು ನಿಘಂಟು ತಜ್ಞ ಪ್ರೊ.ಜಿ.ವೆಂಕಟಸುಬ್ಬಯ್ಯ ಅವರನ್ನು ಸಂಪರ್ಕಿಸಿದೆ. ಅವರು ಸುಮಾರು ಹತ್ತು ನಿಮಿಷ ಆ ಪದದ ಅರ್ಥವನ್ನು ವಿವರಿಸಿದ್ದು ನನ್ನ ಕಿವಿಯಲ್ಲಿ ಶಂಖನಾದದಂತೆ ಮೊಳಗುತ್ತಿದೆ.

ಶಂಖಪಾಷಾಣ ಎಂದರೆ ಆರ್ಸೆನಿಕ್ ಎಂಬ ರಾಸಾಯನಿಕ. ಇದು ಒಂದು ಲೋಹವಲ್ಲದ ಪದಾರ್ಥವಾಗಿದ್ದು, ಭೂಮಿಯ ಹೊರಪದರದಲ್ಲಿ ಸಾಮಾನ್ಯವಾಗಿ ಇತರ ಖನಿಜಗಳೊಂದಿಗೆ ಸಂಯೋಜನೆಯಾಗಿ ಕಂಡುಬರುತ್ತದೆ. ಆರ್ಸೆನಿಕ್ ತನ್ನ ವಿಷಕಾರಿ ಗುಣಲಕ್ಷಣಗಳಿಗೆ ಹೆಚ್ಚು ಪ್ರಸಿದ್ಧ. ಘನ ಸ್ಥಿತಿಯಲ್ಲಿ ಕಂಡುಬರುವ ಆರ್ಸೆನಿಕ್, ಬೆಳ್ಳಿಯ ಬಣ್ಣದಿಂದ ಕಪ್ಪು ಬಣ್ಣದವರೆಗೆ ವಿವಿಧ ಬಣ್ಣಗಳಲ್ಲಿ ಇರಬಹುದು. ಆಯುರ್ವೇದ ರಸಶಾಸ್ತ್ರ ಗ್ರಂಥದಲ್ಲಿ ವಿಷಕ್ಕೆ ಶಂಖಪಾಷಾಣ, ಗೌರಿ ಪಾಷಾಣ ಎಂದೂ ಹೇಳಲಾಗಿದೆ.

ಆರ್ಸೆನಿಕ್‌ನ ವಿಷಕಾರಿ ಗುಣದಿಂದ ಇಂದು ಅದನ್ನು ಔಷಧದಲ್ಲಿ ಬಳಸುವುದಿಲ್ಲ. ಇದನ್ನು ಕೀಟನಾಶಕಗಳು, ಗಾಜು, ಮರದ ಸಂರಕ್ಷಕಗಳು ಮತ್ತು ಅರೆವಾಹಕಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಆರ್ಸೆನಿಕ್ ಹೆಚ್ಚಿನ ಪ್ರಮಾಣದಲ್ಲಿರುವ ಪದಾರ್ಥಗಳನ್ನು ಸೇವಿಸಿದರೆ ವಾಂತಿ, ಹೊಟ್ಟೆ ನೋವು, ಮೂತ್ರಪಿಂಡದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ವ್ಯಕ್ತಿ ಸಾಯಲೂಬಹುದು. ಕೆಲವು ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಆರ್ಸೆನಿಕ್ ಅಧಿಕ ಪ್ರಮಾಣದಲ್ಲಿ ಇರುತ್ತದೆ. ಜತೆಗೆ, ಕೈಗಾರಿಕಾ ತ್ಯಾಜ್ಯ ಮತ್ತು ಕೃಷಿ ಚಟುವಟಿಕೆಗಳಿಂದಾಗಿ ನೀರು ಮತ್ತು ಮಣ್ಣಿನಲ್ಲಿ ಆರ್ಸೆನಿಕ್ ಮಾಲಿನ್ಯ ಉಂಟಾಗಬಹುದು. ಆರ್ಸೆನಿಕ್ ಮಾಲಿನ್ಯದಿಂದಾಗಿ ಮನುಷ್ಯರು ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಗಂಭೀರ ಪರಿಣಾಮವಾಗುತ್ತದೆ.

ಆರ್ಸೆನಿಕ್ ಅನ್ನು 'ಕಿಂಗ್ ಆಫ್ ಪಾಯ್ಸನ್' ಎಂದು ಕರೆಯುವುದುಂಟು. ವಿಚಿತ್ರ ಅಂದ್ರೆ ಇದನ್ನು ಕಾಯಿಸಿದಾಗ ಕರಗುವುದಿಲ್ಲ. ಹಾಗಂತ ತಟ್ಟನೆ ಗಾಳಿಯಲ್ಲಿ ಆವಿಯಾಗಿ ಹೋಗುತ್ತದೆ.

ಇಂಗ್ಲಿಷ್ ಪದಕೋಶದಲ್ಲಿ Arsenic is a naturally occurring, toxic, semi metallic element that can be found in the Earth's crust, air, water, and soil. It can also be released into the environment through industrial and agricultural processes, such as mining and metal smelting ಎಂದು ವಿವರಿಸಲಾಗಿದೆ. ಪಿರಿಯಾಡಿಕ್ ಟೇಬಲ್ (ಆವರ್ತಕ ಕೋಷ್ಟಕ) ನಲ್ಲಿ ಮೂವತ್ತೂರನೇ ಸ್ಥಾನದಲ್ಲಿರುವ ಆರ್ಸೆನಿಕ್ As ಎಂದೇ ಪರಿಚಿತ.

ಪಾಷಾಣಕ್ಕೆ ವಿಷ ಎಂಬ ಅರ್ಥ ಇರುವಂತೆ, ಸಂಸ್ಕೃತ ಹಾಗೂ ಪ್ರಾಕೃತದಲ್ಲಿ ಪಾಷಾಣ ಅಂದ್ರೆ ಕಲ್ಲು, ಬಂಡೆ ಎಂಬ ಅರ್ಥವೂ ಇದೆ. ಶಂಖ ಎಂದರೆ ಸಮುದ್ರದಲ್ಲಿ ಸಿಗುವ, ಪೂಜಾಕಾರ್ಯಗಳಲ್ಲಿ ಬಳಸುವ, ವಾದ್ಯವಾಗಿ ಊದುವ, ಒಂದು ವಿಶೇಷವಾದ ಶಂಖದ ಆಕಾರದ ವಸ್ತು. ಪಾಷಾಣ ಎಂದರೆ ಕಲ್ಲು ಅಥವಾ ಬಂಡೆ. ಶಂಖಪಾಷಾಣ ಎಂದರೆ ಶಂಖದ ಆಕಾರದ ಕಲ್ಲು ಅಥವಾ ಶಂಖದಂಥ ಗುಣಗಳನ್ನು ಹೊಂದಿರುವ ಕಲ್ಲು ಎಂದರ್ಥ. ಇದು ಆರ್ಸೆನಿಕ್ ರೂಪಕ್ಕೂ ಹೋಲುತ್ತದೆ.

'ಪರರ ವಸ್ತು ಪಾಷಾಣ' ಎನ್ನುವ ನಾಣ್ಣುಡಿಯನ್ನು ಕೇಳಿರಬಹುದು. ಅಂದರೆ 'ಬೇರೆಯವರ ವಸ್ತು ಕೆಲಸಕ್ಕೆ ಬಾರದ ಕಲ್ಲು' ಎಂದರ್ಥ.

ಪುರಾಣಗಳಲ್ಲಿ, ಶಂಖಪಾಷಾಣವನ್ನು ದೇವರುಗಳ ಆಯುಧ ಅಥವಾ ಅಲಂಕಾರವಾಗಿ ಚಿತ್ರಿಸಲಾಗಿದೆ. ವಿಷ್ಣು ತನ್ನ ಕೈಯಲ್ಲಿ ಶಂಖವನ್ನು ಹಿಡಿದಿರುವ ಚಿತ್ರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಶಂಖಪಾಷಾಣವನ್ನು ಧಾರ್ಮಿಕ ಆಚರಣೆಗಳಲ್ಲಿ ಶುಭ ಸಂಕೇತವಾಗಿ ಬಳಸಲಾಗುತ್ತದೆ. ಶಂಖವು ಜಯ, ವೈಭವ ಮತ್ತು ಶುದ್ಧತೆಯ ಸಂಕೇತವಾಗಿದ್ದರೆ, ಕಲ್ಲು ಸ್ಥಿರತೆ ಮತ್ತು ಅಚಲತೆಯ ಸಂಕೇತ.

ಇಂಡಿಯನ್ ಮತ್ತು ಬಿಹಾರಿ

ಇದು ಹಳೆಯ ಜೋಕಾದರೂ ಮರೆತುಹೋಗಿತ್ತು. ನಿಮಗೂ ಹಾಗೇ ಆಗಿದ್ದರೆ, ಇದನ್ನು ಮತ್ತೊಮ್ಮೆ ಸವಿಯಬಹುದು.

ಲಾಲು ಪ್ರಸಾದ್ ಯಾದವ್ ವಿಮಾನದಲ್ಲಿ ಲಂಡನ್‌ಗೆ ಪ್ರಯಾಣಿಸುತ್ತಿದ್ದರು. ಮಧ್ಯಾಹ್ನದ ಊಟವನ್ನು ನೀಡುವ ಸಮಯ ಬಂದಿತು. ಆಗ ಗಗನಸಖಿ ಲಾಲು ಸನಿಹ ಹೋಗಿ ಇಂಗ್ಲಿಷಿನಲ್ಲಿ 'ನೀವು ವೆಜಿಟೇರಿಯನ್ನಾ ಅಥವಾ ನಾನ್ ವೆಜಿಟೇರಿಯನ್ನಾ?' ಎಂದು ಕೇಳಿದಳು. ಅದಕ್ಕೆ ಲಾಲು ಯಾದವ್, 'ನಾನು ಇಂಡಿಯನ್' ಎಂದು ಹೇಳಿದರು. ಒತ್ತರಿಸಿ ಬಂದ ನಗುವನ್ನು ತಡೆದು, ಆಕೆ ಅದೇ ಪ್ರಶ್ನೆಯನ್ನು ಹಿಂದಿಯಲ್ಲಿ, 'ಸರ್, ಆಪ್ ಶಾಕಾಹಾರಿ ಯಾ ಮಾಂಸಾಹಾರಿ?' ಎಂದು ಕೇಳಿದಳು.

ಅದಕ್ಕೆ ಲಾಲು ಯಾದವ್ ಹೇಳಿದರು- 'ನಾನು ನೂರಕ್ಕೆ ನೂರು ಬಿಹಾರಿ'.

ವಿಮಾನದ ಕಿಟಕಿಗಳೇಕೆ ಚಿಕ್ಕವು?

ವಿಮಾನದಲ್ಲಿ ನೂರಾರು ಸಲ ಪ್ರಯಾಣಿಸಿದವರಿಗೆ, 'ವಿಮಾನದ ಕಿಟಕಿಗಳು ಚಿಕ್ಕದಾಗಿರುತ್ತವೆ, ಏನು ಕಾರಣ?' ಎಂದು ಕೇಳಿ, ಉತ್ತರ ಗೊತ್ತಿರುವ ಸಾಧ್ಯತೆ ಕಮ್ಮಿ. ಈ ಪ್ರಶ್ನೆಗೆ ಉತ್ತರ ನನಗೂ ಗೊತ್ತಿರಲಿಲ್ಲ. ನಾನು ಆ ಕುರಿತು ಯೋಚಿಸಿರಲೇ ಇಲ್ಲ. ನನ್ನ ಮಗ ವಿವರಿಸಿದಾಗಲೇ ಗೊತ್ತಾಗಿದ್ದು.

ವಿಮಾನವು ಎತ್ತರದಲ್ಲಿ ಹಾರುವಾಗ ಒಳಗಿನ ಒತ್ತಡವು ಹೊರಗಿನ ಒತ್ತಡಕ್ಕಿಂತ ಹೆಚ್ಚಾಗಿರುತ್ತದೆ. ದೊಡ್ಡ ಕಿಟಕಿಗಳಿದ್ದರೆ ಈ ಒತ್ತಡವನ್ನು ತಡೆದುಕೊಳ್ಳುವುದು ಕಷ್ಟ. ಅದು ಬಿರುಕು ಬಿಡುವ ಅಥವಾ ಒಡೆಯುವ ಸಾಧ್ಯತೆ ಹೆಚ್ಚು. ಚಿಕ್ಕ ಕಿಟಕಿಗಳು ದೊಡ್ಡ ಕಿಟಕಿಗಳಿಗಿಂತ ಕಡಿಮೆ ತೂಕವನ್ನು ಹೊಂದಿರುತ್ತವೆ. ಇದು ಇಂಧನ ಬಳಕೆಯನ್ನು ಕಡಿಮೆ ಮಾಡಲು ಮತ್ತು ವಿಮಾನದ ದಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ದೊಡ್ಡ ಕಿಟಕಿಗಳಿದ್ದರೆ ಅವುಗಳಿಂದ ಬರುವ ಹೊರಗಿನ ಬೆಳಕು ಮತ್ತು ಉಷ್ಣವೂ ಅಧಿಕ. ಚಿಕ್ಕ ಕಿಟಕಿಗಳು ವಿಮಾನದ ಒಳಗಿನ ಉಷ್ಣತೆಯನ್ನು ನಿಯಂತ್ರಿಸಲು ಸಹಾಯಕ.

ವಿಮಾನದ ವಿನ್ಯಾಸದಲ್ಲಿ ಕಿಟಕಿಗಳ ಆಕಾರ ಮತ್ತು ಗಾತ್ರವು ಮುಖ್ಯ ಪಾತ್ರ ವಹಿಸುತ್ತದೆ. ಚಿಕ್ಕ ಕಿಟಕಿಗಳು ವಿಮಾನದ ಸಾಮಾನ್ಯ ವಿನ್ಯಾಸಕ್ಕೆ ಹೊಂದಿಕೊಳ್ಳುತ್ತವೆ.

ಸರಳವಾಗಿ ಹೇಳುವುದಾದರೆ, ವಿಮಾನದ ಕಿಟಕಿಗಳು ಚಿಕ್ಕದಾಗಿರುವುದು ಸುರಕ್ಷತೆ, ದಕ್ಷತೆ ಮತ್ತು ವಿನ್ಯಾಸದ ಕಾರಣಗಳಿಂದಾಗಿ.

ಸಚೇತಕ ಕುರಿತು

ಮೊದಲ ಬಾರಿಗೆ 'ರೌಂಡ್ ಟೇಬಲ್ ಕಾನ್‌ಫರನ್ಸ್' ನಡೆದಾಗ, ಕನ್ನಡದಲ್ಲಿ ಅದನ್ನು ಹೇಗೆ ಅನುವಾದಿಸುವುದು ಎಂಬ ಜಿಜ್ಞಾಸೆ ಮೂಡಿ, ಕೊನೆಗೆ ಸಿದ್ದವನಹಳ್ಳಿ ಕೃಷ್ಣ ಶರ್ಮ ಅವರು 'ದುಂಡುಮೇಜಿನ ಸಭೆ, ದುಂಡುಮೇಜಿನ ಪರಿಷತ್ತು' ಎಂದು ಟಂಕಿಸಿದರು. ಆ ಪದ ಈಗಲೂ ಬಳಕೆಯಲ್ಲಿದೆ. ಅದು ಮೂಲ ಆಂಗ್ಲಪದಕ್ಕಿಂತ ಹೆಚ್ಚು ಆಪ್ತವೆನಿಸುವಂತಿದೆ.

Whip ಅಥವಾ Chief Whip ಪದಕ್ಕೆ ಸಚೇತಕ ಅಥವಾ ಮುಖ್ಯ ಸಚೇತಕ ಎಂದು ಯಾರು ಅನುವಾದ ಮಾಡಿದರೋ ಗೊತ್ತಿಲ್ಲ. ಇದೂ ಒಳ್ಳೆಯ ಅನುವಾದವೇ. 'ಪದಾರ್ಥ ಚಿಂತಾಮಣಿ' ಕೃತಿಯಲ್ಲಿ ಪಾ.ವೆಂ.ಆಚಾರ್ಯರು, ಸಚೇತಕ ಪದದ ಬಗ್ಗೆ ಹೀಗೆ ಬರೆದಿದ್ದಾರೆ- ಈ ಶಬ್ದವನ್ನು ಇಂಗ್ಲಿಷ್ ಭಾಷೆಯಲ್ಲಿ ರಾಜಕಾರಣದಲ್ಲಿ ಉಪಯೋಗಿಸುವ Whip ಎಂಬ ಅಧಿಕಾರವನ್ನು ಸೂಚಿಸಲು ಕನ್ನಡದಲ್ಲಿ ಅನುವಾದ ಮಾಡಿಕೊಂಡಿದ್ದಾರೆ. Whip ಎಂದರೆ ರಾಜಕೀಯ ಪಕ್ಷದಲ್ಲಿ ಶಿಸ್ತನ್ನು ಕಾಪಾಡುವುದಕ್ಕಾಗಿ ನೇಮಕಗೊಂಡ ಅಧಿಕಾರಿ ಎಂದರ್ಥ. ಅವನು ಸಮಯ ಬಂದಾಗ ರಾಜಕೀಯ ಪಕ್ಷದ ಎಲ್ಲ ಸದಸ್ಯರೂ ಸದನದಲ್ಲಿ ಹಾಜರಿರುವಂತೆ ನೋಡಿಕೊಳ್ಳಬೇಕು.

Whip ಶಬ್ದಕ್ಕೆ ಚಾವಟಿ ಎಂಬ ಅರ್ಥವೂ ಇದೆ. ಕುದುರೆಗಾಡಿಯನ್ನು ನಡೆಸುವವನು, ಕುದುರೆಯನ್ನು ಓಡಿಸುವ ಚಾವಟಿಯೂ ಆಗಬಹುದು. ಸಂಸ್ಕೃತದಲ್ಲಿಯೂ ಆ ಅರ್ಥವೇ ಇದೆ. ಚೈತನ್ಯವನ್ನುಂಟುಮಾಡುವ ಶಕ್ತಿಯುಳ್ಳವನು ಎಂದರ್ಥ. ಈ ಕಾರಣದಿಂದ ಆ ಶಬ್ದವನ್ನು ಅರ್ಥವತ್ತಾಗಿ ಆರಿಸಿದ್ದಾರೆ. ಅದು ರಾಜಕೀಯವಾಗಿಯೂ ಅರ್ಥವತ್ತಾಗಿದೆ.

ಬುರಿಡಾನ್‌ನ ಕತ್ತೆ ಅನಿರ್ಣೀತ; ಬುರ್ನಾಸ್ ಕತ್ತೆ ಅಭಿಜಾತ!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಭಿಜಾತ ಎಂಬ ಪದವನ್ನು ನಾವು ಸಾಮಾನ್ಯವಾಗಿ ಕಲಾವಿದರ ಅಥವಾ ವಿಶೇಷ ಪ್ರತಿಭೆಯುಳ್ಳವರ ವ್ಯಕ್ತಿಚಿತ್ರಗಳಲ್ಲಿ ಗಮನಿಸುತ್ತೇವೆ. ಉದಾಹರಣೆಗೆ, 'ಕನ್ನಡ ಚಿತ್ರರಂಗ ಕಂಡ ಅನನ್ಯ ಹಾಸ್ಯನಟ ನರಸಿಂಹರಾಜು ಒಬ್ಬ ಅಭಿಜಾತ ಕಲಾವಿದರಾಗಿದ್ದರು', 'ಬರಹಗಾರ ಜಯಂತ ಕಾಯ್ಕಿಣಿಯವರದು ಅಭಿಜಾತ ಪ್ರತಿಭೆ, ತಂದೆಯೇ ಅವರಿಗೆ ಆದರ್ಶಪ್ರಾಯ', 'ಮಹಾತ್ಮರೆನಿಸುವವರಿಗೆ ಕೆಲವು ಅಭಿಜಾತ ಗುಣಗಳಿರುತ್ತವೆ...' ಇತ್ಯಾದಿ. ಅಭಿಜಾತ ಅಂದರೆ ಜನ್ಮದಾರಭ್ಯ ಅಥವಾ ಹುಟ್ಟಿದಾಗಿನಿಂದಲೂ ಎಂದರ್ಥ. ಇನ್ನೂ ಹಿಂದಕ್ಕೆ ಹೋಗಿ ಆಗರ್ಭ ಅಂದರೆ ಗರ್ಭದಲ್ಲಿರುವಾಗಿಂದಲೂ ಎಂದು ಕೂಡ ಬಳಸುವುದಿದೆ, ಹೆಚ್ಚಾಗಿ ಶ್ರೀಮಂತಿಕೆಗೆ. ಅದಿಲ್ಲಿ ಬೇಡ, ಅಭಿಜಾತ ಮಾತ್ರ ಸಾಕು. ಅಭಿಜಾತ ಪದಕ್ಕೆ ಸಮಾನವಾಗಿ ಅಚ್ಚಕನ್ನಡದ 'ಹುಟ್ಟಾ' ಸಹ ಬಳಸುವುದುಂಟು. ಉದಾಹರಣೆಗೆ, 'ರಾಜಕಾರಣಿಗಳೆಲ್ಲ ಹುಟ್ಟಾ ಭ್ರಷ್ಟರು', 'ಮುಖೇಶ್ ಅಂಬಾನಿಯೇನೂ ಹುಟ್ಟಾ ಶ್ರೀಮಂತರಲ್ಲ; ಯೆಮೆನ್ ದೇಶದಲ್ಲಿ ಪೆಟ್ರೋಲ್‌ಬಂಕ್ ಕಾರ್ಮಿಕರಾಗಿದ್ದ ಧೀರೂಭಾಯಿ ಅಂಬಾನಿಯ ಮಗನಾಗಿ ಆತ ಬೆಳೆದ ಕಥೆ ರೋಚಕ!', 'ವರ್ಜಿನ್ ಸಮೂಹ ಸಂಸ್ಥೆಯ ರಿಚರ್ಡ್ ಬ್ರಾನ್ಸನ್ ಹುಟ್ಟಾ ಪರಮಸಾಹಸಿ...', 'ಮನೆಮಾತು ಮಲಯಾಳಂ ಆದರೂ ಕನ್ನಡದಲ್ಲಿ ವಕ್ರಾರ್ಥ, ವ್ಯಂಗ್ಯಾರ್ಥ ಸೃಷ್ಟಿಸಿ ಹುಟ್ಟಾ ಕನ್ನಡಿಗರನ್ನು ಮೀರಿಸಿದವರು ನಾ.ಕಸ್ತೂರಿ' ಇತ್ಯಾದಿ. ಇಲ್ಲಿ ಇನ್ನೊಂದು ಸೂಕ್ಷ್ಮವನ್ನೂ ಗಮನಿಸಬೇಕು. ಸಂಸ್ಕೃತದ 'ಅಭಿಜಾತ'ವನ್ನು ಕಲೆ, ಪ್ರತಿಭೆಗಳ ಸುಸಂಸ್ಕೃತ ಶ್ರೇಷ್ಠತೆಯ ಸಂದರ್ಭಗಳಿಗೆ ಮಾತ್ರ ಹೆಚ್ಚಾಗಿ ಬಳಸುತ್ತೇವೆ. ಕನ್ನಡದ 'ಹುಟ್ಟಾ' ಆದರೋ ಒಳ್ಳೆಯದಕ್ಕೆ ಮಾತ್ರವಲ್ಲ ಕಚಡಾ ಕ್ವಾಲಿಟಿಗಳಿಗೂ ಹೊಂದುತ್ತದೆ. 'ಆತ ಹುಟ್ಟಾ ಕಂಜೂಸಿ, ಆಕೆ ಹುಟ್ಟಾ ಜಗಳಗಂಟಿ, ಅವರು ಹುಟ್ಟಾ ದಗಲ್ಬಾಜಿ ಸ್ವಭಾವದವರು...' ಎಂದು ಮುಂತಾಗಿ.

ಅದಿರಲಿ, ಇಂದಿನ ಶೀರ್ಷಿಕೆಯಲ್ಲಿರುವ ಅಭಿಜಾತ ಕತ್ತೆಯ ಕತೆ ಏನು? ಕತ್ತೆಯಂಥ ಕತ್ತೆಗೆ ಅಭಿಜಾತ ಎಂಬ ಸುಸಂಸ್ಕೃತ ವಿಶೇಷಣದ ಗೌರವ ಬೇಕೇ? ಅದನ್ನು ಆಮೇಲೆ ನೋಡೋಣ. ಅಭಿಜಾತ ಕತ್ತೆ ಎನ್ನುವುದು ನಿಮಗೆ ಸರಿಹೋಗುವುದಿಲ್ಲವಾದರೆ ಹುಟ್ಟಾ ಕತ್ತೆ ಎಂದೇ ಹೇಳೋಣ. ಈ ಒಂದು ಹೊಸ ವಿಚಾರ ನನ್ನ ತಲೆಯೊಳಗೆ ಮೊನ್ನೆಯಷ್ಟೇ ಎಂಟ್ರಿ ಪಡೆದದ್ದು. ಅದೇನಾಯ್ತೆಂದರೆ, ಕಳೆದ ವಾರ 'ತಿಳಿರುತೋರಣ'ದಲ್ಲಿ ವಿಜಯಭಾಸ್ಕರ್ ಸಂಗೀತ ನಿರ್ದೇಶನದ 56 ಚಿತ್ರಗೀತೆಗಳನ್ನು ಆಯ್ದು ಅಂತ್ಯಾಕ್ಷರಿಯಂತೆ ಪೋಣಿಸಿದ್ದೆನಷ್ಟೆ? ಅಂಕಣದ ನಿಯತ ಓದುಗ ಮತ್ತು ನನ್ನೊಬ್ಬ ಹಿರಿಯ ಹಿತೈಷಿ, ಮೈಸೂರಿನ ರಾಘವೇಂದ್ರ ಭಟ್ಟರು ಒಂದು ಚಿಕ್ಕ-ಚೊಕ್ಕ ಪ್ರತಿಕ್ರಿಯೆ ಬರೆದರು, ಹೀಗೆ: 'ಇಂದಿನ ಬರಹವು ಚಿತ್ರಗೀತೆಗಳ ರಸಿಕರಿಗೆ ಇಷ್ಟವಾಗುವಂತಿದ್ದು ನಾನಂತೂ ಇದರಲ್ಲಿ ಬುರ್ನಾಸು! ಇಂತಿ ನಮಸ್ಕಾರ'. ರಾಘವೇಂದ್ರ ಭಟ್ಟರಿಂದ ಹೆಚ್ಚೂಕಡಿಮೆ ಪ್ರತಿವಾರವೂ ಪ್ರತಿಕ್ರಿಯೆಯ ಮಿಂಚಂಚೆ ಬಂದೇಬರುತ್ತದೆ. ಅವರಿಗೆ ಅನಿಸಿದ್ದನ್ನು ಪ್ರಾಮಾಣಿಕವಾಗಿ ಬರೆದು ತಿಳಿಸುತ್ತಾರೆ. ಯಾವುದೇ ತರಹದ ಕೃತಕತೆ ಇರುವುದಿಲ್ಲ. ಎಲ್ಲ ಸಹಜ-ಸುಂದರ. ಈ ಪ್ರತಿಕ್ರಿಯೆ ಯಾದರೂ ಅಷ್ಟೇ. ಆದರೆ ಅದರಲ್ಲಿನ ಒಂದು ನಿರ್ದಿಷ್ಟ ಪದಬಳಕೆ ನನ್ನ ಗಮನವನ್ನು ವಿಶೇಷವಾಗಿ ಸೆಳೆಯಿತು. ಅವರಿಗೆ ಮಾರೋಲೆ ಬರೆಯುವಂತೆ ನನ್ನನ್ನು ಪ್ರೇರಿಸಿತು. 'ನಮಸ್ಕಾರ ಸರ್! ನನಗೆ ಖುಷಿ ಮತ್ತು ಆಶ್ಚರ್ಯ ತಂದಿದ್ದು ನೀವು ಬಳಸಿದ 'ಬುರ್ನಾಸು' ಪದ. ಆಶ್ಚರ್ಯವೇಕೆಂದರೆ ಅದು ಹೆಚ್ಚಾಗಿ ದಕ್ಷಿಣಕನ್ನಡದಲ್ಲಿ ತುಳು ಮಾತನಾಡುವವರ ಬಳಕೆಯಲ್ಲಿ ಇರುವ ಪದ, ನಿಮಗೆ ಹೇಗೆ ಸಿಕ್ಕಿತು ಅಂತ ನನಗೀಗ ಕುತೂಹಲ!' ಎಂದು ಬರೆದೆ.

ಅದು ನಿಜ ಕೂಡ. ದಕ್ಷಿಣಕನ್ನಡ-ಉಡುಪಿ ಜಿಲ್ಲೆಗಳಲ್ಲಿ 'ಬುರ್ನಾಸ್' ಪದ ವ್ಯಾಪಕವಾಗಿ ಬಳಕೆಯಲ್ಲಿದೆ. 'ಆಯೆ ಬಜೀ ಬುರ್ನಾಸ್ ಭಾಸ್ಕರೆ' ಎಂದು ತುಳು ಮಾತನಾಡುವವರಷ್ಟೇ ಅಲ್ಲ, 'ಅಸಲೆಂ ಬುರ್ನಾಸ್ ಸಿನಿಮ್ ಕೊಣಾಕ್, ಕಿತ್ಯಾಕ್ ಜಾಯ್ ಆಸ್‌ಲ್ಲೆಂ?' ಎಂದು ಕೊಂಕಣಿ ಭಾಷೆಯವರೂ ಬಳಸುತ್ತಾರೆ. ಕುಂದಗನ್ನಡದವರೂ, ಕೇರಳ ಗಡಿನಾಡಿನ ಬ್ಯಾರಿಗಳೂ ಬಳಸುತ್ತಾರೆ. ಅತ್ಯಲ್ಪಸಂಖ್ಯೆಯ ನಾವು ಚಿತ್ಪಾವನಿ ಭಾಷೆಯಲ್ಲೂ ಬಳಸುತ್ತೇವೆ. ಸ್ವಾರಸ್ಯವೆಂದರೆ ಈ ಭಾಷೆಗಳನ್ನು ಮಾತೃಭಾಷೆಯಾಗಿ ಹೊಂದಿರುವವರು ಕನ್ನಡದಲ್ಲಿ ವ್ಯವಹರಿಸುವಾಗಲೂ ಇದೇ ಪದವನ್ನು ಉಪಯೋಗಿಸುತ್ತಾರೆ. ಅಕ್ಷರಮಟ್ಟಿಗೆ ಇದು ಏಕರೂಪದಲ್ಲಿ ಸರ್ವವ್ಯಾಪಿಯಾಗಿದೆ. ಬುರ್ನಾಸ್ ಎಂದರೆ ಪ್ರಯೋಜನವಿಲ್ಲದ್ದು, ಉತ್ತಮ ಗುಣಮಟ್ಟವಿಲ್ಲದ್ದು, ಕಳಪೆ ದರ್ಜೆಯದು, ಹೇಳಿಕೊಳ್ಳುವಂಥ ವಿಶೇಷತೆ ಏನೂ ಇಲ್ಲದ್ದು ಅಂತ ಅರ್ಥ. 'ಈಗಿನ ಸಿನಿಮಾ ಹಾಡುಗಳಲ್ಲಿ ಹೆಚ್ಚಿನವೆಲ್ಲ ಬುರ್ನಾಸ್', 'ವಿಮಾನಗಳಲ್ಲಿ ಊಟತಿಂಡಿ ಈಗೀಗ ಬುರ್ನಾಸ್ ಆಗಿದೆ...', 'ಬಿಗ್‌ಬಾಸ್ ಅಲ್ಲ ಅದರಲ್ಲಿರುವವರು (ಮತ್ತು ನೋಡುವವರೂ) ಎಲ್ಲ ಬುರ್ನಾಸ್'- ಎಂದು ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ನಾನು ಗಮನಿಸಿದಂತೆ ಕರಾವಳಿ ಜಿಲ್ಲೆಗಳನ್ನು ಬಿಟ್ಟರೆ ಬೇರೆಕಡೆಗಳಲ್ಲಿ ಈ ಪದ ಕಿವಿಗೆ ಬೀಳದು. ರಾಘವೇಂದ್ರ ಭಟ್ಟರು ಮೂಲತಃ ಶಿವಮೊಗ್ಗದವರು, ಈಗ ಮೈಸೂರಿನವರು, ಅವರಿಗೆಲ್ಲಿಂದ ಈ ಪದ ಸಿಕ್ಕಿತು ಮತ್ತು ನಿಸ್ಸಂಕೋಚವಾಗಿ ತಮ್ಮನ್ನೇ ಬುರ್ನಾಸ್ ಎನ್ನುವಂತೆ ಮಾಡಿತು ಎಂದು ನನಗೆ ಆಶ್ಚರ್ಯ. ಅಷ್ಟುಹೊತ್ತಿಗೆ ಅವರಿಂದ ಮತ್ತೆ ಮಿಂಚಂಚೆ ಬಂತು: 'ಆತ್ಮೀಯ ಶ್ರೀವತ್ಸರೇ, ಈ ಅಮೂಲ್ಯ ಪದದ ವ್ಯುತ್ಪತ್ತಿ ಒಬ್ಬರು ನುಡಿಜಾಣರಿಂದ ಕೇಳಿದ್ದೆ. ಅದು Born ass ಅಂತೆ! ಹುಟ್ಟಾ ಕತ್ತೆ! ಹೇಗಿದೆ ಗಮ್ಮತ್ತು! ನಮಸ್ಕಾರ'.



ಆಹಾ! ಈಗ ತಿಳಿಯಿತು ಬುರ್ನಾಸ್ ಅಂದರೆ Born ass! ಸಿಯೆಟ್ ಟೈರುಗಳ ಜಾಹೀರಾತಿನಲ್ಲಿ Born tough ಅಂತ ಇದ್ದಹಾಗೆ. ಅದಾದರೋ ಸಿಯೆಟ್ ಟೈರಿನ ಹಿರಿಮೆ. ಇಲ್ಲಿ ಬುರ್ನಾಸ್ ಅಂದರೆ ಕತ್ತೆಯನ್ನು ಹೀನಾಯವಾಗಿ ಕಾಣುವುದು ಮತ್ತು ಮೂದಲಿಸುವುದರ ಇನ್ನೊಂದು ರೂಪ. ಅಂದಹಾಗೆ, ಕತ್ತೆಯ ಬಗ್ಗೆ ಅಷ್ಟೊಂದು ತಾತ್ಸಾರ, ಅನಾದರಕ್ಕೆ ಕಾರಣ ಏನಿರಬಹುದು? ಕತ್ತೆಗೆ ತಿಪ್ಪೆಯೇ ತವರುಮನೆ, ಕತ್ತೆ ಬಲ್ಲುದೇ ಬತ್ತದ ಸುಗ್ಗಿಯ, ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ, ಕತ್ತೆಗೆ ಏಕೆ ಕಾಲುಕಡಗ, ಕತ್ತೆಯ ಮೊಲೆಯಲ್ಲಿ ಖಂಡುಗ ಹಾಲಿದ್ದರೇನು, ಕಾರ್ಯವಾಸಿ ಕತ್ತೆಕಾಲು ಹಿಡಿ... ಮುಂತಾದ ಗಾದೆಮಾತುಗಳನ್ನೇ ಗಮನಿಸಿ. ಕತ್ತೆ ಎಂದರೆ ಬುರ್ನಾಸ್ ಎಂದೇ ಭಾವನೆ. 'ಉಷ್ಟ್ರಾಣಾಂ ವಿವಾಹೇಷು ಗೀತಂ ಗಾಯಂತಿ ಗರ್ದಭಾಃ। ಪರಸ್ಪರಂ ಪ್ರಶಂಸಂತಿ ಅಹೋ ರೂಪಮ್ ಅಹೋ ಧ್ವನಿಃ' (ಒಂಟೆಗಳ ಮದುವೆಯಲ್ಲಿ ಕತ್ತೆಗಳ ಸಂಗೀತಕಛೇರಿ. ಪರಸ್ಪರ ಹೊಗಳುತ್ತಿವೆ, ಏನು ರೂಪ ಏನು ಧ್ವನಿ!) ಎಂಬಂಥ ಸಂಸ್ಕೃತ ಸುಭಾಷಿತಗಳಲ್ಲೂ ಕತ್ತೆಯೆಂದರೆ ನಾಲಾಯಕ್. 'ಘಟಂ ಭಿಂದ್ಯಾತ್ಪಟಂ ಛಿಂದ್ಯಾತ್ಕುರ್ಯಾದ್ರಾಸಭರೋಹಣಮ್। ಯೇನ ಕೇನ ಪ್ರಕಾರೇಣ ಪ್ರಸಿದ್ಧಃ ಪುರುಷೋ ಭವೇತ್॥' ಎಂಬ ಮತ್ತೊಂದು ಸುಪ್ರಸಿದ್ಧ ಸುಭಾಷಿತದಲ್ಲೂ, ಕತ್ತೆಯ ಮೇಲೆ ಸವಾರಿ ಮಾಡುವುದೆಂದರೆ ತುಚ್ಛ, ತಮಾಷೆ ಎಂಬ ಚಿತ್ರಣ. ಇಸ್ಪೀಟ್ ಆಟದ ಕತ್ತೆಯಂತೂ ಇಸ್ಪೀಟ್ ಆಡಿದವರಿಗೆಲ್ಲ ಗೊತ್ತಿದೆ. ವಾಟಾಳ್ ನಾಗರಾಜ್ ಸಹ ಕತ್ತೆಗಳ ಮದುವೆ-ಮೆರವಣಿಗೆ ಮಾಡಿಸಿಯಾರು; ಉದ್ದೇಶ ವಿಡಂಬನೆಯೇ.

ಕತ್ತೆಯ ಬಗೆಗಿನ ಪರಿಹಾಸ್ಯಕ್ಕೆ ನನ್ನ ಸ್ನೇಹಿತ ಅರವಿಂದ ಸಿಗದಾಳು ಅವರ ಒಂದು ತಮಾಷೆ ಅಬ್ಸರ್ವೇಶನ್ನನ್ನೂ ಸೇರಿಸಬಹುದು. ಅದೇನೆಂದರೆ, ಹೆಂಗಸರ ಹೆಸರಿನ ಕೊನೆಯಕ್ಷರ 'ಕಾ' ಇದ್ದರೆ ಒಂದು ಸಂಭವನೀಯ ಆಭಾಸ. ಚಂದ್ರಿಕಾ, ಭೂಮಿಕಾ, ಮಲ್ಲಿಕಾ, ಮೋನಿಕಾ, ರಾಧಿಕಾ, ರೇಣುಕಾ ಇತ್ಯಾದಿ ಕಾ-ಕಾರಾಂತ ಹೆಸರುಗಳನ್ನು ಗಮನಿಸಿ. ಇಂಥ ಹೆಸರುಳ್ಳವರನ್ನು ಅವರ ಅಣ್ಣ-ತಮ್ಮಂದಿರ ಮಕ್ಕಳು ಹೇಗೆ ಕರೆಯುತ್ತಾರೆ? ಚಂದ್ರಿಕಾ ಅತ್ತೆ, ಭೂಮಿಕಾ ಅತ್ತೆ, ರೇಣುಕಾ ಅತ್ತೆ ಅಂತೆಲ್ಲ ಬಿಡಿಸಿ ಕರೆಯುವಷ್ಟು ವ್ಯವಧಾನ ಮಕ್ಕಳಿಗಿರುತ್ತದೆಯೇ? ಅವರು ಲೋಪಸಂಧಿ ಬಳಸಿಕೊಂಡು ಸುಲಭಮಾರ್ಗ ಹಿಡಿಯುತ್ತಾರೆ. ಚಂದ್ರಿಕತ್ತೆ, ಭೂಮಿಕತ್ತೆ, ಮಲ್ಲಿಕತ್ತೆ, ರೇಣುಕತ್ತೆ, ರಾಧಿಕತ್ತೆ... ಅಂತನೇ ಪ್ರೀತಿಯಿಂದ ಕರೆಯುತ್ತಾರೆ. ಪಾಪ ಆ ಹೆಂಗಳೆಯರೆಲ್ಲ ಅಭಿಜಾತ ಕತ್ತೆಗಳಾಗಿರದಿದ್ದರೂ ಕತ್ತೆ ಎಂದು ಕರೆಸಿಕೊಳ್ಳಬೇಕಾದ ಪರಿಸ್ಥಿತಿ! ಕಾ-ಕಾರಾಂತ ಹೆಸರುಗಳಷ್ಟೇ ಅಲ್ಲ, ಕಿ-ಕಾರಾಂತ ಜಾನಕಿ, ದೇವಕಿಗಳದೂ ಇದೇ ಅವಸ್ಥೆ. ಜಾನಕಿ ಅತ್ತೆ, ದೇವಕಿ ಅತ್ತೆ.... ಊಹುಂ. ಜಾನಕತ್ತೆ, ದೇವಕತ್ತೆಯೇ ಬೆಸ್ಟ್!

ಹಾಗಂತ, ಕತ್ತೆಯೆಂದರೆ ಕೀಳು ಎಂದೇನೂ ಇಲ್ಲ. ಕತ್ತೆಯು ಅಭಿಮಾನದಿಂದ ಉಬ್ಬಬಹುದಾದ, ಹಿರಿಮೆಯಿಂದ ಹಿಗ್ಗಬಹುದಾದ ಕೆಲವು ಸಂಗತಿಗಳೂ ಇವೆ. ನಮಗೆ ಪ್ರಾಥಮಿಕ ಶಾಲೆಯ ಪಠ್ಯಪುಸ್ತಕದಲ್ಲಿದ್ದ 'ಸಂತೆಗೆ ಹೋದನು ಭೀಮಣ್ಣ...' ಪದ್ಯವನ್ನು ನೆನಪಿಸಿಕೊಳ್ಳಬೇಕು. ಅದು, ಕತ್ತೆ ತನ್ನ ಜಾಣತನ ಪ್ರದರ್ಶಿಸಿ ಕುದುರೆಯನ್ನು ಬೇಸ್ತುಬೀಳಿಸುವ ಪ್ರಸಂಗದ ಈಸೋಪನ ಕಥೆ. ಅದನ್ನಾಧರಿಸಿ ಕಯ್ಯಾರ ಕಿಂಞಣ್ಣ ರೈಯವರು ಬರೆದ ಅತ್ಯಂತ ಜನಪ್ರಿಯ ನೀತಿಪದ್ಯ. 'ನೀ ನನಗಿದ್ದರೆ ನಾ ನಿನಗೆ ನೆನಪಿರಲೀ ನುಡಿ ನಮ್ಮೊಳಗೆ' ಎಂಬ ಸಾರ್ವಕಾಲಿಕ ನೀತಿಮಾತು. ಈಸೋಪನು ಆ ಕಥೆಯನ್ನು ಹೆಣೆದಿದ್ದೇಕೆ ಎಂಬುದಕ್ಕೂ ಒಂದು ಪ್ರತೀತಿ ಇದೆ. ಒಂದು ಕಥೆಯಲ್ಲಾದರೂ ತನ್ನ ಜಾಣತನವನ್ನು ಕುರಿತು ಎರಡು ಒಳ್ಳೆಯ ಮಾತನ್ನು ಬರೆಯಬೇಕೆಂದು ಕತ್ತೆ ಒಮ್ಮೆ ಈಸೋಪನನ್ನು ಅಂಗಲಾಚಿತಂತೆ. ಹಾಗೆ ಮಾಡಿದರೆ ಜನ ತನ್ನನ್ನೇ ಕತ್ತೆಯೆಂದು ಹೀಗಳೆಯುತ್ತಾರೆಂದು ಈಸೋಪ ಕತ್ತೆಗೆ ಹೇಳಿದನಂತೆ. ನಿರಾಶೆಗೊಂಡ ಕತ್ತೆ ಬೇಸರದಿಂದಲೇ ಅಲ್ಲಿಂದ ಹೊರಟುಹೋಯಿತಂತೆ. ಆಮೇಲೆ ಕತ್ತೆಯ ಬಗ್ಗೆ ಈಸೋಪನಿಗೆ ಕನಿಕರ ಬಂದು ಆ ಸುಂದರ ಕಥೆಯನ್ನು ಹೆಣೆದನಂತೆ. ಅದನ್ನು ಕಥೆಗಿಂತಲೂ ಸುಂದರ ಪದ್ಯವಾಗಿಸಿದರು ನಮ್ಮ ಕಿಂಞಣ್ಣ ರೈಗಳು. ಅಂತೆಯೇ ಪ್ರಾಚೀನ ಕಾಲದಿಂದಲೂ ಅಗಸರೊಂದಿಗೆ ಅವಿನಾಭಾವ ಸಂಬಂಧವಿರುವ ಕತ್ತೆ, 'ಪ್ರಪಂಚದ ಯಾವ ಧರ್ಮಗುರುವೂ ತೊಳೆಯಲಾರದಷ್ಟು ಕೊಳೆಯನ್ನು ಅಗಸ ತೊಳೆದಿರುತ್ತಾನೆ' ಎಂಬ ಗಿರೀಶ ಕಾರ್ನಾಡರ ತುಘಲಕ್ ನಾಟಕದ ಡೈಲಾಗ್‌ನಲ್ಲಿ ಅಗಸನ ಶ್ರೇಷ್ಠತೆಯ ಸ್ವಲ್ಪ ಪಾಲನ್ನು ಪಡೆಯಲಿಕ್ಕೆ ಅರ್ಹತೆಯುಳ್ಳದ್ದೇ. ಕತ್ತೆಯ ಇನ್ನೊಂದು ಅಗ್ಗಳಿಕೆಯೆಂದರೆ ಭಾರತೀಯ ಕಾಲಮಾನ ಪದ್ಧತಿಯಲ್ಲಿ, ಸಂವತ್ಸರಗಳ ನಾಮಧೇಯದಲ್ಲಿ ಬರುವ ಏಕೈಕ ಪ್ರಾಣಿ ಕತ್ತೆ! ಹೌದು, ಸಂವತ್ಸರ ಚಕ್ರದ 60 ಸಂವತ್ಸರಗಳಲ್ಲಿ 25ನೆಯದರ ಹೆಸರು 'ಖರ'. ಸಂಸ್ಕೃತದಲ್ಲಿ ಖರ ಎಂದರೆ ಕತ್ತೆ. 'ಚಕ್ರೀವಂತಸ್ತು ಬಾಲೇಯಾ ರಾಸಭಾ ಗರ್ದಭಾಃ ಖರಾಃ' ಎಂದು ಅಮರವಾಕ್ಯ. ಚಕ್ರೀವತ್, ಬಾಲೇಯ, ರಾಸಭ, ಗರ್ದಭ, ಮತ್ತು ಖರ- ಇವೆಲ್ಲವೂ ಕತ್ತೆಯ ಪರ್ಯಾಯನಾಮಗಳು.

ಅದೆಲ್ಲಕ್ಕಿಂತ ಹೆಚ್ಚಾಗಿ ಕತ್ತೆಯ ಹಿರಿಮೆ ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬಂದಿರುವುದು ಅದರ ಹಾಲಿನ ಮಹತ್ತ್ವದಿಂದ. ಕತ್ತೆಯ ಮೊಲೆಯಲ್ಲಿ ಖಂಡುಗ ಹಾಲಿದ್ದರೇನು? ಎಂಬ ಗಾದೆಮಾತನ್ನು ಸುಳ್ಳಾಗಿಸಿದ ಸಂಶೋಧನೆಗಳಿಂದ. ಕತ್ತೆಯ ಹಾಲು ಆರೋಗ್ಯಕ್ಕೆ ಒಳ್ಳೆಯದಂತೆ. ಹಸುವಿನ ಹಾಲಿಗಿಂತಲೂ ಹೆಚ್ಚು ಜೀವಸತ್ತ್ವಗಳು, ಕೊಬ್ಬಿನ ಪ್ರಮಾಣ ಕಡಿಮೆ, ಚಿಕ್ಕ ಮಕ್ಕಳ ದೇಹದ ಜೀರ್ಣಾಂಗವ್ಯವಸ್ಥೆಗೆ ಸರಿಯಾಗಿ ಹೊಂದಿಕೊಳ್ಳುತ್ತದೆ ಮತ್ತು ಬಹಳ ಬೇಗನೆ ಜೀರ್ಣವಾಗುತ್ತದೆ, ರೋಗ ನಿರೋಧಕ ಗುಣವೂ ಹೆಚ್ಚಿರುತ್ತದೆ... ಎಂದು ಕತ್ತೆ ಹಾಲು ತಜ್ಞರ ಅಂಬೋಣ. ಇದನ್ನು ನಾವು ಬರೀ ಬುರ್ನಾಸ್ ಬಕ್ವಾಸ್ ಎಂದು ಹೀಗಳೆಯಬೇಕಿಲ್ಲ. ಪಿಎಚ್‌ಡಿ ಪದವೀಧರ, ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿಯಲ್ಲಿರುವ, ತುಮಕೂರು ಜಿಲ್ಲೆಯ ಮಧುಗಿರಿಯ ರಂಗೇಗೌಡರು ಪ್ರವೃತ್ತಿಯಾಗಿ ಕತ್ತೆ ಸಾಕಾಣಿಕೆ ಉದ್ಯಮ ನಡೆಸುತ್ತಿರುವ ಬಗ್ಗೆ ವಾಟ್ಸ್ಯಾಪ್‌ನಲ್ಲಿ ಇತ್ತೀಚೆಗೆ ಒಂದು ವಿಡಿಯೊ ಹರಿದಾಡಿತ್ತು. ಬೆಂಗಳೂರಿನಲ್ಲಿ ಐಟಿ ಉದ್ಯೋಗಿಯಾಗಿದ್ದ ಶ್ರೀನಿವಾಸ ಗೌಡ ಎಂಬುವವರು ಕೊರೋನಾ ಕಾಲದಲ್ಲಿ ಉದ್ಯೋಗಕ್ಕೆ ಕುತ್ತು ಬಂದಾಗ ಮಂಗಳೂರಿನಲ್ಲಿ ಕತ್ತೆ ಫಾರ್ಮ್ ಆರಂಭಿಸಿ ಈಗ ಅದನ್ನೇ ಕಸುಬನ್ನಾಗಿಸಿಕೊಂಡಿರುವ ಸುದ್ದಿಯೂ ಪತ್ರಿಕೆಗಳಲ್ಲಿ ಬಂದಿತ್ತು. ಅವರೆಲ್ಲ ಕತ್ತೆ ಹಾಲು ಮಾರಿ ಕಾಸು ಗಳಿಸುವ ದಾರಿ ಕಂಡುಕೊಂಡವರು. ಅವರಿಗಿಂತಲೂ ಸ್ಮಾರ್ಟ್ ಅಂದರೆ ಶತಮಾನಗಳ ಹಿಂದಿನ ಸುರಸುಂದರಿ ಕ್ಲಿಯೊಪಾತ್ರ. ಆಕೆ ದಿನವೂ ಕತ್ತೆಗಳ ಹಾಲಿನಿಂದಲೇ ಸ್ನಾನ ಮಾಡುತ್ತಿದ್ದಳಂತೆ. ಸುಮಾರು 700 ಕತ್ತೆಗಳ ಹಾಲು ಕ್ಲಿಯೊಪಾತ್ರಳ ಸ್ನಾನಕ್ಕೆಂದೇ ಸರಬರಾಜಾಗುತ್ತಿತ್ತಂತೆ. ಮನುಷ್ಯದೇಹಕ್ಕೆ ಕತ್ತೆಹಾಲು ಒಳ್ಳೆಯದೆಂದು ಹಿಪೊಕ್ರೇಟನ ಹಿತವಚನ. ಆತ ಹೇಳಿದ್ದು ದೇಹದ ಆರೋಗ್ಯ ದೃಷ್ಟಿಯಿಂದ. ಕ್ಲಿಯೊಪಾತ್ರ ಅದನ್ನು ಬಾಹ್ಯ ಸೌಂದರ್ಯಕ್ಕೆಂದು ಅರ್ಥಮಾಡಿಕೊಂಡಳು. ಅವಳ ಬ್ರೇನ್ ಹೇಗೋ ಗೊತ್ತಿಲ್ಲ, ಬ್ಯೂಟಿ ಅಂತೂ ಬುರ್ನಾಸ್ ಖಂಡಿತ ಅಲ್ಲ.

ಗ್ರೀಕ್ ರಾಣಿಯ ಉಲ್ಲೇಖದಂತೆಯೇ, ನಮ್ಮ ಭಾರತೀಯ ಪುರಾಣಗಳಲ್ಲಿ ಬರುವ ಕತ್ತೆಯ ಉಲ್ಲೇಖವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಅದು ಧೇನುಕಾಸುರನ ಕಥೆ. ವಿಷ್ಣುಪುರಾಣದಲ್ಲಿ, ಮಹಾಭಾರತ ಮತ್ತು ಭಾಗವತಗಳಲ್ಲೂ ಬರುತ್ತದೆ. ಧೇನುಕ ಒಬ್ಬ ರಾಕ್ಷಸ. ಕಂಸನ ಅನುಯಾಯಿ. ಬೃಂದಾವನ ಸಮೀಪದ ತಾಳವನದಲ್ಲಿ ಕತ್ತೆಯ ರೂಪವನ್ನು ಧರಿಸಿ ತನ್ನ ಪರಿವಾರದೊಂದಿಗೆ ವಾಸಮಾಡುತ್ತಿದ್ದನಂತೆ. ಅಲ್ಲಿಗೆ ಬಂದವರನ್ನೆಲ್ಲ ಕೊಂದು ತಿನ್ನುತ್ತಿದ್ದನಂತೆ. ಒಂದು ದಿನ ಗೊಲ್ಲ ಹುಡುಗರು ತಾಳೆಯ ಹಣ್ಣುಗಳನ್ನು ತಿನ್ನಬೇಕೆಂದು ಆಸೆಪಟ್ಟರು. ಶ್ರೀಕೃಷ್ಣ-ಬಲರಾಮರನ್ನೂ ಕೂಡಿಕೊಂಡು ಅವರೆಲ್ಲ ತಾಳವನಕ್ಕೆ ಹೋದರು. ಬಲರಾಮನು ತಾಳೆಮರವನ್ನು ಹಿಡಿದು ಅಲ್ಲಾಡಿಸಲಾಗಿ ಅನೇಕ ಫಲಗಳು ಮರದಿಂದ ಉದುರಿಬಿದ್ದವು. ಗೊಲ್ಲರು ಅವುಗಳನ್ನು ಆಯ್ದುಕೊಳ್ಳುತ್ತಿದ್ದಾಗ ಕತ್ತೆಯ ರೂಪದ ಧೇನುಕಾಸುರನು ಬಂದು ಬಲರಾಮನ ಮೇಲೆ ಬಿದ್ದನು. ಬಲರಾಮನು ಆ ಕತ್ತೆಯ ಹಿಂಗಾಲುಗಳನ್ನು ಗರಗರಗನೆ ತಿರುಗಿಸಿ ತಾಳೆಯ ಮರಕ್ಕೆ ಹೊಡೆದು ಕೊಂದನು. ಇದು ಕಥೆಯ ಸಾರಾಂಶ. ಕಲಿಯುಗದಲ್ಲೂ ಕತ್ತೆಗಳೇಕೆ ಕೋಪ ಬಂದರೆ ಹಿಂಗಾಲುಗಳಿಂದ ಒದೆಯುತ್ತವೆ ಎಂಬುದಕ್ಕೆ ಈ ಕಥೆಯಲ್ಲಿ ಉತ್ತರ ಸಿಗುತ್ತದೆ. ಹಿಂದಿನ ಜನ್ಮದಲ್ಲಿ ನಡೆದ ಅವಮಾನ ನೆನಪಾಗಿ ಅವುಗಳಿಗೆ ರೋಷ ಉಕ್ಕುತ್ತದೇನೋ. ಹೀಗಾಗಿ ಹಿಂಗಾಲುಗಳನ್ನೇ ಆಯುಧವನ್ನಾಗಿಸಿ ಹೋರಾಡುತ್ತವೆ.

ಸರಿ, ಲೇಖನದ ಮುಕ್ತಾಯ ಹಂತದಲ್ಲಿ ಅನಿರ್ಣೀತ ಕತ್ತೆಯ ವಿಚಾರಕ್ಕೆ ಬರುತ್ತೇನೆ. ಅನಿರ್ಣೀತ ಅಂದರೆ ನಿರ್ಣಯಿಸಲಾಗದ್ದು ಅಥವಾ ನಿರ್ಧಾರ ಮಾಡಲು ಅಶಕ್ಯವಾದದ್ದು. ನೀವು ಬಟ್ಟೆಯಂಗಡಿಯಲ್ಲಿ ಸೀರೆ ತಗೊಳ್ಳುವಾಗ ಹುಡುಕಿ ಹುಡುಕಿ ಎರಡನ್ನು ಶಾರ್ಟ್‌ಲಿಸ್ಟ್ ಮಾಡಿ ಅದರ ಪೈಕಿ ಯಾವುದು ಫೈನಲ್ ಎಂದು ನಿರ್ಧರಿಸಲಾಗದೆ ಎರಡನ್ನೂ ಬಿಟ್ಟು ಬೇರೊಂದು ಅಂಗಡಿಯಲ್ಲಿ ನೋಡುವಾ ಎಂದು ಹೊರಬಂದದ್ದಿದೆಯೇ? ರೆಸ್ಟೋರೆಂಟ್‌ನಲ್ಲಿ ಸೌತ್ ಇಂಡಿಯನ್ ಊಟ ತಗೊಳ್ಳಲಾ ಅಥವಾ ನಾರ್ತ್ ಇಂಡಿಯನ್ ನಾನ್ ಗೋಬಿಮಟರ್ ತಗೊಳ್ಳಲಾ ಅಂತನ್ನೋ ಸಂದಿಗ್ಧಕ್ಕೆ ಸಿಲುಕಿದ್ದಿದೆಯೇ? ಉದ್ಯೋಗಕ್ಕೆ ಎರಡು ಕಂಪನಿಗಳಿಂದ ಆಫರ್ ಲೆಟರ್ ಬಂದಾಗ ಯಾವುದಕ್ಕೆ ಸೇರಲಿ ಎಂದು ತಲೆಕೆರೆದುಕೊಂಡದ್ದಿದೆಯೇ? ಒಟ್ಟಿನಲ್ಲಿ, ನಿರ್ಧಾರ ತೆಗೆದುಕೊಳ್ಳಲಾರದೆ ಒಂದರೆಕ್ಷಣವಾದರೂ ತೊಳಲಾಡಿದ್ದಿದೆಯೇ? ಹೌದು ಅಂತಾದರೆ ಆ ಕ್ಷಣದಲ್ಲೊಮ್ಮೆ ನೀವು ಬುರಿಡಾನ್‌ನ ಕತ್ತೆ ಆಗಿದ್ದೀರಿ ಎಂದೇ ಅರ್ಥ! ಬುರಿಡಾನ್‌ನ ಕತ್ತೆ (Buridan's Ass) ಎಂದರೆ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿನ ವಿರೋಧಾಭಾಸ. ಒಂದು ಕತ್ತೆ ಇರುತ್ತದೆ. ಅದಕ್ಕೆ ವಿಪರೀತ ಬಾಯಾರಿಕೆಯೂ ವಿಪರೀತ ಹಸಿವೆಯೂ ಆಗಿರುತ್ತದೆ. ಅದರ ಇಕ್ಕೆಲಗಳಲ್ಲಿ ಒಂದು ಬಕೆಟ್‌ನಲ್ಲಿ ನೀರು ಮತ್ತೊಂದು ಬಕೆಟ್‌ನಲ್ಲಿ ಬೈಹುಲ್ಲು ಇಡಲಾಗುತ್ತದೆ. ಯಾವ ಬಕೆಟ್‌ಗೆ ಮೊದಲು ಬಾಯಿ ಹಾಕಬೇಕು ಎಂದು ನಿರ್ಧರಿಸಲಾರದೆ ಕತ್ತೆ ಸುಮ್ಮನಾಗುತ್ತದೆ. ಅಷ್ಟೇ ಅಲ್ಲ ಹಾಗೇ ಉಪವಾಸವಿದ್ದು ಕೊನೆಗೆ ಸತ್ತೇ ಹೋಗುತ್ತದೆ! 14ನೆಯ ಶತಮಾನದಲ್ಲಿ ಬಾಳಿದ ಫ್ರೆಂಚ್ ತತ್ತ್ವಜ್ಞಾನಿ ಜೀನ್ ಬುರಿಡಾನ್ ಎಂಬಾತ ಈ ವಿರೋಧಾಭಾಸವನ್ನು ಮೊತ್ತಮೊದಲಿಗೆ ಸಾರ್ವಜನಿಕವಾಗಿ ಚರ್ಚಿಸಿದನು. ಸಾಕಷ್ಟು ಗೇಲಿಗೂ ಒಳಗಾದನು. ಅವನು ಪ್ರಯೋಗ ಮಾಡಿದ್ದು ತನ್ನ ಸಾಕುನಾಯಿಯ ಮೇಲೆ. ಆದರೆ ನಾಯಿಗಾದರೂ ಸ್ವಲ್ಪ ಸ್ಮಾರ್ಟ್‌ನೆಸ್ ಇರುತ್ತದೆ, ಎದುರಿಗೆ ಆಹಾರವಿದ್ದೂ ನಿರ್ಧರಿಸಲಾರದೆ ಉಪವಾಸದಿಂದ ಸತ್ತುಹೋಗಬೇಕಿದ್ದರೆ ಅದು ಕತ್ತೆಯಂಥ ದಡ್ಡ ಪ್ರಾಣಿಯೇ ಇರಬೇಕು ಎಂದು ಜನ ತಮಾಷೆ ಮಾಡಿದರು. ಆ ಪ್ರಯೋಗವನ್ನು 'ಬುರಿಡಾನ್‌ನ ಕತ್ತೆ' ಎಂದೇ ಗುರುತಿಸಿದರು. ನಿರ್ಧಾರ ಮಾಡಲಾಗದ, ಡಿಸಿಶನ್ ಮೇಕಿಂಗ್ ಕೆಪ್ಯಾಸಿಟಿ ಇಲ್ಲದ ವ್ಯಕ್ತಿಯನ್ನು 'ಬುರಿಡಾನ್‌ನ ಕತ್ತೆ' ಎಂದು ತಮಾಷೆ ಮಾಡುವುದು ರೂಢಿಯಾಯ್ತು. ಈಗಿನ್ನು ಇಲ್ಲಿ ಅಮೆರಿಕದ ಅಧ್ಯಕ್ಷೀಯ ಚುನಾವಣೆ. ರಿಪಬ್ಲಿಕನ್ ಪಾರ್ಟಿಯ ಹುರಿಯಾಳು ಹರಕುಬಾಯಿಯ ಡೊನಾಲ್ಡ್ ಟ್ರಂಪ್. ಪಕ್ಷದ ಚಿಹ್ನೆ ಆನೆ. ಡೆಮೊಕ್ರ್ಯಾಟಿಕ್ ಪಾರ್ಟಿಯ ಅಭ್ಯರ್ಥಿ ಕಮಲಾ ಹ್ಯಾರಿಸ್. ಅವರ ಚಿಹ್ನೆ ಕತ್ತೆ. ಕಮಲತ್ತೆ ಕತ್ತೆ ಎಂದರೆ ಕತ್ತೆ-ಲತ್ತೆ ಎರಡೂ ಬಂತು. ಅವರಿಬ್ಬರಿಗಿಂತ ದೊಡ್ಡ ಕತ್ತೆಗಳೆಂದರೆ 'ಯಾರು ಹಿತವರು ಎನಗೆ ಈ ಇಬ್ಬರೊಳಗೆ' ಎಂದು ನಿರ್ಧರಿಸಲಾಗದ, ಅಮೆರಿಕನ್ ಪ್ರಜೆಗಳೆಂಬ ಅನಿರ್ಣೀತ ಬುರಿಡಾನ್ ಕತ್ತೆಗಳು!

ದುಡಿಮೆಗೊಂದು ಕೈ, ದಾನಕ್ಕೊಂದು ಕೈ..

'ಭಾರತೀಯ ಉದ್ಯಮಗಳ ಪಿತಾಮಹ' ಮತ್ತು ಆಧುನಿಕ ಭಾರತೀಯ ಆರ್ಥಿಕತೆಯ ಪ್ರಮುಖ ನಿರ್ಮಾತೃಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟ ಜೆಆರ್‌ಡಿ ಟಾಟಾ ಅವರ ದೂರದೃಷ್ಟಿಯಿಂದಾಗಿ ಟಾಟಾ ಟ್ರಸ್ಟ್‌ಗಳು ಶತಮಾನದುದ್ದಕ್ಕೂ ರಾಷ್ಟ್ರಕ್ಕೆ ಮತ್ತು ಜನರಿಗೆ ಸಂಬಂಧಿಸಿದ ಸ್ವಾವಲಂಬಿ ಬೆಳವಣಿಗೆಗಳನ್ನು ಸಾಧಿಸಲು, ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ನಿರಂತರವಾಗಿ ಯತ್ನಿಸುತ್ತಾ ಬಂದಿವೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಟಾಟಾ ಸಾಮ್ರಾಜ್ಯದ ಮೂಲಪುರುಷ ಜೆಆರ್‌ಡಿ ಟಾಟಾ ಅವರ ಪ್ರಕಾರ, ಉದ್ಯಮಗಳನ್ನು ಅವುಗಳ ಮಾಲೀಕರ ಹಿತಾಸಕ್ತಿಗಳಿಗಾಗಿ ಮಾತ್ರವಲ್ಲದೆ, ಅವುಗಳ ಉದ್ಯೋಗಿಗಳ, ಗ್ರಾಹಕರ, ಸ್ಥಳೀಯ ಸಮುದಾಯದ ಮತ್ತು ಅಂತಿಮವಾಗಿ ಇಡೀ ದೇಶದ ಹಿತದೃಷ್ಟಿಯಿಂದ ಸಮಾನವಾಗಿ ನಿರ್ವಹಿಸಬೇಕು. ತನ್ನನ್ನು ನಂಬಿ ಹೂಡಿಕೆ ಮಾಡಿರುವ ಷೇರುದಾರರು, ಉದ್ಯೋಗಿಗಳು, ಗ್ರಾಹಕರು, ಮಾರಾಟಗಾರರು, ನಿಯಂತ್ರಕರು ಮತ್ತು ಸಮಾಜ ಸೇರಿದಂತೆ ಎಲ್ಲಾ ಸಹಭಾಗಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ನ್ಯಾಯಯುತ, ಪಾರದರ್ಶಕ ಮತ್ತು ನೈತಿಕ ನೆಲೆಯಲ್ಲಿ ವ್ಯಾಪಾರೋದ್ಯಮವನ್ನು ನಿರ್ವಹಿಸಬೇಕಿರುವುದು ಮತ್ತು ಜವಾಬ್ದಾರಿಯುತ ಕಾರ್ಪೊರೇಟ್ ಅಸ್ತಿತ್ವವಾಗಿ ಈ ನೆಲದ ಕಾನೂನುಗಳನ್ನು ಅಕ್ಷರಶಃ ಅನುಸರಿಸುವುದು ಯಾವುದೇ ಸಂಸ್ಥೆಯ ಮೂಲತತ್ವವಾಗಿರಬೇಕು ಎಂಬುದು ಅವರ ಸಿದ್ಧಾಂತವಾಗಿತ್ತು. ಹಾಗಾಗಿ, ಟಾಟಾ ಸಮೂಹದ ಎಲ್ಲಾ ಪೂರ್ಣಕಾಲಿಕ ಉದ್ಯೋಗಿಗಳು ಇಂದಿಗೂ ಈ ನೀತಿಸಂಹಿತೆಯನ್ನು ಅನುಸರಿಸಲು ಬದ್ಧರಾಗಿರುತ್ತಾರೆ. ಇದು ತಮ್ಮ ಸಮಗ್ರತೆ, ಜವಾಬ್ದಾರಿ, ಉತ್ಕೃಷ್ಟತೆ, ಪ್ರವರ್ತಕತ್ವ ಮತ್ತು ಏಕತೆಯ ಮೌಲ್ಯಗಳನ್ನು ಎತ್ತಿತೋರಿಸುತ್ತದೆ ಎಂಬುದು ಉದ್ಯೋಗಿಗಳ ಹೆಮ್ಮೆಯಾಗಿದೆ.

ಭಾರತದ ಔದ್ಯೋಗೀಕರಣದ ಮೂಲಬೇರಾಗಿದ್ದ ಟಾಟಾ ಉದ್ಯಮ ಸಾಮ್ರಾಜ್ಯವು ಮೊದಲಿನಿಂದಲೂ ಎರಡೂ ಕೈಗಳಿಂದ ಕೆಲಸ ಮಾಡುತ್ತಾ ಬಂದಿದೆ. ಮೊದಲನೆಯದು ದುಡಿಯುವ ಕೈ ಆದರೆ, ಎರಡನೆಯದು ನೀಡಲಿಕ್ಕಾಗೇ ಇರುವ ಕೈ. 165 ಬಿಲಿಯನ್ ಡಾಲರ್ ಮೌಲ್ಯದ, 'ಸಾಲ್ಟ್-ಟು-ಸಾಫ್ಟ್‌ವೇರ್'ವರೆಗೆ ವ್ಯಾಪ್ತಿ ಹೊಂದಿರುವ 'ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್' ದುಡಿಯುವ ಕೈ ಆದರೆ, ನೀಡುವ ಕೈ ಆಗಿ 'ಟಾಟಾ ಟ್ರಸ್ಟುಗಳು' ಕಾರ್ಯನಿರ್ವಹಿಸುತ್ತಾ ಇತರರಿಗೆ ಮಾದರಿಯಾಗಿವೆ. ಟಾಟಾ ಸಮೂಹ ಸಂಸ್ಥೆಗಳ ಪ್ರವರ್ತಕ ಅಥವಾ ಪ್ರಮುಖ ಹೂಡಿಕೆದಾರ ಕಂಪನಿಯಾಗಿ 'ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್' ಕೆಲಸ ಮಾಡುತ್ತದೆ. ಟಾಟಾ ಸಮೂಹದಿಂದ ಪ್ರವರ್ತಿತವಾದ ನೂರಾರು ಸಂಸ್ಥೆಗಳು ಈ 'ಟಾಟಾ ಸನ್ಸ್'ನ ಅಡಿಯಲ್ಲಿ ಬರುತ್ತವೆ. ಇದು ಭಾರತದಾದ್ಯಂತ ತನ್ನ ಭೂಹಿಡುವಳಿಗಳು, ಚಹಾ ಎಸ್ಟೇಟ್‌ಗಳು, ಉಕ್ಕಿನ ಸ್ಥಾವರಗಳು ಸೇರಿದಂತೆ ಟಾಟಾ ಸಮೂಹ ಸಂಸ್ಥೆಗಳಲ್ಲಿ ಹೆಚ್ಚಿನ ಷೇರುಗಳನ್ನು ಹೊಂದಿದೆ ಮತ್ತು ಲಾಭಾಂಶ ಹಾಗೂ ಬ್ರ್ಯಾಂಡ್ ರಾಯಲ್ಟಿ ಶುಲ್ಕಗಳ ಮೂಲಕ ಈ ಕಂಪನಿಗಳಿಂದ ತನ್ನ ಆದಾಯವನ್ನು ಪಡೆಯುತ್ತದೆ.

ಹೀಗೆ ವಿವಿಧ ಉದ್ದಿಮೆಗಳಿಂದ ಲಾಭಾಂಶದ ರೂಪದಲ್ಲಿ 'ಟಾಟಾ ಸನ್ಸ್'ಗೆ ಹರಿದುಬರುವ ಅಗಾಧ ಸಂಪತ್ತು, ಅದರ ಪ್ರವರ್ತಕರಾದ ಟಾಟಾ ಕುಟುಂಬದ ಸಂಪತ್ತು ಎನ್ನಬಹುದು. ಹಾಗಾಗಿ ಈ ಸಂಪತ್ತನ್ನು ಆ ಕುಟುಂಬವು ತನಗೆ ಬೇಕಾದಂತೆ ವಿನಿಯೋಗಿಸಬಹುದಾಗಿದೆ. ಉದಾಹರಣೆಗೆ, ದೇಶದ ಇನ್ನೊಂದು ಪ್ರತಿಷ್ಠಿತ ಔದ್ಯಮಿಕ ಕುಟುಂಬದವರಾದ ಅಂಬಾನಿಗಳು ತಮ್ಮ ಮಕ್ಕಳ ಮದುವೆಯಂಥ ಕೌಟುಂಬಿಕ ಸಮಾರಂಭಗಳು ಮತ್ತು ಐಷಾರಾಮಕ್ಕಾಗಿ ತಾವು ಗಳಿಸಿದ ಹಣದಲ್ಲಿ ಸಾವಿರಾರು ಕೋಟಿಗಳನ್ನು ಖರ್ಚುಮಾಡುವಂತೆಯೇ ಟಾಟಾದವರೂ ಮಾಡಬಹುದಾಗಿತ್ತು. ಆದರೆ, 'ಟಾಟಾ ಸನ್ಸ್'ಗೆ ಹರಿದುಬರುವ ಸಂಪತ್ತಿನ ವಿಲೇವಾರಿ ಹೇಗಾಗುತ್ತದೆ ಎಂಬುದು ತಿಳಿದರೆ ನಿಮಗಚ್ಚರಿಯಾಗಬಹುದು. ಈ ಸಂಪತ್ತಿನ ಹೆಚ್ಚುಕಡಿಮೆ ಶೇ.60ರಷ್ಟು ಭಾಗ ಲೋಕೋಪಕಾರಕ್ಕಾಗಿ ರಚಿಸಲ್ಪಟ್ಟ ಅವುಗಳದೇ ಆದ ವಿಶ್ವಸ್ಥ ಮಂಡಳಿಗಳಿಗೆ ಹೋದರೆ, ಉಳಿದ ಭಾಗವು ಹೊಸ ಉದ್ಯಮಗಳ ಖರೀದಿ ಅಥವಾ ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯಮಗಳ ಅಭಿವೃದ್ಧಿಯೆಡೆಗೆ ಹೋಗುತ್ತದೆ. ಟಾಟಾ ಮೋಟಾರ್ಸ್, ಟಾಟಾ ಸ್ಟೀಲ್ ಮತ್ತು ಐಟಿ ದೈತ್ಯ ಟಿಸಿಎಸ್‌ನಂಥ ಪ್ರಮುಖ ಸಂಸ್ಥೆಗಳನ್ನೊಳಗೊಂಡು 10 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿರುವ ಟಾಟಾ ಸನ್ಸ್‌ನ 2023-24ರ ಆದಾಯವು 165 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಇತ್ತು ಎಂದರೆ ಟಾಟಾ ಸಮೂಹದೊಳಗಿನ ಸಂಪತ್ತಿನ ಹರಿವನ್ನು ಊಹಿಸಬಹುದು.

ಸಂಪತ್ತಿಗೆ ಒದಗುವ 3 ಬಗೆಯ ಗತಿಗಳಲ್ಲಿ 'ಅನುಭೋಗ', 'ದಾನ' ಮತ್ತು 'ನಾಶ' ಸೇರಿವೆ. ಯಾರು ತನ್ನ ಸಂಪತ್ತನ್ನು ತಾನೂ ಅನುಭವಿಸದೆ ದಾನವನ್ನೂ ಮಾಡದಿದ್ದಲ್ಲಿ, ಮೂರನೆಯದ್ದಾದ 'ನಾಶ'ವೇ ಅದಕ್ಕೆ ಗತಿಯಾಗುತ್ತದೆ. ಇದು ಸಾರ್ವಕಾಲಿಕ ಸತ್ಯ. ಅಂಬಾನಿಯಂಥವರು ಸಂಪತ್ತಿನ ಅನುಭೋಗದಲ್ಲಿ ಹೆಚ್ಚು ನಂಬಿಕೆಯಿಟ್ಟಿದ್ದರೆ, ಟಾಟಾ ಸಮೂಹದವರು ದಾನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ, ಅಷ್ಟೇ. ಹಾಗೆ ನೋಡಿದರೆ ಎರಡೂ ಸರಿಯೇ. ಇರಲಿ, ಟಾಟಾ ಉದ್ಯಮ ಸಾಮ್ರಾಜ್ಯದ 'ಕೊಡುಗೈ ಅಸ್ತಿತ್ವ' ಎನಿಸಿಕೊಂಡಿರುವ ಟಾಟಾ ವಿಶ್ವಸ್ಥ ಮಂಡಳಿಗಳ (ಟಾಟಾ ಟ್ರಸ್ಟ್‌ಗಳು) ಕುರಿತು ಕೊಂಚ ಅವಲೋಕಿಸೋಣ. 'ಟಾಟಾ ಸನ್ಸ್'ನ ಈಕ್ವಿಟಿ ಷೇರು ಬಂಡವಾಳದ ಶೇ.66ರಷ್ಟನ್ನು ಈ ಲೋಕೋಪಕಾರಿ ಟ್ರಸ್ಟ್‌ಗಳು ಹೊಂದಿವೆ; ಅಂದರೆ, 'ಟಾಟಾ' ಉದ್ಯಮ ಸಮೂಹದ ಬಹುಪಾಲು ನಿಯಂತ್ರಣ ಈ 'ಟಾಟಾ ಟ್ರಸ್ಟ್ ಗಳ' ಜತೆಗಿದೆ ಅಂದ ಹಾಗಾಯಿತು. ಸಮಾಜದಲ್ಲಿ ಶಿಕ್ಷಣ, ಆರೋಗ್ಯ, ಜೀವನೋಪಾಯ ಸೃಷ್ಟಿ, ಕಲೆ-ಸಂಸ್ಕೃತಿಗಳ ಉಳಿವು-ಬೆಳೆಯುವಿಕೆಗೆ ಸಹಕರಿಸುವುದು 'ಟಾಟಾ ಟ್ರಸ್ಟ್‌ಗಳ' ಮೂಲೋದ್ದೇಶವಾಗಿದೆ. ದೇಶದಲ್ಲಿ ಆಧುನಿಕ ಉಕ್ಕು ಸ್ಥಾವರ, ಜಲವಿದ್ಯುತ್ ಸ್ಥಾವರ ಮತ್ತು ವಿಜ್ಞಾನ ವಿಶ್ವವಿದ್ಯಾಲಯಗಳನ್ನು ನಿರ್ಮಿಸುವ ಜೆಆರ್‌ಡಿ ಟಾಟಾರ ಕನಸುಗಳನ್ನು ಅವರ ಪುತ್ರರಾದ ಸರ್ ರತನ್‌ಜಿ ಟಾಟಾ ಮತ್ತು ಸರ್ ದೊರಾಬ್ಜಿ ಟಾಟಾ ಅವರುಗಳು ಈ ಟ್ರಸ್ಟ್‌ಗಳ ಮೂಲಕ ಈಡೇರಿಸುತ್ತಾ ಬಂದಿದ್ದಾರೆ. ಇವರು ತಮ್ಮ ವ್ಯಾಪಾರ ಸಾಮ್ರಾಜ್ಯವನ್ನು ಅನೇಕಪಟ್ಟು ಬೆಳೆಸುವುದರ ಜತೆಗೆ ರಚನಾತ್ಮಕವಾದ ಲೋಕೋಪಕಾರಿ ದೃಷ್ಟಿಕೋನವನ್ನೂ ಪ್ರದರ್ಶಿಸಿದರು. ಜೆಆರ್‌ಡಿ ಟಾಟಾ ಅವರ ಉದಾತ್ತ ಚಾರಿತ್ರ್ಯದ ಕಾರಣದಿಂದಾಗಿ ಹಲವಾರು ಟ್ರಸ್ಟುಗಳು ಸ್ಥಾಪಿತವಾದವು. ಅವುಗಳಲ್ಲಿ ಎದ್ದು ಕಾಣುವಂಥವು 'ಸರ್ ರತನ್ ಟಾಟಾ ಟ್ರಸ್ಟ್' ಮತ್ತು 'ಸರ್ ದೊರಾಬ್ಜಿ ಟಾಟಾ ಟ್ರಸ್ಟ್'. ಟಾಟಾ ಸಮೂಹಸಂಸ್ಥೆಗಳ ಅತ್ಯುನ್ನತ ಕಂಪನಿಯಾದ 'ಟಾಟಾ ಸನ್ಸ್'ನ ಮೂರನೇ ಎರಡರಷ್ಟು ಷೇರುಗಳನ್ನು ಈ ಟ್ರಸ್ಟ್‌ಗಳು ಹೊಂದಿವೆ ಎಂದು ಈಗಾಗಲೇ ಉಲ್ಲೇಖಿಸಲಾಗಿದೆ. 2024ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಟಾಟಾ ಟ್ರಸ್ಟ್‌ಗಳು ಮೂಲಸಂಸ್ಥೆಯಿಂದ 934 ಕೋಟಿ ರು.ಗಳ ಅತ್ಯಧಿಕ ಲಾಭಾಂಶವನ್ನು ಪಡೆದಿವೆ. 2023ರ ವಾರ್ಷಿಕ ವರದಿಯ ಪ್ರಕಾರ ಟಾಟಾ ಟ್ರಸ್ಟ್‌ಗಳು ತಮ್ಮ ನಿಧಿಯ ಶೇ.48.5ರಷ್ಟನ್ನು ಆರೋಗ್ಯಕ್ಕಾಗಿ, ಶೇ.16.9ರಷ್ಟನ್ನು ಗ್ರಾಮೀಣ ಉನ್ನತಿಗಾಗಿ ಮತ್ತು ಶೇ.16.5ರಷ್ಟನ್ನು ಶಿಕ್ಷಣಕ್ಕಾಗಿ ವಿತರಿಸಿವೆ. ಶೇ.10.4ರಷ್ಟು ಹಣವನ್ನು ಇತರ ಸಂಸ್ಥೆಗಳಿಗೆ ಹಾಗೂ ಉಳಿದ ಹಣವನ್ನು ನೀರು, ನಗರ ಪ್ರದೇಶಗಳ ಬಡತನ ನಿರ್ಮೂಲನೆ ಮತ್ತು ಇಂಧನಕ್ಕಾಗಿ ಮೀಸಲಿಡಲಾಗಿದೆಯಂತೆ.

ಮೂಲ ಉದ್ದಿಮೆಗಳ ಪ್ರವರ್ತಕ ಸಂಸ್ಥೆಯಾದ 'ಟಾಟಾ

TATA TRUSTS
PRIVILEGED TO SERVE.
SINCE 1892.

ಸನ್ಸ್' ಮತ್ತು ಲೋಕೋಪಕಾರದ ಉದ್ದೇಶದಿಂದ ರಚನೆಯಾದ 'ಟಾಟಾ ಟ್ರಸ್ಟ್‌ಗಳು' ಈ ಎರಡೂ ತಮ್ಮದೇ ಆದ ಪ್ರತ್ಯೇಕ ನಿರ್ದೇಶಕರ ಮಂಡಳಿಯ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಡಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ರತನ್ ಟಾಟಾ ಅವರು ಇರುವಾಗಲೇ 'ಟಾಟಾ ಸನ್ಸ್'ನ ಅಧ್ಯಕ್ಷ ಸ್ಥಾನ ಮತ್ತು 'ಟಾಟಾ ಟ್ರಸ್ಟ್‌ಗಳ' ಅಧ್ಯಕ್ಷರ ಪಾತ್ರಗಳನ್ನು ಪ್ರತ್ಯೇಕಿಸಿ ಇಟ್ಟಿದ್ದರು.

'ಭಾರತೀಯ ಉದ್ಯಮಗಳ ಪಿತಾಮಹ' ಮತ್ತು ಆಧುನಿಕ ಭಾರತೀಯ ಆರ್ಥಿಕತೆಯ ಪ್ರಮುಖ ನಿರ್ಮಾತೃಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟ ಜೆಆರ್‌ಡಿ ಟಾಟಾ ಅವರ ದೂರದೃಷ್ಟಿಯಿಂದಾಗಿ ಟಾಟಾ ಟ್ರಸ್ಟ್‌ಗಳು ಶತಮಾನದುದ್ದಕ್ಕೂ ರಾಷ್ಟ್ರಕ್ಕೆ ಮತ್ತು ಜನರಿಗೆ ಸಂಬಂಧಿಸಿದ ಸ್ವಾವಲಂಬಿ ಬೆಳವಣಿಗೆಗಳನ್ನು ಸಾಧಿಸಲು, ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ನಿರಂತರವಾಗಿ ಯತ್ನಿಸುತ್ತಾ ಬಂದಿವೆ. ಶಿಕ್ಷಣ, ಆರೋಗ್ಯ, ಪೌಷ್ಟಿಕಾಂಶ, ನೀರು ಮತ್ತು ನೈರ್ಮಲ್ಯ, ಜೀವನೋಪಾಯ, ಸಾಮಾಜಿಕ ನ್ಯಾಯ ಮತ್ತು ಒಳಗೊಳ್ಳುವಿಕೆ, ಕೌಶಲಾಭಿವೃದ್ಧಿ, ವಲಸೆ ಮತ್ತು ನಗರೀಕರಣ, ಪರಿಸರ, ಡಿಜಿಟಲ್ ಸಾಕ್ಷರತೆ, ಕ್ರೀಡೆ, ಕಲೆ, ಕರಕೌಶಲ, ಸಂಸ್ಕೃತಿ ಮತ್ತು ವಿಪತ್ತು ನಿರ್ವಹಣೆಯಂಥ ಕ್ಷೇತ್ರಗಳಲ್ಲಿ ಅವು ಉದಾರವಾಗಿ ದಾನ ಮಾಡುತ್ತಾ ಬಂದಿವೆ. ಭಾರತದ ಮೊದಲ ಕ್ಯಾನ್ಸರ್ ಆರೈಕೆ ಆಸ್ಪತ್ರೆಯನ್ನು ಸ್ಥಾಪಿಸಿದ್ದು ಇದೇ ಟಾಟಾ ಟ್ರಸ್ಟ್‌ಗಳು. ಮಾತ್ರವಲ್ಲದೆ, 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ', ಬಾಂಬೆಯ 'ಟಾಟಾ ಸೆಂಟರ್ ಫಾರ್ ಟೆಕ್ನಾಲಜಿ ಆ್ಯಂಡ್ ಡಿಸೈನ್', 'ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಮತ್ತು ಶಿಕಾಗೋ ವಿಶ್ವವಿದ್ಯಾಲಯದ 'ಟಾಟಾ ಸೆಂಟರ್ ಫಾರ್ ಟೆಕ್ನಾಲಜಿ ಆ್ಯಂಡ್ ಡಿಸೈನ್', ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ 'ಟಾಟಾ ಸೆಂಟರ್ ಫಾರ್ ಜೆನೆಟಿಕ್ಸ್ ಆ್ಯಂಡ್ ಸೊಸೈಟಿ' ಸೇರಿದಂತೆ ಹಲವಾರು ಪ್ರಮುಖ ಸಂಸ್ಥೆಗಳನ್ನು ಅವು ಸ್ಥಾಪಿಸಿವೆ ಮತ್ತು ಬೆಂಬಲಿಸಿವೆ. ಭಾರತವೇ ಹೆಮ್ಮೆ ಪಡುವಂಥ 'ಹಾರ್ವರ್ಡ್ ಯೂನಿವರ್ಸಿಟಿ ಸೌತ್ ಏಷ್ಯಾ ಇನ್‌ಸ್ಟಿಟ್ಯೂಟ್', 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್', 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್', 'ಟಾಟಾ ಮೆಮೋರಿಯಲ್ ಸೆಂಟರ್-ಮುಂಬೈ', 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್' ಮತ್ತು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್' ಮುಂತಾದ ಸಮಾಜಸೇವಾ ಸಂಸ್ಥೆಗಳನ್ನು ಈ ಟ್ರಸ್ಟುಗಳು ಸ್ಥಾಪಿಸಿವೆ. ಹಾಗೆ ನೋಡಿದರೆ, ಮಕ್ಕಳು-ಮರಿಯಿಲ್ಲದ ರತನ್ ಟಾಟಾ ಅವರಿಗೆ ಇಷ್ಟು ದೊಡ್ಡ ಸಮೂಹವನ್ನು ಉಳಿಸಿ ಬೆಳೆಸಲು ಪ್ರೇರಕವಾದದ್ದು ಅವರಲ್ಲಿನ ದೇಶಪ್ರೇಮ ಮತ್ತು ಜನಸೇವೆಯ ಕಾಳಜಿಯೇ ವಿನಾ ಮತ್ತೇನಲ್ಲ.

ಪಥನಿರ್ಮಾಪಕನೊಬ್ಬನ ಅನುಪಸ್ಥಿತಿಯಲ್ಲೂ ಅವನ ಧ್ಯೇಯ-ಧೋರಣೆಗಳಲ್ಲಿ ವ್ಯತ್ಯಾಸವಾಗದಂತೆ ಮತ್ತು ಅವನ ಅನುಪಸ್ಥಿತಿ ಅನುಭವಕ್ಕೆ ಬಾರದಂತೆ ಕಾರ್ಯಚಟುವಟಿಕೆಗಳು ಎಂದಿನಂತೆ ಮುಂದುವರಿದರೆ, ಅವನೇ ನಿಜವಾದ ನಾಯಕ ಎನ್ನುತ್ತಾರೆ. ರತನ್ ಟಾಟಾ ಅವರು ಇಂಥ ನಾಯಕರಾಗಿದ್ದರು ಎನ್ನುವುದಕ್ಕೆ ಅವರ ಉತ್ತರಾಧಿಕಾರಿಯ ಆಯ್ಕೆ ಸುಸೂತ್ರವಾಗಿರುವುದು, ಅವರ ನಿಧನದಿಂದಾಗಿ ಸಂಸ್ಥೆಯ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮವಾಗದೆ ಎಂದಿನಂತೆ ನಡೆಯುತ್ತಿರುವುದೇ ಸಾಕ್ಷಿ. ಟಾಟಾ ಟ್ರಸ್ಟ್‌ನ ಅಧ್ಯಕ್ಷರೂ, ಟಾಟಾ ಸಮೂಹದ ಸರ್ವಸ್ವವೂ ಆಗಿದ್ದ ರತನ್ ಟಾಟಾ ಅವರು ನಿಧನರಾದ 48 ಗಂಟೆಗಳ ಒಳಗಾಗಿ, ಅವರ ಮಲ ಸಹೋದರ ನೋಯಲ್ ಟಾಟಾರನ್ನು ಉತ್ತರಾಧಿಕಾರಿಯನ್ನಾಗಿ ಘೋಷಿಸಲಾಯಿತು. ಕೇವಲ ಒಂದು ಗಂಟೆ ಕಾಲ ನಡೆದ ಟ್ರಸ್ಟಿಗಳ ಸಭೆಯಲ್ಲಿ ಸರ್ವಾನುಮತದಿಂದ ಈ ನಿರ್ಧಾರವನ್ನು ಕೈಗೊಳ್ಳಲಾಯಿತಂತೆ. ಸಣ್ಣ ಪುಟ್ಟ ಆಸ್ತಿಗಾಗಿ ಅಣ್ಣ-ತಮ್ಮಂದಿರುಗಳೇ ಹೊಡೆದಾಟ ಬಡಿದಾಟ ಮಾಡಿಕೊಳ್ಳುವಾಗ, ಅತ್ಯಂತ ಸಂಪದ್ಭರಿತ 'ಟಾಟಾ ಟ್ರಸ್ಟ್'ನಲ್ಲಿ ಇಂಥ ಉನ್ನತ ಹುದ್ದೆಗೆ ಆಯ್ಕೆಯಾಗುವಾಗ, ಬೇರಾವುದೇ ಸ್ಪರ್ಧೆಯ ಬಗ್ಗೆ ಚರ್ಚೆ ಕೂಡಾ ಮಾಡದೆ ಅವಿರೋಧವಾಗಿ ನೇಮಕ ಪ್ರಕ್ರಿಯೆಯನ್ನು ಮಾಡಿ ಮುಗಿಸಿದ್ದಾರೆ ಎಂದರೆ ಅಚ್ಚರಿಯಾಗದಿರದು. ಟಾಟಾದವರ ಸಂಸ್ಕೃತಿಗೊಂದು ಸಲಾಂ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

'ಜಗದೀಶನಾಡುವ' ಜಗವೇ ನಾಟಕ ರಂಗ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಸಿನಿಮಾ ನೋಡೋಕೆ ಹೋಗೋ ಪ್ರೇಕ್ಷಕ ಏನನ್ನು ನಿರೀಕ್ಷೆ ಮಾಡ್ತಾನೆ ಅಂತ ಹೇಳೋದು ಸ್ವಲ್ಪ ಕಷ್ಟದ ಕೆಲಸ. ಹಾಗಾಗಿನೇ ವರ್ಷಕ್ಕೆ ನೂರಾರು ಸಿನಿಮಾಗಳು ಬಿಡುಗಡೆ ಆದರೂ ಅವುಗಳಲ್ಲಿ ಗೆಲುವು ಕಾಣೋದು ಬೆರಳೆಣಿಕೆಯಷ್ಟು ಮಾತ್ರ. ಎಲ್ಲಾ ಸಿನಿಮಾಗಳಲ್ಲೂ ಕಥೆ, ಚಿತ್ರಕಥೆ, ಬಜೆಟ್, ಸಂದೇಶ ಹೀಗೆ ಎಲ್ಲವನ್ನೂ ಹುಡುಕೋಕೆ ಪ್ರೇಕ್ಷಕ ಹೋಗೋದಿಲ್ಲ. ಅಲ್ಲದೆ ಅವನು ದೊಡ್ಡ ಹೀರೋಗಳ ಹೈ ಬಜೆಟ್ ಚಿತ್ರ ನೋಡೋದಕ್ಕೂ, ಸಣ್ಣ ಸ್ಟಾರ್‌ಗಳ



ಸಿನಿಮಾ ನೋಡೋದಕ್ಕೂ ವ್ಯತ್ಯಾಸ ಇರುತ್ತೆ. ಕೆಲವೊಮ್ಮೆ ಕೇವಲ ನಟನೊಬ್ಬನಿಗಾಗಿ ಸಿನಿಮಾ ನೋಡುವವರೂ ಇದ್ದಾರೆ. 20-25 ವರ್ಷಗಳ ಹಿಂದೆ ಜಗ್ಗೇಶ್ ಅವರಿಗೆ ಇದ್ದಂಥ ಕ್ರೇಜ್ ಅದು. ಅವರ ಸಿನಿಮಾಗಳಲ್ಲಿ ಕಥೆ, ಅದು ಇದು ಅಂತ ಯಾರೂ ನಿರೀಕ್ಷೆ ಮಾಡ್ತಾ ಇರಲಿಲ್ಲ. ಜಗ್ಗೇಶ್ ಅವರು ಇಡೀ ಸಿನಿಮಾ ಸ್ಕ್ರೀನ್ ಮೇಲೆ ಇದ್ದರೆ ಸಾಕು, ನಾವು ಕೊಟ್ಟ ದುಡ್ಡು ವಾಪಸ್ ಬಂದಂತೆ ಅನ್ನೋದು ಪ್ರೇಕ್ಷಕರ ಅಭಿಪ್ರಾಯ ಆಗಿತ್ತು. ಹಾಗಾಗಿಯೇ ಜಗ್ಗೇಶ್ ಅವರ ಕೆಲವು ಮಾಮೂಲಿ ಚಿತ್ರಗಳು ಕೂಡಾ ಸಾಕಷ್ಟು ಹಣ ಗಳಿಸುತ್ತಿದ್ದವು. ಈಗ ಅವರ ತಮ್ಮ ಕೋಮಲ್ ಅವರ 'ಯಲಾ ಕುನ್ನಿ' ಚಿತ್ರ ತೆರೆಗೆ ಬಂದಿದೆ. ಎಗೇನ್, ಈ ಸಿನಿಮಾದಲ್ಲಿ ಏನಿದೆ ಅಂತ ನೋಡೋಕೆ ಹೋದ್ರೆ ನಿರಾಸೆ ಗ್ಯಾರಂಟಿ. ಆದ್ರೆ ಇಲ್ಲಿ ಕೋಮಲ್ ಅವರು ಒಂದು ಎಪಿಸೋಡ್‌ನಲ್ಲಿ ವಜ್ರಮುನಿ ಅವರನ್ನು ಕಾಪಿ ಮಾಡಿದ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅದನ್ನು ನೋಡಿದ್ರೆ ನಿಮಗೆ, 'ಇದೇನು ಕೋಮಲ್ ಅವರು ಅಭಿನಯ ಮಾಡಿದ್ದಾರೋ, ಅಥವಾ ಈ ಪಾತ್ರಕ್ಕೆ 'ಎಐ', 'ಸಿಜಿ' ಮಾಡಿ ವಜ್ರಮುನಿ ಅವರಂತೆ ಕಾಣೋ ಥರ ಮಾಡಿದ್ದಾರೋ?' ಅಂತ ಅನುಮಾನ ಬಂದರೂ ಬರಬಹುದು. ಅಷ್ಟರ ಮಟ್ಟಿಗೆ ಕೋಮಲ್ ಅವರದ್ದು ನಿಜಕ್ಕೂ ಸನ್ನೆಷ ನಲ್ ಅಭಿನಯ. ಮುಖಭಾವ, ನಗು, ಕೆನ್ನೆ ಅಲ್ಲಾಡಿಸೋ ರೀತಿ, ನಿಲ್ಲೋ ಸ್ಟೈಲು, ನಡೆಯೋ ಸ್ಟೈಲು ಎಲ್ಲದರಲ್ಲೂ ಕೋಮಲ್ ಥೇಟ್ ವಜ್ರಮುನಿ. ಈ ಸಿನಿಮಾ ನೋಡಿದಾಗ ನಿಮಗೆ ಕೇಡಿ ನಾಗಪ್ಪ ಆಗಿರೋ ಕೋಮಲ್ ಅವರ ಈ ಒಂದು ಎಪಿಸೋಡಿಗೇ ನಾನು ಕೊಟ್ಟ ಟಿಕೆಟ್ ಹಣ ತೀರಿತು ಅಂತ ಅನ್ನಿಸಿದ್ರೆ ಅದರಲ್ಲಿ ತಪ್ಪೇನೂ ಇಲ್ಲ.

ಲೂಸ್ ಟಾಕ್

ಬಿಗ್ ಬಾಸ್

- **ಏನ್ ಬಿಗ್ ಬಾಸ್, ನಮ್ ಜನ ಏನೇ ಆಡ್ಕೊಂಡ್ರೂ, ಬಿಗ್ ಬಾಸ್‌ನ ನೋಡೋದು ಮಾತ್ರ ಬಿಡಲ್ಲ ಅಲ್ವಾ?**

– ಹೆಂಗ್ ಬಿಡೋಕಾಗುತ್ತೆ. ಎಷ್ಟೇ ಆದ್ರೂ ಇದು ಬಿಗ್ ಬಾಸ್, ಬಿಗ್ ಹೌಸ್, ದೊಡ್ಡಮನೆ ಅಲ್ವಾ?

- **ಹಂಗೆಲ್ಲಾ ದೊಡ್ಡಮನೆ ಅನ್ಬೇಡ್ರೀ, ದೊಡ್ಡಮನೆ ಅಭಿಮಾನಿಗಳು ಸಿಟ್ಟಾಗ್ತಾರೆ..**

– ಅಯ್ಯೋ ಹಂಗ್ ಹೇಳಿದ್ದಲ್ಲ ಬಿಡಿ. ದೊಡ್ಡೋರ್ ವಿಷ್ಯ ನಮಗ್ಯಾಕೆ. ನಮ್ಮನೇಲೇ ಹಾಸಿ ಹೊದ್ಕೊಳ್ಳುವಷ್ಟು ಸಮಸ್ಯೆ ಇದೆ, ಬಿಗ್ ಬಾಸ್ ಹೋಗಿ 'ಬಿಗ್ ಬ್ಯಾಷ್' ಆದ್ರೆ ಕಷ್ಟ.

- **ಸರಿ, ಈ ಸಲ ಲಾಯರ್ ಜಗದೀಶ್ ಅವ್ರು ಮನೆ ಒಳಗೆ ಬಹಳ ವಿಚಿತ್ರವಾಗಿ ಆಡ್ತಾ ಇದ್ರಲ್ಲ?**

– ಅದಕ್ಕೇ ತಾನೇ ಹೇಳೋದು, 'ಜಗದೀಶನಾಡುವ' ಜಗವೇ ನಾಟಕ ರಂಗ ಅಂತ

- **ಆದ್ರೂ ಅವರು ಬಿಗ್ ಬಾಸ್ ಬಂದ್ ಮಾಡಿಸ್ತೀನಿ ಅಂತ ಹೇಳಿದಾಗ ನಿಮಗೆ ಏನನ್ನಿಸಿತು?**

– ಸುದೀಪ್ ಬದಲು, ರಿಷಭ್ ಶೆಟ್ಟಿಯವರಿಂದ ಬಿಗ್ ಬಾಸ್ ಹೋಸ್ಟ್ ಮಾಡಿಸ್ಬೇಕಿತ್ತು ಅನ್ನಿಸ್ತು. ಆಗ ನಮ್ ಶೆಟ್ರು, ಕಾಂತಾರ ಸ್ಟೈಲಲ್ಲಿ 'ನಿಮ್ಮಪ್ಪನಿಗೆ ಹುಟ್ಟಿದ್ರೆ ಬಂದ್ ಮಾಡ್ಸ' ಅಂತ ಡೈಲಾಗ್ ಹೊಡೀತಿದ್ರು.

- **ಅದೂ ನಿಜ ಬಿಡಿ. ಅಂದಂಗೆ, ಪ್ರತಿಸಲ ಬಿಗ್ ಬಾಸ್ ನಡೆಯುವಾಗ ಪೊಲೀಸ್ನೋರು ಬರ್ತಾರಲ್ಲ ಯಾಕೆ?**

– ಯಾರಾದ್ರೂ ಗಲಾಟೆ ಮಾಡಿದ್ರೆ ಒದ್ದು ಒಳಗಾಕೋಣ ಅಂತ ಬರ್ತಾರೆ. ನಾವು, 'ಇಲ್ಲಾ ಗಲಾಟೆ ಮಾಡೋರನ್ನ ನಾವೇ ಒದ್ದು ಮನೆಯಿಂದ ಹೊರಗಾಕ್ತೀವಿ ಬಿಡಿ' ಅಂತ ಸಮಾಧಾನ ಮಾಡಿ ಕಳಿಸ್ತೀವಿ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಒಂದು ಹುಡುಗೀನ ತುಂಬಾ ಲವ್ ಮಾಡ್ತಾ ಇದ್ದ. ಆದರೆ ಆ ಹುಡುಗಿ ಇವನನ್ನು ಇಷ್ಟ ಪಡ್ತಾ ಇರಲಿಲ್ಲ. ತುಂಬಾ ಪ್ರಯತ್ನ ಪಟ್ಟಮೇಲೂ ಹುಡುಗಿ ಖೇಮುವನ್ನು ಮದುವೆ ಆಗಲು ಒಪ್ಪಲಿಲ್ಲ. ಖೇಮುಗೆ ಅತಿ ದೊಡ್ಡ ನಿರಾಸೆ ಆಗುವಂತೆ ಅವಳ ಮದುವೆ ಕೂಡ ಫಿಕ್ಸ್ ಆಯ್ತು. ಈಗ ಖೇಮು ತೀರಾ ನಿರಾಸೆಗೊಳಗಾದ. 'ಎಣ್ಣೆ ಹೊಡಿಬೇಕು ಬಾ' ಅಂತ ಸ್ನೇಹಿತ ಸೋಮುವನ್ನು ಕರೆದು ತನ್ನ ಮನಸ್ಸಿನ ನೋವನ್ನೆಲ್ಲಾ ತೋಡಿಕೊಂಡ. ಅದಕ್ಕೆ ತುಂಬಾ ಯೋಚನೆ ಮಾಡಿದ ಸೋಮು, ನೋಡು ಒಂದ್ ಕೆಲ್ಸ ಮಾಡು, ಅವಳನ್ನು ಮದ್ವೆ ಆಗ್ತಾ ಇರೋ ಹುಡುಗನ ಹತ್ರ ಹೋಗಿ ನನಗೆ ಆ ಹುಡುಗಿ ಜತೆ ಅಫೇರ್ ಇತ್ತು ಅಂತ ಹೇಳು. ಆಗ ಮದುವೆ ಮುರಿದು ಬೀಳತ್ತೆ ಅಂದ. ಅವನು ಹೆಂಗ್ ನಂಬ್ತಾನೆ? ಅಂತ ಕೇಳಿದ ಖೇಮು. ಅದಕ್ಕೆ ಸೋಮು, ನನ್ನ ಮೈ ಮೇಲೆ ಟೋಟಲ್ 6 ಮಚ್ಚೆ ಇದೆ ಅಂತ ನನ್ ತಂಗಿ ಹತ್ರ ನಿನ್ ಹುಡುಗಿ ಹೇಳಿದ್ಳಂತೆ. ನೀನು ಸುಮ್ನೆ ಅವಳ ದೇಹದಲ್ಲಿ ಇಂಥ ಕಡೆ ಮಚ್ಚೆ ಇದೆ ಅಂತ ಮದುವೆ ಆಗೋ ಹುಡುಗನಿಗೆ ಹೇಳು. ಮದುವೆ ಮುರಿದುಬೀಳುತ್ತೆ ಅಂತ ಹೇಳಿದ. ಸರಿ, ಖೇಮು ಮರುದಿನ ಸೋಮು ಹೇಳಿದ ಪ್ಲ್ಯಾನ್ ವರ್ಕ್‌ಔಟ್ ಮಾಡೋಕೆ ಹೋಗಿ ಸಪ್ಪೆ ಮೋರೆ ಹಾಕ್ಕೊಂಡು ಬಂದ. ಅವನನ್ನು ನೋಡಿದ ಸೋಮು, ಏನಾಯ್ತೋ ಅಂತ ಕೇಳಿದ. ಅದಕ್ಕೆ ಖೇಮು, ಇಲ್ಲಾ ಕಣೋ, ನಮ್ಮ ಪ್ಲ್ಯಾನ್ ವರ್ಕ್‌ಔಟ್ ಆಗ್ಲಿಲ್ಲ. ನಾನು ನೀನು ಹೇಳಿದ ಐಡಿಯಾ ಪ್ರಕಾರ ಹೇಳಿದ್ದಕ್ಕೆ ಆ ಹುಡುಗ, ಅದಕ್ಕೇನಿವಾಗ? ಅಂತ ತುಂಬಾ ಕ್ಯಾಷುವಲ್ ಆಗಿ ಹೇಳಿಬಿಟ್ಟ, ವಾಪಸ್ಸು ಬಂದೆ ಅಂತ ಹೇಳಿದ. ಅದಕ್ಕೆ ಸೋಮು, ಸರಿ ನೀನು ಏನಂತ ಹೇಳಿದೆ? ಅಂತ ಕೇಳಿದ. ಅದಕ್ಕೆ ಖೇಮುವಿನಿಂದ ಉತ್ತರ ಬಂತು- "ನಾನ್ ಒಂದ್ ಮಾತು ಹೇಳ್ತೀನಿ. ಇದಕ್ಕೇನರ್ಥ ಅಂತ ನೀನೇ ಡಿಸೈಡ್ ಮಾಡು. ನೀನು ಮದ್ವೆ ಆಗ್ತಾ ಇರೋ ಹುಡುಗಿಯ ಎಡಗೆನ್ನೆಯ ಮೇಲೆ ಒಂದು ಮಚ್ಚೆ ಇದೆ, ಅಂತ ಹೇಳಿದೆ".

ಲೈನ್ ಮ್ಯಾನ್

- ಅಕ್ವೇರಿಯಂನಲ್ಲಿ ಮೀನು ಸಾಕುವವರನ್ನು ಏನಂತಾರೆ?

– ವೆಜಿಟೇರಿಯನ್

- 'ದತ್ತು' ಪುತ್ರ ಮದುವೆ ಆದಮೇಲೆ ಮೂರ್ನಾಲ್ಕು ಮಕ್ಕಳನ್ನ ಹುಟ್ಟಿಸಿದ್ರೆ ಅವರಪ್ಪ ಅಮ್ಮ ಏನು ಹೇಳ್ತಾರೆ?

– 'ಸಾಕು' ಮಗ

- ಕಲಿಯುಗ ಅಂದ್ರೆ ಯಾವುದು ?

– ಜನ ಪ್ರೀತಿ ವಾಪಸ್ ಕೊಟ್ಟಷ್ಟೇ ನಿಯತ್ತಾಗಿ ಸಾಲನೂ ವಾಪಸ್ ಕೊಡೋ ಕಾಲ

- ಶಾಲಾ ಕಾಲೇಜು ದಿನಗಳನ್ನು ಏನೆನ್ನಬಹುದು?

– 'ಕಲಿ'ಯುಗ

- ಭಯಾನಕವಾಗಿ ಗೊರಕೆ ಹೊಡೆಯುವವನು

– 'ಖರ್ರಾಟೆ' ಕಿಂಗ್

- ಕ್ಲಬ್ ಹೌಸ್ ಹವಾ ಕಮ್ಮಿ ಆದಮೇಲೆ ಸೋಷಿಯಲ್ ಮೀಡಿಯಾ ಸ್ಟೇಟಸ್‌ಗಳು

– ಫೇಸ್‌ಬುಕ್: ನಂಗೆ ಕಡ್ಲೇಕಾಯಿ ಅಂದ್ರೆ ಇಷ್ಟ
– ಟ್ವಿಟರ್: ನಾನು ಕಡ್ಲೇಕಾಯಿ ತಿಂತಾ ಇದ್ದೀನಿ
– ಇನ್ಸ್ಟಾಗ್ರಾಮ್: ನಾನು ಕಡ್ಲೇಕಾಯಿ ತಿಂತಿರೋ ಫೋಟೋ
– ಯೂಟ್ಯೂಬ್: ನಾನು ಕಡ್ಲೇಕಾಯಿ ತಿಂದ ವಿಡಿಯೋ
– ಕ್ಲಬ್ ಹೌಸ್: ನಾನು ಕ್ಲಬ್ ಹೌಸ್ ಎಂಪ್ಲಾಯಿ. ಮಾಡಕೇನು ಕೆಲ್ಸ ಇಲ್ಲ, ಇನ್ನೇನ್ ಮಾಡೋದು. ಅದಕ್ಕೇ ಕಡ್ಲೇಕಾಯಿ ತಿಂತಾ ಇದ್ದೀನಿ.

- ವರ್ಷಕ್ಕೊಂದು ಫೋನ್ ಬದಲಾಯಿಸಿದರೆ ಅದು

– 'ಇಯರ್' ಫೋನ್

- ಎಂಬಿಎ ಮಾಡಿದವರು ಬುಕ್ ಮಾಡೋ ಫ್ಲೈಟ್ ಟಿಕೆಟ್

– ಬ್ಯುಸಿನೆಸ್ ಕ್ಲಾಸ್

- ಬುದ್ಧನಂತೆ ಆಗೋಕೆ ಇರಬೇಕಾದ ಅರ್ಹತೆ ಏನು?

– ಎಲ್ಲವನ್ನೂ ಬಿಟ್ಟು ಹೋಗೋಕೆ, ಏನಾದ್ರೂ ಇರಬೇಕು

ಉಪಚುನಾವಣೆ ಬಂದ್ರೆ ನೆನಪಾಗ್ತಾರೆ ಅಣ್ಣಾವ್ರು...

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಮುಂದಿನ ತಿಂಗಳು ರಾಜ್ಯದ ಶಿಗ್ಗಾಂವಿ, ಚನ್ನಪಟ್ಟಣ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದ್ದು, ಅದಕ್ಕೆ ಸಂಬಂಧಿಸಿದ 'ಹೊಯ್-ಕೈ' ಪ್ರಸಂಗಗಳಿಗೆ, 'ಆಯಾರಾಂ-ಗಯಾರಾಂ' ಘಟನೆಗೆ ನೀವೆಲ್ಲಾ ಸಾಕ್ಷಿಯಾಗಿದ್ದೀರಿ. ಆದರೆ ಯಾವಾಗಲಾದರೊಮ್ಮೆ ಇಂಥ ಉಪಚುನಾವಣೆ ಎದುರಾದಾಗ, ನನ್ನಂಥ ಬಹುತೇಕರಿಗೆ ನೆನಪಾಗೋದು 'ಅಣ್ಣಾವ್ರು' ಎಂದೇ ಅಭಿಮಾನದಿಂದ ಕರೆಯಲ್ಪಡುವ ಡಾ.ರಾಜ್‌ಕುಮಾರ್ ಅವರು. "ಇದೇನಪ್ಪಾ ಇದೂ...? ಇಮಾಮ್‌ಸಾಬ್ರಿಗೂ ಗೋಕುಲಾಷ್ಟಮಿಗೂ ಎಲ್ಲಿಯ ಸಂಬಂಧ? ಬಹುತೇಕವಾಗಿ ಬಟ್ಟೆ ಗಲೀಜಾಗುತ್ತಲೇ ಹೋಗುವ ರಾಜಕೀಯವೆಂಬ ಕೆಸರೆಲ್ಲಿ? ಆ ಕೆಸರಿನಿಂದ ದೂರವಿದ್ದ ಅಣ್ಣಾವ್ರು ಎಲ್ಲಿ?" ಎಂದು ನೀವು ಗೊಂದಲಕ್ಕೊಳಗಾಗಬಹುದು. ಅದು ಸಹಜವೇ! ಆದರೆ, ಯಾವುದೇ ಉಪಚುನಾವಣೆ ಬಂದಾಗ ಅಣ್ಣಾವ್ರ ನೆನಪಾಗೋದಕ್ಕೆ ಒಂದು ಕಾರಣವಿದೆ. ಅದು ತೆರೆದುಕೊಳ್ಳುವುದು ಈ ಫ್ಲ್ಯಾಷ್‌ಬ್ಯಾಕ್ ಮೂಲಕ....

ಬಹುತೇಕರಿಗೆ ಗೊತ್ತಿರುವಂತೆ, ಕಾಂಗ್ರೆಸ್‌ನ ಅಧಿನಾಯಕಿಯಾಗಿದ್ದ ಇಂದಿರಾ ಗಾಂಧಿಯವರು ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದ ತರುವಾಯದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಧೂಳೀಪಟವಾಗಿತ್ತು. ಉತ್ತರ ಪ್ರದೇಶದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದ ಇಂದಿರಾ ಕೂಡ 'ಧರಾಶಾಯಿ' ಆಗಿದ್ದರು. ಹಾಗಂತ ಅವರು ಕೈಚೆಲ್ಲಿ ಕೂರುವಂತಿರಲಿಲ್ಲ, ಫೀನಿಕ್ಸ್ ಪಕ್ಷಿಯಂತೆ ಆ ಮಣ್ಣಿನಿಂದ ಮೇಲೆದ್ದು ಬರಲೇಬೇಕಿತ್ತು. ಆದರೆ ಸುಸೂತ್ರ ಗೆಲುವನ್ನು ತಂದುಕೊಡಬಲ್ಲ ಮತಕ್ಷೇತ್ರವನ್ನು ಕಂಡುಕೊಳ್ಳಲಾಗದೆ ಕತ್ತಲಲ್ಲಿದ್ದರು ಇಂದಿರಮ್ಮ. ಆಗ ಅವರಿಗೆ ಆಶಾಕಿರಣವಾಗಿ ಒದಗಿದವರು ಕರ್ನಾಟಕದ ಡಿ.ಬಿ.ಚಂದ್ರೇ ಗೌಡರು. ತಾವು ಪ್ರತಿನಿಧಿಸುತ್ತಿದ್ದ ಚಿಕ್ಕಮಗ ಳೂರು ಸಂಸದ ಸ್ಥಾನಕ್ಕೆ ರಾಜೀನಾಮೆಯಿತ್ತ ಚಂದ್ರೇಗೌಡರು, ಇಂದಿರಾರ ಸ್ಪರ್ಧೆಗೆ ಭೂಮಿಕೆ ಒದಗಿಸಿದರು. 1978ರ ನವೆಂಬರ್ 9ರಂದು 'ಉಪಚುನಾವಣೆ' ನಿಗದಿಯಾ ಯಿತು. ಆಗ ಜನತಾ ಪರಿವಾರದ ವತಿಯಿಂದ ಒಮ್ಮತದ ಅಭ್ಯರ್ಥಿಯೊಬ್ಬರನ್ನು ನಿಲ್ಲಿಸುವ ಕುರಿತು ಲೆಕ್ಕಾಚಾರಗಳು ಶುರುವಾದವು, ಈ ಕುರಿತಾಗಿ ಸಾರ್ವಜನಿಕ ಚರ್ಚೆಗಳೂ ನಡೆದವು. ಆಗ ಶೃಂಗೇಶ್ವರ ಎಂಬ ಓದುಗರೊಬ್ಬರು 'ಪ್ರಜಾವಾಣಿ' ಪತ್ರಿಕೆಯ 'ವಾಚಕರ ವಾಣಿ' ವಿಭಾಗದಲ್ಲಿ "ಇಂದಿರಾರ ವಿರುದ್ಧ ಸ್ಪರ್ಧಿಸಲು ಡಾ. ರಾಜ್‌ಕುಮಾರರೇ ಸೂಕ್ತ ವ್ಯಕ್ತಿ" ಎಂಬರ್ಥದ ಪತ್ರ ಬರೆದರು. ತಗಳ್ಳಿ ಶುರುವಾಯ್ತು ಅಣ್ಣಾವ್ರನ್ನ ಬೆಂಬತ್ತುವಿಕೆ!

ಅದಕ್ಕೆ ಕಾರಣವಿತ್ತು. ಅದು ಅಣ್ಣಾವ್ರು ತಮ್ಮ ಸಿನಿಜೀವನದಲ್ಲಿ ಯಶಸ್ಸಿನ ತುತ್ತತುದಿಯಲ್ಲಿದ್ದ ಕಾಲಘಟ್ಟ. ಯಾವುದೇ ರಾಜಕಾರಣಿಗೆ ಇರಬಹುದಾದ 'ಹಿಂಬಾಲಕರ ಪಡೆ'ಯನ್ನೂ ನೀವಾಳಿಸಿ ಒಗೆಯಬಲ್ಲಷ್ಟರ ಮಟ್ಟಿಗಿನ 'ಅಭಿಮಾನಿ ಬಳಗ' ಮತ್ತು ಜನಪ್ರಿಯತೆ ಅಣ್ಣಾವ್ರಿಗೆ ಇತ್ತು. ಹೀಗಾಗಿ ಚುನಾವಣಾ ಸ್ಪರ್ಧೆಗೆ ಅವರ ಮನವೊಲಿಸಲು ಇನ್ನಿಲ್ಲದ ಯತ್ನಗಳಾದವು ಜನತಾ ಪರಿವಾರಿಗರಿಂದ. ಆದರೆ ರಾಜಣ್ಣ ಇದಕ್ಕೆ ಸೊಪ್ಪುಹಾಕದೆ ವಿನಯದಿಂದಲೇ ನಿರಾಕರಿಸಿದರು. ಸಾಲದೆಂಬಂತೆ, ನಾಮಪತ್ರ ಸಲ್ಲಿಕೆಗಿರುವ ಕೊನೆಯ ದಿನಾಂಕವು ಮುಗಿಯುವವರೆಗೂ ಪತ್ನಿ ಪಾರ್ವತಮ್ಮನವರೊಂದಿಗೆ ಅದ್ಯಾವುದೋ ಅಜ್ಞಾತ ನೆಲೆಗೆ ತೆರಳಿಬಿಟ್ಟರು. ನಂತರ, ಇಂದಿರಾ ಎದುರು ವೀರೇಂದ್ರ ಪಾಟೀಲರು ಸ್ಪರ್ಧಿಸಿದ್ದು, ಬರೋಬ್ಬರಿ 77,333 ಮತಗಳ ಅಂತರದಿಂದ ಸೋತಿದ್ದು ಇವೆಲ್ಲ ಗೊತ್ತಿರುವಂಥದ್ದೇ.

ರಾಜಕೀಯವು ತಮಗೊಗ್ಗದ ವಿಷಯ ಎಂಬ ಕಾರಣಕ್ಕೆ ಚುನಾವಣಾ ಕಣಕ್ಕೆ ಅಣ್ಣಾವ್ರು ಇಳಿಯಲಿಲ್ಲ ಎಂಬ 'ಸ್ಥೂಲ ಸಮರ್ಥನೆಗಳು' ಆ ಘಟ್ಟದಲ್ಲಿ ಸಂಬಂಧಪಟ್ಟವರಿಂದ ಹೊಮ್ಮಿದರೂ, "ಅಣ್ಣಾವ್ರು ಹಾಗೆ ಸಾರಾಸಗಟಾಗಿ ನಿರಾಕರಿಸಿದ್ದೇಕೆ? ಅದರ ಹಿಂದಿನ ಸೂಕ್ಷ್ಮತೆಯೇನು?" ಎಂಬುದು ಬಹುತೇಕರನ್ನು ಕಾಡುತ್ತಿದ್ದ ಯಕ್ಷಪ್ರಶ್ನೆಯಾಗಿತ್ತು. ಅಣ್ಣಾವ್ರು ಬದುಕಿರುವವರೆಗೂ ಇದಕ್ಕುತ್ತರ ಸಿಕ್ಕಿರಲಿಲ್ಲ, ಅವರೂ ಅದನ್ನು ಎಲ್ಲೂ ಬಹಿರಂಗವಾಗಿ ಹೇಳಿಕೊಂಡಿರಲಿಲ್ಲ. ಆದರೆ ಅವರ ಮಗ ರಾಘವೇಂದ್ರ ರಾಜ್‌ಕುಮಾರ್ ಕೆಲ ವರ್ಷಗಳ ಹಿಂದೆ 'ಬೆಂಗಳೂರ್ ಮಿರರ್' ಪತ್ರಿಕೆಯೊಂದಿಗೆ ಮಾತಾಡುತ್ತಾ ಈ ಗೋಜಲನ್ನು ಬಿಡಿಸಿದ್ದುಂಟು. ಅವರದೇ ಮಾತುಗಳ ಸಾರಸಂಗ್ರಹ ರೂಪ ಇಲ್ಲಿದೆ:

'ಸಂಗೀತ' ಧ್ವನಿಮುದ್ರಿಕೆ ಸಂಸ್ಥೆಯವರು ಆಯೋಜಿಸಿದ್ದ ಕಾರ್ಯಕ್ರಮವೊಂದರ ವೇಳೆ ಡಾ. ರಾಜ್‌ಕುಮಾರ್ ಅವರನ್ನು ಭೇಟಿಯಾಗಿದ್ದ ಇಂದಿರಾ ಗಾಂಧಿಯವರು (ಚಿತ್ರಕೃಪೆ: ಸಂಗೀತ ಧ್ವನಿಮುದ್ರಿಕೆ ಸಂಸ್ಥೆ)

"ನಾನು ಆಗಷ್ಟೇ ದ್ವಿತೀಯ ಪಿಯುಸಿ ಮುಗಿಸಿ ವೈದ್ಯಕೀಯ ಕಾಲೇಜು ಸೇರಲು ಸಜ್ಜಾಗುತ್ತಿದ್ದೆ. ಉಪಚುನಾವಣೆಯಲ್ಲಿನ ಸ್ಪರ್ಧೆಗೆ ಅಪ್ಪಾಜಿ ಹೀಗೆ ನಿರಾಕರಿಸಿದ್ದೇಕೆ ಎಂಬುದನ್ನು ತಿಳಿಯಲು ನಾನೂ ಸಾಕಷ್ಟು ಉತ್ಸುಕನಾಗಿದ್ದೆ, ಒಮ್ಮೆ ಕೇಳಿಯೇಬಿಟ್ಟೆ. ಅದಕ್ಕವರು, 'ಇದನ್ನು ಅರ್ಥಮಾಡಿಕೊಳ್ಳಲು ನಿನಗಿನ್ನೂ ವಯಸ್ಸು ಚಿಕ್ಕದು, ಜತೆಗೆ ನಾನಿದನ್ನು ನಿನಗೆ ಹೇಳಲು ಕಾಲವೂ ಪಕ್ವವಾಗಿಲ್ಲ. ಸೂಕ್ತ ಸಮಯ ಬಂದಾಗ ಹೇಳುವೆ. ಕಂದಾ, 'ಕವಿರತ್ನ ಕಾಳಿದಾಸ' ಚಿತ್ರದ 'ಹೇಳುವುದಕ್ಕೂ ಕೇಳುವುದಕ್ಕೂ ಇದು ಸಮಯವಲ್ಲ' ಅನ್ನೋ ಸಂಭಾಷಣೆ ನಿನಗೆ ನೆನಪಿರಬೇಕಲ್ವಾ?' ಎಂದುಬಿಟ್ಟರು....

"ಕಾಲ ಹೀಗೇ ಉರುಳುತ್ತಿತ್ತು. ಅಪ್ಪಾಜಿ ದೈವಾಧೀನರಾಗುವುದಕ್ಕೂ ಒಂದು ವರ್ಷ ಮೊದಲು, ಅಂದರೆ 2005ರಲ್ಲಿ ಆ 'ಹೇಳುವ ಸಮಯ' ಬಂತು. ಅದಕ್ಕೆ ಭೂಮಿಕೆಯನ್ನು ಒದಗಿಸಿದ್ದು ಅಪ್ಪಾಜಿಗೆ ಚೆನ್ನೈಯಲ್ಲಿ ಆದ ಮೊಣಕಾಲಿನ ಶಸ್ತ್ರಚಿಕಿತ್ಸೆಯ ಸಂದರ್ಭ. ಅಂದು ನನ್ನೊಬ್ಬನನ್ನೇ ಆಸ್ಪತ್ರೆಯ ಕೊಠಡಿಗೆ ಕರೆಸಿಕೊಂಡ ಅಪ್ಪಾಜಿ, ಸಾಕಷ್ಟು ವರ್ಷಗಳ ಹಿಂದೆ ನಾನು ಅವರಿಗೆ ಕೇಳಿದ್ದ ಪ್ರಶ್ನೆಯನ್ನು ನನಗೆ ನೆನಪಿಸಿ, ಸ್ಪರ್ಧೆಗೆ ನಿರಾಕರಿಸಿದ್ದರ 'ನಿಜಕಾರಣ'ವನ್ನು ಹೇಳಲು ಮುಂದಾದರು. ಇದನ್ನು ಅವರು ನಮ್ಮಮ್ಮ ಪಾರ್ವತಮ್ಮ ಅವರಿಗಾಗಲೀ, ಸೋದರರಾದ ಶಿವಣ್ಣ, ಪುನೀತ್ ಅವರಿಗಾಗಲೀ, ತಮಗೆ ಅತ್ಯಾಪ್ತರಾಗಿದ್ದ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಗಾಗಲೀ ಹೇಳದೆ, ನನಗೆ ಮಾತ್ರ ಹೇಳಿದ್ದೇಕೆ ಎಂದು ಕೇಳಿಕೊಂಡರೆ ಈಗಲೂ ನನಗಚ್ಚರಿಯಾಗುತ್ತದೆ. ಅಪ್ಪಾಜಿ ಹೇಳಿದರು: 'ಕಂದಾ, ರಾಜಕೀಯ ಕ್ಷೇತ್ರಕ್ಕೆ ನನ್ನಿಂದ ಒಂದು ಸಕಾರಾತ್ಮಕ ಕೊಡುಗೆ ದಕ್ಕುವಂತಾಗಬೇಕು ಎಂಬುದು ನನ್ನನ್ನು ಚುನಾವಣಾ ಸ್ಪರ್ಧೆಗೆ ಒತ್ತಾಯಿಸುತ್ತಿದ್ದವರ ಆಶಯವಾಗಿದ್ದಿದ್ದರೆ, ಪ್ರಾಯಶಃ ನಾನು ಅದನ್ನು ಪರಿಗಣಿಸುತ್ತಿದ್ದೆನೇನೋ? ಆದರೆ, ಅವರು ನನ್ನನ್ನು ಅರಸಿ ಬಂದಿದ್ದರ ಉದ್ದೇಶ ಬೇರೆಯೇ ಇತ್ತು. ಅವರು ನನ್ನನ್ನು ಒಂದು ಆಯುಧವಾಗಿ ಬಳಸಿಕೊಳ್ಳಲು ಆಶಿಸಿದ್ದರಷ್ಟೇ. ಮುಂದೆ, ಗೋಕಾಕ್ ವರದಿಯ ಜಾರಿಗೆ ಆಗ್ರಹಿಸಿ ಹಮ್ಮಿಕೊಳ್ಳಲಾಗಿದ್ದ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಕೆಲವರು ನನ್ನನ್ನು ಕೇಳಿಕೊಂಡಾಗ, ಸಂತಸದಿಂದಲೇ ಒಪ್ಪಿಕೊಂಡೆ, ಪಾಲ್ಗೊಂಡೆ (ಇದು 1978ರ ಉಪಚುನಾವಣೆಯಾದ 5 ವರ್ಷಗಳ ನಂತರ ಘಟಿಸಿದ ವಿದ್ಯಮಾನ). ಏಕೆಂದರೆ, ಅಲ್ಲಿ ನನ್ನ ಪಾಲ್ಗೊಳ್ಳುವಿಕೆ ಅಗತ್ಯವಾಗಿತ್ತು ಮತ್ತು ಅಲ್ಲಿ ನಾನೊಂದು ಸಕಾರಾತ್ಮಕ ಕೊಡುಗೆ ನೀಡುವುದಕ್ಕೆ ಅವಕಾಶವಿತ್ತು. ಆದರೆ ಆ ಉಪಚುನಾವಣೆಯ ಬಾಬತ್ತು ಹಾಗಿರಲಿಲ್ಲ, ಅಲ್ಲಿ ನಾನೊಂದು 'ಅವಶ್ಯಕತೆ' ಆಗಿರಲಿಲ್ಲ; ಯಾರೋ ಎದುರಾಳಿಯನ್ನು ಸೋಲಿಸುವುದಕ್ಕಷ್ಟೇ ನಾನು ಬೇಕಾಗಿತ್ತು. ನಾನು ಹೀಗೆ ಉಪಚುನಾವಣೆ ಯಲ್ಲಿ ಸ್ಪರ್ಧಿಸದಿದ್ದುದು ಸರಿಯಾದ ನಿರ್ಧಾರವಾಗಿತ್ತಲ್ಲವೇ ಕಂದಾ?'. ಅವರ ಈ ಮಾತಿಗೆ ನಾನು, 'ನಿಮ್ಮಿಂದ ತಪ್ಪು ನಡೆಯುವುದಕ್ಕೆ ಸಾಧ್ಯವೇ ಅಪ್ಪಾಜಿ..' ಎಂದುತ್ತರಿಸಿದೆ....

"1978ರ ಆ ಕಾಲಘಟ್ಟದಲ್ಲಿ ನಾವು ನೆಲೆಸಿದ್ದು ಚೆನ್ನೈನಲ್ಲಿ. ಚಿಕ್ಕಮಗಳೂರು ಉಪಚುನಾವಣೆಯ ಆಸುಪಾಸಿನ ಒಂದು ದಿನ ಅಪ್ಪಾಜಿ ಹಾಗೂ ಅಮ್ಮ ಇಬ್ಬರೂ ದಿನಬಳಕೆಗೆ ಬೇಕಾಗುವ ಆಹಾರ ಪದಾರ್ಥಗಳನ್ನೆಲ್ಲಾ ಎರಡು ಕಾರುಗಳಲ್ಲಿ ತುಂಬಿಸಿಕೊಂಡು ತಮಿಳುನಾಡಿನ ಅದ್ಯಾವುದೋ ಅಜ್ಞಾತ ನೆಲೆಗೆ ಒಂದು ವಾರದವರೆಗೆ ಹೋಗಿಬಿಟ್ಟರು. ಚಿಕ್ಕಮಗಳೂರು ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸುವಂತೆ ಇನ್ನಿಲ್ಲದಂತೆ ಬೆನ್ನತ್ತಿದ್ದ ಕೆಲ ರಾಜಕಾರಣಿಗಳಿಂದ ತಪ್ಪಿಸಿಕೊಳ್ಳಲು ಅವರು ಈ ಕಸರತ್ತಿಗೆ ಮುಂದಾಗಿದ್ದರು. ಅತಿರಥ- ಮಹಾರಥ ರೆನಿಸಿಕೊಂಡ ಅನೇಕರು ಅಪ್ಪಾಜಿಯನ್ನು ಭೇಟಿಯಾಗಲು ಬೆಂಗಾವಲು ಪಡೆಗಳೊಂದಿಗೆ ಬರುತ್ತಿದ್ದರೂ, ಅವರ್ಯಾರ ಕೈಗೂ ಅಪ್ಪಾಜಿ ಸಿಗಲಿಲ್ಲ. ಈ ಎಲ್ಲ ಬೆಳವಣಿಗೆಗಳ ಕುರಿತಾಗಿ ಅಪ್ಪಾಜಿ ಸಾರ್ವಜನಿಕವಾಗಿ ಏಕೆ ಹೇಳಿಕೊಳ್ಳಲಿಲ್ಲ ಎಂಬುದೂ ನನಗೆ ಗೊತ್ತಿಲ್ಲ. ಆ ವಿಷಯವನ್ನು ಹಾಗೆ ಮರೆಯಲ್ಲಿ ಇರಿಸಬೇಕೆಂಬುದು ಅವರ ಆಶಯವಾಗಿತ್ತು ಅನಿಸುತ್ತೆ. ಚಿಕ್ಕಮಗಳೂರು ಉಪಚುನಾವಣೆ ನಡೆದಾದ ಕೆಲ ವರ್ಷಗಳ ನಂತರವೂ, ರಾಜಕೀಯಕ್ಕೆ ಪ್ರವೇಶಿಸು ವಂತೆ ಅಥವಾ ತಮ್ಮದೇ ಆದ ರಾಜಕೀಯ ಪಕ್ಷವೊಂದಕ್ಕೆ ಚಾಲನೆ ನೀಡುವಂತೆ ಅಪ್ಪಾಜಿಯ ಮೇಲೆ ಸಾಕಷ್ಟು ಒತ್ತಡ ಬರುತ್ತಿದ್ದುದುಂಟು, ಆಗಲೂ ಅಪ್ಪಾಜಿ ಅದಕ್ಕೆ ಹಿಂದೇಟು ಹಾಕಿದರು (ಅಷ್ಟೊತ್ತಿಗಾಗಲೇ ನೆರೆಯ ತಮಿಳುನಾಡಿನಲ್ಲಿ ಎಂ.ಜಿ.ರಾಮಚಂದ್ರನ್ ಮತ್ತು ಆಂಧ್ರಪ್ರದೇಶದಲ್ಲಿ ಎನ್.ಟಿ.ರಾಮರಾವ್‌ರಂಥ ಜನಪ್ರಿಯ ಚಿತ್ರನಟರು ರಾಜಕೀಯಕ್ಕಿಳಿದು ಯಶಸ್ವಿಯೂ ಆಗಿದ್ದರು ಎಂಬುದು ಓದುಗರ ಗಮನಕ್ಕೆ!). ತಮ್ಮ ಈ ನಡೆಗೆ ಅಪ್ಪಾಜಿಗೆ ಅವರದೇ ಆದ ಕಾರಣಗಳಿದ್ದವು. 'ಕಂದಾ, ನಾನು ಅಷ್ಟೊಂದು ವಿದ್ಯಾವಂತನಲ್ಲ' ಎಂದು ಅವರು ಆಗಾಗ ಹೇಳುತ್ತಿದ್ದರು. ನಿಜ, ಇದೂ ಒಂದು ಕಾರಣವಾಗಿರಬಹುದು. ಜತೆಗೆ, ಓರ್ವ ಜನಪ್ರಿಯ ನಟನಾಗಿ ಅವರಿಗಿದ್ದ ಹೊಣೆಗಾರಿಕೆಯೂ ಅಪ್ಪಾಜಿಯ ಈ ನಿಲುವಿಗೆ ಮತ್ತೊಂದು ಕಾರಣವಾಗಿದ್ದಿರಬಹುದು. ಏಕೆಂದರೆ, ರಾಜಕೀಯ ಪ್ರಯೋಜನಗಳನ್ನು ದಕ್ಕಿಸಿಕೊಳ್ಳಬೇಕೆಂಬ ಒಂದೇ ಕಾರಣಕ್ಕೆ ತಮ್ಮ ಯಾವೊಬ್ಬ ಅಭಿಮಾನಿಯನ್ನೂ ದೂರಮಾಡಿಕೊಳ್ಳಲು ಅಪ್ಪಾಜಿ ಬಯಸಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, 'ಆ ದೇವರು ನನ್ನನ್ನು ಈ ಸಿನಿಮಾ ಪ್ರಪಂಚದಲ್ಲಿ ತೊಡಗಿಸಿದ್ದಾನೆ, ನನಗೆ ಜೀವನದಲ್ಲಿರೋದು ಇದೊಂದೇ ಉದ್ದೇಶ ಮತ್ತು ಗುರಿ' ಎಂದು ಯಾವಾಗಲೂ ಹೇಳುತ್ತಿದ್ದ ಅಪ್ಪಾಜಿ, ಅದನ್ನು ಬದಲಿಸಲು ಎಂದೂ ಬಯಸಲಿಲ್ಲ....".

ಇದು ರಾಘವೇಂದ್ರ ರಾಜ್‌ಕುಮಾರ್ ಅವರು ತೆರೆದಿಟ್ಟ 'ಅಣ್ಣಾವ್ರ ಅಂತರಂಗ'. ಅಭಿಮಾನಿಗಳನ್ನೇ 'ದೇವರು' ಎಂದು ಸಂಬೋಧಿಸುತ್ತಿದ್ದ ಅಣ್ಣಾವ್ರು, 'ಅಭಿಮಾನಿಗಳ ದೇವರು' ಆಗಿದ್ದು ಹೇಗೆ ಎಂಬುದಕ್ಕೆ ಇದಕ್ಕಿಂತ ಪುರಾವೆ ಬೇಕೇ?!

ಪಾಯಿಖಾನೆಯನ್ನೂ ಬಿಡಲಿಲ್ಲವಂತೆ..!!

ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇಂದಿರಾ ಗಾಂಧಿಯವರ ವಿರುದ್ಧ ಸ್ಪರ್ಧಿಸುವಂತೆ ಜನತಾ ಪರಿವಾರದ ಕೆಲ ರಾಜಕಾರಣಿಗಳು ಅಣ್ಣಾವ್ರನ್ನು ಬೆನ್ನತ್ತಿದ್ದ ಪರಿ ಹೇಗಿತ್ತು ಎಂಬುದಕ್ಕೆ ಇಲ್ಲೊಂದು ಸಾಕ್ಷಿಯಿದೆ. ಇದು, ಕೆಲ ತಿಂಗಳ ಹಿಂದೆ ತೀರಿಕೊಂಡ ಖ್ಯಾತ ಚಿತ್ರ ನಿರ್ದೇಶಕ ಭಗವಾನ್ (ದೊರೆ-ಭಗವಾನ್ ಜೋಡಿಯ ಖ್ಯಾತಿ) ಅವರು ಸಂದರ್ಶನವೊಂದರಲ್ಲಿ ಹೇಳಿಕೊಂಡ ಪಡಿಪಾಟಲು: "ಅಣ್ಣಾವ್ರು ತಮ್ಮ ಮನೆಯಲ್ಲಿ ಸಿಗದಿದ್ದಾಗ, ಅವರು ಯಾವೆಲ್ಲಾ ನೆಲೆಗಳಲ್ಲಿ ಅಡಗಿರಬಹುದು ಎಂದು ತಲಾಶೆಗಿಳಿದ ಜನತಾ ಪರಿವಾರದವರು ಬೆಂಗಳೂರಿನ ನಮ್ಮ ಮನೆ ಹಾಗೂ ಕಚೇರಿಯನ್ನೂ ಬಿಡಲಿಲ್ಲ. ನಮ್ಮ ಮನೆಯನ್ನಂತೂ ಮೇಲಿಂದ ಕೆಳಗಿನವರೆಗೂ ಜಾಲಾಡಿದ್ದು ಸಾಲದೆಂಬಂತೆ, ಮನೆಯ ಪಾಯಿಖಾನೆಯಲ್ಲೂ ಇಣುಕಿ ನೋಡಿದರು, ಕಿಟಕಿಯ ಪರದೆಗಳ ಹಿಂದೆಯೂ ತಡಕಾಡಿದರು, ಮೊದಲ ಮಹಡಿಯಲ್ಲಿ ನಾನು ರೂಪಿಸಿಕೊಂಡಿದ್ದ ಥಿಯೇಟರ್‌ನಲ್ಲೂ ಹುಡುಕಿದರು..."

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:9, Issue:307

ಸಮಾಚಾರ ಸಣ್ಣದಲ್ಲ

ಸೇನಾ ವಾಹನ ಪಲ್ಟಿ; ಒಬ್ಬ ಯೋಧ ಸಾವು

ಕುಲ್ಗಾಂ: ಜಮ್ಮು-ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಸೇನಾ ವಾಹನ ಚಲಿಸುತ್ತಿದ್ದಾಗ ಪಲ್ಟಿಯಾಗಿ ವಾಹನದಲ್ಲಿದ್ದವರಲ್ಲಿ ಒಬ್ಬ ಯೋಧ ಸಾವನ್ನಪ್ಪಿದ್ದಾರೆ. 9 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಡಿಎಚ್ ಪೋರಾ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಕಾರ್ಯಾಚರಣೆ ನಡೆಸಿ ವಾಪಸಾಗುವಾಗ ಅಪಘಾತ ಸಂಭವಿಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಹಿಂದಿ ಪತ್ರ ವಾಪಸ್ ಮಾಡಿದ ಡಿಎಂಕೆ ಸಂಸದ

ಚೆನ್ನೈ: ತಮಿಳುನಾಡಿನ ರಾಜ್ಯ ಗೀತೆ 'ತಮಿಳು ಥಾಯ್ ವಾಲ್ತು' ಕುರಿತ ಹಿಂದಿ-ತಮಿಳು ವಿವಾದ ಕೊನೆಗೊಳ್ಳುತ್ತಲೇ ಇಲ್ಲ. ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಅವರು ಹಿಂದಿಯಲ್ಲಿ ಬರೆದ ಪತ್ರಕ್ಕೆ ಡಿಎಂಕೆ ನಾಯಕ, ರಾಜ್ಯಸಭಾ ಸದಸ್ಯ ಎಂ.ಎಂ. ಅಬ್ದುಲ್ಲಾ 'ನನಗೆ ಹಿಂದಿ ಓದಲು ಬರುವುದಿಲ್ಲ. ಹಾಗಾಗಿ ಇಂಗ್ಲಿಷ್‌ನಲ್ಲಿಯೇ ಪತ್ರ ಬರೆಯಿರಿ ಎಂದು ಕೇಂದ್ರ ಸಚಿವರಿಗೆ ಟಾಂಗ್ ಕೊಟ್ಟಿದ್ದಾರೆ. ಸರಕಾರದ ಸಂವಹನದ ಅಧಿಕೃತ ಪತ್ರಗಳನ್ನು ಇಂಗ್ಲಿಷ್‌ನಲ್ಲಿ ಕಳುಹಿಸಬೇಕು ಎಂದು ಅಬ್ದುಲ್ಲ, ಕೇಂದ್ರ ಸಚಿವರಿಗೆ ಮನವಿ ಮಾಡಿದ್ದಾರೆ. ಅ.21 ರಂದು ರೈಲ್ವೆ ರಾಜ್ಯ ಸಚಿವರು ಹಿಂದಿಯಲ್ಲಿ ಪತ್ರ ಬರೆದ ನಂತರ ಡಿಎಂಕೆ ಸಂಸದರ ಪ್ರತಿಕ್ರಿಯೆ ಬಂದಿದೆ. ಅದರಲ್ಲಿ ರೈಲುಗಳಲ್ಲಿನ ಆಹಾರದ ಸ್ವಚ್ಛತೆ ಮತ್ತು ಗುಣಮಟ್ಟದ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ.

ಎಂ-ನರೇಗಾ ಪಟ್ಟಿ; 39 ಲಕ್ಷ ಹೆಸರು ರದ್ದು

ದೆಹಲಿ: 2024ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಎಂ-ನರೇಗಾ(ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ) ಯಿಂದ 39 ಲಕ್ಷಕ್ಕೂ ಹೆಚ್ಚು ನೋಂದಾಯಿತ ಕಾರ್ಮಿಕರ ಹೆಸರನ್ನು ತೆಗೆದು ಹಾಕಲಾಗಿದೆ ಎಂದು ನಾಗರಿಕ ಸಮಾಜ ಸಂಸ್ಥೆ 'ಲಿಬ್ಟೆಕ್ ಇಂಡಿಯ' ಕಳವಳ ವ್ಯಕ್ತಪಡಿಸಿದೆ. 2022-23 ಮತ್ತು 2023-24ರ ಹಣಕಾಸು ವರ್ಷಗಳಲ್ಲಿ ಯೋಜನೆಯಿಂದ 8 ಕೋಟಿಗೂ ಹೆಚ್ಚು ಕಾರ್ಮಿಕರನ್ನು ತೆಗೆದುಹಾಕಲಾಗಿದೆ. ಕಡ್ಡಾಯ ಆಧಾರ್ ಜೋಡಣೆ ನಿಯಮ ಪಾಲಿಸದ 6.7 ಕೋಟಿಗೂ ಹೆಚ್ಚು ಕಾರ್ಮಿಕರು ಈ ಯೋಜನೆಯಡಿ ಕೆಲಸ ಪಡೆಯಲು ಅನರ್ಹರಾಗಿದ್ದಾರೆ ಎಂದು ವರದಿ ಬಹಿರಂಗಪಡಿಸಿದೆ.

ಕೆನಡಾ: ಶೇ.20ರಷ್ಟು ವೀಸಾ ಹಂಚಿಕೆ ಕಡಿತ

ದೆಹಲಿ: ಕೆನಡಾದ ಜಸ್ಟಿನ್ ಟ್ರುಡೊ ಸರಕಾರ ವಿದೇಶಿಗರಿಗೆ ವೀಸಾ ನೀಡುವ ಪ್ರಮಾಣದಲ್ಲಿ ಶೇ.20ರಷ್ಟು ಕಡಿತ ಮಾಡುವುದಾಗಿ ಘೋಷಿಸಿದೆ. 2025ರಿಂದ ದೇಶದಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ವಲಸಿಗರಿಗೆ ವೀಸಾ ನೀಡಲಾಗುವುದು, 2025ರಲ್ಲಿ 3.95 ಲಕ್ಷ ಹೊಸ ಖಾಯಂ ನಿವಾಸಿಗಳಿಗೆ ಅವಕಾಶವಿರಲಿದೆ ಎಂದು ಹೇಳಿದೆ. 2024ರಲ್ಲಿ 4.85 ಲಕ್ಷ ವೀಸಾ ನೀಡಲಾಗಿದೆ. ವಿದ್ಯಾರ್ಥಿ ವೀಸಾ ಶೇ.35ರಷ್ಟು ಕಡಿತಗೊಳಿಸಲಾಗಿದೆ. 2 ವರ್ಷ ಕಾಲ 3.60 ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಟ್ರುಡೊ ಸರಕಾರದ ಈ ನಿರ್ಧಾರದಿಂದ ಭಾರತೀಯರ ಮೇಲೆ ದೊಡ್ಡ ರೀತಿ ಪರಿಣಾಮ ಬೀರಲಿದೆ. 2023ರಲ್ಲಿ ಕೆನಡಾದಲ್ಲಿ ಭಾರತದ 3.19 ಲಕ್ಷ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು.

ದೆಹಲಿ: ಮತ್ತೊಂದು ಶ್ರದ್ಧಾವಾಕರ್ ಪ್ರಕರಣ

ದೆಹಲಿ: 2022ರ ಮೇ 18ರಂದು ದೆಹಲಿಯಲ್ಲಿ ಪ್ರೇಯಸಿ ಶ್ರದ್ಧಾ ವಾಕರ್‌ಳನ್ನು ಕೊಂದ ಅಫ್ತಾಬ್ ಪ್ರಕರಣದ ರೀತಿಯದ್ದೇ ಮತ್ತೊಂದು ಪ್ರಕರಣ



ರಾಷ್ಟ್ರ ರಾಜಧಾನಿಯಲ್ಲಿ ನಡೆದಿದೆ. ಪಶ್ಚಿಮ ದೆಹಲಿಯ ನಂಗ್ಲೋಯಿ ನಿವಾಸಿ 19 ವರ್ಷದ ಸೋನಿ ಸೋಷಿಯಲ್ ಮೀಡಿಯದಲ್ಲಿ ರೀಲ್ಸ್ ಮೂಲಕ ಹಣ-ಹೆಸರು ಸಂಪಾದಿಸಿದ್ದಳು. ಆಕೆ ಅಪ್‌ಲೋಡ್ ಮಾಡುತ್ತಿದ್ದ ವಿಡಿಯೊಗಳಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ 21 ವರ್ಷದ ಸಲೀಂ ಪರಿಚಯಿಸಿಕೊಂಡ. ಬಳಿಕ ಪ್ರೀತಿಸುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿದ. ಆಕೆ ಗರ್ಭಿಣಿ ಯಾಗುತ್ತಿದ್ದಂತೆ ಗರ್ಭಪಾತ ಮಾಡಿಸಿಕೊಳ್ಳುವಂತೆ ಒತ್ತಡ ಹೇರಿದ್ದ. ಬದಲಾಗಿ ಯುವತಿ ಮದುವೆಯಾಗುವಂತೆ ಒತ್ತಾಯಿಸಿದ್ದಕ್ಕೆ ಸಿಟ್ಟಿಗೆದ್ದು, 7 ತಿಂಗಳ ಗರ್ಭಿಣಿ ಎಂಬುದನ್ನೂ ನೋಡದೇ ಕ್ರೂರವಾಗಿ ಕೊಂದು ಹೂತುಹಾಕಿದ್ದಾನೆ.

{ ಮನೋಜ್ ಸಿನ್ಹಾ } ಲೆ.ಗವರ್ನರ್

ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನೆ ಮಟ್ಟ ಹಾಕಲು ಹೊಸಬಗೆ ಕಾರ್ಯತಂತ್ರ ಹೆಣೆಯಲಾಗಿದೆ. ಉಗ್ರರ ಗುಂಡೇಟಿನಿಂದಾಗಿ ಈ ನೆಲದ ಮೇಲೆ ಬಿದ್ದ ಮುಗ್ಧರ ಪ್ರತಿಹನಿ ರಕ್ತಕ್ಕೂ ಪ್ರತ್ಯುತ್ತರ ನೀಡುತ್ತೇವೆ. ಸೇನಾಪಡೆಗಳು ಉಗ್ರರ ಆಟಾಟೋಪವನ್ನು ನಿವಾರಿಸಲಿದ್ದಾರೆ. ದುರದೃಷ್ಟವಶಾತ್ ನೆರೆಯ ದೇಶ ಬಡತನದಲ್ಲಿ ಬಳಲುತ್ತಿದ್ದರೂ ಭಯೋತ್ಪಾದನೆ ನಡೆಸುವುದನ್ನು ಬಿಡುತ್ತಿಲ್ಲ.



2000 ಕಿಮೀ ಹಾರಿ ಬಂದ ನೂರಾರು ಯುದ್ಧ ವಿಮಾನಗಳಿಂದ ಸೇನಾ ನೆಲೆಗಳ ಮೇಲೆ ತೀವ್ರ ದಾಳಿ | ಅ.1 ಇಸ್ರೇಲ್ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ಮಾಡಿದ್ದಕ್ಕೆ ಪ್ರತೀಕಾರ | ಇರಾನ್ 2ಯೋಧರ ಸಾವು-ಮೂಲಸೌಕರ್ಯ, ಶಸ್ತ್ರಾಸ್ತ್ರ ಸಂಗ್ರಹ ನಾಶ

ಇರಾನ್ ಮೇಲೆ ಇಸ್ರೇಲ್ ಪ್ರತೀಕಾರ ದಾಳಿ

ಟೆಲ್‌ಅವಿವ್: ಕಳೆದೊಂದು ವರ್ಷದಿಂದ ಗಾಜಾ, ಬಳಿಕ ಲೆಬನಾನ್, ಸಿರಿಯ ಮೇಲೆ ದಾಳಿ ನಡೆಸುತ್ತಿದ್ದ ಇಸ್ರೇನ್, ಇದೇ ಮೊದಲ ಬಾರಿಗೆ ಇರಾನ್ ಮೇಲೆ ನೇರ ಯುದ್ಧಕ್ಕೆ ಇಳಿದಿದೆ. ಇಸ್ರೇಲ್‌ನ 100ಕ್ಕೂ ಹೆಚ್ಚು ಯುದ್ಧ ವಿಮಾನಗಳು ಶನಿವಾರ ನಸುಕಿನಲ್ಲೇ ಇರಾನ್‌ನ 20ಕ್ಕೂ ಅಧಿಕ ಸೇನಾ ನೆಲೆಗಳ ಮೇಲೆ ನೇರವಾಗಿ ದಾಳಿ ನಡೆಸಿವೆ. ಶನಿವಾರದ 'ಪ್ರತಿಕಾರದ ದಾಳಿ'ಯ ಹಲವು ವಿಡಿಯೋಗಳನ್ನು ಇಸ್ರೇಲ್ ಸೇನೆ ಬಿಡುಗಡೆ ಮಾಡಿದೆ.

ಈ ಬಾರಿಯ ದಾಳಿಯಲ್ಲಿ ಇರಾನ್‌ನ ಪರಮಾಣು ಕೇಂದ್ರಗಳು ಮತ್ತು ತೈಲ ಘಟಕಗಳನ್ನು ಇಸ್ರೇಲ್ ಗುರಿಯಾಗಿಸಿಲ್ಲ ಎಂಬುದು ಗಮನಾರ್ಹ. ಆದರೆ, ಇಸ್ರೇಲ್‌ನ ವಾಯುಪಡೆ ನಡೆಸಿದ ಈ ನಿಖರ ದಾಳಿಯಿಂದ ಇರಾನ್ ಸೇನೆಯ ಮೇಲೆ ಭಾರಿ ಪರಿಣಾಮವಾಗಿದೆ, ಶಸ್ತ್ರಾಸ್ತ್ರಗಳ ಸಂಗ್ರಹದಲ್ಲಿ ಸಾಕಷ್ಟು ನಷ್ಟವಾಗಿದೆ. ಇಬ್ಬರು ಇರಾನ್ ಯೋಧರು ಸಾವಿಗೀಡಾಗಿರುವುದಾಗಿ ವರದಿಯಾಗಿದೆ.

ಇರಾನ್ ಅ.1ರಂದು ಕ್ಷಿಪಣಿ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ಇಸ್ರೇಲ್ ನೂರಾರು ವಿಮಾನಗಳನ್ನೇ ಕಳುಹಿಸಿ ನೇರ ದಾಳಿ ಶುರುವಿಟ್ಟಿದೆ. ಅ.1ರಂದು ಇರಾನ್ ಕ್ಷಿಪಣಿ ದಾಳಿ ನಡೆಸಿದಾಗಲೇ ತಕ್ಕ ಪಾಠ ಕಲಿಸುವುದಾಗಿ ಇಸ್ರೇಲ್ ಹೇಳಿತ್ತು. ಹೇಳಿದಂತೆಯೇ ತೀವ್ರ ಸ್ವರೂಪದಲ್ಲೇ ಮಿಲಿಟರಿ ಕಾರ್ಯಾಚರಣೆಯನ್ನೇ ನಡೆಸಿರುವುದಾಗಿ ಇಸ್ರೇಲ್ ಸೇನೆ ಹೇಳಿಕೊಂಡಿದೆ.

ಟೆಹರಾನ್ ಮತ್ತು ಕರಾಜ್ ನಗರ ಸಮೀಪದ ಸೇನಾ ನೆಲೆಗಳ ಮೇಲೆ ಇಸ್ರೇಲ್‌ನ ಯುದ್ಧ ವಿಮಾನಗಳು ಬಾಂಬ್‌ಗಳ ಮಳೆಯನ್ನೇ ಸುರಿಸಿವೆ. ಪರಿಣಾಮ ಸರಣಿಯೋಪಾದಿಯಲ್ಲಿ ಸ್ಫೋಟಗಳು ಸಂಭವಿಸಿವೆ. ಶನಿವಾರ ನಸುಕಿನ 2 ಗಂಟೆ ನಂತರ ದಾಳಿ ಆರಂಭವಾಗಿದೆ. 3 ಹಂತಗಳಲ್ಲಿ ದಾಳಿ ನಡೆಸಲಾಗಿದೆ. ಸ್ಥಳೀಯ ನಿವಾಸಿಗಳ ಪ್ರಕಾರ ಮೊದಲ ಹಂತದ ದಾಳಿಯಲ್ಲಿ ಕನಿಷ್ಠ 7 ಭಾರೀ ಸ್ಫೋಟಗಳು ಕೇಳಿಬಂದಿವೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಇರಾಕ್ ಭೀತಿ: ಈ ದಾಳಿ ಬಳಿಕ ಇರಾಕ್‌ನಲ್ಲಿಯೂ ಭೀತಿ ಶುರುವಾಗಿದೆ. ಮುಂದಿನ ಆದೇಶದವರೆಗೆ ದೇಶದ ಎಲ್ಲಾ ವಿಮಾನ ನಿಲ್ದಾಣಗಳನ್ನು ಬಂದ್ ಮಾಡಿಸಿ ವಿಮಾನ ಸಂಚಾರ ಸ್ಥಗಿತಗೊಳಿಸುವುದಾಗಿ ಇರಾಕ್ ಸಚಿವಾಲಯ ಘೋಷಿಸಿದೆ.

ಹೆಜ್ಬೊಲ್ಲಾ ದಾಳಿ: ಇರಾನ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದಕ್ಕೆ ಸಿಟ್ಟಿಗೆದ್ದ ಹೆಜ್ಬೊಲ್ಲಾ, ಇಸ್ರೇಲ್‌ನ ಸೇನಾನೆಲೆಗಳ ಮೇಲೆ ನೂರಾರು ಡ್ರೋನ್‌ಗಳ ಮೂಲಕ ದಾಳಿ ಮಾಡಲು ಯತ್ನಿಸಿದೆ. ಅಲ್ಲದೇ 80 ರಾಕೆಟ್‌ಗಳನ್ನು ಹಾರಿಸಿದೆ.

ದಾಳಿ ನೇರ ಪ್ರಸಾರ ವೀಕ್ಷಿಸಿದ ಪ್ರಧಾನಿ

ಇರಾನ್ ವಿರುದ್ಧ ಇಸ್ರೇಲ್ ದಾಳಿ ಪ್ರಾರಂಭಿಸಿದಾಗ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಟೆಲ್‌ಅವಿವ್‌ನಲ್ಲಿ ಇರುವ ಸೇನಾಪಡೆಗಳ ಪ್ರಧಾನ ಕಚೇರಿಯಲ್ಲಿ ಕುಳಿತು ಕ್ಯಾಮೆರಾ ಮೂಲಕ ದಾಳಿಯ ತೀವ್ರತೆಯನ್ನು ವೀಕ್ಷಿಸಿದ್ದರು ನೆತನ್ಯಾಹು ಅವರು ರಕ್ಷಣಾ ಸಚಿವ ಮತ್ತು ಇಸ್ರೇಲ್ ಸೇನಾ ಜನರಲ್‌ಗಳನ್ನು ಬಂಕರ್‌ನಲ್ಲಿ ಭೇಟಿಯಾಗಿದ್ದಾರೆ. ಈ ಬಂಕರ್ ಟೆಲ್‌ಅವೀವ್‌ನಲ್ಲಿರುವ ಕಿರಿಯಾ ಮಿಲಿಟರಿ ನೆಲೆಯಾಗಿದೆ. ಈ ಸಂದರ್ಭದ ಫೋಟೊಗಳನ್ನು ಪ್ರಧಾನಿ ಕಚೇರಿ ಬಿಡುಗಡೆ ಮಾಡಿದೆ.

ಪ್ರತಿದಾಳಿ: ಇರಾನ್ ಎಚ್ಚರಿಕೆ

ಇಸ್ರೇಲ್ ವಾಯುಪಡೆಯ ಆಕ್ರಮಣವನ್ನು ಮುಂಚಿತವಾಗಿಯೇ ರಾಡಾರ್ ಮೂಲಕ ಪತ್ತೆ ಹಚ್ಚಿದ ಇರಾನ್ನ ವಾಯು ರಕ್ಷಣಾ ವ್ಯವಸ್ಥೆ, ಕೆಲವು ಬಾಂಬ್‌ಗಳನ್ನು ಆಗಸದಲ್ಲೇ ಸ್ಫೋಟ ಗೊಳ್ಳುವಂತೆ ಮಾಡಿದೆ. ಸಾಧ್ಯವಾದಷ್ಟೂ ಇಸ್ರೇಲ್ ದಾಳಿಯನ್ನು ಪ್ರತಿಬಂಧಿಸಲು ಯತ್ನಿಸಿದೆ. ಇಸ್ರೇಲ್‌ನ ಈ ದಾಳಿಗೆ ಪ್ರತಿಯಾಗಿ ಇನ್ನಷ್ಟು ದೊಡ್ಡ ಪ್ರಮಾಣದ ದಾಳಿಯನ್ನು ಇಸ್ರೇಲ್ ವಿರುದ್ಧ ಸಂಘಟಿಸುವುದಾಗಿ ಇರಾನ್ ಆಡಳಿತ ಘೋಷಿಸಿದೆ. ಮುಂದಿನ ಸೂಚನೆ ಬರುವವರೆಗೂ ಇರಾನ್‌ನ ಎಲ್ಲಾ ಮಾರ್ಗಗಳಲ್ಲಿನ ವಿಮಾನ ಸಂಚಾರವನ್ನು ರದ್ದುಗೊಳಿಸಲಾಗಿದೆ. ಇಸ್ರೇಲ್ ಕೂಡಾ ತನ್ನ ವಾಯುಪ್ರದೇಶವನ್ನು ಸದ್ಯಕ್ಕೆ ನಾಗರಿಕ ವಿಮಾನ ಯಾನಕ್ಕೆ ಪೂರ್ಣ ಮುಚ್ಚುವುದಾಗಿ ಘೋಷಿಸಿದೆ. ಇರಾನ್ ಮೇಲಿನ ಇಸ್ರೇಲ್ ವಾಯುದಾಳಿಯನ್ನು ಸೌದಿ ಅರೇಬಿಯಾ, ಪಾಕಿಸ್ತಾನ್ ಸೇರಿದಂತೆ ಹಲವು ಮುಸ್ಲಿಂ ರಾಷ್ಟ್ರಗಳು ಖಂಡಿಸಿವೆ.

ಪರಮಾಣು ತಾಣ ಗುರಿಯಲ್ಲ: ಇಸ್ರೇಲ್

ಇರಾನಿನ ಪರಮಾಣು ತಾಣಗಳು ಅಥವಾ ತೈಲ ಕ್ಷೇತ್ರಗಳ ಮೇಲೆ ಇಸ್ರೇಲ್ ದಾಳಿ ಮಾಡುತ್ತಿಲ್ಲ. ಈ ಮೊದಲು ನಮಗೆ ಅಪಾಯ ಉಂಟು ಮಾಡಿದ, ಭವಿಷ್ಯದಲ್ಲಿ ಅಪಾಯ ತಂದೊಡ್ಡಬಲ್ಲ ಅಂಶಗಳನ್ನಷ್ಟೇ ಗಮನದಲ್ಲಿಟ್ಟುಕೊಂಡು ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದೇವೆ. ನಮ್ಮ ದೇಶವನ್ನು ರಕ್ಷಿಸಿಕೊಳ್ಳುವ ಹಕ್ಕು ನಮಗಿದೆ' ಎಂದು ಇಸ್ರೇಲ್ ಅಧಿಕಾರಿ ಹೇಳಿರುವುದಾಗಿ ಟೈಮ್ಸ್ ಆಫ್ ಇಸ್ರೇಲ್ ವರದಿ ಪ್ರಕಟಿಸಿದೆ.

3 ಹಂತಗಳಲ್ಲಿ ದಾಳಿ: ಇಸ್ರೇಲ್

ಇರಾನ್ ಮತ್ತು ಬೆಂಬಲಿಗರು ಅ.7ರಿಂದ ಇಸ್ರೇಲ್ ಮೇಲೆ ಬಿಡದೆ 7 ಬಗೆ ದಾಳಿ ನಡೆಸುತ್ತಿದ್ದಾರೆ. ಅ.1ರಂದು ಇರಾನ್ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗೆ ಪ್ರತೀಕಾರವಾಗಿ ಇರಾನ್ ಸೇನಾ ನೆಲೆಗಳನ್ನು ಗುರಿಯಾಗಿಸಿ ಈಗ 3 ಹಂತಗಳಲ್ಲಿ ದಾಳಿ ನಡೆಸಲಾಗಿದೆ. ಇರಾನ್ ಮಿಲಿಟರಿ ನೆಲೆಗಳ ಮೇಲೆ ಗುರಿಯಿಟ್ಟು ನಿಖರವಾದ ದಾಳಿ ನಡೆಸಿದ್ದೇವೆ. ಇಸ್ರೇಲ್ ಮೇಲೆ ಇರಾನ್ ದಾಳಿ ಮಾಡಲಿದೆ ಎಂಬ ಮಾಹಿತಿ ಇದ್ದುದರಿಂದಲೇ ಮುನ್ನೆಚ್ಚರಿಕೆ ಕ್ರಮವಾಗಿ ಈ ದಾಳಿ ಯೋಜಿಸಲಾಗಿದೆ ಎಂದು ಇಸ್ರೇಲ್ ಸೇನಾ ಮುಖ್ಯಸ್ಥ ಹಜಿರ್ ಹಲೇವಿ ಮಾಹಿತಿ ನೀಡಿದ್ದಾರೆ. ಇರಾನ್ ಅ.1ರಂದು ನಡೆಸಿದ ಕ್ಷಿಪಣಿ ದಾಳಿಗೆ ಈಗ ಪ್ರತಿಕ್ರಿಯೆ ನೀಡಿದ್ದೇವೆ. ಇರಾನ್ ಮತ್ತೆ ದಾಳಿ ಪ್ರಾರಂಭಿಸುವ ತಪ್ಪನ್ನು ಮಾಡಿದರೆ ಇಸ್ರೇಲ್ ಸುಮ್ಮನೆ ಕೂರುವುದಿಲ್ಲ. ಇಸ್ರೇಲ್‌ಗೆ ಬೆದರಿಕೆ ಹಾಕಿದವರು ಭಾರೀ ದಂಡ ತೆರಬೇಕಾಗುತ್ತದೆ.

2000 ಕಿಮೀ ದೂರದಿಂದ ಹಾರಿ ಬಂದ ವಿಮಾನ

ಟೆಹರಾನ್ ಮತ್ತು ಕರಾಜ್ ನಗರಗಳ ಸಮೀಪವಿರುವ ಇರಾನ್ ಸೇನಾ ನೆಲೆಗಳ ಮೇಲಿನ ದಾಳಿಗೆ ಎಫ್-35 ಫೈಟರ್ ಜೆಟ್ ವಿಮಾನಗಳನ್ನು ಇಸ್ರೇಲ್ ವಾಯುಪಡೆ ಬಳಸಿದೆ. 2000 ಕಿ.ಮೀ ದೂರದಿಂದ ಹಾರಿಬಂದ ಎಫ್-35 ಯುದ್ಧ ವಿಮಾನಗಳು ಇರಾನ್‌ನ ರಾಡಾರ್ ಆಧರಿಸಿದ ಯುದ್ಧ ವಿಮಾನ ನಿಗ್ರಹ ವ್ಯವಸ್ಥೆಗಳಿಗೂ ಬಗ್ಗದೇ ದಾಳಿ ನಡೆಸಿ ವಾಪಸಾಗಿವೆ. ಇರಾನ್ ಸೇನಾ ನೆಲೆಗಳ ಮೇಲೆ ದಾಳಿ ನಡೆಸುವ ಮೊದಲು ಅಮೆರಿಕಕ್ಕೆ ಮಾಹಿತಿ ನೀಡಲಾಗಿತ್ತು, ಆದರೆ ಅಮೆರಿಕಾ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿಲ್ಲ ಎಂದು ಅಮೆರಿಕಾ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ.

ಜಲರಾಶಿಯಲ್ಲಿ ಮುಳುಗಿದ 2.80 ಲಕ್ಷ ಎಕರೆ ಕೃಷಿ ಭೂಮಿ | ಪಶ್ಚಿಮ ಬಂಗಾಳದಲ್ಲಿ ನಾಲ್ವರ ಸಾವು

ಒಡಿಶಾ 1.75 ಲಕ್ಷ ಎಕರೆ ಬೆಳೆ ನಾಶ

ಡಾನಾ ಚಂಡಮಾರುತದ ಪರಿಣಾಮ 120 ಕಿ.ಮೀ. ವೇಗದ ಬಿರುಗಾಳಿ ಬೀಸಿದ್ದರಿಂದ ಪಶ್ಚಿಮ ಬಂಗಾಳ, ಒಡಿಶಾ ಕರಾವಳಿಯಲ್ಲಿ ಹತ್ತಾರು ಅಡಿಗಳಷ್ಟು ಎತ್ತರಕ್ಕೆ ಅಲೆಗಳೆದ್ದು ಅಪ್ಪಳಿಸಿವೆ

ಕೋಲ್ಕತ್ತ/ಭುವನೇಶ್ವರ: ಡಾನಾ ಚಂಡಮಾರುತದಿಂದ ಪಶ್ಚಿಮ ಬಂಗಾಳದಲ್ಲಿ ನಾಲ್ವರು ಸಾವಿಗೀಡಾಗಿದ್ದಾರೆ. ಇನ್ನೊಂದೆಡೆ ಒಡಿಶಾ ರಾಜ್ಯದಲ್ಲಿ ಲಕ್ಷಾಂತರ ಎಕರೆ ಕೃಷಿ ಪ್ರದೇಶ ಹಾನಿಗೀಡಾಗಿದೆ.

ಪ್ರಾಥಮಿಕ ವರದಿಕಗಳ ಪ್ರಕಾರ ಒಡಿಶಾದಲ್ಲಿ 1.75 ಲಕ್ಷ ಎಕರೆ ಪ್ರದೇಶದಲ್ಲಿದ್ದ ಕೃಷಿ ಬೆಳೆಗಳನ್ನು ಡಾನಾ ಚಂಡಮಾರುತ ಪೂರ್ಣ ನಾಶಗೊಳಿಸಿದೆ. ಅಲ್ಲದೇ, 2.80 ಲಕ್ಷ ಎಕರೆಗಳಷ್ಟು ಕೃಷಿ ಪ್ರದೇಶ ನೀರಿನಲ್ಲಿ ಮುಳುಗಿ ಹಾನಿಗೀಡಾಗಿದೆ. ಡಾನಾ ಚಂಡಮಾರುತ ಶುಕ್ರವಾರ ಮುಂಜಾನೆ ಪಶ್ಚಿಮ ಬಂಗಾಳದ ಪೂರ್ವ ಕರಾವಳಿಗೆ ಅಪ್ಪಳಿಸಿದ್ದು, ಧಾರಾಕಾರ ಮಳೆಯಾಗಿದೆ. ಬಿರುಗಾಳಿ ಬೀಸಿ ಮರಗಳು ಮತ್ತು ವಿದ್ಯುತ್ ಕಂಬಗಳನ್ನು ಬುಡಮೇಲು ಮಾಡಿದೆ. ಒಡಿಶಾ ಮತ್ತು ಪಶ್ಚಿಮ ಬಂಗಾಳ ದಲ್ಲಿ ನಾಗರಿಕರ ಮೂಲಸೌಕರ್ಯಗಳು ಮತ್ತು ಬೆಳೆಗಳಿಗೆ ಹಾನಿಯುಂಟಾಗಿವೆ. ಪಶ್ಚಿಮ ಬಂಗಾಳದ ಪುರ್ಬಾ ಬರ್ಧಮಾನ್ ಜಿಲ್ಲೆಯ ಬಡ್‌ಬಡ್‌ನಲ್ಲಿ ಪೊಲೀಸರ ಜತೆ ಪರಿಹಾರ ಕಾರ್ಯಕ್ಕೆ ತೆರಳಿದ್ದ ಚಂದನ್ ದಾಸ್ (31) ಎಂಬ ಸ್ವಯಂಸೇವಕ ವಿದ್ಯುತ್ ತಂತಿ ಸ್ಪರ್ಶಕ್ಕೊಳಗಾಗಿ ಸಾವಿಗೀಡಾಗಿದ್ದಾರೆ.

ತಂತಿಪಾರಾದಲ್ಲಿ ಜಲಾವೃತ ರಸ್ತೆಯಲ್ಲಿ ಹೌರಾ ಮುನ್ಸಿಪಲ್ ಕಾರ್ಪೊರೇಶನ್ನ ಉದ್ಯೋಗಿಯೊಬ್ಬರ ಶವ ಪತ್ತೆಯಾಗಿದೆ. ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ದಕ್ಷಿಣ 24 ಪರಗಣ ಜಿಲ್ಲೆಯ ಪಥರ್‌ಪ್ರತಿಮಾದಲ್ಲಿ ಒಬ್ಬರು ಮೃತಪಟ್ಟರೆ, ಮತ್ತೊಬ್ಬರು ದಕ್ಷಿಣ ಕೋಲ್ಕತ್ತದ ಭಬಾನಿಪುರ ಪ್ರದೇಶದಲ್ಲಿ ಮೃತಪಟ್ಟಿದ್ದಾರೆ.

8 ಬೇಡಿಕೆಗಳ ಈಡೇರಿಕೆಗಾಗಿ ಮಧ್ಯಂತರ ಸರಕಾರಕ್ಕೆ ಜನ ಸಾಗರ ಆಗ್ರಹ

ಬಾಂಗ್ಲಾದಲ್ಲಿ ಸನಾತನಿಗಳ ಬೃಹತ್ ರ‍್ಯಾಲಿ!

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂ ಸಮುದಾಯ ಮತ್ತೊಮ್ಮೆ ಒಗ್ಗಟ್ಟು ಪ್ರದರ್ಶಿಸಿ ವಿಶ್ವದ ಗಮನ ಸೆಳೆದಿದೆ. 'ಸನಾತನ್ ಜಾಗರಣ್ ಮಂಚ್' ಸಂಘಟನೆಯಡಿ ಲಕ್ಷಾಂತರ ಹಿಂದೂಗಳು ಒಟ್ಟಾಗಿ ಬಾಂಗ್ಲಾದೇಶದ ಛಟ್ಟೋಗ್ರಾಂನಲ್ಲಿ ಶುಕ್ರವಾರ ಬೃಹತ್ ರ‍್ಯಾಲಿ ನಡೆಸಿದ್ದಾರೆ. ಆ ಮೂಲಕ 'ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳನ್ನು ರಕ್ಷಿಸಬೇಕು' ಎಂಬುದೂ ಸೇರಿದಂತೆ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಂದೆ 8 ಬೇಡಿಕೆಗಳನ್ನು ಮುಂದಿಟ್ಟು ಆಗ್ರಹ ವ್ಯಕ್ತಪಡಿಸಿದ್ದಾರೆ.

ಬೆಟ್ಟಗಳ ಪ್ರದೇಶವಾದ ಛಟ್ಟೋಗ್ರಾಂ ಜಿಲ್ಲೆಯ ಕಾಕ್ಸ್ ಬಜಾರ್‌ನಿಂದ ಲಕ್ಷಾಂತರ ಹಿಂದೂಗಳು ಬೃಹತ್ ಮೆರವಣಿಗೆ ನಡೆಸಿದರು. ಜನರ ದೊಡ್ಡ ಸಾಗರವೇ ಅಲ್ಲಿ ನೆರೆದಿತ್ತು. ಬಾಂಗ್ಲಾದೇಶ ಸನಾತನ ಜಾಗರಣ್ ಮಂಚ್‌ನ ವಕ್ತಾರರಾದ ಚಿನ್ಮೋಯ್ ಕೃಷ್ಣದಾಸ್ ಬ್ರಹ್ಮಚಾರಿ ಈ ಬೃಹತ್ ರ‍್ಯಾಲಿಯ ನೇತೃತ್ವ ವಹಿಸಿದ್ದರು. ಇದೇ ವೇಳೆ, ಹಿಂದೂ, ಸಿಖ್, ಜೈನ, ಬೌದ್ಧ, ಕ್ರೈಸ್ತ ಸಮುದಾಯಗಳು ಸೇರಿದಂತೆ ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತ ಮುಸ್ಲಿಮರಿಂದ ಪದೇ ಪದೇ ದಾಳಿ ನಡೆಯುತ್ತಿರುವುದು, ಕೊಲೆಗಳಾಗುತ್ತಿರುವುದನ್ನೂ ರ‍್ಯಾಲಿಯಲ್ಲಿ ತೀವ್ರವಾಗಿ ಖಂಡಿಸಲಾಯಿತು. ಅಲ್ಪಸಂಖ್ಯಾತ ಸಮುದಾಯಗಳ ರಕ್ಷಣೆಗೆ ಮಧ್ಯಂತರ ಸರಕಾರ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ ಆಗ್ರಹಿಸಲಾಯಿತು.

8 ಬೇಡಿಕೆ: ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ಹಲ್ಲೆ, ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆ 'ವಿಶೇಷ ಟ್ರಿಬ್ಯನಲ್ ರಚಿಸಬೇಕು. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ 'ಮೈನಾರಿಟಿ ಪ್ರೊಟೆಕ್ಷನ್ ಲಾ' ಜಾರಿಗೊಳಿಸಬೇಕು. ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ 'ಮೈನಾರಿಟಿ ಅಫೇರ್ಸ್ ಸಚಿವಾಲಯ' ರಚನೆಯಾಗಬೇಕು. ಹಿಂದೂ ವೆಲ್‌ಫೇರ್ ಟ್ರಸ್ಟ್ ಅನ್ನು ಹಿಂದೂ ಪ್ರತಿಷ್ಠಾನವಾಗಿ ಮೇಲ್ದರ್ಜೆಗೇರಿಸಬೇಕು. ದೇಗುಲಗಳ ಸಂರಕ್ಷಣೆಗಾಗಿ ಮತ್ತು ಮರು ಸ್ಥಾಪನೆಗಾಗಿ ಸೂಕ್ತ ಕಾನೂನು ಜಾರಿಗೊಳಿಸಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾರ್ಥನೆಗೆ ಪ್ರತ್ಯೇಕ ಜಾಗ ಮೀಸಲಿಡಬೇಕು. ಸಂಸ್ಕೃತ ಮತ್ತು ಪಾಲಿ ಭಾಷೆ ಶಿಕ್ಷಣ ಮಂಡಳಿಗಳನ್ನು ಆಧುನೀಕರಿಸಬೇಕು. ದುರ್ಗಾ ಪೂಜೆ ಸಂದರ್ಭ 5 ದಿನಗಳ ಸಾರ್ವಜನಿಕ ರಜೆ ಘೋಷಿಸಬೇಕು ಎಂಬುದೇ 8 ಬೇಡಿಕೆಗಳಾಗಿವೆ.

ದೀಪಾವಳಿಗೆ 3000 ವಿಶೇಷ ರೈಲು

ದೆಹಲಿ: ಹಬ್ಬಗಳ ಸಂದರ್ಭ ಪ್ರಯಾಣಿಕರ ದಟ್ಟಣೆ ಹೆಚ್ಚುವುದರಿಂದ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ 3 ಸಾವಿರಕ್ಕೂ ಅಧಿಕ ವಿಶೇಷ ರೈಲುಗಳನ್ನು ಸಂಚಾರ ನಡೆಸುವಂತೆ ವ್ಯವಸ್ಥೆ ಮಾಡಲು ಭಾರತೀಯ ರೈಲ್ವೆ ಮುಂದಾಗಿದೆ. ನೌಕರಿ, ವ್ಯಾಪಾರ, ವೃತ್ತಿ ಸಂಬಂಧವಾಗಿ ಕೋಟ್ಯಂತರ ಜನರ ಬೇರೆ ಬೇರೆ ರಾಜ್ಯಗಳಿಗೆ ವಲಸೆ ಹೋಗುವುದು ಇತ್ತೀಚೆಗೆ ಹೆಚ್ಚಿದೆ. ಅವರಲ್ಲಿ ಬಹುತೇಕ ಮಂದಿ ಹಬ್ಬಗಳ ಸಂದರ್ಭ ತಮ್ಮ ಊರುಗಳಿಗೆ ಹೋಗಲು ಬಯಸುವುದರಿಂದ ಪ್ರಯಾಣಿಕರ ದಟ್ಟಣೆ ಹಬ್ಬಗಳ ಸಂದರ್ಭ ದಿಢೀರ್ ಎಂಬಂತೆ ಹೆಚ್ಚುತ್ತದೆ. ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹಬ್ಬಗಳ ಸಂದರ್ಭ ಹೆಚ್ಚುವರಿಯಾಗಿ ಈ ವರ್ಷ ಒಟ್ಟಾರೆ 3 ಸಾವಿರ ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಮಹಾ ಚುನಾವಣೆ: ಬಿಜೆಪಿ, ಕೈಪಡೆ 2ನೇ ಪಟ್ಟಿ

ದೆಹಲಿ: ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಶನಿವಾರ ಅಭ್ಯರ್ಥಿಗಳ 2ನೇ ಪಟ್ಟಿ ಪ್ರಕಟಿಸಿವೆ.

ಬಿಜೆಪಿ ಎರಡನೇ ಪಟ್ಟಿಯಲ್ಲಿ 22 ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ. ಇಬ್ಬರು ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪಿದೆ. 6 ಶಾಸಕರಿಗೆ ಮತ್ತೆ ಟಿಕೆಟ್ ನೀಡಲಾಗಿದೆ. ಇದರೊಂದಿಗೆ ಕೇಸರಿ ಪಕ್ಷ ಈವರೆಗೆ 121 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ಜಾಟ್ ಕ್ಷೇತ್ರದಿಂದ ಗೋಪಿಚಂದ್ ಪಡಲ್ಕ ಮತ್ತು ಲಾತೂರ್ ಗ್ರಾಮಾಂತರದಿಂದ ರಮೇಶ್ ಕರದ್ ಅವರನ್ನು ಕಣಕ್ಕಿಳಿಸಲಾಗಿದೆ. ಅಕೋಟ್, ನಾಸಿಕ್ ಸೆಂಟ್ರಲ್, ಪೆನ್, ಖಡಕ್ವಾಸಲಾ, ಪುಣೆ ಕಂಟೋನ್ಮೆಂಟ್ ಮತ್ತು ಉಲ್ಲಾಸ ನಗರದ ಶಾಸಕರಿಗೆ ಟಿಕೆಟ್ ನೀಡಲಾ ಗಿದೆ. ವಾಶಿಮ್ ಮತ್ತು ಗಡ್‌ಚಿರೋಲಿ ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ.

ಕಾಂಗ್ರೆಸ್ ಪಟ್ಟಿ: ಕಾಂಗ್ರೆಸ್ 23 ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪಕ್ಷ ಈವರೆಗೆ ಒಟ್ಟು 71 ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. 48 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. 2ನೇ ಪಟ್ಟಿಯಲ್ಲಿ ನಾಗಪುರ ದಕ್ಷಿಣ ಕ್ಷೇತ್ರದಿಂದ ಕೃಷ್ಣರಾವ್ ಪಾಂಡವ್, ವಾರ್ಧಾದಿಂದ ಶೇಖರ್ ಪ್ರಮೋದಬಾಬು ಶೆಂಡೆ, ರಾಳೇಗಾಂವ್‌ನಿಂದ ಪ್ರೊ.ವಸಂತ್ ಚಿಂದೂಜಿ ಪುರ್ಕೆ ಮತ್ತು ಜಲ್ನಾದಿಂದ ಕೈಲಾಸ್ ಕಿಸನ್ರಾವ್ ಗೋರ್‌ತಂಟ್ಯಾಲ್, ಕಾಂದಿವಲಿ ಪೂರ್ವದಿಂದ ಕಾಲು ಬಧೇಲಿಯಾ ಮತ್ತು ಚಾರ್ಕೋಪ್ ಕ್ಷೇತ್ರದಿಂದ ಯಶವಂತ್ ಜಯಪ್ರಕಾಶ್ ಸಿಂಗ್ ಅವರನ್ನು ಕಣಕ್ಕಿಳಿಸಿದೆ.

ಇಂಡಿಯ ಕಿತ್ತಾಟ

ಎಐಸಿಸಿ ಮಹಾರಾಷ್ಟ್ರ ಉಸ್ತುವಾರಿ ರಮೇಶ್ ಚೆನ್ನಿತ್ತಲ ಅವರು ಮಾತ್ರ, 'ಇಂಡಿ' ಒಕ್ಕೂಟದಲ್ಲಿ ಬಿರುಕು ಇಲ್ಲ ಎನ್ನುತ್ತಿದ್ದಾರೆ. ಆದರೆ, 'ಇಂಡಿಯ' ಒಕ್ಕೂಟದ 'ಸಮಾಜವಾದಿ ಪಕ್ಷ' (ಎಸ್‌ಪಿ) ಐದು ಸ್ಥಾನಗಳಿಗೆ ಒತ್ತಾಯಿಸುತ್ತಿದೆ. 5 ಕ್ಷೇತ್ರಗಳನ್ನು ಬಿಟ್ಟುಕೊಡದೇ ಇದ್ದರೆ ಕನಿಷ್ಠ 25 ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧೆ ಮಾಡುವುದಾಗಿಯೂ ಎಸ್‌ಪಿ ನಾಯಕರು 'ಇಂಡಿಯ' ಒಕ್ಕೂಟಕ್ಕೆ ಬೆದರಿಕೆ ಒಡ್ಡುತ್ತಿದ್ದಾರೆ.

ರೈಲಿನ ಹಳಿ ತಪ್ಪಿಸಲು ಮತ್ತೊಂದು ವಿಫಲ ಯತ್ನ

ದೆಹಲಿ: ರೈಲು ಹಳಿ ತಪ್ಪಿಸುವ ಸಂಚು ದೇಶದಲ್ಲಿನ್ನೂ ಮುಂದುವರಿದಿದೆ. ಈ ಬಾರಿ ಉತ್ತರ ಪ್ರದೇಶದಲ್ಲಿ ದೆಹಲಿ-ಲಖನೌ ನಡುವಿನ ರೈಲು ಹಳಿ ಮೇಲೆ 2 ಅಡಿ ಉದ್ದದ ಮರದ ತುಂಡು

ಇರಿಸಿ ಬರೇಲಿ-ವಾರಣಾಸಿ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿಸುವ ಯತ್ನ ನಡೆದಿದೆ. ವೇಗದಲ್ಲಿದ್ದ ಎಕ್ಸ್‌ಪ್ರೆಸ್ ರೈಲು ಮರದ ತುಂಡಿಗೆ ಡಿಕ್ಕಿ ಹೊಡೆದು ಅದನ್ನೂ ಸ್ವಲ್ಪ ದೂರ ಎಳೆದುಕೊಂಡು ಹೋಗಿದೆ. ಮರದ ತುಂಡು ಲೋಹದ ಚಕ್ರಗಳಡಿ ಸಿಕ್ಕಿಕೊಂಡಿದೆ. ರೈಲನ್ನು ಸುರಕ್ಷಿತವಾಗಿ ನಿಲ್ಲಿಸುವಲ್ಲಿ ಲೋಕೋ ಪೈಲಟ್ ಯಶಸ್ವಿಯಾಗಿದ್ದಾರೆ. ಅವಘಡದಲ್ಲಿ ಸಿಗ್ನಲಿಂಗ್ ಸಾಧನ ಹಾನಿ ಗೊಂಡಿದೆ. ಪ್ರಕರಣ ಸಂಬಂಧಪಟ್ಟ ಮಲಿಹಾಬಾದ್ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ. ಬಳಿಕ ರೈಲ್ವೆಯ ತಪಾಸಣಾ ತಂಡ ಮತ್ತು ಲೋಕೊಪೈಲಟ್ ಕಷ್ಟಪಟ್ಟು ಮರದ ತುಂಡನ್ನು ಹೊರತೆಗೆದರು. 2 ಗಂಟೆಗಳ ಕಾಲ ರೈಲು ಸಂಚಾರ ಅಸ್ತವ್ಯಸ್ತಗೊಂಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ತಿಂಗಳು ರೈಲ್ವೆ ಆಡಳಿತ ವಿಧ್ವಂಸಕ ಯತ್ನಗಳ ವಿರುದ್ಧ ಜಾಗರೂಕವಾಗಿದೆ. ಹಲವು ರಾಜ್ಯಗಳಲ್ಲಿ ಎನ್‌ಐಎ ಮತ್ತು ಪೊಲೀಸರು ಸೇರಿದಂತೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದರು.

ಎಐಸಿಸಿ ಅಧ್ಯಕ್ಷರಾಗಿ ಖರ್ಗೆ 2 ವರ್ಷ ಪೂರ್ಣ

ದೆಹಲಿ: ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ(82) ಶನಿವಾರಕ್ಕೆ 2 ವರ್ಷ ಪೂರ್ಣಗೊಂಡಿವೆ. ಪಕ್ಷದ ಬಲವರ್ಧನೆಗಾಗಿ ಖರ್ಗೆ ಅವರ ಕೊಡುಗೆಯನ್ನು ಸ್ಮರಿಸಿರುವ ರಾಹುಲ್ ಗಾಂಧಿ



ಮತ್ತು ಹಲವು ಕಾಂಗ್ರೆಸ್ ನಾಯಕರು ಖರ್ಗೆ ಅವರನ್ನು ಪ್ರಶಂಸಿಸಿದ್ದಾರೆ.

ಖರ್ಗೆ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ 2022ರ ಅ.26ರಂದು ಅಧಿಕಾರ ಸ್ವೀಕರಿಸಿದ್ದರು. ಕಳೆದ 24 ವರ್ಷಗಳಲ್ಲಿ ಕಾಂಗ್ರೆಸ್ ಅಧ್ಯಕ್ಷಗಾದಿಗೆ ಆಯ್ಕೆಯಾದ ಗಾಂಧಿ ಕುಟುಂಬದಿಂದ ಹೊರತಾದ ಮೊದಲ ನಾಯಕ. ದೆಹಲಿಯ ತಮ್ಮ ನಿವಾಸದಲ್ಲಿ ಖರ್ಗೆ ಅವರು ಕೇಕ್ ಕತ್ತರಿಸಿ ಸಂಭ್ರಮಿಸಿದ್ದಾರೆ. ರಾಹುಲ್ ಗಾಂಧಿ, ಅಜಯ್ ಮಾಕೆನ್, ಜೈರಾಮ್ ರಮೇಶ್, ಕುಮಾರಿ ಶೆಲ್ಜಾ ಮತ್ತಿತರರು ಶುಭ ಕೋರಿದ್ದಾರೆ. 1996-99 ಅವಧಿಯಲ್ಲಿ ಕರ್ನಾಟಕ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿದ್ದರು. 2005-08 ಅವಧಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದರು. 2020 ರಿಂದ ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿದ್ದಾರೆ. 2021ರಲ್ಲಿ ರಾಜ್ಯಸಭೆ ಪ್ರತಿಪಕ್ಷ ನಾಯಕರಾಗಿದ್ದರು. 2009ರ ಸಾರ್ವತ್ರಿಕ ಚುನಾವಣೆಯಲ್ಲಿ ಕಲುಬುರಗಿಯಿಂದ ಗೆದ್ದು ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದ್ದರು. 2013-14 ರೈಲ್ವೆ, 2009-13 ಅವಧಿಗೆ ಕಾರ್ಮಿಕ ಮತ್ತು ಉದ್ಯೋಗ ಸಚಿವರಾಗಿದ್ದರು.

ಯಮುನೆಯಲ್ಲಿ ಸ್ನಾನ ಬಿಜೆಪಿ ನಾಯಕ ಆಸ್ಪತ್ರೆಗೆ

ದೆಹಲಿ: ಕಲುಷಿತ ಯಮುನಾ ನದಿ ಸ್ವಚ್ಛಗೊಳಿಸುವ ಭರವಸೆ ಈಡೇರಿಸದ ದೆಹಲಿಯ ಆಮ್ ಆದ್ಮಿ ಪಕ್ಷದ(ಎಎಪಿ) ಸರಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ವೀರೇಂದ್ರ ಸಚ್‌ದೇವ್ ವಿನೂತನ

ರೀತಿ ಪ್ರತಿಭಟನೆ ನಡೆಸಲು ಮುಂದಾಗಿ ಈ ಆಸ್ಪತ್ರೆಗೆ ದಾಖಲಾಗಿದ್ದಾರೆ.

ರಾಸಾಯನಿಕಗಳಿಂದ ಉಂಟಾಗಿದ್ದ ನೊರೆಯಿಂದ ತುಂಬಿದ್ದ ಯಮುನಾ ನದಿಗೆ ಇಳಿದ ಸಚ್‌ದೇವ್, ಕಲುಷಿತ ನೀರಿನಲ್ಲೇ ಮುಳುಗಿ ವಿಭಿನ್ನವಾಗಿ ಪ್ರತಿ ಭಟನೆ ಮಾಡಿದ್ದರು. ಇದರಿಂದ ವೀರೇಂದ್ರ ಸಚ್‌ದೇವ್ ಆರೋಗ್ಯ ಏರು ಪೇರಾಗಿದೆ. ಕಲುಷಿತ ನೀರಿನ ಕಾರಣ ಚರ್ಮಕ್ಕೆ ಅಲರ್ಜಿ ಆಗಿದೆ. ಮೈಮೇಲೆ ಬೊಕ್ಕೆಗಳೆದ್ದು, ವಿಪರೀತ ತುರಿಕೆ ಉಂಟಾಗಿದೆ. ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿದೆ. ಪರಿಣಾಮ ಸಚ್‌ದೇವ್ ದೆಹಲಿಯ ರಾಮ್ ಮನೋಹರ ಲೋಹಿಯಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದೆಹಲಿ ಎಎಪಿ ಸರಕಾರದ ಪರಿಸರ ಸಚಿವ ಗೋಪಾಲ್ ರೈ ಅವರು ಬಿಜೆಪಿ ರಾಜ್ಯಾಧ್ಯಕ್ಷರ ಪ್ರತಿಭಟನೆಯೊಂದು ನಾಟಕ ಎಂದು ಟೀಕಿಸಿದ್ದಾರೆ. ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಬಿಜೆಪಿ ಸರಕಾರಗಳೇ ಇವೆ. ಆ ರಾಜ್ಯಗಳಿಂದ ಕೈಗಾರಿಕಾ ದ್ರವ ತ್ಯಾಜ್ಯವನ್ನು ಸಂಸ್ಕರಿಸದೇ ಯಮುನಾ ನದಿಗೆ ಬಿಡುತ್ತಿರುವುದರಿಂದಲೆ ನದಿ ಕಲುಷಿತಗೊಳ್ಳುತ್ತಿದೆ ಎಂದು ತಿರುಗೇಟು ನೀಡಿದ್ದಾರೆ.

ಲಾರೆನ್ಸ್ ಸಂದರ್ಶನ: ಪೊಲೀಸರ ಅಮಾನತು

ಚಂಡೀಗಢ: ರಾಜ್ಯ ಪೊಲೀಸರ ವಶದಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ 'ಟಿವಿ ಸಂದರ್ಶನ'ಕ್ಕೆ ಅವಕಾಶ ಮಾಡಿಕೊಟ್ಟ ಆರೋಪದಡಿ ಇಬ್ಬರು ಡಿವೈಎಸ್‌ಪಿಗಳು ಸೇರಿದಂತೆ ಏಳು ಪೊಲೀಸ್ ಅಧಿಕಾರಿಗಳನ್ನು ಪಂಜಾಬ್ ಸರಕಾರ ಅಮಾನತುಗೊಳಿಸಿದೆ. ಲಾರೆನ್ಸ್ ಬಿಷ್ಣೋಯ್ 2022ರ ಸೆ.3 ಮತ್ತು 4ರಂದು ಖರಾರ್ ಪೊಲೀಸ್ ವಶದಲ್ಲಿದ್ದಾಗಲೇ ವೀಡಿಯೊ ಕಾನ್ಫರೆನ್ಸ್ ಮೂಲಕ ಸುದ್ದಿವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದು ಪ್ರಸಾರವಾಗಿತ್ತು. ವಿಶೇಷ ತನಿಖಾ ತಂಡ(ಎಸ್‌ಐಟಿ) ಇದನ್ನು ಪತ್ತೆಹಚ್ಚಿದ್ದು, ನಂತರ ಇಲಾಖೆ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಶಿಸ್ತುಕ್ರಮ ಕೈಗೊಳ್ಳಲಾಗಿದೆ. ವಿಶೇಷ ಡಿಜಿಪಿ (ಮಾನವ ಹಕ್ಕುಗಳು) ಪ್ರಬೋಧ್ ಕುಮಾರ್ ನೇತೃತ್ವದ ಎಸ್‌ಐಟಿ ಪ್ರಕರಣದ ಸೂಕ್ಷ್ಮತೆ ಗಮನದಲ್ಲಿರಿಸಿ ಪೊಲೀಸರ ಅಮಾನತು ಕ್ರಮಕ್ಕೆ ಸರಕಾರಕ್ಕೆ ಶಿಫಾರಸು ಮಾಡಿತ್ತು. ಬಳಿಕ, ಪಂಜಾಬ್ ಗೃಹ ಕಾರ್ಯದರ್ಶಿ ಗುರುಕಿರತ್ ಕಿರ್ಪಾಲ್ ಸಿಂಗ್ ಆದೇಶ ಹೊರಡಿಸಿದ್ದಾರೆ. ಡಿವೈಎಸ್‌ಪಿಗಳಾದ ಗುಶರರ್ ಸಿಂಗ್ ಸಂಧು ಮತ್ತು ಸಮ್ಮರ್ ವನೀತ್, ಸಬ್ ಇನ್‌ಸ್ಪೆಕ್ಟರ್‌ಗಳಾದ ರೀನಾ, ಜಗತ್ಪಾಲ್ ಜಂಗು, ಶಗಂಜಿತ್ ಸಿಂಗ್ ಮತ್ತು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಮುಖ್ತಿಯಾರ್ ಸಿಂಗ್ ಮತ್ತು ಎಚ್‌ಸಿ ಓಂ ಪ್ರಕಾಶ್ ಅಮಾನತುಗೊಂಡವರು.

ಸಮಾಚಾರ ಸಣ್ಣದಲ್ಲ

ನಕಲಿ ಫೇಸ್‌ಬುಕ್ ಖಾತೆ: ದೂರು ದಾಖಲು

ಮಂಗಳೂರು: ಮಂಗಳೂರು ಪೊಲೀಸ್ ಆಯುಕ್ತರ ಹೆಸರಿನಲ್ಲಿ ನಕಲಿ ಫೇಸ್ ಬುಕ್ ಖಾತೆ ತೆರೆದು ಮೆಸೆಂಜರ್ ಮೂಲಕ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣ ನಡೆದಿದ್ದು, ಈ ಕುರಿತಂತೆ ಮಂಗಳೂರು ಸೆನ್ ಠಾಣೆಯಲ್ಲಿ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ಅವರು ವಂಚಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸೈಬರ್ ವಂಚಕರು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಅವರ ಹೆಸರಿನಲ್ಲಿ ನಕಲಿ ಖಾತೆ ಕ್ರಿಯೆಟ್ ಮಾಡಿದ್ದಾರೆ. ಬಳಿಕ ಕೆಲವರಿಗೆ ಫ್ರೆಂಡ್ ರಿಕ್ವೆಸ್ಟ್ ಕಳಿಸಿ ಬಳಿಕ ಮೆಸೆಂಜರ್ ಮೂಲಕ ಹಣ ಕೇಳಿದ್ದಾರೆ. ಈ ವಿಚಾರ ತಿಳಿದ ಮಂಗಳೂರು ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ಅವರು ವಂಚಕರ ವಿರುದ್ಧ ಮಂಗಳೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ ''ತಮ್ಮ ಹೆಸರಲ್ಲಿ ಬರುವ ಸಂದೇಶಗಳಿಗೆ ಪ್ರತಿಕ್ರಿಯೆ ನೀಡಬೇಡಿ'' ಎಂದು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಕಾವ್ಯ ಸಂಸ್ಕೃತಿ ಯಾನ ನ.18ಕ್ಕೆ

ಚಿಕ್ಕಮಗಳೂರು: ಕಾವ್ಯ ಸಂಸ್ಕೃತಿಯಾನ ಮನುಕುಲದ ನೋವಿಗೆ ಮದ್ದಾಗಲಿ ಕವಿತೆಗಳು. ಜನಸಾಮಾನ್ಯರ ದನಿಯಾಗಲಿ ಕಾವ್ಯ. ಎನ್ನುವ ಉದ್ದೇಶದಿಂದ ಕವಿತೆಗಳಿಗೆ ಆಹ್ವಾನ ನೀಡಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಪ್ರಿಯ ಓದುಗರನ್ನು ಕಾವ್ಯದೆಡೆಗೆ ಸೆಳೆಯುವ ಉದ್ದೇಶದಿಂದ ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬೆಂಗಳೂರಿನ ರಂಗಮಂಡಲ ಸಹಕಾರದೊಂದಿಗೆ ನವೆಂಬರ್ 18 ರಂದು ಒಂದು ದಿನದ ಕಾವ್ಯ ಸಂಸ್ಕೃತಿ ಯಾನ ಕಾರ್ಯಕ್ರಮವನ್ನು ಚಿಕ್ಕಮಗಳೂರಿನ ಆಶಾಕಿರಣ ಅಂಧ ಮಕ್ಕಳ ಶಾಲೆ ಹಿಂಭಾಗದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಇವರ ಸಂಯುಕ್ತಾಶ್ರಯದಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸೂರಿ ಶ್ರೀನಿವಾಸ್ ತಿಳಿಸಿದರು. ಚಿಕ್ಕಮಗಳೂರು ಜಿಲ್ಲೆಯ' ಕಾವ್ಯ ಯಾನ' ಕಾವ್ಯ ಸಂಸ್ಕೃತಿ ಯಾನ ಸಂಚಾಲಕರಾಗಿ ರವಿ ದಳವಾಯಿ ಮತ್ತು ಎಸ್. ಎಸ್. ವೆಂಕಟೇಶ್ ಸಂಘಟಿಸುತ್ತಿದ್ದಾರೆ. ಭಾಗವಹಿಸುವ ಕವಿಗಳು ತಮ್ಮ ಇತ್ತೀಚಿನ ಉತ್ತಮ ಕವಿತೆಯನ್ನು ಈ ಕೆಳಕಂಡ ಇಮೇಲ್ ವಿಳಾಸಕ್ಕೆ Whats app no-9483087591* ಹಾಗೂ email address :ravi71.iti@gmail.com ಹಾಗೂ ಒಂದು ಪ್ರತಿಯನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿಕೊಡಲು ಕೋರಿದೆ ಸೂರಿ ಶ್ರೀನಿವಾಸ್, ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಶ್ರೀಸಾಹಿತ್ಯ ನಗರ ಕಡೂರು - 57548 ಹೆಚ್ಚಿನ ಮಾಹಿತಿಗಾಗಿ 789254497, 9844570546 ಹಾಗೂ 8073327784 ಸಂಪರ್ಕಿಸಬಹುದು.

ಸಮಿತಿ ಸದಸ್ಯರಾಗಿ ಕ್ಯಾ.ಚೌಟ ನೇಮಕ

ಮಂಗಳೂರು: ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರು ರಕ್ಷಣಾ ಸಚಿವಾಲಯದ ಸಲಹಾ ಸಮಿತಿಗೆ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಕೇಂದ್ರ ರಕ್ಷಣಾ ಸಚಿವ ರಾಜ್ನಾಥ್ ಸಿಂಗ್ ಹಾಗೂ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಅಧ್ಯಕ್ಷತೆಯ ಈ ಸಲಹಾ ಸಮಿತಿಯಲ್ಲಿ ಲೋಕಸಭೆಯ ಒಟ್ಟು 14 ಹಾಗೂ ರಾಜ್ಯಸಭೆಯ 6 ಮತ್ತು ಇಬ್ಬರು ಪದನಿಮಿತ್ತ ಸದಸ್ಯರು ಇದ್ದಾರೆ. ಲೋಕಸಭೆಯಿಂದ ಆಯ್ಕೆಯಾದ ಸದಸ್ಯರ ಪೈಕಿ ಕ್ಯಾ. ಚೌಟ ಕೂಡಾ ಒಬ್ಬರು. ರಕ್ಷಣಾ ಸಚಿವಾಲಯದ ಈ ಸಲಹಾ ಸಮಿತಿಯೂ ಸರಕಾರದ ರಕ್ಷಣಾ ನೀತಿಗಳು, ವಿವಿಧ ಯೋಜನೆ-ಕಾರ್ಯಕ್ರಮಗಳ ಅನುಷ್ಠಾನದ ವಿಧಾನ ಹಾಗೂ ದೇಶದ ರಕ್ಷಣೆಗೆ ಸಂಬಂಧಿಸಿದ ವಿಚಾರಗಳ ಕುರಿತಂತೆ ಆಗಾಗ ಸಭೆ ನಡೆಸಿ ಸೂಕ್ತ ಸಲಹೆ ನೀಡಲಿದೆ. ಒಟ್ಟಾರೆ ನಮ್ಮ ರಾಷ್ಟ್ರದ ಭದ್ರತೆಯನ್ನು ಬಲಪಡಿಸುವ ರಕ್ಷಣಾ ನೀತಿಗಳ ರಚನೆ ಮತ್ತು ಅನುಷ್ಠಾನಕ್ಕೆ ಸೂಕ್ತ ಮಾರ್ಗದರ್ಶನ ಕೊಡಲಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಸಂಸದ ಕ್ಯಾ. ಚೌಟ ನಮ್ಮ ರಾಷ್ಟ್ರ ಮತ್ತು ರಕ್ಷಣಾ ಕ್ಷೇತ್ರವು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದ ಸ್ವಾವಲಂಬಿಯಾಗುವತ್ತ ದಾಪುಗಾಲು ಹಾಕುತ್ತಿರುವ ಸಮಯದಲ್ಲಿ ರಕ್ಷಣಾ ಸಚಿವಾಲಯದ ಸಲಹಾ ಸಮಿತಿಗೆ ಸದಸ್ಯನಾಗಿ ನೇಮಕಗೊಂಡಿರುವುದು ನನಗೆ ಗೌರವದ ವಿಚಾರವಾಗಿದೆ. ಒಬ್ಬ ಯೋಧನಾಗಿ, ಸಂಸತ್ತಿನ ಸದಸ್ಯನಾಗಿ ದೇಶದ ರಕ್ಷಣಾ ಕ್ಷೇತ್ರಕ್ಕೆ ಸೇವೆ ಸಲ್ಲಿಸಲು ಈ ಅವಕಾಶ ಸಿಕ್ಕಿರುವುದು ನನ್ನ ಪಾಲಿನ ಸುಯೋಗ ಎಂದು ಹೇಳಿದ್ದಾರೆ.

ವಿ+
ಸೋಮವಾರ

{ಸಿದ್ದರಾಮಯ್ಯ} ಮುಖ್ಯಮಂತ್ರಿ
ಸುಪ್ರೀಂಕೋರ್ಟ್ ಆದೇಶದಂತೆ ಪರಿಸರಕ್ಕೆ ಹಾನಿಯಾಗುವ ಪಟಾಕಿಗಳಿಗೆ ಅವಕಾಶ ನೀಡಬಾರದು. ಪಟಾಕಿ ದಾಸ್ತಾನು, ಮಾರಾಟ ಪ್ರಕ್ರಿಯೆಯಲ್ಲಿ ಲೋಪ ಆಗಬಾರದು. ಸುರಕ್ಷತೆ ವಿಷಯದಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಿ, ನಿಯಮ ಮೀರಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ.

ಸರಕಾರಕ್ಕೆ 3 ಕೋಟಿ ತೆರಿಗೆ ಪಾವತಿ | ಸಹಕಾರ ನೀಡಲು ಜಿಲ್ಲಾಡಳಿತಕ್ಕೆ ಮನವಿ

ಪ್ರವಾಸಿಗರ ನಿರ್ಬಂಧದಿಂದ ರೆಸಾರ್ಟ್ ಉದ್ಯಮಕ್ಕೆ ಸಂಕಷ್ಟ

ಚಿಕ್ಕಮಗಳೂರು: ಅತಿಯಾದ ಮಳೆ ಹಾಗೂ ಇನ್ನಿತರ ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ ಜಿಲ್ಲೆಗೆ ಬರುವ ಪ್ರವಾಸಿಗರಿಗೆ ನಿರ್ಬಂಧ ಹೇರುವಾಗ ರೆಸಾರ್ಟ್ ಮಾಲೀಕರ ಅಭಿಪ್ರಾಯ ಕೇಳುವ ಮೂಲಕ ನಿಬಂಧನೆ ವಿಧಿಸಬೇಕು ಎಂದು ರೆಸಾರ್ಟ್ ಮಾಲೀಕರ ಸಂಘ ಜಿಲ್ಲಾಡಳಿತಕ್ಕೆ ಮನವಿ ಮಾಡಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಚಿಕ್ಕಮಗಳೂರು ರೆಸಾರ್ಟ್ ಮಾಲೀಕರ ಸಂಘದ ಅಧ್ಯಕ್ಷ ರಮೇಶ್ ಎಸ್.ಎನ್ ಜಿಲ್ಲೆಗೆ ಬರುವ ಪ್ರವಾಸಿಗರನ್ನು ನಿರ್ಬಂಧಿಸುವಾಗ ಜಿಲ್ಲೆಗೆ ಬರಬಾರದೆಂಬ ಮಾಹಿತಿ ಹೆಚ್ಚು ಪ್ರಚಾರವಾಗುತ್ತಿದ್ದು, ಇದರಿಂದ ಪ್ರವಾಸಿಗರಿಗೂ ತೊಂದರೆಯಾಗುತ್ತದೆ ಹಾಗೂ ಪ್ರವಾಸೋದ್ಯಮವನ್ನೇ ಅವಲಂಬಿಸಿಕೊಂಡಿರುವ ರೆಸಾರ್ಟ್, ಹೋಂಸ್ಟೇ, ಹೋಟೆಲ್ ಉದ್ಯಮಕ್ಕೂ ತೊಂದರೆಯಾಗಲಿದೆ ಎಂದು ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆ ಭೌಗೋಳಿಕವಾಗಿ ಒಂದು ವಿಶಿಷ್ಟಸ್ಥಾನ ಪಡೆದಿದ್ದು, ಪ್ರಕೃತಿ ವಿಕೋಪಕ್ಕೆ ಒಳಗಾಗುವ ಸೂಕ್ಷ್ಮ ಪ್ರದೇಶಗಳಿಗೆ ಮಾತ್ರ ಅನ್ವಯವಾಗುವಂತೆ ಆದೇಶ ಹೊರಡಿಸಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಪ್ರವಾಸೋದ್ಯಮ ಈ ಜಿಲ್ಲೆಯ ಪ್ರಮುಖ ಅಭಿವೃದ್ಧಿಯ ಮೂಲವಾಗಿದ್ದು, ಸರಾಸರಿ ತಿಂಗಳಿಗೆ 3 ರಿಂದ 3.5 ಕೋಟಿ ರೂ. ಮೊತ್ತದ ಹಣ ಜಿಎಸ್‌ಟಿ ಮೂಲಕ ಸರಕಾರಕ್ಕೆ ಸಂದಾಯವಾಗುತ್ತಿದೆ. ರೆಸಾರ್ಟ್ ಹಾಗೂ ಹೋಟೆಲ್ ಉದ್ಯಮದಿಂದ ಸರಕಾರಕ್ಕೆ ಸಾಕಷ್ಟು ತೆರಿಗೆ ಪಾವತಿಯಾಗುತ್ತಿದ್ದು, ಪ್ರವಾಸಿಗರನ್ನು ಸಂಪೂರ್ಣವಾಗಿ ನಿರ್ಬಂಧಿಸಿದರೆ ರೆಸಾರ್ಟ್ ಹಾಗೂ ಹೋಟೆಲ್ ಉದ್ಯಮಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದರು.

ಅಪಾರ ಪ್ರಮಾಣದ ಬಂಡವಾಳ ಹೂಡಿ ರೆಸಾರ್ಟ್ ಹಾಗೂ ಹೋಟೆಲ್ ನಡೆಸುತ್ತಿದ್ದು ಪ್ರವಾಸಿಗರು ಬರದಿದ್ದರೆ ವ್ಯಾಪಾರಕ್ಕೆ ಧಕ್ಕೆಯಾಗುತ್ತದೆ. ಇದರಿಂದ ರೆಸಾರ್ಟ್ ಮಾಲೀಕರು ಸಂಕಷ್ಟಕ್ಕೊಳಗಾಗಲಿದ್ದು, ಜಿಲ್ಲೆಯ ಪ್ರವಾಸೋದ್ಯಮಕ್ಕೆ ಪೂರಕವಾಗಿರುವ ರೆಸಾರ್ಟ್‌ಗಳ ಬಗ್ಗೆಯೂ ಜಿಲ್ಲಾಡಳಿತದ ಸಹಕಾರ ಮುಖ್ಯವಾಗುತ್ತದೆ ಎಂದು ಮ ನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ರಮೇಶ್ ಎಸ್.ಎನ್. ಅವರು ಮಾತನಾಡಿದರು.

ಮಳೆ ಹಾಗೂ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಎಲ್ಲಾ ಭಾಗದಲ್ಲಿಯೂ ತೊಂದರೆಯಾಗುವುದಿಲ್ಲ. ಗಿರಿ ಪ್ರದೇಶಗಳನ್ನು ಹೊರತುಪಡಿಸಿ ಬಯಲು ಪ್ರದೇಶದಲ್ಲಿರುವ ಬೆಳವಾಡಿ ಸೇರಿದಂತೆ ಇನ್ನಿತರ ಪ್ರವಾಸಿ ಸ್ಥಳದಲ್ಲಿ ಅಪಾಯದ ಪರಿಸ್ಥಿತಿ ಎದುರಾಗುವುದಿಲ್ಲ. ಇದನ್ನು ಪರಿಗಣಿಸದೆ ಜಿಲ್ಲೆಗೆ ಬರುವ ಪ್ರವಾಸಿಗರಿಗೆ ಎಲ್ಲಾ ಸ್ಥಳಗಳ ನಿರ್ಬಂಧ ಹೇರಿದರೆ ರೆಸಾರ್ಟ್ ಉದ್ಯಮಕ್ಕೆ ಕೊಡಲಿ ಪೆಟ್ಟು ಬೀಳುತ್ತದೆ ಎಂದರು.

ಮುಂದೆ ಈ ರೀತಿಯ ಆದೇಶ ಹೊರಡಿಸುವಾಗ ರೆಸಾರ್ಟ್ ಮಾಲೀಕರ ಅಭಿಪ್ರಾಯವನ್ನು ಪರಿಗಣಿಸಿ ಆದೇಶಿಸುವಂತೆ ಜಿಲ್ಲಾಧಿಕಾರಿಗಳಲ್ಲಿ ವಿನಂತಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ಹೇಮಂತ್‌ಕುಮಾರ್, ಜಂಟಿ ಕಾರ್ಯದರ್ಶಿ ಪರಮೇಶ್ ಕೀರ್ತಿ, ಖಜಾಂಚಿ ಚೇತನ್ ಎಂ.ಪಿ, ಕಾರ್ಯದರ್ಶಿ ರಂಗರಾಜ್ ಹಾಗೂ ಆನಂದ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

> **ಪ್ರವಾಸೋದ್ಯಮ ಈ ಜಿಲ್ಲೆಯ ಪ್ರಮುಖ ಅಭಿವೃದ್ಧಿಯ ಮೂಲವಾಗಿದ್ದು, ಸರಾಸರಿ ತಿಂಗಳಿಗೆ 3 ರಿಂದ 3.5 ಕೋಟಿ ರೂ. ಮೊತ್ತದ ಹಣ ಜಿಎಸ್‌ಟಿ ಮೂಲಕ ಸರಕಾರಕ್ಕೆ ಸಂದಾಯವಾಗುತ್ತಿದೆ. ರೆಸಾರ್ಟ್ ಹಾಗೂ ಹೋಟೆಲ್ ಉದ್ಯಮದಿಂದ ಸರಕಾರಕ್ಕೆ ಸಾಕಷ್ಟು ತೆರಿಗೆ ಪಾವತಿಯಾಗುತ್ತಿದ್ದು, ಪ್ರವಾಸಿಗರನ್ನು ಸಂಪೂರ್ಣವಾಗಿ ನಿರ್ಬಂಧಿಸಿದರೆ ರೆಸಾರ್ಟ್ ಹಾಗೂ ಹೋಟೆಲ್ ಉದ್ಯಮಕ್ಕೆ ತೊಂದರೆಯಾಗುತ್ತದೆ.**
> **ರಮೇಶ್ ಎಸ್.ಎನ್.,**
> ರೆಸಾರ್ಟ್ ಮಾಲೀಕರ ಸಂಘದ ಅಧ್ಯಕ್ಷ

ಜಯರಾಮ ಆಚಾರ್ಯ ಸೂಕ್ಷ್ಮ ಪ್ರಜ್ಞೆಯ ಕಲಾವಿದ

ಮಂಗಳೂರು: ತನ್ನ ಕಲಾ ಶಿಸ್ತು ಹಾಗೂ ನೈಪುಣ್ಯತೆ ಮೂಲಕ ಬಂಟ್ವಾಳ ಜಯರಾಮ ಆಚಾರ್ಯ ಅವರು ಯಕ್ಷಗಾನದ ಹಾಸ್ಯ ಪಾತ್ರಕ್ಕೆ ಗೌರವ ತಂದವರು, ಸ್ವಾಭಿಮಾನಿಯಾಗಿದ್ದ ಜಯರಾಮ ಆಚಾರ್ಯ ಅವರ ಕುಟುಂಬದ ಜೊತೆಗೆ ಅಭಿಮಾನಿಗಳು ನಿಲ್ಲುವ ಅವಶ್ಯಕತೆ ಇದೆ ಎಂದು ಹಿರಿಯ ಯಕ್ಷಗಾನ ವಿಮರ್ಶಕ ಪ್ರಭಾಕರ ಜೋಶಿ ಅವರು ಹೇಳಿದರು.

ಅವರು ಮಂಗಳೂರಿನ ಉರ್ವಾಸ್ಟೋರ್ ನ ತುಳು ಅಕಾಡೆಮಿಯ ತುಳು ಭವನದಲ್ಲಿ ಆಯೋಜಿಸಲಾದ ಜಯರಾಮ ಆಚಾರ್ಯರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಜಯರಾಮ ಆಚಾರ್ಯ ಅತ್ಯಂತ ಸೂಕ್ಷ್ಮ ಪ್ರಜ್ಞೆಯ ಪಾಂಡಿತ್ಯಪೂರ್ಣ ಕಲಾವಿದರಾಗಿದ್ದರು,ಹಿರಿಯ ಪರಂಪರೆಯ ಶ್ರೇಷ್ಠ ಹಾಸ್ಯ ಕಲಾವಿದರ ಸಾಲಿನಲ್ಲಿ ಆಚಾರ್ಯರಿಗೆ ಸ್ಥಾನವಿತ್ತು ಎಂದು ಪ್ರಭಾಕರ ಜೋಷಿ ಬಣ್ಣಿಸಿದರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಅವರು ಮಾತನಾಡಿ, ಅತ್ಯಂತ ಸಜ್ಜನ ಹಾಗೂ ಸ್ವಾಭಿಮಾನಿ ಕಲಾವಿದ ಜಯರಾಮ ಆಚಾರ್ಯ ಅವರ ಹೆಸರು ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಯ ಅಂತಿಮ ಪಟ್ಟಿಗೆ ಸೇರ್ಪಡೆಯಾಗಿತ್ತು ಎಂದು ಉಲ್ಲೇಖಿಸಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಅವರು ಮಾತನಾಡಿ, ಜಯರಾಮ ಆಚಾರ್ಯ ಅವರ ಕಲಾ ಶಿಸ್ತು ಹಾಗೂ ಸ್ವಾಭಿಮಾನದ ಬದುಕನ್ನು ಕಲಾರಂಗ ಸದಾ ಸ್ಮರಿಸಲಿದೆ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಯಕ್ಷ ಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ತುಳು ನಾಟಕ ಕಲಾವಿದರ ಒಕ್ಕೂಟ ಆಯೋಜಿಸಿತ್ತು.

ಸಭೆಯಲ್ಲಿ ಜಯರಾಮ ಆಚಾರ್ಯರ ಪುತ್ರ ವರಣ್ ಆಚಾರ್ಯ, ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಎ.ಸಿ.ಭಂಡಾರಿ, ತುಳು ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ಕಿಶೋರ್ ಡಿ.ಶೆಟ್ಟಿ, ಯಕ್ಷಧ್ರುವ ಪಟ್ಲ ಫೌಂಡೇಶನ್ ಉಪಾಧ್ಯಕ್ಷ ಜಯಶೀಲ ಅಡ್ಯಂತಾಯ, ಕಲಾ ನಿರ್ದೇಶಕ ತಮ್ಮ ಲಕ್ಷ್ಮಣ್, ನಟ ಲಕ್ಷ್ಮಣ್ ಕುಮಾರ್ ಮಲ್ಲೂರು ತುಳು ಅಕಾಡೆಮಿ ರಿಜಿಸ್ಟ್ರಾರ್ ಪೂರ್ಣಿಮ, ತುಳು ಅಕಾಡೆಮಿ ಸದಸ್ಯರಾದ, ಸಂತೋಷ್ ಶೆಟ್ಟಿ, ಮೋಹನ್ ದಾಸ್ ಕೊಟ್ಟಾರಿ, ರೋಹಿತ್ ಉಳ್ಳಾಲ್, ಯಕ್ಷಗಾನ ಅಕಾಡೆಮಿ ಸದಸ್ಯರಾದ ಮೋಹನ್ ಕೊಪ್ಪಳ, ಜಿ.ವಿ.ಎಸ್.ಉಳ್ಳಾಲ್, ತುಳು ಅಕಾಡೆಮಿ ಮಾಜಿ ಸದಸ್ಯರಾದ ಬಾಳ ಜಗನ್ನಾಥ ಶೆಟ್ಟಿ, ಬೆನೆಟ್ ಅಮ್ಮನ್ನ ಮೊದಲಾದವರು ಉಪ್ಥಿತರಿದ್ದರು. ತುಳು ಅಕಾಡೆಮಿ ಸದಸ್ಯ ಕುಂಬ್ರ ದುರ್ಗಾ ಪ್ರಸಾದ್ ರೈ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಯುವಪೀಳಿಗೆ ಗಾಯತ್ರಿಮಂತ್ರದ ಬಗ್ಗೆ ಅರಿಯಲಿ

ಮಂಗಳೂರು: ಗಾಯತ್ರಿ ಜಪಾನುಷ್ಠಾನವೇ ಬ್ರಾಹ್ಮಣರ ಮಹಾಶಕ್ತಿಯಾಗಿದೆ. ಬ್ರಾಹ್ಮಣ ಸಂಸ್ಕೃತಿ, ಸಂಪ್ರದಾಯಗಳು ಗಾಯತ್ರಿಮಂತ್ರದ ಒಡಲಲಿದ್ದು ನಮ್ಮ ಯುವ ಪೀಳಿಗೆಗೆ ಇದರ ಅನುಷ್ಟಾನಕ್ಕಾಗಿ ವಿಪ್ರ ಕುಟುಂಬಗಳು ಗಮನ ನೀಡಬೇಕಿದೆ ಎಂದು ಯಾಗ ಸಮಿತಿ ಸಂಚಾಲಕರಾದ ಕಟೀಲು ಕ್ಷೇತ್ರದ ಶ್ರೀಹರಿನಾರಾಯಣ ಆಸ್ರಣ್ಣ ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಸಮಿತಿ ಹಾಗೂ ಮಹಾಸಭಾದ ದಕ್ಷಿಣ ಕನ್ನಡ ಜಿಲ್ಲಾ ಘಟಕವು ಜಂಟಿಯಾಗಿ ಮಂಗಳೂರಿನ ಚಿತ್ರಾಪುರ ಮಠದ ಸಹಕಾರದೊಂದಿಗೆ ಅ. 26 ಮತು 27ರಂದು ನಡೆಸಲು ಉದ್ದೇಶಿಸಿದ ಗಾಯತ್ರಿ ಸಂಗಮ ಸಾಂಘಿಕ ಕೋಟಿ ಗಾಯತ್ರೀ ಜಪಯಜ್ಞದ ಪ್ರಯುಕ್ತ ಹಮ್ಮಿಕೊಂಡಿದ್ದ ಆದಿತ್ಯ ಯುವ ಸಂಗಮ ಕಾರ್ಯಕ್ರಮದ ಹಳೆ ಬೇರು ಹೊಸ ಚಿಗುರು ಕಾರ್ಯಕ್ರಮ ಸಂವಾದದಲ್ಲಿ ಮಾತನಾಡಿದರು.

ಚಿತ್ರಾಪುರ ಮಠದ ಶ್ರೀಶ್ರೀವಿದ್ಯೇಂದ್ರ ತೀರ್ಥ ಶ್ರೀಪಾದರು, ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಹಾಗೂ ತ್ರಿಮತಸ್ಥ ಬ್ರಾಹ್ಮಣ ಸಂಘದ ಪ್ರಮುಖರಾದ ಡಾ. ಬಿ.ಎಸ್.ರಾಘವೇಂದ್ರ ಭಟ್, ಉಮೇಶ್ ಶಾಸ್ತ್ರಿ, ಆರ್.ಡಿ ಶಾಸ್ತ್ರಿ, ಎಂ.ಎಸ್ ಗುರುರಾಜ್, ಕಶೆಕೋಡಿ ಸೂರ್ಯನಾರಾಯಣ ಭಟ್,ಶ್ರೀಖರ್ ದಾಮ್ಲೆ, ಪೊಳಲಿ ಗಿರಿ ಪ್ರಕಾಶ್ ತಂತ್ರಿ, ಸಂದೀಪ ಮಂಜ, ಚೇತನ ದತ್ತಾತ್ರೇಯ, ಉಮಾ ಸೋಮಯಾಜಿ, ಕ್ಯಾತ್ಯಾಯಿನಿ, ಕೃಷ್ಣಭಟ್ ಕದ್ರಿ,ಜಪ ಯಜ್ಞ ಸಮಿತಿಯ ಮಹೇಶ್ ಕಜೆ, ಶ್ರೀಧರ ಹೊಳ್ಳ ಮತ್ತಿತರರು ವೇದಿಕೆಯಲ್ಲಿದ್ದರು. ಪುತ್ತಿಗೆ ಅನಂತ ಪದ್ಮನಾಭ ಭಟ್, ಪುತ್ತಿಗೆ ಬಾಲಕೃಷ್ಣ ಭಟ್ ವಿಚಾರ ಮಂಡನೆ ಮಾಡಿದರು. ಸುಬ್ರಹ್ಮಣ್ಯ ಕೊರಿಯಾರ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮ ಸಂವಾದದಲ್ಲಿ ಕಟೀಲು ಕ್ಷೇತ್ರದ ಶ್ರೀಹರಿನಾರಾಯಣ ಆಸ್ರಣ್ಣ ಮಾತನಾಡಿದರು.

ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ಗೋಪೂಜೆ, ಗಣಪತಿ ಹೋಮ, ದುರ್ಗಾಹೋಮ, ರುದ್ರ ಹೋಮ, ಕೃಷ್ಣಮಂತ್ರ ಹೋಮ, ಪವಮಾನ ಹೋಮ, ನಾಗದೇವರಿಗೆ ಅಭಿಷೇಕ ನೆರವೇರಿತು. ಆ ಬಳಿಕ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಗಾಯತ್ರಿ ಮಹಾತ್ಮೆ ಕಾರ್ಯಕ್ರಮ ನೆರವೇರಿತು.

ಅ.27ರಂದು ಬೆಳಗ್ಗೆ 6.30ಕ್ಕೆ ಗಾಯತ್ರಿ ಯಜ್ಞ ಆರಂಭವಾಗಲಿದ್ದು ,10.30 ಗಂಟೆಗೆ ಪೂರ್ಣಾಹುತಿ ನೆರವೇರಲಿದೆ. ವೇ.ಮೂ ಕುಡುಪು ಕೃಷ್ಣರಾಜ ತಂತ್ರಿ ಅವರು ನೇತೃತ್ವ ವಹಿಸುವರು.11 ಗಂಟೆಗೆ ಧರ್ಮ ಸಭೆ ನಡೆಯಲಿದ್ದು,ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಆಶೋಕ್ ಹಾರನಹಳ್ಳಿ, ಪೇಜಾವರ ಶ್ರೀಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಎಡನೀರು ಶ್ರೀಶ್ರೀಸಚ್ಚಿದಾನಂದ ಭಾರತೀ ಶ್ರೀಪಾದರು, ಚಿತ್ರಾಪುರ ಮಠದ ಶ್ರೀಶ್ರೀವಿದ್ಯೇಂದ್ರ ತೀರ್ಥ ಶ್ರೀಪಾದರ ಸಹಿತ ಗಣ್ಯರು ಭಾಗವಹಿಸುವರು.

> **ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ದೇವರ ಮುಂದೆ ಗಾಯತ್ರಿ ಜಪಾನುಷ್ಠಾನ ಮಾಡಿದಲ್ಲಿ ಶಿಸ್ತು, ಸಂಸ್ಕಾರ ಬೆಳೆಯುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣದ ಅವಶ್ಯಕತೆಯ ನಡುವೆ ನಮ್ಮ ವಿಪ್ರ ಬಾಂಧವರು ಮಕ್ಕಳನ್ನು ವೇದ ಪಾಠ ಶಾಲೆ, ವಸಂತ ಶಿಬಿರಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಮಾಡಿದಾಗ ದೇವತ್ವದೆಡೆಗೆ ಮನಸು ಹೊರಳಿ ರಾಕ್ಷಸತ್ವದ ನಾಶವಾಗುತ್ತದೆ. ಈ ಪ್ರಯತ್ನ ಇದೇ ವೇದಿಕೆಯಿಂದ ಆರಂಭವಾಗಲಿ.**
> ಶ್ರೀಹರಿನಾರಾಯಣ ಆಸ್ರಣ್ಣ,
> ಯಾಗ ಸಮಿತಿ ಸಂಚಾಲಕ

ಆರೋಗ್ಯ ರಕ್ಷಾ ಸಮಿತಿ ಸದಸ್ಯರಿಂದ ತಾಲೂಕು ಆಸ್ಪತ್ರೆಗೆ ದಿಢೀರ್ ಭೇಟಿ

ಬೆಳ್ತಂಗಡಿ: ನೂತನವಾಗಿ ಆಯ್ಕೆಯಾದ ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯರು ಇಂದು ಬೆಳ್ತಂಗಡಿ ತಾಲೂಕು ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲೂಕು ಆಸ್ಪತ್ರೆಗೆ ಸಂಬಂಧಿಸಿದ ಸಾರ್ವಜನಿಕ ದೂರಿನ ಹಿನ್ನೆಲೆಯಲ್ಲಿ ಭೇಟಿ ನೀಡಲಾಯಿತು. ಡಯಾಲಿಸೀಸ್ ಕೇಂದ್ರಕ್ಕೆ ಭೇಟಿ ನೀಡಿದಾಗ ಅಲ್ಲಿರುವ 12 ಯಂತ್ರಗಳ ಪೈಕಿ 1 ಯಂತ್ರ ಕೆಟ್ಟು ಹೋಗಿ ತಿಂಗಳಾದರೂ ರಿಪೇರಿ ಮಾಡದ ಬಗ್ಗೆ ಸಮಿತಿ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು. ಡಯಾಲೀಸಸ್ ಯಂತ್ರಕ್ಕೆ ಸಂಬಂಧಿಸಿದ ವಸ್ತುಗಳನ್ನು ಹೊರಗಡೆ ಬೇಕಾಬಿಟ್ಟಿ ಇಟ್ಟಿರುವ ಬಗ್ಗೆ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡಾಗ ಸ್ಟಾಕ್ ರೂಂ ನ ಕೊರತೆಯಿಂದ ಹೊರಗಡೆ ಇಡಬೇಕಾದ ಅನಿವಾರ್ಯ ಪರಿಸ್ಥಿತಿ ಬಗ್ಗೆ ಸಿಬ್ಬಂದಿಗಳು ಮಾಹಿತಿ ನೀಡಿದರು. ಡಯಾಲೀಸಸ್ ಕೇಂದ್ರದ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿದರೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತರಲಾಗುವುದು ಎಂದು ಸದಸ್ಯರು ತಿಳಿಸಿದರು.

ಜನರ ಆರೋಗ್ಯ ಕಾಪಾಡಬೇಕಾದ ತಾಲೂಕು ಆಸ್ಪತ್ರೆಯ ಸುತ್ತಮುತ್ತ ಬೆಳೆದಿರುವ ಹುಲ್ಲು, ಗಿಡಗಂಟಿಗಳನ್ನು ಕಡಿದು ಸ್ವಚ್ಛ ಮಾಡದ ಬಗ್ಗೆ ಆಡಳಿತ ವೈದ್ಯಾಧಿಕಾರಿಗಳ ಬಳಿ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು ಒಂದು ವಾರದೊಳಗೆ ಸ್ವಚ್ಛಗೊಳಿಸಲು ತಿಳಿಸಲಾಯಿತು. ಆಸ್ಪತ್ರೆಯ ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಸಲು ಸೂಚಿಸಲಾಯಿತು. ಕೆಲವೊಂದು ವೈದ್ಯರು ಖಾಸಗಿ ಕ್ಲಿನಿಕ್ ಹೊಂದಿದ್ದು, ರೋಗಿಗಳನ್ನು ತಮ್ಮ ಕ್ಲಿನಿಕ್ ಗಳಿಗೆ ಬರಲು ಹೇಳುವುದು, ಔಷಧ ಚೀಟಿಗಳನ್ನು ಖಾಸಗಿ ಮೆಡಿಕಲ್ ಗಳಿಗೆ ನೀಡುವುದು, 108 ಅಂಬುಲೆನ್ಸ್ ಲಭ್ಯವಾಗದ ಸಂದರ್ಭದಲ್ಲಿ ಸರ್ಕಾರಿ ಅಂಬುಲೆನ್ಸ್ ಇದ್ದರೂ ಖಾಸಗಿ ಅಂಬುಲೆನ್ಸ್ ಗಳಲ್ಲಿ ರೋಗಿಗಳನ್ನು ಕಳುಹಿಸುವುದು, ರೋಗಿಗಳನ್ನು ಸರಿಯಾಗಿ ಪರೀಕ್ಷೆ ಮಾಡದೇ ಔಷಧ ನೀಡುವುದು, ರಕ್ತ ಪರೀಕ್ಷೆ ಸಂದರ್ಭದಲ್ಲಿ ಬೇಜಾವ್ದಾರಿಯಿಂದ ವರ್ತನೆ ಬಗ್ಗೆ ಆಡಳಿತ ವೈದ್ಯಾಧಿಕಾರಿ ಡಾ. ರಮೇಶ್ ರವರ ಗಮನಕ್ಕೆ ತರಲಾಯಿತು. 10 ದಿನಗಳ ನಂತರ ಮತ್ತೊಮ್ಮೆ ಭೇಟಿ ನೀಡುವ ಸಂದರ್ಭದಲ್ಲಿ ಇಂತಹ ಘಟನೆಗಳಿಗೆ ಕಡಿವಾಣ ಹಾಕಬೇಕು ಎಂದು ಸದಸ್ಯರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಅಬ್ದುಲ್ ಕರೀಂ ಗೇರುಕಟ್ಟೆ, ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ನವೀನ್ ಗೌಡ ಸವಣಾಲು, ಪಿ.ಟಿ ಸಭಾಸ್ಟಿಯನ್ ಕಳೆಂಜ, ಸವಿತಾ ಕೊರಗ ಅಟ್ರಿಂಜೆ, ವೀರೇಂದ್ರ ಕುಮಾರ್ ಜೈನ್ ಅಳದಂಗಡಿ, ಯಕ್ಷಗಾನ ಅಕಾಡೆಮಿ ಸದಸ್ಯ ದಯಾನಂದ ಬೆಳಾಲು, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಬ್ದುಲ್ ಗಫೂರು ಪುದುವೆಟ್ಟು, ಜೀತಮುಕ್ತ ನಿರ್ಮೂಲನ ಸಮಿತಿ ಸದಸ್ಯ ಶೇಖರ್ ಲಾಯಿಲ, ತಾಲೂಕು ಆರೋಗ್ಯಾಧಿಕಾರಿ ಇಲಾಖೆಯ ಅಜಯ್ ಉಪಸ್ಥಿತರಿದ್ದರು.

ಕನ್ನಡ ನಾಮಫಲಕ ಹಾಕಲು ಕರವೇ ಮನವಿ

ಚಿಕ್ಕಮಗಳೂರು: ನಗರದಲ್ಲಿ ಶೇ.60ರಷ್ಟು ಕನ್ನಡದಲ್ಲಿ ನಾಮ ಫಲಕವನ್ನು ಹಾಕದೆ ಉಲ್ಲಂಘಿಸಿರುವುದನ್ನು ಖಂಡಿಸಿ ತಕ್ಷಣ ಕಾರ್ಯರೂಪಕ್ಕೆ ತರುವಂತೆ ಒತ್ತಾಯಿಸಿ ಇಂದು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗೂ ನಗರಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು.

ಜಿಲ್ಲೆ ಹಾಗೂ ನಗರ ಸೇರಿದಂತೆ ಕನ್ನಡದಲ್ಲಿ ನಾಮಫಲಕವನ್ನು ಶೇ.60ರಷ್ಟು ಮತ್ತುಅನ್ಯ ಭಾಷೆಯಲ್ಲಿ ಶೇ.40 ರಷ್ಟು ಇಲ್ಲದಿರುವ ಬಗ್ಗೆ ಸೂಕ್ತ ಕ್ರಮಕೈಗೊಂಡು ಶೇ.60 ಕನ್ನಡದಲ್ಲಿ ನಾಮಫಲಕ ಹಾಕಬೇಕೆಂದು ಸರಕಾರದ ಆದೇಶವಿದ್ದರೂ ಆದೇಶವನ್ನು ಗಾಳಿಗೆ ತೂರಿ ಆಂಗ್ಲ ಭಾಷೆ ಹಾಗೂ ಅನ್ಯ ಭಾಷೆಗೆ ಹೆಚ್ಚು ಒತ್ತು ನೀಡಿದ್ದಾರೆಂದು ಮನವಿಯಲ್ಲಿ ದೂರಿದ್ದಾರೆ.

ಇನ್ನು 15 ದಿನಗಳೊಳಗಾಗಿ ಶೇ.60 ರಷ್ಟುಕನ್ನಡದ ನಾಮಫಲಕಗಳನ್ನು ಹಾಕುವಂತೆ ವಾಣಿಜ್ಯೋದ್ಯಮಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು.ಇಲ್ಲವಾದರೆ ವ್ಯಾಪಾರಸ್ಥರ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಮಾಡಿದ್ದಾರೆ.

ಇದುಅತೀ ಶೀಘ್ರದಲ್ಲಿ ಕಾರ್ಯರೂಪಕ್ಕೆ ಬರದಿದ್ದರೆ ನಮ್ಮಕರವೇ ವತಿಯಿಂದಆಂಗ್ಲ ಭಾಷೆಯ ನಾಮಫಲಕಗಳಿಗೆ ಕಪ್ಪು ಬಣ್ಣ ಬಳಿಯುವ ಮೂಲಕ ಹೋರಾಟ ಮಾಡಬೇಕಾಗುತ್ತದೆಎಂದು ಎಚ್ಚರಿಸಿದ್ದಾರೆ.

ರಕ್ಷಣಾ ವೇದಿಕೆ ಪದಾಧಿಕಾರಿಗಳು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ವೇದಿಕೆ ಜಿಲ್ಲಾಧ್ಯಕ್ಷಅಗ್ನಿ ಸುಮಂತ್, ಗೌರವಾಧ್ಯಕ್ಷ ಮಧು, ಕಾರ್ಮಿಕ ವಿಭಾಗದಜಿಲ್ಲಾಧ್ಯಕ್ಷ ಮಂಜುನಾಥ್, ಜಿಲ್ಲಾಉಪಾಧ್ಯಕ್ಷಜೀವನ್, ನಗರಉಪಾಧ್ಯಕ್ಷ ತ್ಯಾಗರಾಜ್, ಆಟೋಘಟಕದಜಿಲ್ಲಾಧ್ಯಕ್ಷ ಸುನಿಲ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಅನುಪಯುಕ್ತರಲ್ಲ: ಅಧ್ಯಕ್ಷ

ಮೂಡುಬಿದಿರೆ: ಯಾವುದೇ ವಿದ್ಯಾರ್ಥಿಗಳು ಅನುಪಯುಕ್ತರಲ್ಲ. ತಮ್ಮ ಜ್ಞಾನವನ್ನು ಸರಿಯಾಗಿ ಬಳಸಿಕೊಳ್ಳದಿರುವುದು ವೈಫಲ್ಯಕ್ಕೆ ಕಾರಣ ಎಂದು ಐಸಿಎಐ ಮಂಗಳೂರು ವಿಭಾಗದ ನಿಕಟಪೂರ್ವ ಅಧ್ಯಕ್ಷ ಎಸ್ ಎಸ್. ನಾಯಕ್ ಅಭಿಪ್ರಾಯಪಟ್ಟರು. ಆಳ್ವಾಸ್ (ಸ್ವಾಯತ್ತ)ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಶನಿವಾರ ಬಿಬಿಎ ವಿಭಾಗವು ಹಮ್ಮಿಕೊಂಡ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳ ಸನ್ಮಾನ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀನನದಲ್ಲಿ ಬರುವ ಎಲ್ಲಾ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದ ಅವರು, ರಸ್ತೆ ಪ್ರಯಾಣಕ್ಕೆ ಹಂಪ್ ತಡೆ, ಎಟಿಎಂ ಬಳಕೆಗೆ ಹಣದ ನಿರ್ಬಂಧ, ಪರೀಕ್ಷೆಗೆ ಸಮಯದ ನಿರ್ಬಂಧವಿರುತ್ತದೆ. ಆದರೆ ಯೋಜನೆಗಳಿಗೆ ಯಾವುದೇ ಅಡೆತಡೆಗಳಿರುವುದಿಲ್ಲ. ಭಾರತದಲ್ಲಿ ಉದ್ಯಮಿಗಳಾಗಲು ವಿಪುಲ ಅವಕಾಶವಿದ್ದು ವಿದ್ಯಾರ್ಥಿ ಜೀವನದಲ್ಲಿ ಅದರ ಕುರಿತು ಯೋಚನೆ ಮಾಡಬೇಕು ಎಂದರು.

ಮಾನವ ಎಲ್ಲಾ ಸಂಕೋಲೆಗಳಿಂದ ಹೊರಬಂದು ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಶ್ರಮವಹಿಸಬೇಕು. ಇದಕ್ಕಾಗಿ ವಿದ್ಯಾರ್ಥಿ ನೆಲೆಯಲ್ಲಿ ಅನೇಕ ಸ್ವಯಂ ನಿಯಂತ್ರಣವನ್ನು ಹೊಂದಿರಬೇಕು. ಇಲ್ಲವಾದಲ್ಲಿ ಮೊಬೈಲ್, ಎಲೆಕ್ಟ್ರಾನಿಕ್ ವಸ್ತುಗಳ ಅಥವಾ ಮಾದಕ ವ್ಯಸನಕ್ಕೆ ದಾಸರಾಗುವ ಸಾಧ್ಯತೆ ಇದೆ ಎಂದರು.

ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಶಿಸ್ತು ಹಾಗೂ ಸ್ವಯಂ ನಿಯಂತ್ರಣವನ್ನು ಹೊಂದಬೇಕು ಎಂದರು. ಬಿಬಿಎ ರ‍್ಯಾಂಕ್ ವಿಜೇತ ಭೂಮಿಕಾ ಹಾಗೂ ಎಂ. ಸೌಮ್ಯ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ, ಬಿಬಿಎ ವಿಭಾಗದ ಮುಖ್ಯಸ್ಥೆ ಸುರೇಖಾ ರಾವ್, ಉಪನ್ಯಾಸಕಿ ಪ್ರಜ್ಞಾ ಎಸ್. ಬಿ., ಹಾಗೂ ಅಂಬಿಕಾ ಕೆ ಇದ್ದರು. ವಿದ್ಯಾರ್ಥಿ ಶಶಾಂಕ್ ಸ್ವಾಗತಿಸಿದರು. ಜ್ಯೋತಿಕಾ ಅತಿಥಿಯನ್ನು ಪರಿಚಯಿಸಿದರು. ಮಾನ್ಯಶ್ರೀವಂದಿಸಿ, ರಂಜಿತಾ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ

ಮಂಗಳೂರು: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಬೆಳ್ತಂಗಡಿ ತಾಲೂಕು ಪತ್ರಕರ್ತರ ಸಂಘದ ಸಂಘದ ಸಹಭಾಗಿತ್ವದಲ್ಲಿ ಪತ್ರಕರ್ತರು ಗ್ರಾಮ ವಾಸ್ತವ್ಯ ಮಾಡಿದ ಕುತ್ಲೂರು ಸರಕಾರಿ ಶಾಲೆ ಮಕ್ಕಳಿಗೆ ಎಂಸಿಫ್ ಸಿ ಎಸ್ ಆರ್ ನಿಧಿಯಿಂದ ಒಂದು ಲಕ್ಷ ರೂಪಾಯಿ ಮೌಲ್ಯದ ಸಮವಸ್ತ್ರ ವಿತರಣೆ ಅ.28ರಂದು ಸೋಮವಾರ ಬೆಳಗ್ಗೆ 11 ಗಂಟೆಗೆ ಪತ್ರಿಕಾಭವನ ದಲ್ಲಿ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಸಮವಸ್ತ್ರ ವಿತರಣೆ ಮಾಡಲಿದ್ದಾರೆ. ಸಾಹಸ ಪ್ರವಾಸೋದ್ಯಮ ವಿಭಾಗದಲ್ಲಿ ರಾಷ್ಟ್ರ ಪ್ರಶಸ್ತಿ ಪಡೆದಿರುವ ಕುತ್ಲೂರು ಗ್ರಾಮದ ಪ್ರತಿನಿಧಿಗಳನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಸನ್ಮಾನಿಸಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ್ ನಾಯಕ್ ಇಂದಾಜೆ ಅಧ್ಯಕ್ಷತೆ ವಹಿಸಲಿದ್ದಾರೆ. ಎಂಸಿಫ್ ಕಂಪನಿ ಚೀಫ್ ಪ್ರೊಡಕ್ಷನ್ ಆಫೀಸರ್ ಗಿರೀಶ್. ಎಸ್, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಚೇತನ್ ಮೆಂಡೋನ್ಸ ಮುಖ್ಯ ಅತಿಥಿ ಗಳಾಗಿ ಭಾಗವಹಿಸಲಿದ್ದಾರೆ. ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ ಬಿ ಹರೀಶ್ ರೈ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ. ಆರ್ ಉಪಸ್ಥಿತರಿಲಿದ್ದಾರೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಅರಿವು ಕಾರ್ಯಕ್ರಮ

ವಿದ್ಯಾಗಿರಿ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಮೂಡಬಿದಿರೆ ರೋಟರಿ ಕ್ಲಬ್‌ನ ಸಹಯೋಗದಲ್ಲಿ ಪ್ರತಿಷ್ಠಾನದ ಎಲ್ಲಾ ಸಂಸ್ಥೆಗಳ ವಿದ್ಯಾರ್ಥಿನಿಯರಿಗೆ ಗರ್ಭಕಂಠದ ಕ್ಯಾನ್ಸರ್ ಮತ್ತು ಎಚ್‌ಪಿವಿ ಲಸಿಕೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಅಕ್ಟೋಬರ್15 ರಿಂದ 22ರವರೆಗೆ ಹಮ್ಮಿಕೊಂಡು ಯಶಸ್ವಿಗೊಳಿಸಲಾಯಿತು.

ಆಳ್ವಾಸ್ (ಸ್ವಾಯತ್ತ) ಪದವಿ ವಿದ್ಯಾರ್ಥಿನಿಯರಿಗೆ ಎಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆ ಜಾಗೃತಿ ಕುರಿತು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಡಾ. ಮರಿಯಾ ನೆಲ್ಲಿಯನಿಲ್ ಮತ್ತು ಡಾ ಸುಶಾಂತ ಪೆರ್ಡೂರು, ಆಳ್ವಾಸ್ ಆಯುರ್ವೇದ ವಿದ್ಯಾರ್ಥಿನಿಯರಿಗೆ ಡಾ ರಮ್ಯಾ ಎನ್ ಆರ್, ಇಂಜಿನಿಯರಿಂಗ್ ಕಾಲೇಜಿನಲ್ಲಿ ಡಾ ಸುಪ್ರಜ್ಞಾ ಶೆಟ್ಟಿ ಮತ್ತು ಡಾ ಸೌಧ, ನ್ಯಾಚುರೋಪತಿ ಹಾಗೂ ಹೋಮಿಯೋಪತಿ ವಿದ್ಯಾರ್ಥಿನಿಯರಿಗೆ ಡಾ ಅದಿತಿ ಶೆಟ್ಟಿ, ಫಿಸಿಯೋಥೆರಫಿ ಮತ್ತು ಅಲೈಡ್ ಹೆಲ್ತ್ ಸೈನ್ಸ್ ವಿದ್ಯಾರ್ಥಿನಿಯರಿಗೆ ಡಾ ನಿಶಿತ ಶೆಟ್ಟಿಯಾನ್ ಫೆರ್ನಾಂಡಿಸ್, ಬಿಪಿಎಡ್, ಎಂಪಿಎಡ್, ಬಿ.ಎಡ್ ಹಾಗೂ ಆಳ್ವಾಸ್ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಡಾ ಹನಾ ಶೆಟ್ಟಿ, ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಡಾ ಸಹನಾ ಜಿ, ಡಾ ಮಾನಸಿ ಪಿ ಎಸ್ ರವರಿಂದ ಜಾಗೃತಿ ಕರ್ಯಕ್ರಮ ನಡೆಯಿತು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಒಟ್ಟು 5000ಕ್ಕೂ ಅಧಿಕ ವಿದ್ಯಾರ್ಥಿನಿಯರು ಜಾಗೃತಿ ಕರ್ಯಕ್ರಮದ ಫಲಾನುಭವಿಗಳಾಗಿದ್ದಾರೆ. ಮುಂದಿನ ದಿನಗಳಲ್ಲಿ ಎಚ್‌ಪಿವಿ ಲಸಿಕೆಯನ್ನು ಕಡಿಮೆ ಬೆಲೆಯಲ್ಲಿ ವಿತರಿಸುವ ಯೋಜನೆಯು ಇವರ ಮುಂದಿದೆ.

ಗರ್ಭಕಂಠದ ಕ್ಯಾನ್ಸರ್ ಮತ್ತು ಎಚ್‌ಪಿವಿ ಲಸಿಕೆ ಕುರಿತು ಜಾಗೃತಿ ಕಾರ್ಯಕ್ರಮವು ಆಳ್ವಾಸ್ ಆರೋಗ್ಯ ಕೇಂದ್ರದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಹನಾ ಶೆಟ್ಟಿ, ಮೂಡಬಿದಿರೆಯ ರೋಟರಿ ಕ್ಲಬ್‌ನ ಅಧ್ಯಕ್ಷ ಡಾ ಹರೀಶ್ ನಾಯಕರ ಮುತುವರ್ಜಿಯಲ್ಲಿ ಜರುಗಿದೆ.

ಜಾಗೃತಿ ಕಾರ್ಯಕ್ರಮ ಅ.15 ರಿಂದ 22ರವರೆಗೆ ಹಮ್ಮಿಕೊಳ್ಳಲಾಗಿತ್ತು.

> **ಮೂಡಬಿದಿರೆಯ ರೋಟರಿ ಕ್ಲಬ್ ಗರ್ಭಕಂಠದ ಕ್ಯಾನ್ಸರ್ ಮತ್ತು ಎಚ್‌ಪಿವಿ ಲಸಿಕೆ ಕುರಿತು ಜಾಗೃತಿಯನ್ನು ಜಿಲ್ಲಾ ಯೋಜನೆಯಾಗಿ ಆಯೋಜಿಸಿದ್ದು, ಈಗಾಗಲೇ 15 ಕ್ಕೂ ಹೆಚ್ಚು ಜಾಗೃತಿ ಕ್ಯಾಂಪ್ ಗಳನ್ನು ನಡೆಸಿದೆ. ಈ ವರ್ಷದ ಕೊನೆಯಲ್ಲಿ ರೋಟರಿ 3181 ಜಿಲ್ಲೆಯಲ್ಲಿ 100 ಕ್ಕೂ ಹೆಚ್ಚು ಜಾಗೃತಿ ಶಿಬಿರಗಳನ್ನು ನಡೆಸಲು ನಿರ್ಧರಿಸಲಾಗಿದೆ.**
> **ಡಾ.ಹರೀಶ್ ನಾಯಕ್, ರೋಟರಿ ಕ್ಲಬ್ ಅಧ್ಯಕ್ಷ**

ಘನತ್ಯಾಜ್ಯ ನಿಯಮ ಅನುಷ್ಠಾನಕ್ಕೆ ಕ್ರಮ

ಉಡುಪಿ: ಉಡುಪಿ ನಗರಸಭೆಯು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ವಿವಿಧ ಮಾನದಂಡಗಳನ್ನು ಅಳವಡಿಸಿಕೊಂಡು ಘನತ್ಯಾಜ್ಯ ನಿಯಮ 2016ರನ್ನು ಅನುಷ್ಠಾನಗೊಳಿಸುತ್ತಿದ್ದು, ಶೇಕಡಾ ನೂರರಷ್ಟು ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ ಕಾರ್ಯವನ್ನು ಅನುಷ್ಠಾನ ಮಾಡಲು ಕ್ರಮವಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಉಡುಪಿ ನಗರಸಭೆ ವತಿಯಿಂದ ರೆಡ್ಯೂಸ್ - ಮನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಕಡಿತಗೊಳಿಸುವ ಬಗ್ಗೆ, ರಿಯ್ಯೂಸ್-ವಿವಿಧ ತ್ಯಾಜ್ಯಗಳನ್ನು ಮರುಬಳಕೆ ಮಾಡುವ ಬಗ್ಗೆ ಹಾಗೂ ರಿಸೈಕಲ್- ತ್ಯಾಜ್ಯಗಳ ಪುನರ್ ಬಳಕೆ ಮಾಡುವ ವಿಧಾನಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಮನೆಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯವನ್ನು ಉಪಯೋಗಿಸಿಕೊಂಡು ಗೊಬ್ಬರ ತಯಾರಿಸಿ ಮನೆ ಅಂಗಳದ ಗಾರ್ಡನ್‌ಗೆ ಬಳಕೆ ಮಾಡಿಕೊಳ್ಳುವ ವಿಧಾನವನ್ನು ಹೋಂ ಕಾಂಪೋಸ್ಟಿಂಗ್ (ಪೈಪ್ ಕಾಂಪೂಸ್ಟಿಂಗ್, ಬಿನ್ ಕಾಂಪೋಸ್ಟಿಂಗ್ ಅಥಾವ ಡ್ರಮ್ ಕಾಂಪೋಸ್ಟಿಂಗ್) ಎಂದು ಕರೆಯಲಾಗುವುದು. ಈಗಾಗಲೇ ನಗರದ 5038 ಮನೆಗಳಲ್ಲಿ ಹೋಂ ಕಾಂಪೋಸ್ಟಿಂಗ್ ವಿಧಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡು ನಗರಸಭೆಯೊಂದಿಗೆ ತ್ಯಾಜ್ಯ ನಿರ್ವಹಣೆಯಲ್ಲಿ ಸಹಕರಿಸುತ್ತಿದ್ದು, ಈ ಕುರಿತು ಸಾರ್ವಜನಿಕರು ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಚೇರಿಯ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದು ಎಂದು ಉಡುಪಿ ನಗರ ಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಸಮಾಚಾರ ಸಣ್ಣದಲ್ಲ

ಆಂಗ್ಲರಿಗೆ ಸರಣಿ ಸೋಲುಣಿಸಿದ ಪಾಕ್



ರಾವಲ್ಪಿಂಡಿ: ಸ್ಪಿನ್‌ದ್ವಯರಾದ ಸಜಿದ್ ಖಾನ್ ಮತ್ತು ನೋಮನ್ ಅಲಿ ಅವರ ಮಾರಕ ದಾಳಿಯ ನೆರವಿನಿಂದ ಪಾಕಿಸ್ತಾನ ತಂಡವು ಪ್ರವಾಸಿ ಇಂಗ್ಲೆಂಡ್ ತಂಡ ವಿರುದ್ಧದ ಅಂತಿಮ ಹಾಗೂ ಮೂರನೇ ಟೆಸ್ಟ್ ಪಂದ್ಯದಲ್ಲಿ 9 ವಿಕೆಟ್ ಅಂತರದ ಗೆಲುವು ಸಾಧಿಸಿದೆ. ಈ ಮೂಲಕ 2021 ರ ನಂತರ ತವರಿನಲ್ಲಿ ಮೊದಲ ಬಾರಿಗೆ ಸರಣಿ ಗೆದ್ದ ಸಾಧನೆ ಮಾಡಿದೆ. ನಾಯಕರಾಗಿ ಆಯ್ಕೆಯಾದ ಬಳಿಕ ಶಾನ್ ಮಸೂದ್ ಪಾಲಿಗೆ ಚೊಚ್ಚಲ ಸರಣಿ ಗೆಲುವಿನ ಸಂಭ್ರಮವಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ 77 ರನ್‌ಗಳ ಮುನ್ನಡೆ ಪಡೆದಿದ್ದ ಪಾಕಿಸ್ತಾನ, ದ್ವಿತೀಯ ಇನಿಂಗ್ಸ್‌ನಲ್ಲಿ ಕೇವಲ 36 ರನ್‌ಗಳ ಗುರಿ ಪಡೆಯಿತು. ಈ ಗುರಿಯನ್ನು ಕೇವಲ 3.1 ಓವರ್‌ಗಳಲ್ಲಿ ಚೇಸ್ ಮಾಡುವ ಮೂಲಕ ಪಾಕ್, 9 ವಿಕೆಟ್‌ಗಳ ಅಮೋಘ ಗೆಲುವು ದಾಖಲಿಸಿತು. ಪಾಕ್ ಪರ ಮೊದಲ ಇನ್ನಿಂಗ್ಸ್ ನಲ್ಲಿ 6 ವಿಕೆಟ್ ಪಡೆದಿದ್ದ ಸಾಜಿದ್ ಖಾನ್ ದ್ವಿತೀಯ ಇನಿಂಗ್ಸ್ ನಲ್ಲಿ 4 ವಿಕೆಟ್ ಕಬಳಿಸಿದರು. ಹಾಗೆಯೇ ಪ್ರಥಮ ಇನಿಂಗ್ಸ್‌ನಲ್ಲಿ 3 ವಿಕೆಟ್ ಕಬಳಿಸಿದ್ದ ನೊಮಾನ್ ಅಲಿ 2ನೇ ಇನಿಂಗ್ಸ್ ನಲ್ಲಿ 6 ವಿಕೆಟ್ ಉರುಳಿಸಿದರು. ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 267 ರನ್ ಗಳಿಸಿ ಆಲೌಟ್ ಆಗಿತ್ತು. ಪಾಕ್ ಸೌದ್ ಶಕೀಲ್ (134) ಭರ್ಜರಿ ಶತಕ ನೆರವಿನಿಂದ ಮೊದಲ ಇನಿಂಗ್ಸ್‌ನಲ್ಲಿ 344 ರನ್ ಕಲೆಹಾಕಿ 77 ರನ್ ಮುನ್ನಡೆ ಸಾಧಿಸಿತು. ದ್ವಿತೀಯ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ಕೇವಲ 112ಗೆ ಸರ್ವಪತನ ಕಂಡಿತ್ತು.

ಜಾರ್ಖಂಡ್‌ಚುನಾವಣೆ ಧೋನಿ ರಾಯಭಾರಿ

ರಾಂಚಿ: ಮುಂಬರುವ ಜಾರ್ಖಂಡ್ ವಿಧಾನಸಭಾ ಚುನಾವಣೆ ರಾಯಭಾರಿಯಾಗಿ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿಯವರನ್ನು ಚುನಾವಣಾ ಆಯೋಗ ಆಯ್ಕೆ ಮಾಡಿದೆ. ನ.13 ಹಾಗೂ ನ.20ರಂದು ಎರಡು ಹಂತಗಳಲ್ಲಿ ನಡೆಯಲಿರುವ ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರನ್ನು ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಜಾರ್ಖಂಡ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಾರ್ಖಂಡ್ ಮುಖ್ಯ ಚುನಾವಣಾಧಿಕಾರಿ ಕೆ. ರವಿಕುಮಾರ್ ಮಾತನಾಡಿ, ವಿಧಾನಸಭಾ ಚುನಾವಣೆಗೆ ಧೋನಿ ತಮ್ಮ ಫೋಟೋವನ್ನು ಬಳಸಲು ಚುನಾವಣಾ ಆಯೋಗಕ್ಕೆ ಒಪ್ಪಿಗೆ ನೀಡಿದ್ದಾರೆ. ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಧೋನಿ ಭಾಗಿಯಾಗಲಿದ್ದಾರೆ ಎಂದರು.

12 ವರ್ಷಗಳ ಬಳಿಕ ತವರಿನಲ್ಲಿ ಟೆಸ್ಟ್ ಸರಣಿ ಸೋತ ರೋಹಿತ್ ಬಳಗ | ನ್ಯೂಜಿಲೆಂಡ್‌ಗೆ ಐತಿಹಾಸಿಕ ಗೆಲುವು

ಸರಣಿ ಗೆದ್ದ ಕಿವೀಸ್: ಭಾರತಕ್ಕೆ ತವರಿನಲ್ಲೇ ಮುಖಭಂಗ

ಪುಣೆ: ಆತಿಥೇಯ ಭಾರತ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ಪ್ರವಾಸಿ ನ್ಯೂಜಿಲೆಂಡ್ ಎರಡನೇ ಪಂದ್ಯದಲ್ಲಿಯೂ 113 ರನ್‌ಗಳ ಗೆಲುವು ಸಾಧಿಸಿ ಬೀಗಿದೆ. ಇದರೊಂದಿಗೆ ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಕಿವೀಸ್ ಸರಣಿ ವಶಪಡಿಸಿಕೊಂಡಿದೆ. ನ್ಯೂಜಿಲೆಂಡ್ ತಂಡ ಭಾರತದ ನೆಲದಲ್ಲಿ ಇದೇ ಮೊದಲ ಬಾರಿಗೆ ಸರಣಿ ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ.

1955-56 ರಿಂದ ನ್ಯೂಜಿಲೆಂಡ್ ಭಾರತದಲ್ಲಿ ಸರಣಿ ಆಡುತ್ತಿದ್ದು ರಿಚರ್ಡ್ ಹ್ಯಾಡ್ಲಿಯಂತಹ ದಿಗ್ಗಜರಿದ್ದರೂ ಈ ತನಕ ಒಂದೇ ಒಂದು ಸರಣಿ ಗೆಲ್ಲಲು ಸಾಧ್ಯವಾಗಿರಲಿಲ್ಲ. ಆದರೆ ಈ ಬಾರಿ ಗೆದ್ದು ನಿರಂತರ 12 ವರ್ಷಗಳ ಬಳಿಕ ತವರಿನಲ್ಲಿ ಸೋಲದ ಭಾರತಕ್ಕೆ ಸೋಲಿನ ರುಚಿ ತೋರಿಸಿದೆ. ಈ ಸೋಲಿನೊಂದಿಗೆ ಭಾರತದ ತವರಿನ ಸತತ 18 ಟೆಸ್ಟ್‌ಗಳ ಸರಣಿ ಗೆಲುವಿನ ಓಟಕ್ಕೆ ಬ್ರೇಕ್ ಬಿದ್ದಿದೆ. ಭಾರತ 2012ರಲ್ಲಿ ಕೊನೆಯದಾಗಿ ಇಂಗ್ಲೆಂಡ್ ಎದುರು ತವರಿನ ಟೆಸ್ಟ್ ಸರಣಿಯಲ್ಲಿ ಸೋಲು ಕಂಡಿತ್ತು.

ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ ನ್ಯೂಜಿಲೆಂಡ್ ವಾಷಿಂಗ್ಟನ್ ಸುಂದರ್ ಅವರ ಸ್ಪಿನ್ ದಾಳಿಗೆ ಸಿಲುಕಿ 259 ರನ್‌ಗಳಿಗೆ ಆಲೌಟ್ ಆಗಿತ್ತು. ಪ್ರತಿಯಾಗಿ ಬ್ಯಾಟ್ ಮಾಡಿದ ಭಾರತ ಮೊದಲ ಇನಿಂಗ್ಸ್‌ನಲ್ಲಿ ನಾಟಕೀಯ ಕುಸಿತ ಕಂಡು ಕೇವಲ 156 ರನ್‌ಗಳಿಗೆ ಸರ್ವಪತನ ಕಂಡಿತ್ತು. ದ್ವಿತೀಯ ಇನಿಂಗ್ಸ್‌ನಲ್ಲಿ ಕಿವೀಸ್, ನಾಯಕ ಟಾಮ್ ಲ್ಯಾಥಮ್(86), ಟಾಮ್ ಬ್ಲಂಡೆಲ್(41) ಮತ್ತು ಗ್ಲೆನ್ ಫಿಲಿಪ್ಸ್(48★) ಬ್ಯಾಟಿಂಗ್ ನೆರವಿನಿಂದ 255 ರನ್ ಬಾರಿಸಿ ನ್ಯೂಜಿಲೆಂಡ್ 358 ರನ್‌ಗಳ ಭರ್ಜರಿ ಮುನ್ನಡೆ ಸಾಧಿಸಿತ್ತು. 198 ರನ್‌ಗೆ ಐದು ವಿಕೆಟ್ ಕಳೆದುಕೊಂಡಿದ್ದ ನ್ಯೂಜಿಲ್ಯಾಂಡ್ ಮೂರನೇ ದಿನವಾದ ಶನಿವಾರ ಕೇವಲ 57 ರನ್ ಮಾತ್ರ ಗಳಿಸಿ ಆಲೌಟ್ ಆಯಿತು.

ಐಸಿಸಿ ಟೆಸ್ಟ್ ಸರಣಿ ಹಾದಿ ಮತ್ತಷ್ಟು ಕಠಿಣ

ಬೆಂಗಳೂರು: ತನ್ನ ಸ್ವಂತ ನೆಲದಲ್ಲಿಯೇ ಸತತ ಎರಡು ಪಂದ್ಯಗಳನ್ನು ಸೋಲುವ ಮೂಲಕ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೇರುವ ಭಾರತದ ಗುರಿಯನ್ನು ಇನ್ನಷ್ಟು ದುರ್ಗಮವಾಗಿದೆ.

ಸತತ 2 ಸೋಲಿನ ಬಳಿಕ ರೋಹಿತ್ ಬಳಗದ ಪಾಯಿಂಟ್ಸ್ ಶೇ.68.62ರಿಂದ ಶೇ.62.86ಕ್ಕೆ ಕುಸಿದಿದೆ. ಭಾರತದ ನಂತರದ ಸ್ಥಾನದಲ್ಲಿ ಆಸ್ಟ್ರೇಲಿಯಾ (62.50) ಮತ್ತು ಶ್ರೀಲಂಕಾ (55.56) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ನ್ಯೂಜಿಲೆಂಡ್ ಈ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾವನ್ನು ಹಿಂದಿಕ್ಕಿ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ (50.00)ಏರಿಕೆ ಕಂಡಿದೆ.

ಟೀಮ್ ಇಂಡಿಯಾ ಡಬ್ಲ್ಯುಟಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೂ, ಫೈನಲ್ ಸ್ಥಾನವನ್ನು ತಲುಪುವುದು ಅಷ್ಟು ಸುಲಭವಲ್ಲ. ಭಾರತ ಪ್ರಸಕ್ತ ಡಬ್ಲ್ಯುಟಿಸಿ ಸರಣಿಯಲ್ಲಿ ಇದುವರೆಗೆ ಆಡಿದ 13 ಟೆಸ್ಟ್‌ಗಳಲ್ಲಿ 8ರಲ್ಲಿ ಗೆದ್ದಿದೆ, ನಾಲ್ಕರಲ್ಲಿ ಸೋತಿದ್ದು ಒಂದರಲ್ಲಿ ಡ್ರಾ ಸಾಧಿಸಿದೆ.

ಇದೀಗ ಭಾರತ ಹಾಗೂ ಆಸ್ಟ್ರೇಲಿಯಾ ಜೊತೆಗೆ ಶ್ರೀಲಂಕಾ ಹಾಗೂ ದಕ್ಷಿಣ ಆಫ್ರಿಕಾ ತಂಡಗಳಿಗೂ ಹೆಚ್ಚಿನ ಅವಕಾಶಗಳಿವೆ, ದಕ್ಷಿಣ ಆಫ್ರಿಕಾ ತನ್ನ ಮುಂದಿನ ಟೆಸ್ಟ್ ಸರಣಿಯನ್ನು ಶ್ರೀಲಂಕಾ ಹಾಗೂ ಪಾಕಿಸ್ತಾನದ ವಿರುದ್ಧ ಆಡಲಿದ್ದು, ಐದೂ ಟೆಸ್ಟ್ ಪಂದ್ಯಗಳಲ್ಲಿ ಗೆದ್ದರೆ ದಕ್ಷಿಣ ಆಫ್ರಿಕಾದ ಅಂಕ ಶೇ.69.44ಕ್ಕೆ ಏರಿಕೆಯಾಗಲಿದೆ. ಭಾರತ ದಕ್ಷಿಣ ಆಫ್ರಿಕಾವನ್ನು ಹಿಂದಿಕ್ಕಬೇಕೆಂದರೆ, ಕಿವೀಸ್ ವಿರುದ್ಧ 1, ಆಸ್ಟ್ರೇಲಿಯಾ ವಿರುದ್ಧ ಕನಿಷ್ಠ 3 ಪಂದ್ಯಗಳನ್ನ ಗೆಲ್ಲಲೇಬೇಕಿದೆ.

ಉತ್ತಮ ಆರಂಭ: ಗೆಲುವಿಗೆ 359 ರನ್‌ಪಡೆದ ಭಾರತ ಉತ್ತಮ ಆರಂಭ ಪಡೆದರೂ ಆ ಬಳಿಕ ಕುಸಿತ ಕಂಡು ಸೋಲಿಗೆ ತುತ್ತಾಯಿತು. ಮೊದಲ ಇನ್ನಿಂಗ್ಸ್‌ನಲ್ಲಿ ಶೂನ್ಯ ಸುತ್ತಿದ್ದ ನಾಯಕ ರೋಹಿತ್ ಎರಡನೇ ಇನಿಂಗ್ಸ್‌ನಲ್ಲಿಯೂ ಕಳಪೆ ಬ್ಯಾಟಿಂಗ್ ನಡೆಸಿ ಕೇವಲ 8 ರನ್ ಬಾರಿಸಿದರು. ಬಳಿಕ ಬಂದ ಶುಭಮನ್ ಗಿಲ್ ಲಗುಬಗನೇ 4 ಬೌಂಡರಿ ಬಾರಿಸಿದರೂ ತಮ್ಮ ಆಕ್ರಮಣಕಾರಿ ಇನಿಂಗ್ಸ್ ಮುಂದುವರಿಸುವಲ್ಲಿ ವಿಫಲರಾದರು. ಅವರು 23 ರನ್‌ಗೆ ವಿಕೆಟ್ ಕೈಚೆಲ್ಲಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದು ತುದಿಯಲ್ಲಿ ಸಿಡಿದು ನಿಂತು ಬ್ಯಾಟ್ ಬೀಸಿದ ಜೈಸ್ವಾಲ್ ಅರ್ಧಶತಕ ಬಾರಿಸಿದರು. 65 ಎಸೆತಗಳಿಂದ 3 ಸಿಕ್ಸರ್ ಮತ್ತು 9 ಬೌಂಡರಿ ನೆರವಿನಿಂದ 77 ರನ್ ಗಳಿಸಿದ ಜೈಸ್ವಾಲ್ ಸ್ಯಾಂಟ್ನರ್ ಎಸೆತದಲ್ಲಿ ಮಿಚೆಲ್‌ಗೆ ಕ್ಯಾಚ್ ನೀಡಿ ವಿಕೆಟ್ ಕಳೆದುಕೊಂಡರು. ಇವರ ವಿಕೆಟ್ ಬೀಳುತ್ತಿದ್ದಂತೆ ಭಾರತ ಸೋಲು ಕೂಡ ಖಚಿತವಾಯಿತು.

ಸಂಕಷ್ಟದ ಸಮಯದಲ್ಲಿ ತಂಡಕ್ಕೆ ಆಪತ್ಬಾಂಧವನಂತೆ ಹೋರಾಟ ನಡೆಸುವ ರಿಷಭ್ ಪಂತ್ ನಿಧಾನಗತಿಯಲ್ಲಿ ಓಡಿ ಖಾತೆ ತೆರೆಯುವ ಮುನ್ನವೇ ರನೌಟ್ ಬಲೆಗೆ ಬಿದ್ದರು. ಕೊಹ್ಲಿ(17) ಮತ್ತೆ ಸ್ಯಾಂಟ್ನರ್‌ಗೆ ವಿಕೆಟ್ ಒಪ್ಪಿಸಿದರು. ಮೊದಲ ಇನಿಂಗ್ಸ್‌ನಲ್ಲಿ ಬೌಲ್ಡ್ ಆದರೆ, ದ್ವಿತೀಯ ಇನಿಂಗ್ಸ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಅವರ ಗಳಿಕೆ 17. ಬಾರಿಸಿದ್ದು ಕೇವಲ 2 ಬೌಂಡರಿ. ಅಂತಿಮ ಹಂತದಲ್ಲಿ ಸ್ಪಿನ್ ಆಲ್‌ರೌಂಡರ್‌ಗಳಾದ ಆರ್.ಅಶ್ವಿನ್(18) ಮತ್ತು ಜಡೇಜಾ(42) ಕೆಲ ಕಾಲ ಸಂಘಟಿತ ಬ್ಯಾಟಿಂಗ್ ಹೋರಾಟ ನಡೆಸಿ ಸೋಲಿನ ಅಂತರವನ್ನು ತಗ್ಗಿಸಿದರು. ಜೈಸ್ವಾಲ್ ಹೊರತುಪಡಿಸಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಪೈಕಿ ಕನಿಷ್ಠ ಒಬ್ಬರಾದರೂ ನಿರೀಕ್ಷಿತ ಪ್ರದರ್ಶನ ತೋರುತ್ತಿದ್ದರೆ ಭಾರತಕ್ಕೆ ಗೆಲ್ಲುವ ಸಾಧ್ಯತೆ ಇತ್ತು. ಅಂತಿಮವಾಗಿ ಭಾರತ 245 ರನ್‌ಗಳಿಗೆ ಸರ್ವಪತನ ಕಂಡಿತು.

ದಾಖಲೆ ಬರೆದ ಜೈಸ್ವಾಲ್

ಬಿರುಸಿನ ಬ್ಯಾಟಿಂಗ್ ನಡೆಸಿ 3 ಸಿಕ್ಸರ್ ಬಾರಿಸಿದ ಜೈಸ್ವಾಲ್ ಪ್ರಸಕ್ತ ಕ್ರಿಕೆಟ್ ಋತುವಿನಲ್ಲಿ 30 ಸಿಕ್ಸರ್ ಬಾರಿಸಿದ ಭಾರತದ ಮೊದಲ ಬ್ಯಾಟರ್ ಎನಿಸಿಕೊಂಡರು. ವಿಶ್ವ ಮಟ್ಟದಲ್ಲಿ ಈ ಸಾಧನೆ ಮಾಡಿದ ದ್ವಿತೀಯ ಬ್ಯಾಟರ್ ಎಂಬ ಹೆಗ್ಗಳಿಕೆ ಪಾತ್ರರಾದರು. ವಿಶ್ವ ದಾಖಲೆ ಬ್ರೆಂಡನ್ ಮೆಕಲಮ್ ಹೆಸರಿನಲ್ಲಿದೆ. ಮೆಕಲಮ್ 2014 ರಲ್ಲಿ 9 ಟೆಸ್ಟ್ ಪಂದ್ಯಗಳಿಂದ 33 ಸಿಕ್ಸರ್ ಬಾರಿಸಿದ್ದರು. ಸದ್ಯ ಜೈಸ್ವಾಲ್ 32 ಸಿಕ್ಸರ್ ಬಾರಿಸಿದ್ದಾರೆ. ಅಂತಿಮ ಪಂದ್ಯದಲ್ಲಿ 2 ಸಿಕ್ಸರ್ ಬಾರಿಸಿದರೆ ವಿಶ್ವ ದಾಖಲೆ ಜೈಸ್ವಾಲ್ ಪಾಲಾಗಲಿದೆ.

ಸಂಕ್ಷಿಪ್ತ ಸ್ಕೋರ್

ನ್ಯೂಜಿಲೆಂಡ್ ಮೊದಲ ಇನಿಂಗ್ಸ್-259 (ಡೆವೋನ್ ಕಾನ್ವೆ 76, ರಚಿನ್ ರವೀಂದ್ರ 65, ಮಿಚೆಲ್ ಸ್ಯಾಂಟ್ನರ್ 33, ವಾಷಿಂಗ್ಟನ್ ಸುಂದರ್ 59ಕ್ಕೆ 7, ಆರ್.ಅಶ್ವಿನ್ 64ಕ್ಕೆ 3). ದ್ವಿತೀಯ ಇನಿಂಗ್ಸ್- 255 (ಟಾಮ್ ಲ್ಯಾಥಮ್ 86, ಟಾಮ್ ಬ್ಲಂಡೆಲ್ 41,ಗ್ಲೆನ್ ಫಿಲಿಪ್ಸ್ 48★, ವಾಷಿಂಗ್ಟನ್ ಸುಂದರ್ 56ಕ್ಕೆ 4, ರಚಿನ್ ರವೀಂದ್ರ 72ಕ್ಕೆ 3, ಅಶ್ವಿನ್ 97ಕ್ಕೆ 2.

ಭಾರತ ಮೊದಲ ಇನಿಂಗ್ಸ್-156 (ಯಶಸ್ವಿ ಜೈಸ್ವಾಲ್ 30, ಶುಭಮನ್ ಗಿಲ್ 30, ಜಡೇಜಾ 38, ಸ್ಯಾಂಟ್ನರ್ 53 ಕ್ಕೆ 7, ಫಿಲಿಪ್ಸ್ 26 ಕ್ಕೆ 2). ದ್ವಿತೀಯ ಇನಿಂಗ್ಸ್-245(ಯಶಸ್ವಿ ಜೈಸ್ವಾಲ್ 77, ಗಿಲ್ 23, ಸ್ಯಾಂಟ್ನರ್ 104 ಕ್ಕೆ 6, ಅಜಾಜ್ ಪಟೇಲ್ 43 ಕ್ಕೆ2).

ಆಸ್ಟ್ರೇಲಿಯಾ ಟೆಸ್ಟ್ ಸರಣಿ: ಇಬ್ಬರು ಕನ್ನಡಿಗರಿಗೆ ಸ್ಥಾನ



ಮುಂಬೈ: ಮುಂದಿನ ತಿಂಗಳ 22ರಿಂದ ಆರಂಭವಾಗಲಿರುವ ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಬಾರ್ಡರ್ - ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಗೆ ಹಾಗೂ ನವೆಂಬರ್ 8ರಿಂದ ಆರಂಭ ವಾಗಲಿರುವ ದಕ್ಷಿಣ ಆಫ್ರಿಕಾ ವಿರುದ್ಧದ 4 ಪಂದ್ಯಗಳ ಟಿ-20 ಸರಣಿಗೆ ಭಾರತ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಟೆಸ್ಟ್ ತಂಡವನ್ನು ರೋಹಿತ್ ಶರ್ಮ ತಂಡವನ್ನು ಮುನ್ನ ಡೆಸಿದರೆ, ಉಪನಾಯಕರಾಗಿ ಜಸ್‌ಪ್ರಿತ್ ಬುಮ್ರಾ, ನೇಮಕಗೊಂಡಿದ್ದಾರೆ. ಸೂರ್ಯ ಕುಮಾರ್ ಯಾದವ್ ಟಿ-20 ತಂಡವನ್ನು ಮುನ್ನಡೆಸಲಿದ್ದಾರೆ.

ವಿರಾಟ್ ಕೊಹ್ಲಿ, ರವಿಚಂದ್ರನ್ ಅಶ್ವಿನ್ ಸಹ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಕೆಎಲ್ ರಾಹುಲ್ ಮತ್ತು ಪ್ರಸಿದ್ಧ್ ಕೃಷ್ಣ ಸೇರಿ ಇಬ್ಬರು ಕನ್ನಡಿಗರು ತಂಡದಲ್ಲಿದ್ದಾರೆ. ಹಾಲಿ ಸರಣಿಯೇ ಕೆ.ಎಲ್ ರಾಹುಲ್ ಅವರಿಗೆ ಕೊನೆ ಅವಕಾಶ ಎಂಬ ಮಾತುಗಳು ಕೇಳಿ ಬಂದಿದ್ದವು. ಇದರ ನಡುವೆ ಅವರಿಗೆ ಆಸ್ಟ್ರೇಲಿಯಾ ಸರಣಿ ರೂಪದಲ್ಲಿ ಮತ್ತೊಂದು ಅವಕಾಶ ಲಭಿಸಿದೆ. ಇತ್ತ ದೇಶೀಯ ಟೂರ್ನಿಯಲ್ಲಿ ಸಾಧಾರಣ ಪ್ರದರ್ಶನದ ನಡುವೆಯೂ ಆಸ್ಟ್ರೇಲಿಯಾದಲ್ಲಿ ಪುಟಿದೇಳುವ ಪಿಚ್ ಮತ್ತು ವೇಗದ ಪಿಚ್ ಇರುವ ಹಿನ್ನೆಲೆಯಲ್ಲಿ ಪ್ರಸಿದ್ಧ್ ಕೃಷ್ಣ ಅವರಿಗೆ ತಂಡದಲ್ಲಿ ಅವಕಾಶ ಲಭಿಸಿದೆ.

ಆಸೀಸ್ ಟೆಸ್ಟ್ ಸರಣಿಗೆ ಭಾರತ ತಂಡ: ರೋಹಿತ್ ಶರ್ಮ (ನಾಯಕ), ಜಸ್‌ಪ್ರಿತ್ ಬುಮ್ರಾ, ಯಶಸ್ವಿ ಜೈಸ್ವಾಲ್, ಅಭಿಮನ್ಯು ಈಶ್ವರನ್, ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್ ರಾಹುಲ್, ರಿಷಭ್ ಪಂತ್, ಸರ್ಫರಾಜ್ ಖಾನ್, ಧ್ರುವ್ ಜುರೆಲ್, ಆರ್ ಅಶ್ವಿನ್, ರವೀಂದ್ರ ಜಡೇಜಾ, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್, ಪ್ರಸಿದ್ಧ್ ಕೃಷ್ಣ, ಹರ್ಷಿತ್ ರಾಣಾ, ನಿತೇಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್

ಟಿ20ಗೆ ವೈಶಾಖ್

ಆಸ್ಟ್ರೇಲಿಯಾ ಪ್ರವಾಸದ ಟೆಸ್ಟ್ ಸರಣಿ ಜತೆಗೆ ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಗೂ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಕರ್ನಾಟಕದ ವೈಶಾಖ್ ವಿಜಯ್‌ಕುಮಾರ್ ಮೊದಲ ಬಾರಿಗೆ ರಾಷ್ಟ್ರೀಯ ತಂಡದಲ್ಲಿ ಕಾಣಿಸಿಕೊಂಡಿದ್ದಾರೆ. ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಆಡುವ ವೈಶಾಖ್ ಇದೀಗ ಟೀಮ್ ಇಂಡಿಯಾ ಪರ ಪದಾರ್ಪಣ ಪಂದ್ಯವನ್ನಾಡುವ ಕಾತರದಲ್ಲಿದ್ದಾರೆ.

ಮೀಸಲು ಆಟಗಾರರು: ಮುಕೇಶ್ ಕುಮಾರ್, ನವ್‌ದೀಪ್ ಸೈನಿ ಮತ್ತು ಖಲೀಲ್ ಅಹ್ಮದ್.

ಮತ್ತೊಮ್ಮೆ ಕನ್ನಡಿಗರ ಹೃದಯ ಗೆದ್ದ ಎಬಿಡಿ

ಬೆಂಗಳೂರು: ದಕ್ಷಿಣ ಆಫ್ರಿಕಾ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾಜಿ ಕ್ರಿಕೆಟಿಗ ಎಬಿ ಡಿವಿಲಿಯರ್ಸ್‌ಗೆ ಐಸಿಸಿ ಪ್ರತಿಷ್ಠಿತ ಹಾಲ್ ಆಫ್ ಫೇಮ್ ಪ್ರಶಸ್ತಿ ನೀಡಿ ಗೌರವಿಸಿದೆ. ಎಬಿಡಿ ಕ್ರಿಕೆಟ್‌ಗೆ ನೀಡಿದ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈ ನಡುವೆ ಆರ್‌ಸಿಬಿ ಮಾಡಿದ ಒಂದು ಟ್ವೀಟ್‌ಗೆ ಮಿಸ್ಟರ್ 360 ಖ್ಯಾತಿಯ ಎಬಿಡಿ ಕನ್ನಡದಲ್ಲೇ 'ಧನ್ಯವಾದ' ಹೇಳುವ ಮೂಲಕ ಕನ್ನಡಿಗರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

14 ವರ್ಷಗಳ ಸುದೀರ್ಘ ಅಂತಾ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದಕ್ಷಿಣ ಆಫ್ರಿಕಾ ಪರ ಎಬಿ ಡಿವಿಲಿಯರ್ಸ್ 20 ಸಾವಿರಕ್ಕೂ ಅಧಿಕ ರನ್ ಬಾರಿಸಿದ್ದಾರೆ. ಹಲವಾರು ಬಾರಿ ಏಕಾಂಗಿಯಾಗಿ ದಕ್ಷಿಣ ಆಫ್ರಿಕಾಕ್ಕೆ ಗೆಲುವು ತಂದುಕೊಟ್ಟಿದ್ದಾರೆ. ಇದೀಗ ಎಬಿ ಡಿವಿಲಿಯರ್ಸ್ ಹಾಲ್ ಆಫ್ ಫೇಮ್ ಪ್ರಶಸ್ತಿ ತನ್ನದಾಗಿಸಿಕೊಂಡ ಜಗತ್ತಿನ 115ನೇ ಕ್ರಿಕೆಟಿಗ ಎನ್ನುವ ಹಿರಿಮೆಗೆ ಪಾತ್ರರಾಗಿದ್ದಾರೆ. ಎಬಿ ಡಿವಿಲಿಯರ್ಸ್ ಈ ಪ್ರತಿಷ್ಠಿತ ಹಾಲ್ ಆಫ್ ಫೇಮ್ ಪ್ರಶಸ್ತಿ ಸ್ವೀಕರಿ ಸಿದ ಬೆನ್ನಲ್ಲೇ ರಾಯಲ್ ಚಾಲೆಂಜರ್ಸ್, ''ಗೌರವಗಳು ಬರುತ್ತವೇ, ಹೋಗುತ್ತವೆ. ಆದರೆ ಈ ಫ್ರೇಮ್ ಇದೆಯಲ್ಲ, ಇದು ಎಂದೆಂದಿಗೂ ಅಜರಾಮರ. ಎಬಿಡಿ ನೀವಿದಕ್ಕೆ ಅರ್ಹರಾದವರು'' ಎಂದು ಟ್ವೀಟ್ ಮಾಡಿ ಅಭಿನಂದನೆ ಸಲ್ಲಿಸಿದೆ. ಈ ಟ್ವೀಟ್‌ಗೆ 'ಧನ್ಯವಾದಗಳು' ಎಂದು ಕನ್ನಡದಲ್ಲೇ ಉತ್ತರಿಸುವ ಮೂಲಕ ಎಬಿಡಿ ಕನ್ನಡಿಗರ ಮನ ಗೆದ್ದಿದ್ದಾರೆ. ಎಬಿಡಿ ಜತೆಗೆ ಭಾರತದ ಮಾಜಿ ಮಹಿಳಾ ಸ್ಪಿನ್ನರ್ ನೀತು ಡೇವಿಡ್ ಹಾಗೂ ಇಂಗ್ಲೆಂಡ್ ಮಾಜಿ ನಾಯಕ ಸರ್ ಅಲಿಸ್ಟರ್ ಕುಕ್ ಅವರಿಗೂ ಐಸಿಸಿ ಹಾಲ್ ಆಫ್ ಫೇಮ್ ಪ್ರಶಸ್ತಿ ನೀಡಿ

ಆನಂದ್ ಆಡಿಯೊಗೆ 45

ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್, ರಿಯಲ್ ಸ್ಟಾರ್ ಉಪೇಂದ್ರ, ಹಾಗೂ ರಾಜ್ ಬಿ ಶೆಟ್ಟಿ ನಟಿಸುತ್ತಿರುವ 45 ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಈ ಚಿತ್ರವನ್ನು ನಿರ್ದೇಶನ ಮಾಡಿದ್ದು, ಈ ಚಿತ್ರದ ಮೂಲಕ ಚಂದನವನದಲ್ಲಿ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಸದ್ಯ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗಿವೆ. ಅರ್ಜುನ್ ಜನ್ಯ ಅವರೇ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ, ಹಾಗಾಗಿ ಚಿತ್ರದ ಹಾಡುಗಳನ್ನು ಆಲಿಸಲು ಸಂಗೀತ ಪ್ರಿಯರು ಕಾತರರಾಗಿದ್ದಾರೆ. ಸದ್ಯ 45 ಚಿತ್ರದ ಆಡಿಯೊ ರೈಟ್ಸ್ ದಾಖಲೆ ಮೊತ್ತಕ್ಕೆ ಮಾರಾಟವಾಗಿದ್ದು, ಆನಂದ್ ಆಡಿಯೊ ಸಂಸ್ಥೆಯವರು ಪಡೆದುಕೊಂಡಿದ್ದಾರೆ. ದಿಗ್ಗಜರ ದಂಡೇ ಇರುವ ಈ ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾಯುತ್ತಿದ್ದಾರೆ. ಸೂರಜ್ ಪ್ರೊಡಕ್ಷನ್ ಲಾಂಛನದಲ್ಲಿ ಉಮಾ ರಮೇಶ್ ರೆಡ್ಡಿ 45 ಚಿತ್ರವನ್ನು ನಿರ್ಮಿಸಿದ್ದಾರೆ.

ಸೆಟ್ಟೇರಲು ಸಿದ್ಧವಾದ ಲೈಕ್ ಶೇರ್ ಕಾಮೆಂಟ್

ಸೋಷಿಯಲ್ ಮೀಡಿಯಾ ಬಳಸುವವರಿಗೆ ಲೈಕ್ ಶೇರ್ ಕಮೆಂಟ್ ಪದಗಳು ತಿಳಿದೇ ಇರುತ್ತದೆ. ಈಗ ಇದೇ ಶೀರ್ಷಿಕೆಯಲ್ಲಿ ಹೊಸ ಸಿನಿಮಾವೊಂದು ಸೆಟ್ಟೇರಿದೆ. ಬಿ ಸೇಫ್ ಗರ್ಲ್ಸ್ ಎಂಬ ಅಡಿಬರಹವೂ ಇದೆ. ಅಂದುಕೊಂಡಂತೆ ಇದು ಮೊಬೈಲ್ ಮತ್ತು ಸೋಷಿಯಲ್ ಮೀಡಿಯಾ ಸುತ್ತ ಸಾಗುವ ಕಥೆಯನ್ನು ಒಳಗೊಂಡಿದೆ. ತರೀಕೆರೆ ಮೂಲದ ಗಿರೀಶ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸಿನಿಮಾ ಮೇಲಿನ ಪ್ರೀತಿಯಿಂದ ರಿಯಾಂಶಿ ಎಂಟರ್‌ಟೇನರ್ ಸಂಸ್ಥೆ ಸ್ಥಾಪಿಸಿದ್ದು, ತಮ್ಮ ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಬಹುತೇಕ ಯುವತಿಯರು ಫೇಸ್‌ಬುಕ್, ಇನ್‌ಸ್ಟಾ, ಟ್ವಿಟರ್‌ನಲ್ಲಿ ರೀಲ್ಸ್ ಮಾಡಿ ಅದನ್ನು ಸ್ಟೇಟಸ್‌ನಲ್ಲಿ ಹಾಕಿ ಖುಷಿ ಪಡುತ್ತಿರುತ್ತಾರೆ. ಇಂತಹ ಹುಡುಗಿಯರನ್ನೆ ಗುರಿಯಾಗಿಸಿಕೊಂಡಿದ್ದ ಹುಡುಗನೊಬ್ಬ ಪ್ರೀತಿ ಮಾಡುತ್ತೆನೆಂದು ನಂಬಿಸಿ, ಟ್ರ್ಯಾಪ್ ಮಾಡಿ ಅಪಹರಿಸುತ್ತಾನೆ. ಈತನು ದುಡ್ಡಿಗೆ ಬೇಡಿಕೆ ಇಡದೆ, ಕೊಲೆ ಮಾಡದೆ ಇರುವುದು ಸೋಜಿಗ. ಹಾಗಾದರೆ ಅವನ ಗುರಿ ಏನು ಎಂಬುದೆ ಚಿತ್ರದ ಸ್ಟೋರಿ, ಅದನ್ನು ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಕಟ್ಟಿಕೊಡಲಾಗುತ್ತಿದೆ. ತಮಿಳು ಚಿತ್ರದಲ್ಲಿ ನಟಿಸಿ ಮನಗೆದ್ದಿರುವ ಜತೆಗೆ ರಾಜಾರಾಣಿ ಚಿತ್ರದಲ್ಲಿಯೂ ನಾಯಕನಾಗಿ ನಟಿಸಿ ಸೈ ಎನಿಸಿಕೊಂಡಿರುವ ರಣಧೀರ ಈ ಚಿತ್ರದ ನಾಯಕನಾಗಿ ನಟಿಸುತ್ತಿದ್ದಾರೆ. ಉಳಿದಂತೆ ನಾಯಕಿಗಾಗಿ ಚಿತ್ರತಂಡ ಹುಡುಕಾಟ ನಡೆದಿದೆ. ಸುಧಾನ್ ಪ್ರಕಾಶ್ ಸಂಗೀತ ನಿರ್ದೇಶನ, ವಿಜಯ್ ಛಾಯಾಗ್ರಹಣ, ಪುನೀತ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಲೈಕ್ ಕಮೆಂಟ್ ಶೇರ್ ಚಿತ್ರದ ಮುಹೂರ್ತ ಸಮಾರಂಭ ಇದೇ ತಿಂಗಳು ನೆರವೇರಿಲಿದ್ದು ಮುಂದಿನ ತಿಂಗಳಿನಿಂದ ಶೂಟಿಂಗ್ ಆರಂಭವಾಗಲಿದೆ.

ವಿಟಾಕೀಸ್

ವೀರ ಯೋಧನ ಶಿವ ಕಾರ್ತಿಕೇಯನ್

ವೀರ ಯೋಧ ಮೇಜರ್ ಮುಕುಂದ್ ವರದರಾಜನ್ ಅವರ ಜೀವನ ಚರಿತ್ರೆ ಆಧರಿಸಿ ಅಮರನ್ ಚಿತ್ರ ಸಿದ್ಧವಾಗುತ್ತಿದೆ. ಶಿವ ಕಾರ್ತಿಕೇಯನ್, ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಎಮೋಷನ್ ಜತೆಗೆ ಆ್ಯಕ್ಷನ್ ಅಂಶಗಳು ಟ್ರೇಲರ್‌ನಲ್ಲಿ ಬೆರೆತಿವೆ. ಸೇನಾ ರಜೆಯಲ್ಲಿ ಮನೆಗೆ ಬಂದಿರುವ ಯೋಧ ತನ್ನ ಮಗಳೊಂದಿಗೆ ಇರುವ ಕ್ಷಣ, ಮಗಳಿಗೆ ಒಂದು ಪ್ರೀತಿಯ ಅಪ್ಪುಗೆ ಕೊಟ್ಟು ಮತ್ತೆ ದೇಶ ಸೇವೆಗೆ ಹೋಗುವ ದೃಶ್ಯ ಪ್ರೇಕ್ಷಕರನ್ನು ಕಾಡುತ್ತವೆ. ಶಿವಕಾರ್ತಿಕೇಯನ್ ಮೇಜರ್ ಮುಕುಂದ್ ವರದರಾಜನ್ ಪಾತ್ರದಲ್ಲಿ ಜೀವಿಸಿದ್ದಾರೆ. ಸಾಯಿ ಪಲ್ಲವಿ ನಾಯಕಿಯಾಗಿ ಅಭಿನಯಿಸಿದ್ದು, ಇಂದೂ ರೆಬೆಕಾ ವರ್ಗೀಸ್ ಪಾತ್ರದಲ್ಲಿ ನಟಿಸಿದ್ದಾರೆ. ಭುವನ್ ಅರೋರಾ, ರಾಹುಲ್ ಬೋಸ್ ಮುಂತಾದವರು ತಾರಾಗನದಲ್ಲಿದ್ದಾರೆ. ಇಂಡಿಯಾಸ್ ಮೋಸ್ಟ್ ಫಿಯರ್‌ಲೆಸ್ ಪುಸ್ತಕದಲ್ಲಿ ಶಿವ್ ಅರೂರ್ ಮತ್ತು ರಾಹುಲ್ ಸಿಂಗ್, ಮೇಜರ್ ವರದರಾಜನ್ ಬಗ್ಗೆ ಹಲವು ಮಾಹಿತಿಗಳನ್ನು ಉಲ್ಲೇಖಿಸಿದ್ದಾರೆ. ಅದರಲ್ಲಿನ ಅಂಶಗಳನ್ನು ಆಧರಿಸಿ ಅಮರನ್ ಚಿತ್ರ ಸಿದ್ಧವಾಗಿದೆ. ರಾಜ್‌ಕುಮಾರ್ ಪೆರಿಯಸಾಮಿ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಜಿ.ವಿ.ಪ್ರಕಾಶ್ ಕುಮಾರ್ ಸಂಗೀತ ನಿರ್ದೇಶನ, ಸಿ.ಎಚ್.ಸಾಯಿ ಛಾಯಾಗ್ರಹಣ ಮತ್ತು ಆರ್.ಕಲೈವನನ್ ಸಂಕಲನ ಈ ಚಿತ್ರಕ್ಕಿದೆ. ಕಮಲ್ ಹಾಸನ್ ಅವರ ರಾಜ್ ಕಮಲ್ ಫಿಲಂಸ್ ಇಂಟನ್ಯಾಷನಲ್, ಸೋನಿ ಪಿಕ್ಚರ್ಸ್ ಫಿಲಂಸ್ ಜಂಟಿಯಾಗಿ ಈ ಚಿತ್ರ ನಿರ್ಮಾಣ ಮಾಡಿವೆ. ಅಮರನ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ತೆಲುಗು, ಕನ್ನಡ ಸೇರಿದಂತೆ ಪಂಚಭಾಷೆಗಳಲ್ಲಿ ನಿರ್ಮಾಣವಾಗಿದೆ. ದೀಪಾವಳಿ ಹಬ್ಬದಂದು ಅಮರ್ ತೆರೆಗೆ ಬರಲಿದೆ.

ಗೋವಾ ಚಿತ್ರೋತ್ಸವಕ್ಕೆ ವೆಂಕ್ಯಾ

ಭಾರತದ ಪ್ರತಿಷ್ಠಿತ ಫಿಲ್ಮ್ ಫೆಸ್ಟಿವಲ್‌ಗಳಲ್ಲಿ ಒಂದಾಗಿರುವ ಗೋವಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಕನ್ನಡದ ವೆಂಕ್ಯಾ ಸಿನಿಮಾ ಆಯ್ಕೆಯಾಗಿದೆ. ಐವತ್ತೈದನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾರತೀಯ ಪನೋರಮಾ ವಿಭಾಗದಲ್ಲಿ ಈ ಚಿತ್ರ ಪ್ರದರ್ಶನ ಕಾಣಲಿದೆ. ನವೆಂಬರ್ 20ರಿಂದ 28ರ ವರೆಗೆ ಈ ಚಿತ್ರೋತ್ಸವ ನಡೆಯಲಿದೆ. ಗೋವಾದ ಪಣಜಿಯಲ್ಲಿ ನಡೆಯುವ ಚಿತ್ರೋತ್ಸವದಲ್ಲಿ ದೇಶ ವಿದೇಶದ ಹಲವು ಸಿನಿಮಾಗಳು ಪ್ರದರ್ಶನ ಕಾಣಲಿವೆ. ಜಾಗತಿಕ ಮಟ್ಟದಲ್ಲಿ ಮನ್ನಣೆ ಹೊಂದಿರುವ ಈ ಸಿನಿಮೋತ್ಸವದಲ್ಲಿ ಕನ್ನಡದ ವೆಂಕ್ಯಾ ಪ್ರದರ್ಶನ ಕಾಣಲಿವೆ. ಪ್ರಶಸ್ತಿ ಪಡೆಯುವ ನಿರೀಕ್ಷೆಯನ್ನು ಮೂಡಿಸಿದೆ.

ಡೊಳ್ಳು ಸಿನಿಮಾವನ್ನು ನಿರ್ಮಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದ ಪವನ್ ಒಡೆಯರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಸಾಗರ್ ಪುರಾಣಿಕ್ ನಿರ್ದೇಶನದಲ್ಲಿ ವೆಂಕ್ಯಾ ಚಿತ್ರ ಮೂಡಿಬಂದಿದೆ. ಸಾಗರ್ ಪುರಾಣಿಕ್ ನಿರ್ದೇಶನ ಮಾಡುವುದುರ ಜತೆಗೆ ನಾಯಕನಾಗಿಯೂ ಬಣ್ಣಹಚ್ಚಿದ್ದಾರೆ. ಶಿಮ್ಲಾದ ರೂಪಾಲಿ ಸೂದ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಗೋವಾ ಫಿಲ್ಮ್ ಫೆಸ್ಟಿವಲ್‌ನಲ್ಲಿ ಭಾರತೀಯ ಪನೋರಮಾ ವಿಭಾಗ ಪ್ರಮುಖವಾಗಿದ್ದು, ಇದರಲ್ಲಿ ಇಪ್ಪತ್ತೈದು ಕಥಾಚಿತ್ರ ಹಾಗೂ ಇಪ್ಪತ್ತು ನಾನ್-ಫೀಚರ್ ಸಿನಿಮಾಗಳು ಪ್ರದರ್ಶನಕ್ಕೆ ಆಯ್ಕೆ ಆಗಿವೆ.

ಜೋಗಪ್ಪ ಅರಮನೆಯಲಿ ಜಾಣಮರಿ

ಶೀರ್ಷಿಕೆಯಲ್ಲಿಯೇ ಮನಗೆದ್ದಿರುವ ಎಲ್ಲೋ ಜೋಗಪ್ಪ ನಿನ್ನರಮನೆ, ಹೌದಾ ಹುಲಿಯಾ.. ಹಾಡಿನ ಮೂಲಕ ಸಿನಿಪ್ರಿಯರ ಮನಗೆದ್ದಿದೆ. ಈಗ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಜಾಣಮರಿ.. ಎಂಬ ಪ್ರೇಮ ಗಾನ

ಇದಾಗಿದ್ದು, ಪ್ರಮೋದ್ ಮರವಂತೆ ಸಾಹಿತ್ಯ ಬರೆದಿದ್ದಾರೆ. ಗಾಯಕಿ ರಕ್ಷಿತಾ ಸುರೇಶ್ ಹಾಗೂ ವಿಶಾಕ್ ನಾಗಲಾಪುರ ದನಿಯಾಗಿದ್ದು, ಶಿಯೋಮ್ ಸಂಗೀತ ಸಂಯೋಜಿಸಿದ್ದಾರೆ. ಈ ಹಾಡಿನಲ್ಲಿ ಅಂಜನ್ ನಾಗೇಂದ್ರ ಹಾಗೂ ವೆನ್ನಾ ರೈ ಮಿಂಚಿದ್ದಾರೆ. ಕನ್ನಡ ಹುಡುಗನಾಗಿ ಅಂಜನ್ ಕಾಣಿಸಿಕೊಂಡಿದ್ದು, ವೆನ್ನಾ ರೈ ಮರಾಠಿ ಹುಡುಗಿಯಾಗಿ ಅಭಿನಯಿಸಿದ್ದಾರೆ. ಮಹಾರಾಷ್ಟ್ರದ ಪಂಢರಪುರದಲ್ಲಿ ಈ ಹಾಡನ್ನು ಚಿತ್ರೀಕರಿಸಲಾಗಿದೆ. ಈ ಚಿತ್ರದಲ್ಲಿ ಸಂಜನಾ ದಾಸ್ ಕೂಡ ಒಂದು ಪ್ರಮುಖ ಪಾತ್ರ ಅಭಿನಯಿಸಿದ್ದಾರೆ. ಬಿರಾದರ್, ಶರತ್ ಲೋಹಿತಾಶ್ವ, ದಾನಪ್ಪ, ಸ್ವಾತಿ, ದಿನೇಶ್ ಮಂಗಳೂರು, ಲಕ್ಷ್ಮೀ ನಾಡಗೌಡ ಮುಂತಾದವರು ತಾರಾಗಣದಲ್ಲಿದ್ದಾರೆ. ಎಲ್ಲೋ ಜೋಗಪ್ಪ ನಿನ್ನರಮನೆ ಪಯಣದಲ್ಲಿ ಸಾಗುವ ಸುಂದರ ಕಥೆಯನ್ನು ಒಳಗೊಂಡಿದೆ. ಜತೆಗೆ ಅಪ್ಪನ ಮಗನ ಬಾಂಧವ್ಯದ ಎಳೆಯೂ ಮನಸೆಳೆಯುತ್ತದೆ. ಬೆಂಗಳೂರಿನಿಂದ ಶುರುವಾದ ಪ್ರಯಾಣ ಹಿಮಾಲಯದವರೆಗೆ ಸಾಗುತ್ತದೆ. ಭಾವನಾತ್ಮಕವಾದ ಈ ಸಿನಿಮಾ ಯುವ ಜನರನ್ನು ಕಾಡುತ್ತದೆ ಎನ್ನುತ್ತಾರೆ ನಿರ್ದೇಶಕರು.

ಹಲವು ಕಿರುತೆರೆ ಧಾರಾವಾಹಿಗಳನ್ನು ನಿರ್ದೇಶಿಸಿರುವ ಹಯವದನ, ಎಲ್ಲೋ ಜೋಗಪ್ಪ ನಿನ್ನರಮನೆ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಶಿವ ಪ್ರಸಾದ್ ಸಂಗೀತ ನಿರ್ದೇಶನ, ನಟರಾಜ್ ಮದ್ದಾಲ ಛಾಯಾಗ್ರಹಣ, ರವಿಚಂದ್ರನ್ ಸಂಕಲನ ನರಸಿಂಹ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಪ್ರಮೋದ್ ಮರವಂತೆ ಮತ್ತು ರವೀಂದ್ರ ಮುದ್ದಿ ಸಾಹಿತ್ಯ ರಚಿಸಿದ್ದಾರೆ. ಭಜರಂಗಿ ಮೋಹನ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಪೆಂಡೋರಾಸ್ ಬಾಕ್ಸ್ ಪ್ರೊಡಕ್ಷನ್ ಮತ್ತು ಕೃಷ್ಣಛಾಯಾ ಚಿತ್ರ ಬ್ಯಾನರ್‌ನಲ್ಲಿ ಪವನ್ ಸಿಮಿಕೇರಿ ಹಾಗೂ ಸಿಂಧು ಹಯವದನ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡ ಮೂಲದ, ಮುಂಬಯಿಯ ನಿವಾಸಿ, ವರ್ಣಚಿತ್ರ ಕಲಾವಿದ ದೇವುದಾಸ ಶೆಟ್ಟಿಯವರು ನಮ್ಮ ದೇಶದ ವಿಶಿಷ್ಟ ವರ್ಣಚಿತ್ರ ಕಲಾವಿದ. ಪ್ರಕೃತಿಯ ಬಣ್ಣಗಳ ವೈಭವವನ್ನು ಒಳಗಣ್ಣಿನಿಂದ ಗ್ರಹಿಸಿ, ಪ್ರಕೃತಿಯನ್ನೂ ಈ ಮಣ್ಣಿನ ಸಂಸ್ಕೃತಿಯನ್ನೂ ತನ್ನ ಚಿತ್ರಗಳ ವಸ್ತುಗಳಾಗಿಸಿಕೊಂಡು ತಮ್ಮ ಕಲಾಕೃತಿಗಳು ಕಲಾರಸಿಕರ ಹೃದಯಕ್ಕೆ ಆಪ್ತವಾಗುವಂತೆ, ಅಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡಬಲ್ಲ ವಿಶೇಷ ಪ್ರತಿಭೆ ಅವರದು. ಅವರ ಕಲಾ ಯಾನಕ್ಕೆ ಐವತ್ತು ವರ್ಷಗಳು ಸಂದ ಸಂದರ್ಭದಲ್ಲಿ, ಅಂದರೆ ಅವರ ಕಲಾಜೀವನದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಅವರ ಕುರಿತಾದ ಕೃತಿಯೊಂದನ್ನು ಹೊರತಂದು ಕನ್ನಡದ ಹೆಮ್ಮೆಯ ಕಲಾವಿದನಿಗೆ ಅಕ್ಷರ ಗೌರವ ಸಲ್ಲಿಸಿತು.

ಮುಂಬಯಿ ಕಲಾವಿದನ ಸುವರ್ಣಯಾನ

» ಡಾ. ಬಿ. ಜನಾರ್ದನ ಭಟ್

ಚಿತ್ರ ಕಲಾವಿದ ಮತ್ತು ಲೇಖಕ ದೇವುದಾಸ ಶೆಟ್ಟಿಯವರು ಮುಂಬಯಿಯಲ್ಲಿಯೇ ಹುಟ್ಟಿ ಬೆಳೆದವರಾದರೂ ಉತ್ತಮ ಕನ್ನಡ ಬರಹಗಾರರೂ ಹೌದು. ಅವರು ಕನ್ನಡದಲ್ಲಿಯೂ, ಇಂಗ್ಲಿಷಿನಲ್ಲಿಯೂ ಕೃತಿ ರಚನೆಯನ್ನೂ ಮಾಡಿದ್ದು ಅವುಗಳ ನಿರೂಪಣಾ ಶೈಲಿ ಉನ್ನತಮಟ್ಟದ್ದಾಗಿದೆ.

ಅವರ ಸಾಧನೆಗಳು, ಕಲೆಯ ವೈಶಿಷ್ಟ್ಯ, ಗಣ್ಯರ ಅಭಿಪ್ರಾಯಗಳು, ಅವರ ಸಂದರ್ಶನ ಇತ್ಯಾದಿಗಳೆಲ್ಲವನ್ನು 'ಬಣ್ಣಗಳ ಮಾಂತ್ರಿಕ ದೇವುದಾಸ ಶೆಟ್ಟಿ' ಎಂಬ ಕೃತಿಯಲ್ಲಿ ಸೇರಿಸಿ ಈ ಮಹತ್ವದ ಸಾಧಕನಿಗೆ ಮುಂಬಯಿ ವಿಶ್ವವಿದ್ಯಾಲಯ ಯೋಗ್ಯ ಗೌರವವನ್ನು ಸಲ್ಲಿಸಿತು. ಈ ಕೃತಿಯನ್ನು ಸಂಪಾದಿಸಿದವರು ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಜಿ. ಎನ್. ಉಪಾಧ್ಯ ಮತ್ತು ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿಯವರು.

ದಕ್ಷಿಣ ಮೂಲದ ಬಂಟ ಸಮುದಾಯದ ಹೋಟೆಲ್ ಉದ್ಯಮಿ ಅವರ ಪುತ್ರನಾಗಿ ದೇವುದಾಸರು 26.05.1946 ರಂದು ಜನಿಸಿದರು. ಅವರ ತಂದೆ ದಾದರಿನಲ್ಲಿ ನಂತರ ಖಾರ್‌ನಲ್ಲಿ ಚಿಕ್ಕ ಹೋಟೇಲು ಇಟ್ಟುಕೊಂಡಿದ್ದರು, ಆರ್ಥಿಕವಾಗಿ ಅನುಕೂಲವಾಗಿರಲಿಲ್ಲ. ಬಾಲಕ ದೇವುದಾಸರು ಮುಂಬಯಿ ವಡಾಲಾದ ಎನ್.ಕೆ.ಇ.ಎಸ್. ಕನ್ನಡ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಮತ್ತೆ ಕೆಲವು ಕಾಲ ದಕ್ಷಿಣಕನ್ನಡ ಮತ್ತು ಮುಂಬಯಿಯಲ್ಲಿ ವಿದ್ಯಾಭ್ಯಾಸ ಮಾಡಿದರು.

ರಾತ್ರಿ ಪಾಳಿ ಕೆಲಸ

ಚಿತ್ರಕಲೆಯನ್ನು ಅಭ್ಯಸಿಸಬೇಕೆಂದು ದಾದರ್‌ನಲ್ಲಿರುವ ಪೈ ಕ್ಲಾಸಸ್ ಮೋಡೆಲ್ ಆರ್ಟ್ ಇನ್‌ಸ್ಟಿಟ್ಯೂಟ್‌ಗೆ 1964 ರಲ್ಲಿ ಸೇರಿದರು. ಡಿಪ್ಲೊಮದ ಮೂರನೆಯ ವರ್ಷದ ಪರೀಕ್ಷೆಯನ್ನು ದಾದರ್‌ನ ಪ್ರಸಿದ್ಧ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಇಲ್ಲಿ ಕೊಟ್ಟು ಸರ್ಟಿಫಿಕೇಟ್ ಪಡೆದರು. ಮೂರು ವರ್ಷ ಅಭ್ಯಾಸದಲ್ಲಿ ತೊಡಗಿದ್ದಾಗ ರಾತ್ರಿ ಪಾಳಿಯಲ್ಲಿ ಫ್ಯಾಕ್ಟರಿಯಲ್ಲಿ ದುಡಿಯುತ್ತಿದ್ದರು. ಮುಂದೆ ಕೆಲ ವರ್ಷಗಳ ನಂತರ ಕ್ಯಾಮಲ್ ಕಂಪನಿಯವರು, ಬಜಾಜ್ ಗ್ರೂಪ್, ಮಫತ್‌ಲಾಲ್ ಗ್ರೂಪ್ ಮುಂತಾದವರು ನಡೆಸುತ್ತಿದ್ದ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನ ಗಳಿಸಿದರು.

ದೇವುದಾಸರು ಮುಂಬೈಯಲ್ಲೇ ಹುಟ್ಟಿ ಬೆಳೆದಿದ್ದರೂ ಕನ್ನಡ ಮತ್ತು ತುಳು ಭಾಷೆಗಳಲ್ಲಿಯೇ ವ್ಯವಹರಿಸುತ್ತಾರೆ. ತುಳುನಾಡಿನ ಸಂಸ್ಕೃತಿ ಮತ್ತು ದೇಶದ ವಿವಿಧೆಡೆಗಳ ಪಾರಂಪರಿಕ ಬದುಕು ಅವರ ಮೇಲೆ ಗಾಢವಾದ ಪ್ರಭಾವ ಬೀರಿವೆ. ಅವರು ಆರ್ಟ್ ಸ್ಕೂಲಿನಲ್ಲಿ ಕಲಿಯುತ್ತಿದ್ದಾಗ ತಮ್ಮದೇ ಆದ ರೀತಿಯಲ್ಲಿ ವಾಟರ್ ಕಲರ್ ಬಳಸಿ ಲ್ಯಾಂಡ್ ಸ್ಕೇಪ್ ಚಿತ್ರ ಬಿಡಿಸುತ್ತಿದ್ದರು. ನಂತರ ತೈಲ ಚಿತ್ರಗಳನ್ನು ಕ್ಯಾನ್ವಾಸ್ ಮೇಲೆ ಬಿಡಿಸಿದರು. ಮೈಕೇಲ್ ಏಂಜೆಲೋ, ಲಿಯೊನಾರ್ಡೋ ಡಾ ವಿಂಚಿ, ವ್ಯಾನ್‌ಗಾಗ್, ರೆಂಬ್ರಾಂಟ್ ಮೊದಲಾದ ವಿದೇಶೀಯ ಕಲಾವಿದರ ಚಿತ್ರಗಳ ಅಭ್ಯಾಸದೊಂದಿಗೆ ಭಾರತದ ಹೆಬ್ಬಾರ್, ರವಿವರ್ಮ, ಟಾಗೋರ್, ನಂದಲಾಲ್ ಘೋಷ್, ಅಮೃತಾ ಶೆರ್ ಗಿಲ್ ಮುಂತಾದವರ ವರ್ಣಚಿತ್ರ ಅಭ್ಯಾಸ ಮಾಡಿದರು. ರೇಖೆಗಳಲ್ಲಿ ವರ್ಣ ತುಂಬುವ ಕಲೆಯನ್ನು ಕರಗತ ಮಾಡಿಕೊಂಡರು. ಜತೆಗೆ ಭಾರತೀಯ ಸಂಗೀತ, ಜಾನಪದ ಕಲೆ ಇವೆಲ್ಲವುಗಳ ಪ್ರಭಾವ ಇವರ ಚಿತ್ರಗಳಲ್ಲಿ ಕಂಡು ಬಂದಿತು.

ಹೊಯ್ಸಳ ಕಲಾಕೃತಿಗಳು

ನಂತರ ದೇವುದಾಸರು ಕರ್ನಾಟಕದ ಸಂಚಾರ ಕೈಕೊಂಡು ಹಳೆಬೀಡು ಬೇಲೂರು ಇತ್ಯಾದಿ ಪಾರಂಪರಿಕ ತಾಣಗಳನ್ನು ಸಂದರ್ಶಿಸಿ ದೇವತೆಗಳ ವಿಗ್ರಹಗಳ ಚಿತ್ರ ಬಿಡಿಸುತ್ತ ಹೊರಟರು. ವಿಜಯ ನಗರದ ಶಿಲ್ಪಗಳನ್ನು ಕಂಡು ರೇಖೆಗಳಲ್ಲಿ ಅವುಗಳನ್ನು ಮೂಡಿಸಿದರು; ಬಣ್ಣಗಳನ್ನು ತುಂಬಿದರು. ಅವರ ಗಣೇಶ, ಕೃಷ್ಣ, ಮೀರಾ, ರಾಧಾ, ಮಹಾಭಾರತದ ಚಿತ್ರ ಮಾಲಿಕೆಗಳು ಅವರಿಗೆ ಹೆಸರನ್ನೂ ಹಣವನ್ನು ತಂದುಕೊಟ್ಟವು.

ಬಡವರ ಬದುಕು ಅವರ ಅಂತಃಕರಣವನ್ನು ಸ್ಪರ್ಶಿಸಿ ಕಲೆಯನ್ನು ಹುಟ್ಟಿಸುತ್ತದೆ. 'ಮೂಲತಃ ನಾನು ಕಾರ್ಮಿಕ ಕಲಾವಿದ' ಎಂದು ದೇವುದಾಸರು ಹೇಳಿಕೊಂಡಿದ್ದಾರೆ. ಕಾರ್ಮಿಕರ ನಿರುದ್ಯೋಗ, ಹೊಗೆಕೊಳವೆಯಿಂದ ಹೊಗೆ ನಿಂತಾಗ ಬಿಕೋ ಎನ್ನುವ ಮಿಲ್ಲುಗಳು, ಚಾಳುಗಳಲ್ಲಿ ಹಾಸು ಹೊಕ್ಕಾದ ಬಡತನ, ಭೂತದಂತೆ ಬಾಧಿಸುವ ದಾರಿದ್ರ, ಸರಿಯಾದ ಊಟ, ವ್ಯಾಯಾಮ, ಶಿಕ್ಷಣ ಇಲ್ಲದ ಮಕ್ಕಳು, ತರುಣರ ನಿರಾಶೆಯ ನಿಟ್ಟುಸಿರು, ರೋಗಗ್ರಸ್ತ ವೃದ್ಧರ ದಾರುಣ ಸ್ಥಿತಿ ದೇವುದಾಸರ ಚಿತ್ರಗಳಲ್ಲಿ ಮೂಡತೊಡಗಿದವು. ಅಮೂರ್ತ ಪ್ರತಿಮೆಗಳನ್ನು ಸಂಯೋಜಿಸುವುದಕ್ಕಿಂತ ಸುಸಂಗತ ಚಿತ್ರ ಬಿಡಿಸುವುದು ಅವರಿಗೆ ಪ್ರಿಯವಾದ ಸಂಗತಿಯಾಯಿತು. ಒಲೆಯ ಮುಂದೆ ಕುಳಿತು ರೊಟ್ಟಿ ತಟ್ಟುತ್ತಿರುವ ಹೆಣ್ಣು - ಮಗಳು, ಬುಟ್ಟಿಯಲ್ಲಿ ಹೂಗಳನ್ನಿಟ್ಟು ಮಾರುವ ಚೆಲುವೆ, ಕೋಳಿ ಕಾಳಗದ ಕ್ರೌರ್ಯ, ಒನಕೆಯಲ್ಲಿ ಬತ್ತ ಕುಟ್ಟುವ ಸ್ತ್ರೀಯರು, ಯಕ್ಷಗಾನ ನೃತ್ಯ, ನಾಗಮಂಡಲ, ಹೋಳೀ ಹಬ್ಬ ಮೊದಲಾದ ರಮಣೀಯವೂ ಸಹಜವೂ ಆದ ಚಿತ್ರಗಳು ಅವರ ವಸ್ತುಗಳಾದವು. ಅವುಗಳು ವಿಮರ್ಶಾ ವಲಯದಲ್ಲಿ ಚರ್ಚಿತವಾದವು, ಮೆಚ್ಚುಗೆ ಪಡೆದವು.

ಹಾಯಿಸ್ಟ್ ಕಂಪೆನಿಯ ಉದ್ಯೋಗ

ಕವಿ ಜಯಂತ ಕಾಯ್ಕಿಣಿ ಅವರು ದೇವುದಾಸ್ ಶೆಟ್ಟಿಯವರ ಮಿತ್ರರು. ದೇವುದಾಸರ ಚಿತ್ರಕಲೆಯ ಬಗ್ಗೆ ಜಯಂತ್ ಹಲವು ಲೇಖನಗಳನ್ನು ಬರೆದಿದ್ದಾರೆ. ದೇವುದಾಸ್ ಶೆಟ್ಟಿಯವರು ಜರ್ಮನ್ ಔಷಧಿ ಕಂಪೆನಿಯಲ್ಲಿ (ಹಾಯಿಸ್ಟ್) ಕೆಲಸಕ್ಕೆ ಸೇರಿದಾಗ ಆ ಕಂಪನಿಯಲ್ಲಿ ಜಯಂತ್ ಕೆಮಿಸ್ಟ್ ಆಗಿದ್ದರು, ದೇವುದಾಸರು ಇಂಜಿನಿಯರಿಂಗ್ ವಿಭಾಗದಲ್ಲಿ ಚಿತ್ರ ಡಿಸೈನ್ ಕೆಲಸ ಮಾಡುತ್ತಿದ್ದರು. ಅವರಿಬ್ಬರದು ಎರಡು ದಶಕಗಳ ಗೆಳೆತನ. ಜಯಂತ ದೇವುದಾಸರ ಬಗ್ಗೆ ಹೀಗೆ ಹೇಳುತ್ತಾರೆ: 'ಅತ್ಯಂತ ಶಿಸ್ತಿನಿಂದ ತಮ್ಮ ವರ್ಣಗಳನ್ನು ಸಂಯೋಜಿಸುವ ದೇವದಾಸ್ ಆಕಸ್ಮಿಕ ಸೃಜನಾತ್ಮಕ ತಿರುವುಗಳಿಗೆ ತಮ್ಮನ್ನು - ಮುಚ್ಚಿಕೊಳ್ಳುವುದಿಲ್ಲ. ಒಂದು ಕಲಾಕೃತಿಗೆ ತೊಡಗುವ ಮುನ್ನ ಆ ಕುರಿತಾದ ಪೂರ್ವನಿಯೋಜಿತ ರೂಪ ರೇಷೆಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸುವ ಕಲಾವಿದರ ಗುಂಪಿಗೆ ಸೇರುವ ದೇವದಾಸ್ ತಮ್ಮ ಕೃತಿ ನಿರ್ಮಾಣದಲ್ಲಿ ತೊಡಗಿದ್ದಾಗ ತಮ್ಮ ಬಣ್ಣಗಳಿಗೆ ಸಾಕಷ್ಟು ಸ್ವಾತಂತ್ರ್ಯ ಕೊಡುತ್ತಾರೆ. ಅವರನ್ನು ಮೀರಿಯೂ ಅವರ ರೇಖೆಗಳು, ಬಣ್ಣಗಳು ಇ. ಅರಳಲು ಯತ್ನಿಸಿದರೆ ಮುದ್ದು ಮಗುವನ್ನು ಆಡಲು ಬಿಟ್ಟಂತೆ ಬಿಟ್ಟು ಬಿಡುತ್ತಾರೆ. ಆದರೆ ಪುಂಡಾಟ ಮಾಡದಂತೆ ಶಿಸ್ತಿನ ಜಾಗೃತಿ ವಹಿಸುತ್ತಾರೆ. ಇದರಿಂದಲೇ ಇವರ ಎಲ್ಲ ಸಂಯೋಜನೆಯ ಚೌಕಟ್ಟಿನಲ್ಲಿಯೂ ಚಿಮ್ಮುವ ಕಾರಂಜಿಯಂಥ ವರ್ಣಸತ್ವ ಇದೆ. ಸ್ತ್ರೀ ತೇಪೆಯಾಗದೆ ಹೊಂದಿಕೊಳ್ಳುವ ಇವರ ಮ್ಯೂರಲ್‌ಗಳ ವರ್ಣಗಳು ಧಾತುವಿನ ತಗಡಿನೊಂದಿಗೆ ಸಮರಸದಿಂದ ಬೆರೆಯುತ್ತವೆ...'



ಗೌರವಗಳು

1) ಬಾಂಬೆ ಆರ್ಟ್ ಸೊಸೈಟಿ- 1973. 2) ಆರ್ಟ್ ಸೊಸೈಟಿ ಆಫ್ ಇಂಡಿಯಾ- 1974. 3) ಶಾಂತಿ ನಿಕೇತನ್ ಫ್ರೆಂಡ್ಸ್ ಗ್ರೂಪ್ ಪ್ರಶಸ್ತಿ, ಕೊಲ್ಕತ್ತಾ- 1976. 4) ತುಳು ಸಾಹಿತ್ಯ ಪ್ರಶಸ್ತಿ- 1997. 5) ಬೋಂಬೆ ಬಂಟ್ಸ್ ಎಸೋಸಿಯೇಶನ್‌ನ ಪುರಸ್ಕಾರ - 1997. 6) ಬಂಟರ ಸಂಘ ಮುಂಬಯಿ ಅವರಿಂದ ಪ್ರಶಸ್ತಿ- 1999. 7) ಸರ್ ವಿಶ್ವೇಶ್ವರಯ್ಯ ಪ್ರಶಸ್ತಿ- 2003. 8) ಕನ್ನಡ ಕಲಾ ಭೂಷಣ ಪ್ರಶಸ್ತಿ, ಹುಬ್ಬಳ್ಳಿ - 2004. 9) ಕರ್ನಾಟಕ ಕಲಾ ರತ್ನ- 2010. 10) ಆಳ್ವಾಸ್ ವರ್ಣ ವಿರಾಸತ್ ವಿರಾಸತ್ ರಾಷ್ಟ್ರ ಪ್ರಶಸ್ತಿ- 2013. 11) ಜೈನ್ ಕಲಾ ಭೂಷಣ ಪ್ರಶಸ್ತಿ- 2013. 12) ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಗೌರವ- 2013. 13) ಮೊಗಸಾಲೆ ಪ್ರತಿಷ್ಠಾನ ಕಾಂತಾವರ ಲಲಿತ ಕಲಾ ಪುರಸ್ಕಾರ- 2014. 14) ಕನ್ನಡ ಕಲಾವಿದರ ಪರಿಷತ್ತು, ಮುಂಬಯಿ ಗೌರವ- 2015. 15) ಭಾರತ್ -ವಿಕಾಸ್ ರತ್ನಾ ರಾಷ್ಟ್ರೀಯ ಪ್ರಶಸ್ತಿ- 2017. 16) ಬಾಂಬೆ ಬಂಟ್ಸ್ ಅಸೋಸಿಯೇಶನ್‌ನ ಗೌರವ- 2018. 17) ಮುಲುಂಡ್ ಬಂಟ್ಸ್ ಸಂಸ್ಥೆಯ ಗೌರವ- 2018. 18) ಬಂಟರ ಸಂಘ ಪುಣೆ ಕಲ್ಪವೃಕ್ಷ ಪ್ರಶಸ್ತಿ - 2019.

ಪೊಲೀಸರು ಮಾಡಿದ ಸಹಾಯ

ದೇವುದಾಸರ ಬರಹಗಳು, ಆತ್ಮಕಥನ ಬಹಳ ಆಪ್ತವಾಗಿವೆ, ಮನಸ್ಸಿನ ಭಾವಗಳನ್ನು ಅದ್ಭುತವಾಗಿ ಅಕ್ಷರಗಳ ಬಣ್ಣ ತುಂಬಿ ಪದಗಳಲ್ಲಿ ದಾಖಲಿಸಿವೆ. ಇವುಗಳಲ್ಲಿ ತಮ್ಮ ಜೀವನದ ನೋವು-ನಲಿವುಗಳ ಬಗ್ಗೆ ದೇವದಾಸ ಸಾಕಷ್ಟು ಬರೆದಿದ್ದಾರೆ. ಒಮ್ಮೆ ಬದುಕಿನಲ್ಲಿ ನೆಲೆ ಕಾಣಲು ವಿಫಲನಾದೆನೆಂಬ ಹತಾಶೆಯಿಂದ ಸಮುದ್ರದಲ್ಲಿ ಮುಳುಗಿ ಸಾಯಲು ಹೊರಟಾಗ ಪೋಲೀಸರು ಇವರನ್ನು ತಡೆದು, ಕರೆದುಕೊಂಡು ಬಂದು ಮನೆಗೆ ತಲುಪಿಸಿದ ಪ್ರಸಂಗವನ್ನು ಒಂದೆಡೆ ದಾಖಲಿಸಿದ್ದಾರೆ. ಇನ್ನೊಂದು ಹೃದಯಸ್ಪರ್ಶಿ ಘಟನೆ - ತಂಗಿಯ ಕಾಯಿಲೆಯ ಚಿಕಿತ್ಸೆಗಾಗಿ ಹಣವಿಲ್ಲದಾಗ ತಮ್ಮ 30 ಕಲಾಕೃತಿಗಳನ್ನು ಲಂಡನ್ನಿನಲ್ಲಿದ್ದ ಗೆಳೆಯನಿಗೆ ಕಳಿಸುತ್ತಾರೆ. ಅವನು ಅವನ್ನು ಮಾರಿ ಹಣ ಕಳಿಸಿದಾಗ ಇವರಿಗೆ ನೆಮ್ಮದಿ ದೊರೆತಿತ್ತು.



ಲೋಹದಲ್ಲೂ ಪರಿಣಿತಿ

ದೇವುದಾಸರು ಜಲವರ್ಣ, ತೈಲ ವರ್ಣ ಮತ್ತು ಲೋಹ ಈ ಮೂರೂ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಾರೆ. ಈ ಮೂರು ಬಗೆಯ ಅವರ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಗೋಡೆಗಳನ್ನು ಅಲಂಕರಿಸಿವೆ. ಎಪ್ಪತ್ತರ ದಶಕದ ಆದಿಭಾಗ, ದೇವುದಾಸ ಶೆಟ್ಟಿ ಅವರ ಚಿತ್ರಕಲಾ ಪ್ರದರ್ಶನ ವೊಂದನ್ನು ಖ್ಯಾತ ಕಲಾವಿದರಾದ ಲತಾ ಮಂಗೇಶ್ವರ್ ಅವರು ಉದ್ಘಾಟಿಸಿ ಶುಭ ಹಾರೈಸಿದ್ದರು. ಲತಾ ಮಂಗೇಶ್ವರ್ ಅವರಿಗೆ ದೇವುದಾಸ ಶೆಟ್ಟಿ ಅವರ ಒಂದು ಚಿತ್ರ ಇಷ್ಟವಾಗಿ ವೇದಿಕೆಯಲ್ಲೇ 750 ರೂಪಾಯಿ ನಗದು ನೀಡಿ ಕಲಾಕೃತಿಯನ್ನು ಕೊಂಡು ಹೋದರಂತೆ.

ಎಪ್ಪತ್ತರ ದಶಕದಲ್ಲಿ ಇಂದಿರಾಗಾಂಧಿ ಅವರು ಪ್ರಧಾನಮಂತ್ರಿಯಾಗಿದ್ದ ಕಾಲ. ಕಲಾವಿದರನ್ನು ಪ್ರೋತ್ಸಾಹಿಸುವ ಯೋಜನೆಯಂತೆ ದೇವುದಾಸ ಶೆಟ್ಟಿ ಅವರ ಇಪ್ಪತ್ತು ಚಿತ್ರಗಳನ್ನು ದೆಹಲಿಯ ರಾಷ್ಟ್ರೀಯ ಚಿತ್ರಕಲಾ ಶಾಲೆಗೆ ಖರೀದಿಸಲಾಯಿತು. ಅದರ ಸಂಭಾವನೆ ಒಂದೂವರೆ ಲಕ್ಷ ರೂ. ಬಂದು ನನ್ನ ಕಲಾಜೀವನಕ್ಕೆ ಆಸರೆಯಾಯಿತು ಎಂದವರು ಭಾವುಕರಾಗಿ ನುಡಿಯುತ್ತಾರೆ. ದೇವುದಾಸ ಶೆಟ್ಟಿಯವರ ಬಗ್ಗೆ ಕಾಂತಾವರ ಕನ್ನಡ ಸಂಘ ನಾಡಿಗೆ ನಮಸ್ಕಾರ ಮಾಲೆಯಲ್ಲಿ 'ಕಲಾ ವಸಂತದ ಮಾಮರ' (2015) ಎಂಬ ಕೃತಿಯನ್ನು ಹೊರತಂದಿದೆ.ದೇವುದಾಸ ಶೆಟ್ಟಿಯವರು ಕನ್ನಡ ಸಾಹಿತಿಗಳಿಗೆ ತಮ್ಮ ಚಿತ್ರಗಳನ್ನು ಮುಖಪುಟಕ್ಕಾಗಿ ಉದಾರವಾಗಿ ರಚಿಸಿ ಕೊಟ್ಟಿದ್ದಾರೆ.

ದೇವುದಾಸ ಶೆಟ್ಟಿ ಅವರ ಚಿತ್ರಕಲಾ ಪ್ರದರ್ಶನಗಳು ಹಲವು ಕಡೆ ನಡೆದಿವೆ. ಅವುಗಳಲ್ಲಿ ಮುಖ್ಯವಾಗಿ, ಜಹಾಂಗೀರ್ ಆರ್ಟ್ ಗ್ಯಾಲರಿ (1970 ರಿಂದ ಹತ್ತಕ್ಕೂ ಹೆಚ್ಚು ಸಲ), ಓಯಸಿಸ್ ಆರ್ಟ್ ಗ್ಯಾಲರಿ, ಮುಂಬಯಿ - 1970. ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು 1971, 1978. ಶೃಂಗಾರ್ ಆರ್ಟ್ ಗ್ಯಾಲರಿ, ಉಡುಪಿ ಹೋಯೆಸ್ಟ್ ಮೆಸ್, ಮುಂಬಯಿ - 1973. ಲಯನ್ಸ್ ಪೆವಿಲಿಯನ್, ಮುಲುಂಡ್ - 1977. 7) ತಾಜ್ ಆರ್ಟ್ ಗ್ಯಾಲರಿ, ಮುಂಬಯಿ (ಹಲವು ಬಾರಿ) ಇತ್ಯಾದಿ ಪ್ರಮುಖ ಎನಿಸಿವೆ. ದೆಹಲಿ, ಮದ್ರಾಸ್, ಬೆಂಗಳೂರು, ಉಡುಪಿ, ಮಂಗಳೂರು ಮತ್ತು ಮುಂಬಯಿಗಳಲ್ಲಿ ಒಟ್ಟು 75 ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಬರ್ಮಾ ಮತ್ತು ಜಪಾನ್‌ಗಳಲ್ಲಿ ಅವರ ಚಿತ್ರಗಳ ಪ್ರದರ್ಶನಗಳು ಏರ್ಪಟ್ಟಿವೆ.

ಮುಂಬಯಿಯ ಚಿಂತಕ, ರಂಗನಿರ್ದೇಶಕ ಡಾ. ಭರತ್ ಕುಮಾರ್ ಪೊಲಿಪು 'ಆತ್ಮಶುದ್ಧಿ ಇಲ್ಲದಿದ್ದರೆ ಸುಂದರ ಚಿತ್ರ ನಿರ್ಮಾಣ ಸಾಧ್ಯವಿಲ್ಲ ಎಂದು ನಂಬಿದವರು ದೇವುದಾಸ ಶೆಟ್ಟಿ ಅವರು. ಅವರ ಹಳೆಯ ಚಿತ್ರಗಳನ್ನು ಮೆಲುಕು ಹಾಕಿದಾಗ ಅವರು ಗಂಡು ಹೆಣ್ಣಿನ ಬದುಕಿನ ನಿಗೂಢತೆ ಬಗ್ಗೆ ಆಸಕ್ತಿ ವಹಿಸಿದುದು ಕಂಡು ಬರುತ್ತದೆ. ತಂತ್ರದಲ್ಲೂ ಪ್ರಸ್ತುತಕ್ಕಿಂತ ಹೆಚ್ಚು ಎಬ್‌ಸ್ಟ್ರಾಕ್ಟ್ ಮಾದರಿಗೆ ಒಲವು ತೋರಿದಂತೆ ಕಂಡು ಬರುತ್ತದೆ. ವರ್ಣ ಸಂಯೋಜನೆಯಲ್ಲೂ ಅವರ ಲಯಗಾರಿಕೆ, ಖಚಿತತೆ ಹಾಗೂ ಪರಿಣಾಮಕಾರಿ ವಿನ್ಯಾಸ ಕಂಡು ಬರುತ್ತದೆ.' ಎಂದಿದ್ದಾರೆ.

ಹಿರಿಯರ ನೆನಪಿನ ಹಲವು ಅವತಾರಗಳು!

ನಮ್ಮಲ್ಲಿ ಪಿತೃಪಕ್ಷವಿದ್ದಂತೆ, ಯುರೋಪ್ ಮತ್ತು ಅಮೆರಿಕದಲ್ಲಿ ಹ್ಯಾಲೋವೀನ್ ಹಬ್ಬ. ಆದರೆ, ಅಲ್ಲಿನವರು ಹಿರಿಯರನ್ನು ನೆನಪಿಸಿಕೊಳ್ಳುವ ವಿಧಾನ ವಿಶಿಷ್ಟ. ಅಲ್ಲಿ ಹಿರಿಯರ ಆತ್ಮಗಳು ಹಲವು ಅವತಾರಗಳನ್ನೆತ್ತಿ, ಧರೆಗಿಳಿಯುತ್ತವೆ ಎನ್ನಬಹುದು!

» ಮಂಜುನಾಥ ಡಿ. ಎಸ್.



ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಮೂರು ತಿಂಗಳುಗಳು ಅಮೆರಿಕನ್ನರಿಗೆ ಮತ್ತು ಯುರೋಪಿನ ಜನರಿಗೆ ಸಂಭ್ರಮದ ಸಮಯ. ಹ್ಯಾಲೋವೀನ್, ಥ್ಯಾಂಕ್ಸ್ ಗಿವಿಂಗ್, ಹಾಗು ಕ್ರಿಸ್ಮಸ್ ಹಬ್ಬಗಳು ಒಂದರ ಹಿಂದೆ ಒಂದರಂತೆ ಬರುವ ಋತುಮಾನ ಇದು. ಮುಖ್ಯವಾದ ಹಬ್ಬಗಳು ಇರುವುದು ಒಂದೊಂದೇ ದಿನವಾದರೂ ಇಲ್ಲಿ ಪ್ರತಿ ಹಬ್ಬವನ್ನೂ ವಾರಗಟ್ಟಲೆ ಆಚರಿಸುತ್ತಾರೆ. ಈ ಹಬ್ಬಗಳ ಆಚರಣೆಗಾಗಿ ಅಮೆರಿಕನ್ನರು ಹಲವಾರು ಮಾರ್ಗಗಳನ್ನು ಅರಿಸಿಕೊಳ್ಳುತ್ತಾರೆ; ಅಪಾರ ಹಣ ವ್ಯಯಿಸುತ್ತಾರೆ.

ನಾನೀಗ ಅಮೆರಿಕದಲ್ಲಿದ್ದೇನೆ; ಇಲ್ಲಿನ ಕೆಲವು ಸುದ್ದಿಗಳು ರೋಚಕ, ಕುತೂಹಲಕಾರಿ. ಈವರ್ಷದ ಅಂದರೆ, 2024ರ ಹ್ಯಾಲೋವೀನ್ ಆಚರಣೆಗಾಗಿ ಅಮೆರಿಕನ್ನರು ಸುಮಾರು 12 ಬಿಲಿಯನ್ ಡಾಲರ್ (ಅಂದರೆ ಸುಮಾರು ಒಂದು ಲಕ್ಷ ಕೋಟಿ ರುಪಾಯಿಗಳು) ಖರ್ಚು ಮಾಡಲಿದ್ದಾರೆ ಎಂಬ ಅಂಶವನ್ನು ಅನೇಕ ಸಮೀಕ್ಷೆಗಳು ಬಹಿರಂಗಗೊಳಿಸಿವೆ. ಹತ್ತು ವರ್ಷಗಳಲ್ಲಿ ಈ ವೆಚ್ಚ ಶೇಕಡಾ 65ರಷ್ಟು ಏರಿಕೆ ಕಂಡಿದೆ.

ತಿಂಗಳ ಮೊದಲೇ ತಯಾರಿ!

ಈ ವರ್ಷದ ಹ್ಯಾಲೋವೀನ್ ಹಬ್ಬವಿರುವುದು ಅಕ್ಟೋಬರ್ 31ರಂದು. ಆದರೆ, ಸೆಪ್ಟಂಬರ್ ಅಂತ್ಯದಿಂದಲೇ ಈ ಹಬ್ಬದ ಕುರುಹುಗಳು ಕಾಣತೊಡಗಿದವು. ವಿಕಾರ ವದನಗಳಂತೆ ಕೊರೆದ ಕುಂಬಳಕಾಯಿಗಳು, ಅಸ್ಥಿಪಂಜರಗಳು, ತಲೆಬುರುಡೆಗಳು, ವಿಚಿತ್ರ ಆಕಾರದ ವಿಕೃತ ಶರೀರದ ಬೊಂಬೆಗಳು, ಪ್ರೇತ-ಪಿಶಾಚಿಗಳು, ಜೇಡರ ಬಲೆ ಹಾಗು ಜೇಡಗಳು, ಗೋರಿ ಕಲ್ಲುಗಳು, ಕಾಡುಬೆಕ್ಕುಗಳು, ಏಕಶೃಂಗಿಗಳು, ಇತ್ಯಾದಿಗಳ ಪ್ರತಿಕೃತಿಗಳು ಮನೆಗಳ ಮುಂದೆ ಮೂಡಲಾರಂಭಿಸಿದವು. ವಾರದಿಂದ ವಾರಕ್ಕೆ ಇವುಗಳ ಸಂಖ್ಯೆ ವೃದ್ಧಿಸಲಾರಂಭಿಸಿತು. ಯಾಂತ್ರಿಕವಾಗಿ ಚಲಿಸುವ, ವಿಚಿತ್ರ ಸದ್ದು ಮಾಡುವ ಭಯಾನಕ ಬೊಂಬೆಗಳ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿರುವುದು ಗೋಚರಿಸಿತು. ಈ ಆಚರಣೆಯ ಅರಿವಿಲ್ಲದೆ ಕತ್ತಲಿನಲ್ಲಿ ಇವುಗಳ ಬಳಿ ಸುಳಿಯುವ ಅಮಾಯಕರ ಮನದಲ್ಲಿ ಇವು ಭೀತಿ ಹುಟ್ಟಿಸಿದರೆ ಅಚ್ಚರಿಯಿಲ್ಲ. ಸೂರ್ಯಾಸ್ತವಾಗಿ ಕತ್ತಲು ಆವರಿಸುತ್ತಿದ್ದಂತೆ ಕಿರು ದೀಪಗಳು ಇವುಗಳನ್ನು ಮಂದವಾಗಿ ಬೆಳಗಲಾರಂಭಿಸುತ್ತವೆ.

ನಾವು ವಾಸವಿರುವ ಬಡಾವಣೆಯ ನಿವಾಸಿಗಳಲ್ಲಿ ಹ್ಯಾಲೋವೀನ್ ಅಲಂಕಾರದಲ್ಲಿ ಮೇಲುಗೈ ಸಾಧಿಸಬೇಕೆಂಬ ಸ್ಪರ್ಧೆಯ ಮನೋಭಾವ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಿರುವುದನ್ನು ನಾನು ಗಮನಿಸಿದ್ದೇನೆ. ಹಬ್ಬದ ದಿನದ ಸಂಜೆ ಸುಮಾರು ಎರಡು ಮೂರು ಗಂಟೆಗಳ ಕಾಲ ಇಲ್ಲಿ ಜಾತ್ರೆಯ ವಾತಾವರಣ ಇರುತ್ತದೆ. ವೈವಿಧ್ಯಮಯ ವೇಷ-ಭೂಷಣಗಳನ್ನು ತೊಟ್ಟು, ಬೀದಿ ಬೀದಿಗಳಲ್ಲಿ ಸಾಗುವ ಮಂದಿ ಹ್ಯಾಲೋವೀನ್ ಅಲಂಕಾರಗಳನ್ನು ಕಂಡು ಕಣ್ತುಂಬಿಸಿಕೊಳ್ಳುತ್ತಾರೆ. ಮನೆಮನೆಗೆ ಹೋಗಿ ಟ್ರಿಕ್-ಆರ್-ಟ್ರೀಟ್ ಎನ್ನುತ್ತಾ, ಮನೆಯವರು ಕೊಡುವ ಕ್ಯಾಂಡಿಗಳನ್ನು ತಮ್ಮೊಡನೆ ತಂದಿರುವ ಚೀಲದಲ್ಲಿ ಅಥವಾ ಬುಟ್ಟಿಯಲ್ಲಿ ತುಂಬಿಕೊಳ್ಳುತ್ತಾ, ಹರ್ಷದಿಂದ ಹಿಗ್ಗುವ ಮಕ್ಕಳೊಡನೆ ಅವರ ಪೋಷಕರೂ ಸಂಭ್ರಮಿಸುತ್ತಾರೆ. ಇದನ್ನು ನೋಡುವುದೇ ಒಂದು ರೀತಿಯ ಆನಂದ.

ಕುಂಬಳಕಾಯಿ ಕಲಾಕೃತಿ

ಹ್ಯಾಲೋವೀನ್ ಆಚರಣೆಗೆ ಇನ್ನೂ ಹಲವು ಆಯಾಮಗಳಿವೆ. ಇಡೀ ಅಕ್ಟೋಬರ್ ತಿಂಗಳ ವಾರಾಂತ್ಯಗಳಲ್ಲಿ ಹ್ಯಾಲೋವೀನ್ ಹಬ್ಬಕ್ಕೆ ಪೂರಕವಾಗಿ ಅನೇಕ ಸಂಘ-ಸಂಸ್ಥೆಗಳು ಹಲವಾರು ಚಟುವಟಿಕೆಗಳನ್ನು ಆಯೋಜಿಸಿತ್ತಾರೆ. ಪಂಪ್ಕಿನ್ ಪ್ಯಾಚ್, ಪಂಪ್ಕಿನ್ ಕಾರ್ವಿಂಗ್, ವರ್ಣಚಿತ್ರಗಳು, ಡೆಕೊರೇಷನ್, ಡ್ಯಾನ್ಸ್, ಸೇರಿದಂತೆ ಹತ್ತು ಹಲವು ಕಾರ್ಯಾಗಾರಗಳು ಹಾಗು ಸ್ಪರ್ಧೆಗಳು ನಡೆಯುತ್ತವೆ. ಇವುಗಳಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಚಟುವಟಿಕೆಗಳ ವಿವರಗಳನ್ನು ಪರಿಶೀಲಿಸಿ ಮಕ್ಕಳ ವಯೋಮಾನಕ್ಕೆ ಸೂಕ್ತವಾದುದನ್ನು ಆಯ್ದುಕೊಳ್ಳಬೇಕಾದ ಅಗತ್ಯವಿದೆ. ಸರಿಯಲ್ಲದ ಆಯ್ಕೆ ನಿರಾಸೆ ಉಂಟುಮಾಡಲೂ ಬಹುದು ಎಂಬುದನ್ನು ಸ್ವಾನುಭವದಿಂದ ಕಂಡುಕೊಂಡದ್ದಾಗಿದೆ.

ಭೂತ ಪ್ರೇತಗಳ ಹಿನ್ನೆಲೆ ಏರುದನಿಯ ಸಂಗೀತ!

ಆರೆಂಜ್ ಕೌಂಟಿಯಲ್ಲಿರುವ ಡಿಸ್ಕವರಿ ಕ್ಯೂಬ್ ಎಂಬ ವೈಜ್ಞಾನಿಕ ಪ್ರದರ್ಶನಾಲಯವೂ ಹ್ಯಾಲೋವೀನ್ ಪ್ರಯುಕ್ತ ಪಂಪ್ಕಿನ್ ಪಲೂಜಾ ಮತ್ತು ಡ್ಯಾನ್ಸ್ ಪಾರ್ಟಿ ಆಯೋಜಿಸಿತ್ತು. ನಿಗದಿತ ಸಂಖ್ಯೆಯ ಮಂದಿಗೆ ಮಾತ್ರ ಪ್ರವೇಶಾವಕಾಶ ಇದ್ದುದರಿಂದ ಈ ಚಟುವಟಿಕೆಗಳಲ್ಲಿ ಭಾಗವಹಿಸಿಲು ಮೊದಲೇ ನೋಂದಾಯಿಸಿಕೊಳ್ಳಬೇಕಾಗಿತ್ತು. ನಾಲ್ಕು ವರ್ಷದ ನಮ್ಮ ಮೊಮ್ಮಗಳಿಗಾಗಿ ಇದಕ್ಕೆ ನೋಂದಾಯಿಸಿಕೊಂಡೆವು. ಭೂತ-ಪ್ರೇತಗಳ ಹಿನ್ನೆಲೆಯಲ್ಲಿ ಏರುದನಿಯ ಸಂಗೀತದ ಡ್ಯಾನ್ಸ್ ಪಾರ್ಟಿಯಲ್ಲಿ ಹಿರಿಯ ಮಕ್ಕಳು ಹೆಜ್ಜೆಹಾಕಿ ಹರ್ಷಿತರಾದರೂ, ನಮ್ಮ ಮೊಮ್ಮಗಳೂ ಸೇರಿದಂತೆ ಹಲವಾರು ಕಿರಿಯರಿಗೆ ಇದು ಕಿರಿಕಿರಿ ಉಂಟುಮಾಡುವಂತಿತ್ತು. ಪಲೂಜಾದಲ್ಲಿನ ಬಹುತೇಕ ಕ್ರೀಡೆಗಳು ಹಾಗು ಸ್ಪರ್ಧೆಗಳು ಸಹ ಹಿರಿಯ ಮಕ್ಕಳಿಗೆ ಮಾತ್ರವೇ ಒಪ್ಪುವಂತಿದ್ದವು. ಚಿಕ್ಕ ಮಕ್ಕಳಿಗೆ ಆಪ್ಯಾಯಮಾನ ವಾಗುವಂತಿದ್ದುದು ಎಲ್ಲೆಡೆ ವಿತರಿಸುತ್ತಿದ್ದ ಕ್ಯಾಂಡಿಗಳು. ಆದರೆ, ಆರೋಗ್ಯದ ದೃಷ್ಟಿಯಿಂದ ಅವುಗಳನ್ನು ಮೊಮ್ಮಗಳಿಂದ ದೂರವಿಡಬೇಕಾದ ಅಗತ್ಯವಿತ್ತು. ಅವಳ ಗಮನವನ್ನು ಬೇರೆಡೆಗೆ ಹರಿಸಲು ಅಲ್ಲಿ ಅನ್ಯ ಮಾರ್ಗಗಳಿದ್ದುದರಿಂದ ಈ ಕೆಲಸ ನಿಭಾಯಿಸುವುದು ಸುಲಭವಾಯಿತು.

ಅಮೆರಿಕದ ಜನರು ಹ್ಯಾಲೋವೀನ್ ನೆಪದಲ್ಲಿ ತಮ್ಮ ಹಿರಿಯರ ಆತ್ಮಗಳನ್ನು ಪ್ರೇತಾತ್ಮಗಳ ರೀತಿ ಚಿತ್ರಿಸಿ, ವಿವಿಧ ರೀತಿಯ ಕಲಾಕೃತಿಗಳನ್ನು ರಚಿಸಿ, ಅವುಗಳಲ್ಲಿ ಕೆಲವು ಭಯ ಹುಟ್ಟಿಸುವಂತೆ ರಸ್ತೆ ಬದಿಯಲ್ಲಿ, ಅಂಗಳದಲ್ಲಿ ನಿಲ್ಲಿಸಿ ಆಚರಿಸುವ ಪರಿ ನಮ್ಮ ದೇಶದವರಿಗೆ ತುಸು ವಿಚಿತ್ರ ಎನಿಸಬಹುದು; ಆದರೆ, ಅಮೆರಿಕದವರ ಅದನ್ನು ಆಚರಿಸುವ ಸಂಭ್ರಮ, ಮಕ್ಕಳು ಪಾಲ್ಗೊಳ್ಳುವ ರೀತಿ, ಮಕ್ಕಳು ವಿಚಿತ್ರ ದಿರಿಸುಗಳನ್ನು ಧರಿಸಿ, ಓಡಾಡುತ್ತಾ ಟ್ರಿಕ್ ಆರ್ ಟ್ರೀಟ್ ಎಂದು ಸಂತಸದಿಂದ ಹೇಳುವ ಪರಿ, ಸಂಭ್ರಮ ಎಲ್ಲವೂ ಸಾಂಕ್ರಾಮಿಕವೇ ಸರಿ!

» ಶಶಿಧರ ಹಾಲಾಡಿ

ಕಳೆದ ಐದು ದಶಕಗಳಿಂದ ಸಾವಿರಾರು ಹಾಸ್ಯ ಬರಹಗಳನ್ನು ಬರೆದಿರುವ ಮತ್ತು ಸಾವಿರಾರು ಹಾಸ್ಯ ಎಪಿಸೋಡುಗಳನ್ನು ದೃಶ್ಯಮಾಧ್ಯಮಕ್ಕಾಗಿ ರೂಪಿಸಿರುವ, ಎಂ.ಎಸ್.ನರಸಿಂಹಮೂರ್ತಿಯವರು (ಎಂಎಸ್ಎನ್), ಈಗ ಒಂದು ಹಾಸ್ಯ ಕಾದಂಬರಿಯನ್ನು ರಚಿಸಿದ್ದಾರೆ. ಈ ನಗೆಮಾಂತ್ರಿಕನ 75 ವರ್ಷದ ಸಂಭ್ರಮದಲ್ಲಿ, ಕಳೆದ ವಾರ ಈ ಹಾಸ್ಯ ಕಾದಂಬರಿ 'ಪುತ್ರಕಾಮ್ಯ' ಬಿಡುಗಡೆಯಾಯಿತು. ವಿಶೇಷವೆಂದರೆ, ಕೇವಲ ಒಂದು ತಿಂಗಳ ಅವಧಿಯಲ್ಲಿ ಈ ಕಾದಂಬರಿಯನ್ನು ಅವರು ರಚಿಸಿದ್ದು, ಇದರಲ್ಲಿ ಹಾಸ್ಯವೇ ಪ್ರಧಾನವಾಗಿದ್ದರೂ, ಹೊಸ ರೀತಿಯ ವಸ್ತುವನ್ನು ಆಯ್ಕೆಮಾಡಿಕೊಂಡಿರುವುದು ವಿಶೇಷ. ಚಲನಚಿತ್ರ ನಿರ್ದೇಶಕರಾದ ಮಂಜು ಸ್ವರಾಜ್ ಕೆ.ಆರ್. ಅವರು ಹುಡುಕಿದ ಕಥಾ ಎಳೆಯನ್ನು ವಿಸ್ತರಿಸಿ, ಎಂಎಸ್ಎನ್ ಅವರು 'ಪುತ್ರಕಾಮ್ಯ' ಕಾದಂಬರಿಯನ್ನು ರಚಿಸಿದ್ದಾರೆ.

''ಎಂಎಸ್ಎನ್ ಅವರು ತಮ್ಮ 75ರ ಹುಟ್ಟುಹಬ್ಬದ ನೆನಪಿಗಾಗಿ ಬರೆದಿರುವ ಈ ಕಾದಂಬರಿಯ ವಸ್ತು ಭಿನ್ನವಾಗಿದೆ. ಹಾಸ್ಯದ ಜತೆಗೆ ಐವಿಎಫ್ ತಂತ್ರಜ್ಞಾನದ ಅನುಕೂಲತೆಗಳ ಬಗ್ಗೆ ಇಲ್ಲಿ ವಿವರಗಳಿವೆ. ಮಹಾಭಾರತದ ಕಥೆಯಲ್ಲೂ ಐವಿಎಫ್ ಮತ್ತು ಇನ್‌ಕ್ಯುಬೇಟರ್ ತಂತ್ರಜ್ಞಾನದ ಹೋಲಿಕೆ ಅಲ್ಲಲ್ಲಿ ಇದೆ ಎಂಬ ವಿಚಾರ ಇಲ್ಲಿ ಬರುತ್ತದೆ.'' (ಬೆನ್ನುಡಿಯಲ್ಲಿ) ಆಕರ್ಷಕ ಮುಖಪುಟವಿರುವ ಈ ಕಾದಂಬರಿಯ ಬೆನ್ನುಡಿಯಲ್ಲಿನ ವಿವರಗಳು, ಕಾದಂಬರಿಯ ಎಳೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದೆ ಮತ್ತು ಓದುಗರನ್ನು ಸೆಳೆಯುವ ಪ್ರಯತ್ನ ನಡೆಸಿದೆ.

ನಗು ಮೂಡಿಸುವ ಸಂಭಾಷಣೆ



ಪುತ್ರಕಾಮ್ಯ
ಲೇ: ಎಂ.ಎಸ್.ನರಸಿಂಹಮೂರ್ತಿ
ಪ್ರ: ವಿಕ್ರಂ ಪ್ರಕಾಶನ ಬೆಂಗಳೂರು, ಮೊ: 9740994008
ಬೆಲೆ ರು.200/-

ಖ್ಯಾತ ನಗೆ ಸಾಹಿತಿ ಎಂಎಸ್. ನರಸಿಂಹಮೂರ್ತಿಯವರ ಹೊಸ ಕಾದಂಬರಿ 'ಪುತ್ರಕಾಮ್ಯ'ವು ಹಾಸ್ಯ ಪ್ರಧಾನವಾಗಿರುವುದು ವಿಶೇಷ.

ಈ ಕಾದಂಬರಿಯ ಓದುಗರಿಗೆ, ಸೂಕ್ತ ಪ್ರವೇಶವನ್ನು ಮುನ್ನುಡಿಯ ರೂಪದಲ್ಲಿ ನೀಡಿದವರು ಡಾ. ಸೋಮೇಶ್ವರ ಅವರು. ಇಲ್ಲಿನ ಐವಿಎಫ್ ತಂತ್ರಜ್ಞಾನದ ಕಥನವನ್ನು, ವೈಜ್ಞಾನಿಕ ಮತ್ತು ವೈದ್ಯಕೀಯ ದೃಷ್ಟಿಕೋನದಲ್ಲಿ ವಿಶ್ಲೇಷಣೆಗೆ ಒಳಪಡಿಸಿರುವ ಡಾ. ಸೋಮೇಶ್ವರ ಅವರ ತಮ್ಮ ಸುದೀರ್ಘ ಮುನ್ನುಡಿಯಲ್ಲಿ ಕಾದಂಬರಿಯ ವಿಶಿಷ್ಟ ಗುಣಗಳನ್ನು, ಕಥನವನ್ನು ಹಿಡಿದಿಟ್ಟಿರುವ ಪರಿ ಅನನ್ಯ ಎನಿಸಿದೆ.

''ಪುತ್ರಕಾಮ್ಯ ಹಾಸ್ಯ ಕಾದಂಬರಿಯ ಮೂಲ ವಿಷಯ 'ನಿಯೋಗ'. ಹಾಗಾಗಿ ನಿಯೋಗದ ಪ್ರಾಚೀನ ಹಾಗೂ ಅರ್ವಾಚೀನ ವಿಶೇಷಗಳ ಪ್ರಾಥಮಿಕ ಸುದೀರ್ಘವಾದ ಮುನ್ನುಡಿಯನ್ನು ಬರೆಯಬೇಕಾಯಿತು. ಪುತ್ರಕಾಮ್ಯ ಹಾಸ್ಯ ಕಾದಂಬರಿಯಲ್ಲಿ ಎರಡು ಪ್ರಧಾನ ಜೋಡಿಗಳಿವೆ. ದಿವಾಕಾಂತ ಮತ್ತು ದೇವಲತಾ ದಂಪತಿಗಳು ಹಾಗೂ ಎಬಿಸಿಡಿ ಶಾಸ್ತ್ರಿ (ಅರಸೀಕೆರೆ ಬ್ರಹ್ಮಯ್ಯನವರ ಮಗ ಚಂದ್ರದೇವ ಶಾಸ್ತ್ರಿ) ಮತ್ತು ಚಂದ್ರಮುಖಿ ಮದುವೆಯಾಗಲಿರುವ ಭಾವೀ ಜೋಡಿಗಳು. ಇವರಲ್ಲದೆ ನಾಲ್ಕು 'ಪುರುಷಾರ್ಥ'ಗಳೆಂದು ಹಾಗೂ 'ದುಷ್ಟ ಚತುಷ್ಟಯ'ರೆಂದು ಹೆಸರಾದ ಧರ್ಮೇಂದ್ರ, ಸಿದ್ಧಾರ್ಥ, ಸತ್ಯಕಾಮ ಮತ್ತು ಮೋಕ್ಷೇಂದ್ರ, ಎಂಬ ಪುಂಡು ಗೆಳೆಯರ ಪಟಾಲಮ್. ದಿವಾಕಾಂತ ಮತ್ತು ದೇವಲತಾ ಅವರಿಗೆ ಮದುವೆಯಾಗಿ ಎರಡು ವರ್ಷಗಳಾಗಿವೆ. ಆದರೆ ಅವರಿಗೆ ಇನ್ನೂ ಮಕ್ಕಳಾಗಿಲ್ಲ. ದಿವಾಕಾಂತನ ಅಮ್ಮ ನೀಲಾಂಬೆ, ಮಗನಿಗೆ ಮಗುವಾಗಲಿಲ್ಲವಲ್ಲ ಎಂಬ ಕೋಪವನ್ನು ಸೊಸೆಯ ಮೇಲೆ ತೀರಿಸಿಕೊಳ್ಳುತ್ತಿರುತ್ತಾಳೆ. ಚಿತ್ರಹಿಂಸೆ ಕೊಡುತ್ತಿರುತ್ತಾಳೆ. ಹಳೆಯ ಕಾಲದ ಕನ್ನಡ ಸಿನಿಮಾಗಳಲ್ಲಿ ಕಂಡು ಬರುವ ಅತ್ತೆ ಲಕ್ಷ್ಮೀದೇವಿಯ ತರಹ! ದಿವಾಕಾಂತನ ಸ್ಥಿತಿಯು ಅಡಕತ್ತರಿಯಲ್ಲಿ ಸಿಕ್ಕ ಅಡಕೆಯಂತೆ ಆಗಿರುತ್ತದೆ. ಅಮ್ಮನನ್ನು ಬೈಯ್ಯಲಾರ, ಹೆಂಡತಿಯ ಕಷ್ಟವನ್ನು ಸಹಿಸಲಾರ. ಕೊನೆಗೆ ವೈದ್ಯರ ಹತ್ತಿರ ಹೋದ. ವೈದ್ಯರು ಇಬ್ಬರ ಪರೀಕ್ಷೆಯನ್ನು ಮಾಡಿ, ದಿವಾಕಾಂತನಿಗೆ ಅಲ್ಪವೀರ್ಯಾಣುಗಳ ಅಥವ ಆಲಿಗೋಸ್ಪರ್ಮಿಯ ಇರುವುದನ್ನು ಹೇಳುತ್ತಾರೆ. ಸಾಮಾನ್ಯವಾಗಿ ಒಂದು ಎಂ.ಎಲ್ ವೀರ್ಯದಲ್ಲಿ 20–150 ದಶಲಕ್ಷ ವೀರ್ಯಾಣುಗಳಿರುತ್ತವೆ. 15 ದಶಲಕ್ಷಕ್ಕಿಂತಲೂ ಕಡಿಮೆ ವೀರ್ಯಾಣುಗಳಿದ್ದರೆ, ಆ ಸ್ಥಿತಿಯನ್ನು 'ಅಲ್ಪವೀರ್ಯಾಣತ್ವ' ಎನ್ನುವ ವಾಡಿಕೆಯಿದೆ. ಒಬ್ಬ ವ್ಯಕ್ತಿಯು ಸಾಮಾನ್ಯವಾಗಿ ಪ್ರತಿ ಸ್ಖಲನದಲ್ಲಿ 1.5–5.0 ಎಂ.ಎಲ್.ವೀರ್ಯವನ್ನು ವಿಸರ್ಜಿಸುವುದುಂಟು. ಅಂದರೆ ಪ್ರತಿ ಸ್ಖಲನದಲ್ಲಿ ಕನಿಷ್ಠ 39 ದಶಲಕ್ಷ ವೀರ್ಯಾಣುಗಳಿರಲೇಬೇಕು; ಇಲ್ಲದಿದ್ದರೆ ಗರ್ಭಕಟ್ಟುವ ಸಾಧ್ಯತೆ ಕಡಿಮೆ ಎಂದರ್ಥ. ದಿವಾಕಾಂತನಿಗೆ ಬರೀ 15 ದಶಲಕ್ಷ ವೀರ್ಯಾಣುಗಳಿವೆ. ಇದು ಕಾದಂಬರಿಯ ಹಿನ್ನೆಲೆ.

''ಎಬಿಸಿಡಿ ಶಾಸ್ತ್ರಿ, ದಿವಾಕಾಂತ ಮತ್ತು ದುಷ್ಟ ಚತುಷ್ಟಯರು ವಾರಕ್ಕೊಮ್ಮೆ ತೆಂಗಿನ ತೋಟದಲ್ಲಿ ಸೇರಿ, ಎಳನೀರಿನಲ್ಲಿ ಜಿನ್ ಬೆರೆಸಿ, ಕಂಠಪೂರ್ತಿ ಕುಡಿಯುವುದರಲ್ಲಿ ಮಹಾ ಖದೀಮರು. 'ದಿವಾಕಾಂತನಿಗೆ ಏಕೆ ಮಕ್ಕಳಾಗುತ್ತಿಲ್ಲ ಎನ್ನುವುದರ ಬಗ್ಗೆ 'ಗುಂಡು ಮೇಜಿನ ಪರಿಷತ್ತು' ನಡೆಯುತ್ತದೆ. ಮಾತುಕತೆಯಲ್ಲಿ 'ಬ್ಲಡ್ ಬ್ಯಾಂಕ್' ಇರುವ ಹಾಗೆ 'ಸೆಮೆನ್ ಬ್ಯಾಂಕ್' ಇರುವ ಬಗ್ಗೆ ಮಾತುಕತೆಯಾಗುತ್ತದೆ. ಚರ್ಚೆಯು ಎಲ್ಲೆಲ್ಲಿಯೋ ಹೋಗಿ ಕೊನೆಗೆ ಎಬಿಸಿಡಿ ಶಾಸ್ತ್ರಿಯು ತನ್ನ ವೀರ್ಯವನ್ನು ದಾನ ಮಾಡಿ, ದಿವಾಕಾಂತನಿಗೆ ಪುತ್ರಭಾಗ್ಯವನ್ನು ಕರುಣಿಸಬೇಕು ಎಂದು ಏಕಪಕ್ಷೀಯವಾಗಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ.

''ಎಬಿಸಿಡಿ ಶಾಸ್ತ್ರಿಯು ತನ್ನ ವೀರ್ಯವನ್ನು ದಾನ ಮಾಡಲು ನಿಶ್ಚಯಿಸುತ್ತಾನೆ. ನಂತರ... ದುಷ್ಟ ಚತುಷ್ಟಯರ ಸಲಹೆಗೆ ದಿವಾಕಾಂತ ಮತ್ತು ದೇವಲತಾ ಒಪ್ಪಿದರೆ? ಎಬಿಸಿಡಿ ಶಾಸ್ತ್ರಿ ಸುಲಭವಾಗಿ ವೀರ್ಯದಾನವನ್ನು ಮಾಡಿದನೆ? ದೇವಲತಾ ಗರ್ಭಿಣಿಯಾದಳೆ? ತಾನು ಮದುವೆಯಾಗುವ ಹುಡುಗ 'ವರ್ಜಿನ್' ಆಗಿರಬೇಕು ಎಂದು ಬಯಸುವ ಚಂದ್ರಮುಖಿಗೆ ಎಬಿಸಿಡಿ ಶಾಸ್ತ್ರಿ ವೀರ್ಯದಾನವನ್ನು ಮಾಡಿದ್ದು ಗೊತ್ತಾಯಿತೆ? ತನ್ನ ಸೊಸೆಯ ಗರ್ಭದಲ್ಲಿ ಬೆಳೆಯುತ್ತಿರುವ ಮಗುವು ತನ್ನ ಮಗನದಲ್ಲ ಎಂದು ಗೊತ್ತಾದಾಗ, ನೀಲಾಂಬೆ ಹೇಗೆ ಪ್ರತಿಕ್ರಿಯೆಯನ್ನು ನೀಡಿದಳು? ಸಮಸ್ಯೆಯು ಸುಖಾಂತವಾಯಿತೆ? ಹೀಗೆ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಹಾಗೂ ಅಂತ್ಯವು ಹೇಗಾಯಿತು ಎನ್ನುವುದನ್ನು ತಿಳಿದುಕೊಳ್ಳಲು ನೀವು ಕಾದಂಬರಿಯನ್ನು ಇಡಿಯಾಗಿ ಓದಬೇಕು.

''ಪ್ರತಿಯೊಂದು ಸಂಭಾಷಣೆಯು ತುಂಟತನದಿಂದ ಕೂಡಿದೆ. ನಿಮ್ಮ ತುಟಿಯನ್ನ ಅರಳಿಸುತ್ತದೆ. ಕೆಲವೆಡೆ ಅಡಗಿರುವ ಗೂಡಾರ್ಥವು ಎಂ.ಎಸ್.ಎನ್. ಯಾವಾಗ ಇಷ್ಟು ಪೋಲಿಯಾದರು ಎಂದು ಹುಬ್ಬೇರುವಂತೆ ಮಾಡುತ್ತದೆ. ಒಟ್ಟಿನಲ್ಲಿ ನಿಮ್ಮನ್ನು ಲೀಲಾಜಾಲವಾಗಿ ಓದಿಸಿಕೊಂಡು ಹೋಗುತ್ತದೆ.'(ಮುನ್ನುಡಿಯಲ್ಲಿ ಡಾ. ನಾ. ಸೋಮೇಶ್ವರ).

ಡಾ. ನಾ. ಸೋಮೇಶ್ವರ ಅವರು ವೈದ್ಯಕೀಯ ದೃಷ್ಟಿಯಲ್ಲಿ ವಿಶ್ಲೇಷಿಸಿ ಬರೆದ ಈ ಮುನ್ನುಡಿಯು, 'ಪುತ್ರಕಾಮ್ಯ' ಕಾದಂಬರಿಯ ಒಟ್ಟೂ ಕಥನದ ಒಂದು ಒಳನೋಟವನ್ನು ಕೊಡುತ್ತದೆ. ಪ್ರತಿ ಸಂಭಾಷಣೆಯಲ್ಲೂ ಹಾಸ್ಯ ಒಸರುವ, ಅಲ್ಲಲ್ಲಿ ಅದರಲ್ಲಿ ಅಡಗಿರುವ ಗೂಢಾರ್ಥವನ್ನು ಹುಡುಕಿಕೊಳ್ಳಬೇಕಾದ ಅನಿವಾರ್ಯತೆ ಮತ್ತು ಅದನ್ನು ಕಂಡುಹಿಡಿದಾಗ ಮೂಡುವ ನಸುನಗು – ಇವೆಲ್ಲವೂ ಈ ಕಾದಂಬರಿ ಓದಿನಲ್ಲಿ ಅಡಕಗೊಂಡಿವೆ. ಕನ್ನಡದಲ್ಲಿ ಹಾಸ್ಯ ಪ್ರಧಾನ ಕಾದಂಬರಿಗಳು ಕಡಿಮೆ; ಆ ಕೊರತೆಯನ್ನು ನೀಗಲೆಂದೇ ಎಂಎಸ್ಎನ್ ಬರೆದಿರುವಂತಿದೆ, ಅವರ ಹೊಸಕಾದಂಬರಿ, 'ಪುತ್ರಕಾಮ್ಯ'ವನ್ನು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ರೇಷ್ಮೆ ಬಟ್ಟೆ
(ಒನಪು ಬಟ್ಟೆ, ಒರಟು ದಾರಿ- ಕಾದಂಬರಿ)
ಲೇ: ವಸುಧೇಂದ್ರ
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ : ರೂ 450/-



2
ರಾಜಮಾತೆ ಕೆಂಪನಂಜಮ್ಮಣ್ಣಿ
(ಮಾದರಿ ಮೈಸೂರಿನ ತಾಯಿಬೇರು- ಕಾದಂಬರಿ)
ಲೇ: ಡಾ। ಗಜಾನನ ಶರ್ಮ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 495/-

3
ಎಲ್ಲೆಲ್ಲು ಸಂಗೀತವೇ
(ಖ್ಯಾತ ಸಂಗೀತ ನಿರ್ದೇಶಕ ವಿಜಯ ಭಾಸ್ಕರ್ ಜೀವನ - ಸಾಧನೆ)
ಲೇ: ಎನ್. ಎಸ್. ಶ್ರೀಧರ ಮೂರ್ತಿ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 195/-

4
ಹುಡುಕಾಟ
(ಸಂಶೋಧನಾ ಪ್ರಬಂಧಗಳು)
ಲೇ: ಪುರುಷೋತ್ತಮ ಬಿಳಿಮಲೆ
ಪ್ರ: ಚಿರಂತ್ ಪ್ರಕಾಶನ, ಬೆಂಗಳೂರು
ಬೆಲೆ : ರೂ 350/-

5
ನಾನು ಭೀಷ್ಮ
(ಭೀಷ್ಮ ಪಿತಾಮಹರ ರೋಮಾಂಚಕ ಜೀವನ ಆಧರಿತ ಕಾದಂಬರಿ)
ಹಿಂದಿ ಮೂಲ : ಡಾ। ಭಗವತೀಶರಣ್ ಮಿಶ್ರ
ಅನು: ಡಿ.ಎನ್. ಶ್ರೀನಾಥ್
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರು 360/-



6
ಬಂಧಮುಕ್ತ
(ಪ್ರೀತಿಯ ಹುಡುಕಾಟದಲ್ಲಿ ದಮನಿತರು)
ಲೇ: ಬೆಲ್ ಹುಕ್ಸ್
ಅನು : ಎಚ್.ಎಸ್. ಶ್ರೀಮತಿ
ಪ್ರ: ಜೀರುಂಡೆ ಪ್ರಕಾಶನ, ಬೆಂಗಳೂರು
ಬೆಲೆ : ರೂ 320/-



7
ಆರ್ಟಿಫೀಶಿಯಲ್ ಇಂಟೆಲಿಜೆನ್ಸ್
(ಆಧುನಿಕ ತಂತ್ರಜ್ಞಾನ ಕುರಿತ ಲೇಖನಗಳು)
ಲೇ: ಮಧು ವೈ.ಎನ್
ಪ್ರ: ನೆಲ ಮುಗಿಲು ಪ್ರಕಾಶನ, ಬೆಂಗಳೂರು
ಬೆಲೆ : ರೂ 170/-



8
ನಾಥ ಸಂಪ್ರದಾಯದ ಇತಿಹಾಸ
(ಮರಾಠಿ ನಾಥ ಸಂಪ್ರದಾಯ ಕುರಿತು)
ಮರಾಠಿ ಮೂಲ : ಡಾ। ರಾಮಚಂದ್ರ ಚಿಂತಾಮಣಿ ಢೇರೆ
ಅನು : ಚಂದ್ರಕಾಂತ ಪೋಕಳೆ
ಪ್ರ: ಸ್ನೇಹಾ ಪ್ರಿಂಟರ್ಸ್, ಬೆಂಗಳೂರು
ಬೆಲೆ : ರೂ 300/-



9
ಜಿ.ಎಸ್. ಸದಾಶಿವರ ಇದುವರೆಗಿನ ಕತೆಗಳು
ಲೇ: ಜಿ.ಎಸ್. ಸದಾಶಿವ
ಪ್ರ: ಪ್ರಿಸಮ್ ಬುಕ್ಸ್ ಪ್ರೈ.ಲಿ., ಬೆಂಗಳೂರು
ಬೆಲೆ : ರೂ 299/-

10
ಮಬ್ಬಿನಿಂದ ಇಬ್ಬನಿಗೆ
(ನೆನಪಿನ ಪುಟಗಳು)
ಲೇ: ಎಸ್. ಜಿ. ಸಿದ್ದರಾಮಯ್ಯ
ಪ್ರ: ದೇಶಿ ಪುಸ್ತಕ, ಬೆಂಗಳೂರು
ಬೆಲೆ : ರೂ 170/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಪ್ರತಿಷ್ಠಿತ ಪದ್ಮ ಪ್ರಶಸ್ತಿ ಪಡೆದ ಕರ್ನಾಟಕದ ವೈದ್ಯರ ಪರಿಚಯವನ್ನು ಹೊಂದಿರುವ ಈ ಪುಸ್ತಕವು, ನಮ್ಮ ನಾಡಿನ ಯುವಜನರಿಗೆ ತಮ್ಮ ಕ್ಷೇತ್ರದಲ್ಲಿ ಉನ್ನತ ಸೇವೆ ನೀಡಲು ಸ್ಫೂರ್ತಿ ನೀಡಬಲ್ಲದು.

» ಶ.ಹಾ.

ಸ್ಫೂರ್ತಿ ತುಂಬುವ ಪುಸ್ತಕ

ವೈದ್ಯಕೀಯ ಕ್ಷೇತ್ರವು ಬಹು ಮೌಲ್ಯ ಉಳ್ಳ ಕ್ಷೇತ್ರ. ವೈದ್ಯರಾದವರು ಜನಸಾಮಾನ್ಯರಿಗೆ ನಿಸ್ವಾರ್ಥ ಸೇವೆ ನೀಡುವ ಅವಕಾಶವಿದೆ ಮತ್ತು ಆ ಮೂಲಕ ಆರೋಗ್ಯಕರ ಸಮಾಜವನ್ನು ನಿರ್ಮಿಸಲು ಸಾಧ್ಯ. ಕರ್ನಾಟಕದ ಹಲವು ವೈದ್ಯರು ಸ್ವಾತಂತ್ರಪೂರ್ವ ಕಾಲದಿಂದಲೂ ನಮ್ಮ ನಾಡಿನಲ್ಲಿ ಸೇವೆಸಲ್ಲಿಸಿದ್ದಾರೆ. ಕರ್ನಾಟಕದ ಮತ್ತು ಕರ್ನಾಟಕ ಮೂಲದ 24 ವೈದ್ಯರಿಗೆ ಪ್ರತಿಷ್ಠಿತ ಪದ್ಮ ಪ್ರಶಸ್ತಿ ದೊರಕಿದೆ. ಜನರಿಗೆ ಆರೋಗ್ಯ ಸೇವೆ ಒದಗಿಸುವಲ್ಲಿ ಇವರ ಸೇವೆ, ಸಾಧನೆ ಅಪೂರ್ವ ಎನಿಸಿದೆ. ಈ 24 ವೈದ್ಯರ ಪರಿಚಯವನ್ನು ಮಾಡಿಕೊಡುವ ಪುಸ್ತಕವೊಂದು ಈಗ ಹೊರಬಂದಿದೆ. ಇದರಲ್ಲಿ 17 ಜನ ಕರ್ನಾಟಕದಲ್ಲೇ ಸೇವೆ ಸಲ್ಲಿಸಿದ್ದು, ಉಳಿದ 7 ಜನರು ಕರ್ನಾಟಕ ಮೂಲದವರಾಗಿದ್ದಾರೆ.

ಈ ಪುಸ್ತಕದಲ್ಲಿ ಅಡಕಗೊಂಡಿರುವ ವೈದ್ಯರ ಸಾಧನೆಯನ್ನು ಓದಿದರೆ, ಒಂದು ಅಪರೂಪದ ಜ್ಞಾನಕೋಶವನ್ನೋದಿದ ಅನುಭವವಾದೀತು; ಅದರಲ್ಲೂ, ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಿದ ಡಾ. ಎಂ.ಸಿ.ಮೋದಿಯಂತಹವರ ಸೇವೆಯನ್ನು ಓದಿದವರಿಗೆ, ತಾವೂ ಜನಸಾಮಾನ್ಯರ ಸೇವೆ ಮಾಡಬೇಕು ಎಂಬ ಸ್ಫೂರ್ತಿ ತುಂಬಿಬಂದರೆ, ಅದರಲ್ಲಿ ಅತಿಶಯೋಕ್ತಿಯಿಲ್ಲ. ಇಷ್ಟೊಂದು ಸಂಖ್ಯೆಯ ಪ್ರಮುಖ ವೈದ್ಯರ ಜೀವನ ಮತ್ತು ಸಾಧನೆಯನ್ನು ಒಂದು ಪುಸ್ತಕದಲ್ಲಿ ಅಡಕಗೊಳಿಸಿ, ಪುಸ್ತಕವನ್ನು ಸಂಪಾದಿಸಿದ ಡಾ. ಸೋಮೇಶ್ವರ ಅವರ ಶ್ರಮ ಸಾರ್ಥಕ ಎನಿಸಿದೆ.



ಪದ್ಮಪುರಸ್ಕೃತ ಕರ್ನಾಟಕದ ವೈದ್ಯರು
ಸಂ: ಡಾ. ನಾ. ಸೋಮೇಶ್ವರ
ಪ್ರ: ಮೋಧಾ ಹರಿಪ್ರಸಾದ್ ಬೆಂಗಳೂರು, 8971091760
ಬೆಲೆ ರು.200/-

ಪುಟ್ಟ ಹಳ್ಳಿಯಾಗಿದ್ದ ಮಲ್ಪೆಯಲ್ಲಿ ಕ್ಲಿನಿಕ್ ಆರಂಭಿಸಿ, ಮುಂದೆ ಹಳ್ಳಿಯ ಮೂಲೆಯಾಗಿದ್ದ ಮಣ್ಣುಪಳ್ಳ (ಮಣಿಪಾಲ)ದಲ್ಲಿ ಬೃಹತ್ ಆಸ್ಪತ್ರೆ ಕಟ್ಟಿದ ಡಾ. ಟಿ.ಎಂ.ಎ. ಪೈ ಅವರ ಬದುಕನ್ನು ಗಮನಿಸಿದರೆ, ಯಾವ ರೀತಿ ಅವರಿಂದ ಇಂದಿನ ಯುವಜನರು ಸ್ಫೂರ್ತಿ ಪಡೆಯಬಹುದು ಎಂಬುದು ವೇದ್ಯವಾಗುತ್ತದೆ. ಡಾ. ಟಿ.ಎಂ.ಎ. ಪೈ ಅವರು ಅಂದು ಹಾಂಗ್ ಕಾಂಗ್‌ನಲ್ಲಿ ಉದ್ಯೋಗ ಮಾಡಲು ಹೊರಟಿದ್ದರು. ಅವರ ತಾಯಿಯ, 'ಇಲ್ಲಿನ ಗ್ರಾಮೀಣ ಕ್ಷೇತ್ರದಲ್ಲೇ ನಿನ್ನ ಸೇವೆ ಒದಗಿಬಂದರೆ ಸಂತೋಷ' ಎಂದಾಗ, ಊರಲ್ಲೇ ನೆಲೆ ನಿಂತು, ಇಂದು ವಿಶ್ವಮಟ್ಟದ ವೈದ್ಯಕೀಯ ಸೇವೆ ನೀಡುವ ಸಂಸ್ಥೆಯೊಂದನ್ನು ಕಟ್ಟಿದ್ದಾರೆ. ಟಿ.ಎಂ.ಎ.ಪೈ ಅವರು 1972ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದರು.

ಡಾ. ಮುರುಗಪ್ಪ ಚನ್ನವೀರಪ್ಪ ಮೋದಿ ಅಥವಾ ಎಂ.ಸಿ.ಮೋದಿಯವರು 1968ರಲ್ಲಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾದರು. 1942ರಲ್ಲೇ ತಮ್ಮ ಬದುಕನ್ನು ನಮ್ಮ ದೇಶದ ಜನಸಾಮಾನ್ಯರಿಗೆ ಮೀಸಲಾಗಿಡುತ್ತೇನೆ ಎಂದು ನಿರ್ಧರಿಸಿದ ಎಂ.ಸಿ.ಮೋದಿಯವರು, 6,10,564ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿದ್ದಾರೆ! ಅವರಲ್ಲಿ ಹೆಚ್ಚಿನವರು ಗ್ರಾಮೀಣ ಭಾಗದ ಜನಸಾಮಾನ್ಯರು. 46,120 ಹಳ್ಳಿಗಳಲ್ಲಿ ಅವರು ಕಣ್ಣಿನ ಶಸ್ತ್ರಚಿಕಿತ್ಸೆ ಶಿಬಿರ ನಡೆಸಿದ್ದಾರೆ. ಅವರ ಆರಂಭಿಕ ಕಾರ್ಯಕ್ಷೇತ್ರವು ಧಾರವಾಡದ ನರೇಗಲ್. ನಂತರ ಹಳ್ಳಿ ಹಳ್ಳಿಗಳಲ್ಲಿ ಕಣ್ಣಿನ ಪೊರೆ ತೆಗೆಯುವ ಕ್ಯಾಂಪ್ ಮಾಡಿ, ಅತಿ ಕಡಿಮೆ ವೆಚ್ಚದಲ್ಲಿ ಜನರಿಗೆ ದೃಷ್ಟಿ ನೀಡಿದ ಮಹಾನುಭಾವರು. ಇವರ ಬದುಕು ಸಹ ಇಂದಿನ ಯುವಜನತೆಗೆ ಆದರ್ಶವಾಗಬಲ್ಲದು.

ಇಂತಹ ಹಲವು ವೈದ್ಯರ ಸಾಧನೆಯ ವಿವರ ಹೊಂದಿರುವ ಈ ಪುಸ್ತಕವನ್ನು ಸಂಪಾದಿಸಿದ ಡಾ. ನಾ. ಸೋಮೇಶ್ವರ ಮತ್ತು ಲೇಖನಗಳನ್ನು ಬರೆದ ಎಲ್ಲರೂ ಅಭಿನಂದನಾರ್ಹರು. ಈ ಪುಸ್ತಕವನ್ನು ರೂಪಿಸುವಲ್ಲಿ ಡಾ. ನಾ. ಸೋಮೇಶ್ವರ ಅವರು ವಿಶೇಷ ವಕ್ತಿಉತುವರ್ಜಿ ವಹಿಸಿರುವುದು ಪುಟ ಪುಟಗಳಲ್ಲೂ ಕಾಣಿಸುತ್ತದೆ; ಪದ್ಮ ಪ್ರಶಸ್ತಿ ಪುರಸ್ಕೃತ ವೈದ್ಯರ ಸೇವೆ ಮತ್ತು ಸಾಧನೆಯನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಇಂತಹ ಶ್ರಮ ಸಾರ್ಥಕ ಎನಿಸಿದೆ.

ಎಲ್ಲೆಲ್ಲು ಸಂಗೀತವೇ!

ನಿಜಕ್ಕೂ ನಾನು ಮೊದಲು ವಿಜಯಭಾಸ್ಕರ್ ಅವರನ್ನು ಕಂಡಾಗ ಬೆದರಿ ಹೋಗಿದ್ದೆ. ಸೂಟ್ ಬೂಟ್ ಧರಿಸಿ ಶಿಸ್ತಿನ ಸಿಪಾಯಿಯಂತೆ ಕಾಣುತ್ತಿದ್ದ ಅವರನ್ನು ಪಕ್ಕನೆ ಯಾರೂ ಚಿತ್ರರಂಗದ ನಂಟಿನವರು ಎಂದು ಹೇಳುವುದು ಸಾಧ್ಯವೇ ಇರಲಿಲ್ಲ. ಮಾತೂ ಕೂಡ ಅಳೆದು ತೂಗಿದಂತೆ ಎಷ್ಟು ಬೇಕೋ ಅಷ್ಟೇ, ಅನಗತ್ಯವಾದ ಒಂದು ಶಬ್ದವನ್ನೂ ಅವರಿಂದ ಹೊರಡಿಸುವುದು ಸಾಧ್ಯವೇ ಇರಲಿಲ್ಲ. ಇಂತಹ ವಿಜಯಭಾಸ್ಕರ್ ಅವರ ನಿಕಟ ಒಡನಾಟ ನನಗೆ ಸಾಧ್ಯವಾಗಿದ್ದು ಆರ್. ಎನ್. ಜಯಗೋಪಾಲ್ ಅವರಿಂದ. ಅವರಿಬ್ಬರೂ ಬಹಳ ಆತ್ಮೀಯ ಮಿತ್ರರು. ಜಯಗೋಪಾಲ್ ಅವರಿಗೆ ಸಂಬಂಧ ಪಟ್ಟ ಒಂದು ಪ್ರಾಜೆಕ್ಟ್ ಮಾಡುತ್ತಿದ್ದೆ. ಅದರಲ್ಲಿ ವಿಜಯಭಾಸ್ಕರ್ ಅವರ ಪಾತ್ರವೂ ಇದ್ದಿದ್ದರಿಂದ ಅವರ ಜೊತೆ ಕೂಡ ಮಾತನಾಡ ಬೇಕಾಗಿ ಬಂದಿತು. ಆಗ 'ಗೆಜ್ಜೆಪೂಜೆ' ಚಿತ್ರದಲ್ಲಿ ಅವರು ಮಾಡಿದ್ದ ಸಂಗೀತ ಪ್ರಯೋಗಗಳ ಕುರಿತು ಅಂಜುತ್ತಲೇ ಪ್ರಶ್ನೆಗಳನ್ನು ಕೇಳಿದೆ. ಅವರಿಗೆ ಇದು ಸಂತೋಷ ಕೊಟ್ಟಿತ್ತು. 'ಆ ಸಿನಿಮಾ ಬಂದಾಗ್ಲೆ ಈ ವಿಷಯಗಳನ್ನು ಯಾರೂ ಗುರುತಿಸಿರಲಿಲ್ಲವಲ್ಲಯ್ಯ' ಎಂದಿದ್ದರು. ಇಲ್ಲಿಂದ ಮುಂದೆ ಅವರ ಜೊತೆಗೆ ಒಂದು ನಿಕಟ ಒಡನಾಟ ಸಾಧ್ಯವಾಯಿತು. ''ನ್ನಡ ಚಲನಚಿತ್ರ ಇತಿಹಾಸ' ರೂಪುಗೊಂಡಾಗ ಅದರ ಪರಾಮರ್ಶನ ಸಮಿತಿಯಲ್ಲಿ ಅವರೂ ಇದ್ದರು. ಈ ಕಾರಣದಿಂದ ಸಂಗೀತದ ಕುರಿತ ಪುಟಗಳನ್ನು ಅವರಿಗೆ ತೋರಿಸುವ ಹೊಣೆ ನನಗೆ ಬಿದ್ದಿತು. ಈ ಓಡಾಟದಲ್ಲಿ ನಾನು ಕಲಿತಿದ್ದು ಅಪಾರ. ಸಂಗೀತದ ಕುರಿತು ವಿಜಯಭಾಸ್ಕರ್ ಅವರಂತೆ ಅಕಾಡಮಿಕ್ ಆಗಿ ಮಾತನಾಡ ಬಲ್ಲ ಇನ್ನೊಬ್ಬರನ್ನು ನಾನು ಕಂಡಿಲ್ಲ.

ಮದರಾಸಿನಲ್ಲಿದ್ದಾಗ ವಿಜಯಭಾಸ್ಕರ್ ಅಶೋಕ ನಗರದ ವಿಶಾಲ ಮನೆಯಲ್ಲಿದ್ದರು. ಮನೆಯ ಸುತ್ತಲೂ ಹಸಿರು ರಾಶಿ, ಅವರ ಚಿಕ್ಕ ಕುಟುಂಬದಲ್ಲಿ ಯಾರೂ ಹೊರಗಿನವರಂತೆ ಇರಲು ಸಾಧ್ಯವೇ ಇರಲಿಲ್ಲ. ಎಲ್ಲರನ್ನೂ ಅವರು ಅಷ್ಟು ಆತ್ಮೀಯವಾಗಿ ನೋಡುತ್ತಿದ್ದರು. ಅವರ

ಲೇಖಕನೊಬ್ಬ ಪುಸ್ತಕವನ್ನು ಹೇಗೆ ರೂಪಿಸುತ್ತಾನೆ? ಹೊಸ ಪುಸ್ತಕ ರಚಿಸಲು ಸ್ಫೂರ್ತಿ, ಉದ್ದೇಶ, ಕಾರಣ ಮತ್ತು ಹಿನ್ನೆಲೆಗಳು ಯಾವುವು? ಇವು ಬಹಳ ಕುತೂಹಲಕಾರಿ ವಿಚಾರಗಳು. ಇತ್ತೀಚೆಗೆ ಪ್ರಕಟಗೊಂಡ 'ಎಲ್ಲೆಲ್ಲು ಸಂಗೀತವೇ' ಪುಸ್ತಕವನ್ನು ರಚಿಸಿದ ಹಿನ್ನೆಲೆಯನ್ನು ಎನ್.ಎಸ್.ಶ್ರೀಧರ ಮೂರ್ತಿಯವರು ಆ ಪುಸ್ತಕದ ಮುನ್ನುಡಿಯಲ್ಲಿ ಹಂಚಿಕೊಂಡಿದ್ದಾರೆ. ಅದರ ಆಯ್ದ ಭಾಗಗಳು ಇಲ್ಲಿವೆ.

ಮಡದಿ ಜಯಲಕ್ಷ್ಮಿ ಸಾಕ್ಷಾತ್ ಅನ್ನಪೂರ್ಣೆಯೇ, ಮನೆಗೆ ಅವೇಳೆಯಲ್ಲಿ ಯಾರಾದರೂ ಬಂದಾಗಲೂ ಬೇಸರಿಸಿದವರಲ್ಲ. ಸದಾ ಆತಿಥ್ಯಕ್ಕೆ ಹೆಸರಾದ ಮನೆ ಅವರದು. ಅವರ ಬಳಿ ಒಂದು ಹಸಿರು ಬಣ್ಣದ ಮಾರುತಿ ಕಾರ್ ಇತ್ತು. ಅದನ್ನು ಅವರೇ ಡ್ರೈವ್ ಮಾಡುತ್ತಿದ್ದರು. 'ಬನ್ನಿ ಮದರಾಸು ಸುತ್ತಿ ಬರೋಣ' ಎಂದು ಅವರು ಹೇಳಿದ್ದರೂ ಅವರ ಕಾರು ನೇರವಾಗಿ ಹೋಗುತ್ತಿದ್ದದ್ದು 'ಪಾಮ್ ಗ್ರೂವ್ ಹೋಟಲ್'ಗೆ . (ಆರ್. ಎನ್. ಜಯಗೋಪಾಲ್ ಅವರಿಗೆ ಕೂಡ ಇದು ಪ್ರಿಯವಾದ ಹೋಟಲ್). ಅವರ ಸಾವಿರಾರು ಹಾಡುಗಳು ಹುಟ್ಟಿದ್ದು ಅಲ್ಲೇ. ಸಂಗೀತದ ಕುರಿತು ಅವರು ಮಾತನಾಡಲು ಆರಂಭಿಸಿದರೆ ಅದು ಪರಿಪೂರ್ಣ ತರಗತಿಯೇ. ಬೆಂಗಳೂರಿಗೆ ಬಂದಾಗ ಅವರು ಹೋಟಲ್ ಜನಾರ್ದನದಲ್ಲಿ ಅನೇಕ ಸಲ ಅವರನ್ನು ಭೇಟಿ ಉಳಿದುಕೊಳ್ಳುತ್ತಿದ್ದರು. ಇಲ್ಲಿಯೂ ಅನೇಕ ಸಲ ಅವರನ್ನು ಭೇಟಿ ಮಾಡಿದ್ದೇನೆ. ವಿಜಯಭಾಸ್ಕರ್ ಬೆಂಗಳೂರಿಗೆ ಸ್ವಂತ ಮನೆ ಮಾಡಿಕೊಂಡು ಬಂದರು. ಹೀಗೆ ಬಂದಾಗ ಅವರಿಗೆ ಒಂದು ದೊಡ್ಡ ಕನಸಿತ್ತು – ಇಲ್ಲೊಂದು ಸಂಗೀತ ಸಂಶೋಧನಾಲಯ ಮಾಡಬೇಕು, ಸಂಗೀತಕ್ಕೆ ಸಂಬಂಧಿಸಿದಂತೆ ಒಂದು ಮ್ಯೂಸಿಯಂ ಮಾಡಬೇಕು. ಕೊನೆಯ ದಿನಗಳಲ್ಲಿ ಹೆಚ್ಚಾಗಿ ಈ ಕುರಿತೇ ಮಾತನಾಡುತ್ತಿದ್ದರು. 'ಮಲ್ಲಿಗೆ ಮಾಸಪತ್ರಿಕೆ'ಯಲ್ಲಿ ನಾನು ಗೀತ ರಚನೆಕಾರರ ಕುರಿತ ಮಾಲಿಕೆ 'ಮಲ್ಲಿಗೆ ಮಾಧುರ್ಯ' ಮಾಡುತ್ತಿದ್ದೆ. ಇದನ್ನು ಬಹಳ ಕುತೂಹಲದಿಂದ ಓದುತ್ತಿದ್ದ ಅವರು ಸಂಗೀತ ನಿರ್ದೇಶಕರ ಕುರಿತೂ ಈ ಮಾಲಿಕೆಯಲ್ಲಿ ಬರೆಯಬೇಕು ಎಂದು ಒತ್ತಾಯಿಸುತ್ತಿದ್ದರು. ಮುಖ್ಯವಾದ ಗೀತರಚನೆಕಾರರು ಆಗಲಿ ಆಮೇಲೆ ಸಂಗೀತ ನಿರ್ದೇಶಕರ ಕುರಿತು ಬರೆಯುವೆ ಎಂದು ಹೇಳಿದೆ. ಆದರೆ ಅದು ಸಾಧ್ಯವಾಗಲೇ ಇಲ್ಲ. . . .

ಒಂದು ದಿನ ಇದ್ದಕಿದ್ದಂತೆ 'ಮಾತನಾಡುವುದಿದೆ ಬಾ' ಎಂದು ಫೋನ್ ಮಾಡಿದರು. 'ನನ್ನ ಆತ್ಮಕತೆ ಬರೆಯಬೇಕು. ಕೆಲವು ನೆನಪುಗಳನ್ನು ಹೇಳುತ್ತೇನೆ, ಜೋಡಿಸಿ ಕೊಡುತ್ತೀಯಾ' ಎಂದರು. ಇಂತಹ ಸೌಭಾಗ್ಯವನ್ನು ಬಿಟ್ಟವರುಂಟೆ? ಬರವಣಿಗೆ ಕೆಲಸ ಆರಂಭವಾಯಿತು. ಆದರೆ ಅದು ನಾವು ಅಂದುಕೊಂಡಷ್ಟು ವೇಗವಾಗಿ ಮುಂದುವರೆಯಲಿಲ್ಲ. ವಯೋಸಹಜ ಸಮಸ್ಯೆಗಳು ಅವರನ್ನು ಕಾಡುತ್ತಿದ್ದವು. ಕೊನೆಗೊಂದು ದಿನ ಇದ್ದಕಿದ್ದಂತೆ ಅವರು ನಮ್ಮನ್ನು ಬಿಟ್ಟು ಹೊರಟೇ ಬಿಟ್ಟರು. ಬರೆದು ಕೊಂಡಿದ್ದ 32 ಪುಟಗಳು ಅವರ ನೆನಪಾಗಿ ನನ್ನ ಬಳಿಯೇ ಉಳಿದು ಕೊಂಡಿದ್ದವು.

ವಿಜಯಭಾಸ್ಕರ್ ಅವರ ಹತ್ತಿರದ ಸಂಬಂಧಿ ಮಾಲಾ ಮೂರ್ತಿ ಆಕಾಶವಾಣಿಯಲ್ಲಿ ನನ್ನ ಸಹೋದ್ಯೋಗಿಯಾಗಿದ್ದರು. ಅವರುವಿಜಯಭಾಸ್ಕರ್ ಅವರ ನೆನಪುಗಳನ್ನು ಆಗಾಗ ಮಾಡುತ್ತಲೇ ಇದ್ದರು. ಅವರ ಮೂಲಕವೇ ವಿಜಯಭಾಸ್ಕರ್ ಇಬ್ಬರು ಹೆಣ್ಣು ಮಕ್ಕಳ ಒಡನಾಟ ಮುಂದುವರೆದಿತ್ತು. 2024 ವಿಜಯಭಾಸ್ಕರ್ ಅವರ ಜನ್ಮಶತಮಾನೋತ್ಸವ. ಇದನ್ನು ನನ್ನ ಗಮನಕ್ಕೆ ತಂದು ಇದರ ಆಚರಣೆ ಆಗ ಬೇಕು ಎಂದು ಬಯಸಿದವರು ವಿಜಯಭಾಸ್ಕರ್ ಅವರ ಮಗಳು ಸಾಯಿಶಂಕರಿ ಮತ್ತು ಅಳಿಯ ಅನಂತ್. ಮುಂದೆ ಪಾಂಡಿಚೇರಿಯಲ್ಲಿದ್ದ ಇನ್ನೊಬ್ಬ ಮಗಳು ಮಂಗಳ ಗೌರಿ ಮತ್ತು ಅಳಿಯ ಮನೋಹರ್ ಜೊತೆಗೂಡಿದರು. ಈ ನಾಲ್ವರ ಬೆಂಬಲದಿಂದ ವಿಜಯಭಾಸ್ಕರ್ ಅವರ ಜನ್ಮ ಶತಮಾನೋತ್ಸವದ ರೂಪುರೇಷೆಗಳು ಮೂಡಲಾರಂಭಿಸಿದವು. ಇದೇ ಸಮಯದಲ್ಲಿ 15ನೆಯ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ ನಡೆದಿದ್ದರಿಂದ ಅಲ್ಲಿ ವಿಜಯಭಾಸ್ಕರ್ ಸ್ಮರಣೆಯಾಗಲಿ, ಅವರೂ ಜಾಗತಿಕ ಸಾಧಕರು ಎಂದು ಕೊಂಡೆವು. ಇದು ಸಾಧ್ಯವಾಗಲು ಕಾರಣಕರ್ತರಾದ ಎನ್. ವಿದ್ಯಾಶಂಕರ್ ಮತ್ತು ಪಿ. ಶೇಷಾದ್ರಿಯವರಿಗೆ ನಾವು ಋಣಿಗಳಾಗಿದ್ದೇವೆ. ಇದೊಂದು ರೀತಿಯಲ್ಲಿ ವಿಜಯಭಾಸ್ಕರ್ ಅವರ ಜನ್ಮಶತಮನೋತ್ಸವಕ್ಕೆ ಮುನ್ನುಡಿಯ ರೀತಿಯಲ್ಲಿ ನಡೆಯಿತು. ಈ ಸಂದರ್ಭದಲ್ಲಿಯೇ ವಿಜಯಭಾಸ್ಕರ್ ಕುಟುಂಬ ವರ್ಗದವರು 'ಅವರ ಕುರಿತು ಪುಸ್ತಕವನ್ನು ಬರೆಯಿರಿ' ಎಂದು ನನ್ನನ್ನು ಕೇಳಿದರು. ಆಗ ನನಗೆ ಬರೆದು ಕೊಂಡಿದ್ದ 32 ಪುಟಗಳು ನೆನಪಾದವು. ಅದನ್ನು ಬೆಳೆಸಬಾರದೇಕೆ ಎಂಬ ಹಂಬಲ ಮೂಡಿತು. ಬರೆಯುವುದೇನೋ ಸರಿ, ಅದನ್ನು ಪ್ರಕಟಿಸುವವರು ಯಾರು ಎಂದು ಯೋಚಿಸಿದಾಗ ಹಲವು ಹೊಸತುಗಳ ಹರಿಕಾರರಾದ ಗೆಳೆಯ ವೀರಕಪುತ್ರ ಶ್ರೀನಿವಾಸ್ ಅವರ ನೆನಪಾಯಿತು. ಅವರು ಒಂದೇ ಮಾತಿಗೆ 'ನಾನು ಪ್ರಕಟಿಸುತ್ತೇನೆ' ಎಂದು ಒಪ್ಪಿಕೊಂಡರು.

ನಾನು ಬೇರೆ ಬೇರೆ ಸಂದರ್ಭದಲ್ಲಿ ದಾಖಲಿಸಿ ಕೊಂಡ ವಿಜಯಭಾಸ್ಕರ್ ಅವರ ನಿಟಕವರ್ತಿಗಳಾದ ಕೆ.ಎಸ್.ಎಲ್. ಸ್ವಾಮಿ (ರವೀ), ಆರ್.ಎನ್. ಜಯಗೋಪಾಲ್, ಗೀತಪ್ರಿಯ ಅವರ ನೆನಪುಗಳು ಈ ಪುಸ್ತಕವನ್ನು ರೂಪಿಸುವಲ್ಲಿ ನನಗೆ ನೆರವು ನೀಡಿದೆ. ಈ ಪುಸ್ತಕಕ್ಕಾಗಿಯೇ ಟಿ.ಎಸ್. ನಾಗಾಭರಣ ಮತ್ತು ವಿಜಯಭಾಸ್ಕರ್ ಅವರ ಜೊತೆಗಾರರಾದ ಪ್ರಕಾಶ್, ಮ್ಯಾಂಡೋಲಿನ್ ಪ್ರಸಾದ್ ತಮ್ಮ ನೆನಪುಗಳನ್ನು ಹಂಚಿ ಕೊಂಡಿದ್ದಾರೆ. . .

ಎಲ್ಲೆಲ್ಲು ಸಂಗೀತವೇ
ಲೇ: ಎನ್.ಎಸ್.ಶ್ರೀಧರ ಮೂರ್ತಿ
ಪ್ರ: ವೀರಲೋಕ ಪುಸ್ತಕ ಬೆಂಗಳೂರು, 7022122121
ಬೆಲೆ ರು.195/-

ಬೆಳಕು ಬೆರಗಿನ ಮೇರುಪುರುಷ

ಭಾರತೀಯ ಚಿತ್ರರಂಗದ ಮೇರು ಪ್ರತಿಭೆ ವಿ.ಕೆ.ಮೂರ್ತಿಯವರಿಗೆ 2008ರಲ್ಲಿ ದಾದಾಸಾಹೇಬ್ ಫಾಲ್ಕೆ ಪುರಸ್ಕಾರ ದೊರೆತಾಗ ಅವರ ಪ್ರಮುಖ ಚಿತ್ರಗಳಲ್ಲಿ ಪಾತ್ರಗಳು ಪ್ರಭಾವಿಯಾಗಿ ರೂಪುಗೊಳ್ಳಲು ಛಾಯಾಗ್ರಹಣ ನೆರವಾಗುವ ಕುರಿತು ಲೇಖನವನ್ನು ಬರೆದಿದ್ದೆ. ಅದು ಅವರಿಗೆ ಬಹಳ

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಇಷ್ಟವಾಗಿತ್ತು. ಪರಿಚಯವಿದ್ದರೂ, ನಿಕಟವಾಗಿದ್ದು ಈ ಲೇಖನ ಪ್ರಕಟವಾದ ನಂತರವೇ. 'ನಿರ್ದೇಶಕರ ಕಾಣ್ಕೆಯ ಕುರಿತು ಎಲ್ಲರೂ ಬರೆಯುತ್ತಾರೆ; ಛಾಯಾಗ್ರಾಹಕರ ಸೃಜನಾತ್ಮಕತೆಯನ್ನು ಯಾರೂ ಗಮನಿಸುವುದಿಲ್ಲ' ಎಂದಿದ್ದರು. ಹತ್ತಾರು ಜನರ ಮುಂದೆ ಈ ಲೇಖನದ ಕುರಿತು ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದರು.

ಇದೇ ಸಮಯದಲ್ಲಿ ಹಿರಿಯರಾದ ಡಾ.ಪಿ.ವಿ.ನಾರಾಯಣ್ ಉದಯಭಾನು ಕಲಾಸಂಘದ ಸುವರ್ಣ ಪುಸ್ತಕ ಮಾಲೆಗಾಗಿ 'ವಿ.ಕೆ.ಮೂರ್ತಿಯವರ ಕುರಿತು ಪುಸ್ತಕ ಬರೆಯಲು ಸಾಧ್ಯವೆ?' ಎಂದು ಕೇಳಿದರು. ಮೊದಲಿಗೆ ನಾನು ಬರೆಯುವುದಿಲ್ಲವೆಂದೇ ಹೇಳಿದೆ, ಕಾರಣ 2006ರಲ್ಲಿಯೇ ಉಮಾ ರಾವ್ 'ಬಿಸಿಲು ಕೋಲು' ಎನ್ನುವ ಮಹತ್ವದ ಕೃತಿ ರಚಿಸಿದ್ದರು. ಇದು ಹೇಗೋ ವಿ.ಕೆ. ಮೂರ್ತಿಯವರಿಗೆ ಗೊತ್ತಾಗಿ ನನ್ನನ್ನು ಕರೆಸಿ ಕೊಂಡು 'ನೀನು ಬೇರೆ ನೆಲೆಯಲ್ಲಿ ಬರೆಯಬಲ್ಲೆ, ಜೀವನ ಚಿತ್ರಣಕ್ಕಿಂತ ಛಾಯಾಗ್ರಹಣದ ಸೂಕ್ಷ್ಮಗಳನ್ನು ಬರೆ' ಎಂದು ಒತ್ತಾಯಿಸಿದರು. ಅಂತಹ ಹಿರಿಯರು ಕೇಳಿದಾಗ ಇಲ್ಲವೆನ್ನುವುದು ನನಗೆ ಸಾಧ್ಯವಾಗಲಿಲ್ಲ. ಇದರಿಂದ ನನಗಾದ ಲಾಭವೆಂದರೆ ಸರಿಸುಮಾರು ಒಂದು ವರ್ಷ ಪ್ರತಿದಿನವೂ ಅವರ ಶಂಕರಪುರಂನ ಮನೆಗೆ ಹೋಗಿ ಕತೆಗಳನ್ನು ಕೇಳಿದ್ದು. ನನ್ನ ದುರಾದೃಷ್ಟವೆಂದರೆ ಅವರಿದ್ದಾಗ ಈ ಪುಸ್ತಕವನ್ನು ಮುಗಿಸಲಾಗಲಿಲ್ಲ. ಆದರೆ ಪುಸ್ತಕ ರೂಪುಗೊಳ್ಳುವ ನೆಪದಲ್ಲಿ ಸಿಕ್ಕ ಅವರ ನಿಕಟ ನನ್ನ ಭಾಗ್ಯ ವಿಶೇಷವೇ ಸರಿ!

ವೆಂಕಟರಾಮ ಪಂಡಿತ್ ಕೃಷ್ಣಮೂರ್ತಿಯವರು ಹುಟ್ಟಿದ್ದು 1923ರ ನವಂಬರ್ 26ರಂದು. ತಂದೆ ವೆಂಕಟರಾಮ ಪಂಡಿತ್ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು. ತಾಯಿ ನಾಗಮ್ಮ. ಐವರು ಮಕ್ಕಳಲ್ಲಿ ಮೂರ್ತಿಯವರೇ ಚಿಕ್ಕವರು. ತಾಯಿ ಬೇಗನೆ ಹೋಗಿದ್ದರಿಂದ ಕಷ್ಟದ ಬಾಲ್ಯವನ್ನು ಕಳೆದರು. ಬಾಲ್ಯದಲ್ಲಿಯೇ ವಯೋಲಿನ್ ಪರಿಣಿತಿ ಪಡೆದರು, ಸಿನಿಮಾ ಸೆಳೆತದಿಂದ ಮುಂಬೈಗೆ ಹೋಗಿ ಬಂದರು. ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಸಕ್ರಿಯರಾದರು. ಜಯಚಾಮರಾಜೇಂದ್ರ ಇನ್ಸ್ಟಿಟ್ಯೂಟ್‌ನಲ್ಲಿ ಸಿನಿಮಾಟೋಗ್ರಫಿ ಕೋರ್ಸ್ ಶುರುವಾದಾಗ ಬಯಸಿದ್ದು ಬಳಿಯಲ್ಲಿಯೇ ದೊರಕಿತು. ಕಲಿತ ಮೇಲೆ ಮುಂಬೈನಲ್ಲಿ ಕೈ ತುಂಬಾ ಕೆಲಸವೂ ದೊರಕಿತು.

ಪ್ರೇಮತರಂಗ

ಕ್ಯಾಮರಾ ಹಿಡಿದು ಸಂಪಾದನೆ ಆರಂಭಿಸಿದ ಹೊಸದರಲ್ಲಿಯೇ ಬದುಕಿನಲ್ಲಿ ಪ್ರೇಮತರಂಗವೆದ್ದಿತು. ಗೆಳೆಯನ ತಂಗಿ ಸುಶೀಲಾ ಮನಸ್ಸನ್ನು ಗೆದ್ದು ಮನೆಯನ್ನೂ ತುಂಬಿದರು. ಛಾಯಾ ಕುಟುಂಬಕ್ಕೆ ಸೇರ್ಪಡೆಯಾದಾಗ ಸಂತೋಷದ ಹೊನಲೇ ಹರಿಯಿತು. ಮಗು ವಿಶೇಷ ಚೇತನದ್ದು ಎಂದು ತಿಳಿದಾಗ ಬರಸಿಡಿಲು ಬಡಿಯಿತು. ಮಡದಿಯೂ ಅಕಾಲ ಮೃತ್ಯುವಿಗೆ ಒಳಗಾದರು. ಆಗ ಅವರ ಬದುಕನ್ನು ಪ್ರವೇಶಿಸಿದ್ದು ಸಂಧ್ಯಾ : ಅವರಿಬ್ಬರ ಪ್ರೇಮಕತೆಯೇ ಮಹಾಕಾವ್ಯವಾಗಬಹುದು. ಇದರ ಸೊಬಗನ್ನು ನಾನು ಕೊನೆಯ ದಿನಗಳಲ್ಲಿ ಹತ್ತಿರದಿಂದ ನೋಡಿದ್ದೇನೆ.

ಗುರುದತ್ ಮತ್ತು ಮೂರ್ತಿಯವರದು ಭಾರತೀಯ ಚಿತ್ರರಂಗ ಕಂಡ ಅತ್ಯಪೂರ್ವ ಜೋಡಿ. 1952ರಲ್ಲಿ ಜಾಲ್ ಮೂಲಕ ಇಬ್ಬರೂ ಜೊತೆಯಾದರು. ಆರ್ ಪಾರ್, ಮಿಸ್ಟರ್ ಅಂಡ್ ಮಿಸಸ್ 55 ಹೀಗೆ ಸಾಗಿದ ಜೋಡಿ ಅಪೂರ್ವವನ್ನು ಸೃಷ್ಟಿಸಿದ್ದು 'ಪ್ಯಾಸ' ಚಿತ್ರದ ಮೂಲಕ. ಅದರ ಪ್ರತಿಚಿತ್ರಿಕೆಯೂ ಕಾವ್ಯವೇ ಆಗಿತ್ತು. ಆಜ್ ಸಜನ್ ಗೀತೆ ವಿಶೇಷವಾಗಿತ್ತು. ಕಾಗಜ್ ಕೆ ಫೂಲ್ – ಹೊಸ ಸಿನಿಮ್ಯಾಟಿಕ್ ಈಡಂ ಬಳಸಿತ್ತು. ಮರೆಯಾಗದ ಚಿತ್ರೀಕರಣ ವಕ್ತ್ ನೇ ಕಿಯಾ ಗೀತೆಯದು. ಇಲ್ಲಿ ವಹೀದಾ ರೆಹಮಾನ್ ಮೇಲೆ ಬೀಳುವ ಬೆಳಕಿನ

ಮೂರ್ತಿಯವರು ಹೇಳಿದ ಒಂದು ಕುತೂಹಲದ ಸಂಗತಿ ಎಂದರೆ ಅವರು ಲೈಟಿಂಗ್ ಮೀಟರ್‌ನಲ್ಲಿ ಕೊಂಚ ಹಳದಿ ಛಾಯೆ ಕಂಡು ಬಂದರೆ, ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನಿಸಿದಾಗ, ಸುತ್ತಿಗೆಯಿಂದ ಅದನ್ನು ಒಡೆದು ಹಾಕು ತ್ತಿದ್ದರು. ಪರಿಪೂರ್ಣತೆಯ ಕಡೆಗಿನ ಅವರ ತುಡಿತ ಅಂತಹದು!

ಸಂಯೋಜನೆ ಕ್ರಾಂತಿಕಾರಿಯಾಗಿತ್ತು. ಸಾಹಿಬ್ ಬೀಬಿ ಔರ್ ಗುಲಾಮ್ ಈ ಜೋಡಿಯ ಕೊನೆಯ ಕೊಂಡಿಯಾಯಿತು.

ಸಾಖಿಯಾ ಆಜ್ ಮುಜೆ ನೀಂದ್ ಅಯೇಗಿ ಗೀತೆಯಲ್ಲಿ ಮೀನಾ ಕುಮಾರಿಯವರ ಅಭಿನಯದ ಹಿರಿಮೆಯನ್ನಲ್ಲಾ ಮೂರ್ತಿ ಸೆರೆ ಹಿಡಿದಿದ್ದರು. 1964ರ ಅಕ್ಟೋಬರ್ 10ರಂದು ಗುರುದತ್ ಆತ್ಮಹತ್ಯೆ ಮಾಡಿ ಕೊಳ್ಳುವುದರೊಂದಿಗೆ ದೊರಕಬೇಕಿದ್ದ ಹಲವು ಕೊಡುಗೆಗಳು ತಪ್ಪಿ ಹೋದವು. ಗುರುದತ್ ನಂತರ ಮೂರ್ತಿ ಆತ್ಮಾರಾಮ್, ಪ್ರಮೋದ್ ಚಕ್ರವರ್ತಿ, ಕಮಲ್ ಆಮ್ರೋಹಿ ಹೀಗೆ ಅನೇಕ ನಿರ್ದೇಶಕರಿಗೆ

ಛಾಯಾಗ್ರಹಣ ನೀಡಿದರು. ಮೂರು ತಲೆಮಾರಿನ ಕಲಾವಿದರು ಅವರ ಛಾಯಾಗ್ರಹಣದ ಮೂಲಕ ಬಿಂಬಿತವಾದರು. ವಿ.ಕೆ.ಮೂರ್ತಿಯವರು ದೃಶ್ಯ ಸೌಂದರ್ಯವನ್ನು ಗುರುತಿಸುವಲ್ಲಿ ಪರಿಣಿತರು. ಸೂರಜ್ ಚಿತ್ರದ ಬಹರೋ ಫೂಲ್ ಬರಸಾವೋ ಗೀತೆಯಲ್ಲಿ ವೈಜಯಂತಿಮಾಲಾ ಹೂವಿನುಯ್ಯಾಲೆಯಲಿ ತೇಲಿ ಬರುವ ದೃಶ್ಯವನ್ನು ಉದಾಹರಣೆಯಾಗಿ ಗಮನಿಸಬಹುದು. ಮೂರ್ತಿಯವರು ಹೇಳುತ್ತಿದ್ದಂತೆ ನಾಯಕಿಯರು ಗ್ಲಾಮರಸ್ ಆಗಿ ಕಾಣುವುದು ಅವರಿಗೆ ಮುಖ್ಯವಾಗಿರಲಿಲ್ಲ. ಸೌಂದರ್ಯ ಯಾವ ಕೋನದಲ್ಲಿ ಅಡಗಿದೆ ಎನ್ನುವುದನ್ನು ಗಮನಿಸಿ ಅದನ್ನು ನೈಜಗೊಳಿಸುವುದು ಮುಖ್ಯವಾಗಿತ್ತು. ಆಶಾಪರೇಖ್ ಅವರಂತೂ ತಮ್ಮ ಚಿತ್ರಗಳಿಗೆ ಮೂರ್ತಿಯವರೇ ಛಾಯಾಗ್ರಾಹಕರಾಗಬೇಕು ಎಂಬ ಶರತ್ತು ಹಾಕುವ ಮಟ್ಟಿಗೆ ಇದನ್ನು ಮೆಚ್ಚಿಕೊಂಡಿದ್ದರು. ಮೀನಾಕುಮಾರಿ, ನೂತನ್, ಶಬನಾ ಅಜ್ಮಿ, ವಹೀದಾ ರೆಹಮಾನ್ ಹೀಗೆ ಕಲಾವಿದೆಯರು ಮೂರ್ತಿಯವರ ಕ್ಯಾಮರಾ ಕಣ್ಣಿನಲ್ಲಿ ಬಹಳ ಸಹಜವಾಗಿ ಕಾಣುತ್ತಿದ್ದರು.

1980ರ ನಂತರ ಮೂರ್ತಿಯವರ ಬದುಕಿನಲ್ಲಿ ಹಲವಾರು ಘಟನೆಗಳು ನಡೆದವು. 1973ರಲ್ಲಿಯೇ ಶಂಕರಪುರಂನಲ್ಲಿ ಮನೆ ತೆಗೆದು ಕೊಂಡು ನಿವೃತ್ತ ಜೀವನ ಕಳೆಯಲು ಸಿದ್ಧರಾಗಿದ್ದರು. 1988ರಲ್ಲಿ ಸಂಧ್ಯಾ ಅವರ ತಂದೆಯವರು ಹೋಗಿದ್ದರಿಂದ ಸಂಧ್ಯಾ ಮತ್ತು ಛಾಯಾ ಬೆಂಗಳೂರಿಗೆ ಬಂದರು. ಮೂರ್ತಿಯವರು ಶೂಟಿಂಗ್ ಅನುಕೂಲ ನೋಡಿಕೊಂಡು ಮುಂಬೈ–ಬೆಂಗಳೂರು ಓಡಾಟ ನಡೆಸುತ್ತಿದ್ದರು. 1998ರಲ್ಲಿ ಹರ್ಪಿಸ್ ಆಗಿದ್ದರಿಂದ ಒಂದು ರೀತಿಯಲ್ಲಿ ಬಲವಂತದ ನಿವೃತ್ತಿಯಾಯಿತು. ಮೂರ್ತಿಯವರು ಕನ್ನಡದ ನೆಲೆದಲ್ಲಿ ನಿಂತ ಮೇಲೆ ಅವರ ಪರಿಣತಿಯನ್ನು ಯಾರೂ ಬಳಸಿಕೊಳ್ಳಲಿಲ್ಲ. ರಂಗಭೂಮಿಯ ಕುರಿತ ಅವರ ತುಡಿತಕ್ಕೂ ಸ್ಪಂದನ ಸಿಕ್ಕಲಿಲ್ಲ. ಈ ಕೊರಗು ಅವರಿಗಿತ್ತು. ಅವರು ಛಾಯಾಗ್ರಹಣ ಮಾಡಿದ ಏಕೈಕ ಕನ್ನಡ ಚಿತ್ರ ಎಸ್.ವಿ.ರಾಜೇಂದ್ರ ಸಿಂಗ್(ಬಾಬು) ನಿರ್ದೇಶನದ 'ಹೂವು ಹಣ್ಣು'. ಅದರಲ್ಲಿ ಅವರು ಹಲವು ದೃಶ್ಯ ಚಮತ್ಕಾರಗಳನ್ನು ತಂದಿದ್ದರು. ಕೆಮ್ಮಣ್ಣುಗುಂಡಿಯಲ್ಲಿನ ದೃಶ್ಯ ಅವರ ಸಂಯೋಜನೆಗೆ ಉತ್ತಮ ಉದಾಹರಣೆಯಂತಿದೆ. ನನಗೆ ಮೂರ್ತಿಯವರು ಹೇಳಿದ ಒಂದು ಕುತೂಹಲದ ಸಂಗತಿ ಎಂದರೆ ಅವರು ಲೈಟಿಂಗ್ ಮೀಟರ್‌ನಲ್ಲಿ ಕೊಂಚ ಹಳದಿ ಛಾಯೆ ಕಂಡು ಬಂದರೂ ಸುತ್ತಿಗೆಯಿಂದ ಅದನ್ನು ಒಡೆದು ಹಾಕುತ್ತಿದ್ದರು. ಪರಿಪೂರ್ಣತೆಯ ಕಡೆಗಿನ ಅವರ ತುಡಿತ ಅಂತಹದು.

ನಾನು ಭೇಟಿ ಮಾಡುತ್ತಿದ್ದ ಮೂರ್ತಿಯವರ ಕೊನೆಯ ದಿನಗಳಲ್ಲಿ ಏರಿಳಿತಗಳು ಇದ್ದೇ ಇದ್ದವು. 2006ರಲ್ಲಿ ಸಂಧ್ಯಾ ಹೋದ ನಂತರ ಒಂಟಿಯಾಗಿ ಬಿಟ್ಟರು. ಮಗಳ ಹೊಣೆ ಅವರ ಮನಸ್ಸನ್ನು ಕೊರೆಯುತ್ತಿತ್ತು. ನೆನಪು ಕೂಡ ಆಗಾಗ ಕೈ ಕೊಡುತ್ತಿತ್ತು. ನನಗೆ ದಾಖಲಾತಿ ಮಾಡುವಾಗ ಹತ್ತಾರು ನೆಲೆಗಳಲ್ಲಿ ಕೇಳುವುದು ಅನಿವಾರ್ಯವಾಗುತ್ತಿತ್ತು. 2014ರ ಏಪ್ರಿಲ್ 7ರಂದು ನಾನು ಕುಟುಂಬದ ಸಹಿತ ಶೃಂಗೇರಿಯ ಪ್ರವಾಸದಲ್ಲಿದ್ದಾಗ ವಿ.ಕೆ.ಮೂರ್ತಿಯವರು ನಮ್ಮನ್ನು ಅಗಲಿದರು. ಮೊಬೈಲ್ ನೆಟ್‌ವರ್ಕ್ ಸಿಗದೆ ನನಗೆ ಈ ವಿಷಯ ಗೊತ್ತಾಗಿದ್ದೂ ಕೂಡ ಮರುದಿನವೇ. ನಾನು ಅವರಿಂದ ಪಡೆಯ ಬೇಕಿದ್ದ ಅನೇಕ ಮಾಹಿತಿಗಳು ಉಳಿದು ಬಿಟ್ಟವು. ಅವರ ಕರ್ಮಾಂತರಗಳಿಗೆ ಬಂದಿದ್ದ ಪ್ರಿಯಶಿಷ್ಯ ಮತ್ತು ಛಾಯಾಗ್ರಾಹಕ ಗೋವಿಂದ ನಿಹಲಾನಿ ಮತ್ತು ಅವರ ನಿಕಟ ಒಡನಾಡಿ ಜಿ.ಎಸ್.ಭಾಸ್ಕರ್ ಅವರ ನೆರವಿನಿಂದ ಅದೇ ವರ್ಷ 'ಬೆಳಕಿನ ಮಾಂತ್ರಿಕ ವಿ.ಕೆ.ಮೂರ್ತಿ' ಪುಸ್ತಕ ರೂಪುಗೊಂಡು ಬಿಡುಗಡೆಯಾಯಿತು. ಅವರಿದ್ದಾಗಲೇ ಇದನ್ನು ಪೂರೈಸಲಾಗಲಿಲ್ಲ ಎನ್ನುವ ಕೊರಗು ನನ್ನನ್ನು ಜೀವನ ಪೂರ್ತಿ ಕಾಡುತ್ತದೆ.

ಮಲೆನಾಡು ಗಿಡ್ಡ ಮತ್ತು ದೀಪಾವಳಿ

» ಕಮಲಾಕರ ಕೆ ಆರ್, ತಲವಾಟ

ಸುಮಾರು ನಾಲ್ಕು ದಶಕಗಳ ಹಿಂದೆ, ಸಂಜೆ 5–6 ಗಂಟೆಯ ಮಲೆನಾಡಿನ ಬಸ್ಸಿನಲ್ಲಿ ಪ್ರಯಾಣಿಸುವಾಗ ಬಸ್ ಆಗಾಗ ನಿಂತು ಸಾಗುತ್ತಿರುವ ದೃಶ್ಯ ಸಾಮಾನ್ಯ. ಬಸ್ಸಿನಲ್ಲಿ ಒಳಗಡೆ ಕುಳಿತವರು 'ಓ.. ಬ್ರೇಕ್ ಇನ್ ಸ್ಪೆಕ್ಟರ್ ಬಂದರು' ಅಂತ ತಮಾಷೆಯಾಗಿ ಮಾತುಕತೆಯಾಡುತ್ತಿದ್ದರು. ಅದು ಹಸುಗಳ ಮಂದೆ ಗುಡ್ಡಮೇಡುಗಳಲ್ಲಿ ಮೇಯ್ದು, ಮನೆಯ ಕೊಟ್ಟಿಗೆಗೆ (ಹಟ್ಟಿ) ಹಿಂದಿರುಗುವ ಗೋಧೂಳಿ ಸಮಯವದು. ವಾಹನಗಳ ಹಾರ್ನ್ ಶಬ್ದ ಕೇಳಿ ಹಸುಗಳಾದರೆ ಸ್ವಲ್ಪ ಹೆದರಿ ಅಥವಾ ಗೋಪಾಲಕನ 'ಗೌರಿ, ತುಂಗೆ ರಸ್ತೆ ಬದಿಗೆ ಹೋಗು' ಎಂಬ ದನಿಗೆ ಓಗೊಟ್ಟು ಬಸ್ಸಿನ ಆಚೀಚೆ ಜರುಗಿ ಹಾದಿ ಮಾಡಿಕೊಡುತ್ತಿದ್ದವು. ಆದರೆ ಎಮ್ಮೆಗಳು ಅಷ್ಟು ಸುಲಭವಾಗಿ ದಾರಿ ಬಿಟ್ಟುಕೊಡುತ್ತಿರಲಿಲ್ಲ!

ಸೂರ್ಯಾಸ್ತ ಮತ್ತು ಕತ್ತಲ ನಡುವಿನ ಸಮಯವನ್ನು ಗೋಧೂಳಿ ಅವಧಿ ಎಂದು ಕರೆಯಲಾಗುತ್ತದೆ. ಇದು ಸಂಜೆ 5–7 ಗಂಟೆಯವರೆಗಿರುತ್ತದೆ. ಈ ಸಮಯವನ್ನು ಲಕ್ಷ್ಮೀ ಬರುವ ಹೊತ್ತು ಎಂದು ಪರಿಗಣಿಸಲಾಗುತ್ತದೆ. ಈ ಸಮಯದಲ್ಲಿ ಮೇಯಲು ಬಿಟ್ಟ ಹಸುಗಳು ಒಂದನ್ನೊಂದು ತಿವಿದುಕೊಳ್ಳುತ್ತಾ ಧೂಳೆಬ್ಬಿಸುತ್ತಾ ಮನೆಗೆ ಹಿಂದುರುಗಿ ಕೊಟ್ಟಿಗೆಗೆ ಸೇರುವ ದೃಶ್ಯ ಮಾಮೂಲಾಗಿರುತ್ತಿತ್ತು. ಎತ್ತು, ಗೋವುಗಳು ಬೆಟ್ಟದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಮೇಯುತ್ತಾ ತತ್ವವನ್ನು ತಮ್ಮಲ್ಲಿ ಅಳವಡಿಸಿಕೊಂಡಿವೆ.

ಹೆಚ್ಚಿನ ಮನೆಯವರು ಒಂದಿಷ್ಟು ಹಸು,ಎಮ್ಮೆಗಳನ್ನು ಸಾಕುತ್ತಿದ್ದರು. ಇಂತಹ ಮಲೆನಾಡಿನ ಹಸುಗಳಿಗೆ ದೀಪಾವಳಿ ಅಥವಾ ದೊಡ್ಡ ಹಬ್ಬ ಬಂತೆಂದರೆ ಖುಷಿ. ಹಸುಗಳಿಗೆ ಅಂದು ನಸುಕಿನಲ್ಲೇ ಬಿಸಿನೀರಿನ ಅಭ್ಯಂಜನ ಸ್ನಾನ. ಮೈಮೇಲೆ ಬಣ್ಣಬಣ್ಣದ ಚಿತ್ತಾರ, ಕೊರಳಿಗೆ ಗಂಟೆಯ ಜೊತೆ ಅಡಿಕೆ ಗೋಟಿನ ಮತ್ತು ಚೆಂಡು ಹೂವಿನ ಮಾಲೆ. ಅನ್ನದಿಂದ ಮಾಡಿದ ಚೆರುವಿನ ತಿನಿಸು; ಆ ದಿನ ಅವುಗಳಿಗೆ ಅಗ್ರಪೂಜೆ. ಗೋಪಾಲಕರಿಗೂ ಅಂದು ಹೊಸಬಟ್ಟೆ ಕೊಟ್ಟು ಸತ್ಕಾರ.

ಈಗ ಇಂತಹ ಮಲೆನಾಡು ಗಿಡ್ಡ ತಳಿ ಅವನತಿಯ ಹಾದಿಯಲ್ಲಿದೆ. ವಿದೇಶಿ ತಳಿಯ ಹಸುಗಳನ್ನು ಕೆಲವರು ಸಾಕುತ್ತಿದ್ದಾರೆ. ಬೇರೆ ಬೇರೆ ಕಾರಣಗಳಿಗಾಗಿ ಹಳ್ಳಿಗಳು ಬರಿದಾಗುತ್ತಿದೆ. ಯುವಕರು ಪಟ್ಟಣ ಸೇರಿದ ಮೇಲೆ ಮನೆಯಲ್ಲಿರುವ ವಯಸ್ಸಾದವರಿಗೆ ಹಸುಗಳನ್ನು

ಮಲೆನಾಡಿನಲ್ಲಿ ಹಿಂದೆ ಮಲೆನಾಡು ಗಿಡ್ಡ ತಳಿಯ ಎತ್ತು, ಹಸು, ಕರುಗಳು ಹೇರಳ ವಾಗಿದ್ದವು; ಆಗಿನ ದಿನಗಳಲ್ಲಿ ದೀಪಾವಳಿ ಸಮಯದ ಗೋಪೂಜೆಯು ಸಂಭ್ರಮ ದಿಂದ ನಡೆಯುತ್ತಿತ್ತು; ಇಂದು ಮಲೆನಾಡು ಗಿಡ್ಡ ತಳಿ ನಿಧಾನವಾಗಿ ಕಣ್ಮರೆಯಾಗುತ್ತಿದೆ; ಅದಕ್ಕೆ ಸಮಾಂತವಾಗಿ ಗೋಪೂಜೆಯ ಸಡಗರವೂ ಅವನತಿಯ ಹಾದಿ ಹಿಡಿದಿದೆ!

ಇರುತ್ತಿದ್ದುದರಿಂದ ಅವು ಹಾಕುವ ಸಗಣಿ, ಗೋಮೂತ್ರದಿಂದ ಮಣ್ಣಿನ ಫಲವತ್ತತೆಯಾಗುತ್ತಿತ್ತು. ಅದೇ ಗೊಬ್ಬರವಾಗಿ ಗಿಡಮರಗಳ ಸಂತತಿ ತನ್ನಿಂತಾನೆ ಜಾಸ್ತಿಯಾಗಿ ಅರಣ್ಯದ ಬೆಳವಣಿಗೆಗೆ ನೇರ ಕಾರಣವಾಗುವದರ ಜೊತೆಗೆ ಮಣ್ಣಿನ ಸವಕಳಿಯೂ ತಪ್ಪುತ್ತಿತ್ತು. ಹಸಿ ಹುಲ್ಲು ಕೂಡ ಹುಲುಸಾಗಿ ಬೆಳೆಯುತ್ತಿತ್ತು. ಎಲ್ಲರ ಮನೆಯ ಬ್ಯಾಣದಲ್ಲೂ ಕರಡ (ಒಣ ಹುಲ್ಲು) ಚೆನ್ನಾಗಿ ಬೆಳೆಯಲು ಈ ಎಮ್ಮೆ ಹಸುಗಳೇ ಕಾರಣವಾಗುತ್ತಿದ್ದವು. ಮಲೆನಾಡು ಗಿಡ್ಡ ಹಸುಗಳು ಕೊಡುವ ಹಾಲಿನ ಪ್ರಮಾಣ ಈಗಿನ ತಳಿಗಳಿಗೆ ಹೋಲಿಸಿದರೆ ಬಹಳ ಕಡಿಮೆ. ಗಾತ್ರದಲ್ಲಿ ಚಿಕ್ಕದಾದರೂ ಬೆಟ್ಟದಲ್ಲಿನ ಹುಲ್ಲು, ಔಷದೀಯ ಗುಣಗಳನ್ನು ಹೊಂದಿದ ಸೊಪ್ಪುಸದೆಗಳನ್ನು ತಿನ್ನುವುದರಿಂದ ಇವುಗಳ ಹಾಲು ಪೌಷ್ಟಿಕಾಂಶದಿಂದ ಕೂಡಿರುತ್ತವೆ. ಒಳ್ಳೆಯ ಆರೋಗ್ಯಕ್ಕಾಗಿ ದಿನವೂ ವಾಕಿಂಗ್ ಮಾಡಿ ಎಂದು ಡಾಕ್ಟರ್ ಹೇಳುವ ಮುಂಚಿನಿಂದಲೇ ಮಲೆನಾಡಿನ ಹಸುಗಳು ಈ

ಸಾಕುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಹಳ್ಳಿಗಳಲ್ಲಿ ಹಾಲಿಗಾಗಿ ಡೈರಿಯ ಅವಲಂಬನೆ ಅನಿವಾರ್ಯವಾಗಿದೆ. ಇದರಿಂದಾಗಿ ಬಹಳಷ್ಟು ಮನೆಗಳಲ್ಲಿ ಹಸು ಕರುಗಳ ಕೊರಳಲ್ಲಿನ ಗಂಟೆಯ ನಿನಾದವಿಲ್ಲದೆ, ಗೋಪೂಜೆ ಕಳೆಗುಂದಿದೆ.

ಮಲೆನಾಡು ಗಿಡ್ಡ ಮೊದಲಾದ ಸ್ಥಳೀಯ ತಳಿಯ ಎತ್ತುಗಳನ್ನು, ಹಸುಗಳನ್ನು ಉಳಿಸಿಕೊಳ್ಳಲು ಸಾಧ್ಯವಿದೆಯೆ? ಸರಕಾರ ಮತ್ತು ಕೃಷಿಕರು ಮನಸ್ಸು ಮಾಡಿದರೆ ಸಾಧ್ಯವಿದೆ. ಆದರೆ, ಇಂದಿನ ಆಧುನಿಕ ಎನಿಸುವ ದಿನಗಳಲ್ಲಿ, ಪರಿಸರದ ರಕ್ಷಣೆಗೆ ಯೋಚಿಸದೇ ಇರುವ ಆಡಳಿತದಲ್ಲಿ, ಸ್ಥಳೀಯ ಸಂಸ್ಕೃತಿಯನ್ನು ಉಳಿಸುವ ಕುರಿತು ನಿರ್ಲಕ್ಷ್ಯ ವಹಿಸುವ ಸಮಾಜದಲ್ಲಿ, ವಾಣಿಜ್ಯಕ ಲಾಭವೇ ಪ್ರಮುಖ ಎನಿಸಿದೆ, ಮಲೆನಾಡು ಗಿಡ್ಡದಂತಹ ಜಾನುವಾರು ಅವನತಿಯ ಹಾದಿ ಹಿಡಿದೆ. ಅದರ ಜತೆಯಲ್ಲೇ, ಗೋಪೂಜೆಯಂತಹ ಪುರಾತನ ಪದ್ಧತಿಗಳೂ! ಇದು ಒಂದು ರೀತಿಯ ಅವನತಿ.

ಕೇಶಾರ್ಪಣೆ

» ಅನುಪಮಾ ಮಂಗಳವೇಢೆ, ಶಿಕಾಗೊ

ಸಾಧನಪಾದಕ್ಕೆ ಅಡ್ಮಿಶನ್ ಸಿಕ್ಕಿತು ಎಂದು ತಿಳಿದಾಗ ನನ್ನ ಇನ್ನೊಂದು ಬಹುಕಾಲದ ಆಸೆ ಧುತ್ತೆಂದು ತಲೆಯೆತ್ತಿ ನಿಂತಿತ್ತು. ಅದೇನೆಂದರೆ ದೇವಿಗೆ ನನ್ನ ಕೇಶಾರ್ಪಣೆ. ಯಾವತ್ತೂ ನಾನೇನು ನೀಳವೇಣಿಯಾಗಿರಲಿಲ್ಲ, ಆದರೂ ಇರುವ ಸ್ವಲ್ಪ ಕೂದಲನ್ನೇ ದೇವಿಗೆ ಅರ್ಪಿಸಬೇಕು ಎಂಬ ಆಸೆಯಿತ್ತು. ನಮ್ಮಲ್ಲಾದರೋ ಕೇಶಾರ್ಪಣೆ ಮಾಡುವುದು ಕೆಲವು ಸಂದರ್ಭಗಳಲ್ಲಿ ಮಾತ್ರ. ಅದರಲ್ಲೂ ಹೆಂಗಸರಂತೂ ಮಾಡುವುದೇ ಇಲ್ಲ. ನಿಷೇಧ ಕೂಡ. ಹಾಗಾಗಿ ಈ ನನ್ನ ಆಸೆಯನ್ನು ಮನೆಯಲ್ಲಿ ಹೇಳಿದಾಗ ಗಂಡ ಅಥವಾ ಮಾವನವರ ಅಭ್ಯಂತರವಿರಲಿಲ್ಲ ಆದರೆ ನನ್ನ ಅಮ್ಮ ವಿರೋಧಿಸಿದ್ದರು. ಕೊನೆಗೆ ಹೇಗಿದ್ದರೂ ನೀನು ಆಶ್ರಮದಿಂದ ಮರಳುವ ಹೊತ್ತಿಗೆ ಸ್ವಲ್ಪವಾದರೂ ಕೂದಲು ಬೆಳೆದಿರುತ್ತದೆ ಬಿಡು ಎನ್ನುತ್ತಾ ತಾವೇ ಸಮಾಧಾನ ಮಾಡಿಕೊಂಡರು.

ನಾನು ಹೇಗೆ ಕಾಣುತ್ತೀನಿ ಎಂಬ ಪ್ರಶ್ನೆ, ನನ್ನ ಕೂದಲಿನ ಅಂದಚೆಂದದ ಅನಾವಶ್ಯಕ ಚಿಂತೆ, ಇವೆಲ್ಲದರಿಂದ

ದೂರವಿರುವುದೇ ಉತ್ತಮವೆನಿಸಿತು. ಓರಿಯಂಟೇಶನ್ ಮುಗಿದ ಕೆಲವು ದಿನಗಳಲ್ಲಿಯೇ, ಅಂದರೆ ಜುಲೈ 3ಕ್ಕೆ ಗುರುಪೂರ್ಣಿಮೆಯ ಹಿಂದಿನ ದಿನ ಲಿಂಗಭೈರವಿ ದೇವಸ್ಥಾನದ ಬಳಿ ಇರುವ ಕೇಶಾರ್ಪಣೆ ಸ್ಥಳಕ್ಕೆ ಹೋದೆ. ಅಲ್ಲಿ ನೋಡಿದರೆ ಒಂದು ದೊಡ್ಡ ಸಾಲೇ ಇತ್ತು. ಆರು ಪುರುಷರು, ಇಬ್ಬರು ಮಹಿಳೆಯರು, ನನ್ನನ್ನೂ ಸೇರಿ. ಸಾಲಿನಲ್ಲಿ ನನಗಿಂತ ಮುಂಚೆ ಇದ್ದವಳು ಆ ಇನ್ನೊಂದು ಹುಡುಗಿ. ಅವಳೂ ಸಾಧನಪಾದದವಳೇ. ಅಲ್ಲಿಯ ತನಕ ಧೈರ್ಯವಾಗಿ ಕುಳಿತಿದ್ದ ನಾನು, ಚೆಂದಗಿದ್ದ ಆ ಹುಡುಗಿ ಕೇಶಾರ್ಪಣೆ ಮಾಡಿಸಿಕೊಂಡು ಹೊರಬಂದವಳನ್ನು ನೋಡಿ ಬೆವತೆ. ಅಲ್ಲಿಂದ ಜಾಗ ಖಾಲಿ ಮಾಡಿ ಓಡಿ ಹೋಗುವ ಮನಸ್ಸಾಯಿತು ಆ ಕ್ಷಣ! ಸ್ವಇಚ್ಛೆಯಿಂದ ಬಂದದ್ದು. ಈಗ ಈ ರೀತಿ ಹೆದರಿದರೆ? ನಾನು ಕೂದಲು ತೆಗೆಸುವ ಉದ್ದೇಶವೇ ಈ ಅಂಜಿಕೆ, ಸ್ವಯಂಚಿತ್ರಣದ ಬಗೆಗಿರುವ ಅಹಂಅನ್ನು ಮೆಟ್ಟಿ ನಿಂತು, ದೇವಿಗೆ ಶರಣಾಗುವುದು.

ಹಾಗಾಗಿ ಮರುಕ್ಷಣವೇ ಧೈರ್ಯಮಾಡಿ ಒಳಹೋದೆ. ಮೇಜಿನ ಮೇಲೆ ದೊಡ್ಡದಾದ ಲಿಂಗಭೈರವಿ ಫೋಟೋವನ್ನು ಇರಿಸಿದ್ದರು. ಅವಳಿಗೆ ಕರ ಮುಗಿದು ನಮಸ್ಕರಿಸಿ, ನನ್ನ ತಲೆಯನ್ನು ಬ್ಲೇಡಿನ ಹರಿತಕ್ಕೆ ಒಪ್ಪಿಸಿದೆ. ಅಲ್ಲಿಂದ ಹೊರ ಬಂದಾಗ ತಲೆ ಮೇಲಿಂದ ಒಂದಿಷ್ಟು ಹೊರೆ ಕಡಿಮೆಯಾಯಿತು ಎನ್ನುವ ಅನುಭವವಾಯಿತು. ದೇಹವೆಲ್ಲ ಹಗುರವೆನಿಸಿತ್ತು. ಮಾರನೆಯ ದಿನ ಗುರು ಪೂರ್ಣಿಮೆಗೆ ಸಾಧನಪಾದ ಪ್ರಾರಂಭ. ನನ್ನ ಜೀವನದ ಮಹತ್ತರವಾದ ಈ ಸಮಯವನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಸಜ್ಜಾದೆ.

ಕೊಯಂಬತ್ತೂರಿನ ಈಶ ಆಶ್ರಮದ ಹೆಬ್ಬಾಗಿಲಿನಲ್ಲಿ ಎಲ್ಲರನ್ನೂ ಸ್ವಾಗತಿಸುವ ಸರ್ಪಕಂಬ (ಸರ್ಪವಾಸಲ್), ಒಳಹೊಕ್ಕರೆ ಎತ್ತರದ ತೆಂಗಿನ ಮರಗಳು, ಊದುಕಡ್ಡಿಯ ಸುವಾಸನೆ, ಹದವಾದ ವಾಲ್ಯೂಮ್‌ನಲ್ಲಿ ಸದ್ಗುರುಗಳ ಧ್ವನಿಯಲ್ಲಿ ಯೋಗೇಶ್ವರಾಯ ಮಂತ್ರ, ಏಳೆಂಟು ನಿಮಿಷ ನಡೆದರೆ, ಗಂಡಸರಿಗಾಗಿ ಸೂರ್ಯಕುಂಡ ಎಂಬ ಪವಿತ್ರ ಕೊಳ, ಬಳಿಯಲ್ಲೇ ನಾಗಮಂಟಪ, ಅದನ್ನು ದಾಟುತ್ತಲೇ ಕಮಲಭರಿತ ಸುಂದರ ಪುಷ್ಕರಿಣಿ, ಅದಕ್ಕೊಂದು ಸೇತುವೆ, ಆ ಚಿಕ್ಕ ಸೇತುವೆ ದಾಟಿದರೆ ಧ್ಯಾನಲಿಂಗಕ್ಕೆ ಮುಖ ಮಾಡಿ ಕಾದು ಕುಳಿತಿರುವ ನಂದಿ. ಧ್ಯಾನಲಿಂಗದ ಬಲ ಹಿಂಭಾಗದಲ್ಲಿ ಲಿಂಗಭೈರವಿ ದೇವಸ್ಥಾನ, ಎಡ ಹಿಂಭಾಗದಲ್ಲಿ ಹೆಂಗಸರಿಗಾಗಿ ಚಂದ್ರಕುಂಡ. ಇವಿಷ್ಟು ಸ್ಥಳಗಳನ್ನು ನೋಡುವ ಅವಕಾಶ ಆಶ್ರಮವನ್ನು ಭೇಟಿಮಾಡುವ ಎಲ್ಲರಿಗೂ ಇರುತ್ತದೆ.

ಆಶ್ರಮದ ಒಳಗೆ

ಧ್ಯಾನಲಿಂಗದ ಎಡಭಾಗಕ್ಕೆ ಸೆಕ್ಯುರಿಟಿ ಗೇಟ್ ಒಂದಿದೆ. ಇದರೊಳಗೆ ಪ್ರವೇಶ ಕೇವಲ ಆಶ್ರಮವಾಸಿಗಳಿಗೆ ಮತ್ತು ರಾತ್ರಿ ಅಲ್ಲಿಯ ಕಾಟೇಜುಗಳಲ್ಲಿ ತಂಗುವ ಪ್ರವಾಸಿಗಳಿಗೆ ಮಾತ್ರ. ಆಶ್ರಮದ ಒಳಹೊಕ್ಕರೆ ಅದೇ ಇನ್ನೊಂದು ರೀತಿಯ ಪ್ರಪಂಚ. ಸದ್ಗುರು ಗುರುಕುಲ ಉಪಕ್ರಮಕ್ಕೆ ಸೇರಿರುವ ಈಶ ಸಂಸ್ಕೃತಿ ಶಾಲಾ ಆವರಣ ಕಾಣುತ್ತದೆ. ಬೆಳಗಿನ ಹೊತ್ತು ಮಕ್ಕಳು ಶಾಸ್ತ್ರೀಯ ಸಂಗೀತ ಮತ್ತು ವಾದ್ಯಗಳ ಅಭ್ಯಾಸ

ಮಾಡುತ್ತಿರುವುದು ಕೇಳುತ್ತದೆ. ಅಲ್ಲಿಂದ ಮುಂದೆ ವೆಲ್ಕಮ್ ಪಾಯಿಂಟ್. ಸೌಂಡ್ಸ್ ಆಫ್ ಈಶ ಆಲ್ಬಮಿನ ಹಾಡುಗಳನ್ನು ಹಿನ್ನೆಲೆಯಲ್ಲಿ ಕೇಳುತ್ತಾ, ತಂಗಲು ಬಂದವರನ್ನು ಸ್ವಾಗತಿಸಲು ಕಾರ್ಯಾಚರಣೆಯಲ್ಲಿರುವ ಸ್ವಯಂಸೇವಕರನ್ನು ನೋಡಬಹುದು. ಇನ್ನಷ್ಟು ಹೆಜ್ಜೆ ದೂರ ಹೋದರೆ ಸಿಗುವುದೇ ನಿರ್ಕಾಯ ಸ್ಥಾನ. ಆಶ್ರಮದ ಸುಂದರ ತಾಣವಿದು. ಇಲ್ಲಿ ಕಲ್ಲಿನ ನಾಲ್ಕು ಮಂಟಪಗಳಿವೆ.

ಮಂಟಪದ ಬಳಿ ಕುಳಿತರೆ ಅಲ್ಲಿ ಕಾಣುವ ದೃಶ್ಯ ಅಮೋಘ. ಎದುರಿಗೆ ಕಮಲಭರಿತ ಕೊಳ. ಕಾಲಭೈರೇಶ್ವರನ ಮೂರ್ತಿಯನ್ನು ಕೊಳದ ಮಧ್ಯದಲ್ಲಿ ಸ್ಥಾಪಿಸಿದ್ದಾರೆ. ಮರಣ ಹೊಂದಿದವರ ಅಂತಿಮ ಕಾರ್ಯವಾದ ಕಾಲಭೈರವ ಕರ್ಮವನ್ನು ಇಲ್ಲಿಯೇ ಮಾಡುತ್ತಾರೆ. ಈ ಮಂಟಪಗಳಡಿ ಬೆಳಗಿನ ಹೊತ್ತು ಸನ್ಯಾಸಿಗಳು ಮಂತ್ರ ಸಹಿತ ಈ ಕರ್ಮವನ್ನು ಮಾಡುವುದು ಕಾಣುತ್ತದೆ. ಕೊಳಕ್ಕೆ ಬರುವ ಹಲವಾರು ಪಕ್ಷಿಗಳ ಕಲರವ ಕೇಳುತ್ತದೆ. ನವಿಲುಗಳು ಸುತ್ತಮುತ್ತಲಿನ ಮರಗಳ ಮೇಲೆ ಕುಳಿತಿರುತ್ತವೆ. ಕೊಳದ ಆಚೆ ಗೋಶಾಲೆ. ಹಸುಕರುಗಳ ಆಟ, ಓಟ ಕಣ್ಣಿಗೆ ಹಬ್ಬ. ಅವುಗಳ ಅಂಬಾ ಎನ್ನುವ ಕರೆ ಮೈಮನಸ್ಸಿಗೆ ಆಹ್ಲಾದ ಕೊಡುತ್ತದೆ. ಇದರ ಎದುರಲ್ಲೇ ಸ್ಪಂದ ಹಾಲ್ ಎಂಬ ಧ್ಯಾನಮಂದಿರ. ಭಾವ ಸ್ಪಂದನ, ಸಂಯಮ ಮತ್ತು ಇತರ ಈಶ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ. ಈ ಧ್ಯಾನಮಂದಿರದ ವಿನ್ಯಾಸ ಬಹಳ ಸುಂದರವಾಗಿದೆ. ಮಂದಿರದ ಉದ್ಯಾನವನದಲ್ಲಿ ಬಹಳ ಅಪರೂಪದ ಮರಗಿಡಗಳಿವೆ. ಶಿವಲಿಂಗ ಹೂವಿನ ದೊಡ್ಡ ಮರವಿದೆ. ನಿರ್ಕಾಯ ಸ್ಥಾನ ಮತ್ತು ಸ್ಪಂದ ಹಾಲ್ ದಾಟಿದರೆ ಎಡಭಾಗದಲ್ಲಿ 'ನಳಂದ' ಎನ್ನುವ ಮೈದಾನ. ಮೈದಾನದ ಹಿಂಭಾಗ ವೆಳ್ಳಯಂಗಿರಿ ಬೆಟ್ಟಗಳ ಸಾಲು ಕಾಣುತ್ತದೆ. ನವಿಲುಗಳ ನಲಿದಾಟ, ಅವುಗಳ ಕೂಗಿನ ಜೊತೆಗೆ ಮೈದಾನ ದಲ್ಲಿ ಸಂಜೆಯ ಹೊತ್ತು ಫ್ರಿಸ್ಬಿ, ಥ್ರೋಬಾಲ್ ಇನ್ನಿತರ ಆಟವಾಡುವ ಆಶ್ರಮವಾಸಿಗಳ ಕೂಗಾಟ ಉತ್ಸಾಹಭರಿತವಾಗಿರುತ್ತದೆ.

ಅಕ್ಷಯ

ಅಲ್ಲಿಂದ ಐದು ನಿಮಿಷ ಹಾದಿಯಲ್ಲಿ ಸಿಗುವುದೇ ಅಕ್ಷಯ. ಆಶ್ರಮದ ಮುಖ್ಯ ಭಾಗ. ದಿನಕ್ಕೆ ಸುಮಾರು ನೂರು ಬಗೆಯ ಅಡುಗೆಗಳು ತಯಾರಾಗುವ ಅಡುಗೆ ಮನೆ. ಅಕ್ಷಯವನ್ನು ಹಾದು ಹೋಗುವವರ ಮೂಗಿಗೆ ಸುಗ್ಗಿ. ಎದುರಲ್ಲೇ ಭಿಕ್ಷಾ ಹಾಲ್. ಅಂದರೆ ಊಟ ಮಾಡುವ ಸ್ಥಳ. ದಿನನಿತ್ಯ ಸುಮಾರು 3500–4000 ಜನರಿಗೆ ಅನ್ನ ನೀಡುವ ಪವಿತ್ರ ಮಂದಿರ. ಇಲ್ಲಿಂದ ಸುಮಾರು ಐದು ಹತ್ತು ನಿಮಿಷಗಳ ನಡಿಗೆಯಲ್ಲಿ ಸಾಧನಪಾದದವರಿಗೆ ವಸತಿ ವ್ಯವಸ್ಥೆ. ಈ ಹಾದಿಯಲ್ಲಿ ನಡೆದುಹೋದರೆ ಬಹಳ ಮನೋಹರವಾದ ನೋಟ. ವೆಳ್ಳಯಂಗಿರಿ ಪ್ರಶಾಲ ಎಂಬ ದೊಡ್ಡ ಮೈದಾನ. ಅದನ್ನು ಆತುಕೊಂಡಿರುವ ಹಸಿರು ಮೈ ತುಂಬಿದ ವೆಳ್ಳಯಂಗಿರಿ ಬೆಟ್ಟದ ಸಾಲು. ಮಂಜು ಕವಿದ ದಿನಗಳಲ್ಲಿ, ಸಮುದ್ರದ ಎತ್ತರದ ಅಲೆಗಳಂತೆ ಕಾಣುತ್ತದೆ. ವಿಶಾಲವಾದ ಎತ್ತರವಾದ ಬೆಟ್ಟದ ಮುಂದೆ ನಾವು ಎಷ್ಟು ಸಣ್ಣವರು ಎಂದು ತಿಳಿಸಿ ನಮ್ಮನ್ನು ವಾಸ್ತವಕ್ಕೆ ತರುತ್ತದೆ. ಈ ಸುಂದರವಾದ, ಶಾಂತಿಯುತವಾದ ಪರಿಸರದಲ್ಲಿ ಹತ್ತು ತಿಂಗಳು ಕಳೆಯುವ ಅವಕಾಶ ಸೌಭಾಗ್ಯವಲ್ಲವೆ?

ಗುರುಪೂರ್ಣಿಮೆ

ಆಶ್ರಮ ಸದಾ ಸಂಭ್ರಮದಿಂದಿರುತ್ತದೆ. ತಿಂಗಳಿಗೊಮ್ಮೆ ಬರುವ ಪೌರ್ಣಮಿಯಲ್ಲಂತೂ ಆಶ್ರಮದ ಕಳೆ ಇನ್ನೂ ಹೆಚ್ಚುತ್ತದೆ. ಆ ದಿನ ಭಕ್ತಾದಿಗಳು ಧ್ಯಾನಲಿಂಗಕ್ಕೆ ಬೆಳಿಗ್ಗೆ 6 ಗಂಟೆಯಿಂದ 12ರ ತನಕ ಕ್ಷೀರದಿಂದಲೂ ಮತ್ತು 12ರಿಂದ ರಾತ್ರಿ 8ರ ತನಕ ನೀರಿನಿಂದಲೂ ಅಭಿಷೇಕ ಮಾಡುವ ಅವಕಾಶವಿರುತ್ತದೆ. ಸಂಜೆಯಲ್ಲಿ ಲಿಂಗಭೈರವಿ ದೇವಿಗೆ ಪೌರ್ಣಮಿ ಅಭಿಷೇಕ ನಡೆಯುತ್ತದೆ. ಇಲ್ಲಿ, ದೇವಿಯ ಆರಾಧನೆಗೆ ಪೂಜಾರಿಯಲ್ಲ, ಬದಲಾಗಿ ತಮ್ಮ ಜೀವನವನ್ನು ದೇವಿಗಾಗಿ ಅರ್ಪಿಸಿರುವ ಹೆಂಗಸರಿರುತ್ತಾರೆ. ಇವರನ್ನು ಭೈರಾಗಿಣಿ ಮಾ ಎಂದು ಕರೆಯುತ್ತಾರೆ. ದೇವಿಯನ್ನು ಸುಗಂಧದ್ರವ್ಯಗಳಿಂದ ಪೂಜಿಸುವ ಜೊತೆಗೆ ಸಂಸ್ಕೃತಿ ಮಕ್ಕಳಿಂದ ಗಾನ ಮತ್ತು ನೃತ್ಯ ಸೇವೆ ಇರುತ್ತದೆ. ಇಲ್ಲಿ ನಡೆಯುವ ಪೂಜಾ ವಿಧಾನ ವಿಭಿನ್ನ. ಪೌರ್ಣಮಿ ಪೂಜೆ ಸಮಯದಲ್ಲಿ ಹುಡುಗಿಯರು ನರ್ತಿಸುತ್ತ ಕುಂಕುಮ, ಅರಿಶಿನ, ಗಂಧ ಮತ್ತು ಹೂವುಗಳ ತಟ್ಟೆಗಳನ್ನು ಪ್ರತ್ಯೇಕವಾಗಿ ತಂದು ಭೈರಾಗಿಣಿ ಮಾ ಕೈಯಲ್ಲಿ ಇಡುತ್ತಾರೆ. ಮಾ ಇದನ್ನು ದೇವಿಗೆ ಸಮರ್ಪಿಸುತ್ತಾರೆ. ಈ ಒಂದು ಅರ್ಪಿಸುವ ಪ್ರಕ್ರಿಯೆ ಅನನ್ಯ ಮತ್ತು ಹೃದಯಸ್ಪರ್ಶಿ. ವಸ್ತ್ರಾರ್ಪಣೆ ಮಾಡುವ ನೃತ್ಯವಿಧಾನವಂತೂ ಬಲು ಸುಂದರ.

ಸದ್ಗುರು ಗುರುಕುಲ ಸಾಧನಪಾದ ಅನುಭವ ಕಥನದ ಮೂರನೆಯ ಭಾಗ ಇಲ್ಲಿದೆ.

ಪೂಜೆಯ ನಂತರ ಲಿಂಗಭೈರವಿ ಉತ್ಸವ ಮೂರ್ತಿಯನ್ನು ಧ್ಯಾನಲಿಂಗದ ಮುಂದೆ ಕರೆದೊಯ್ಯುತ್ತಾರೆ, ಮಹಾ ಆರತಿಗಾಗಿ. ಸಂಜೆ ಸುಮಾರು ಏಳು ಗಂಟೆಗೆ ದೇವಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಧ್ಯಾನಲಿಂಗದ ಕಡೆ ಮೆರವಣಿಗೆ ಹೊರಡುತ್ತದೆ. ಕೈಲಾಸವಾದ್ಯ ಎಂಬ ತಂಡವು ಶಂಖ, ಕಹಳೆ, ಡೋಲು ಮುಂತಾದ ವಾದ್ಯಗಳೊಂದಿಗೆ ದೇವಿಯನ್ನು ಸ್ವಾಗತಿಸುತ್ತ ಮುನ್ನಡೆಯುತ್ತಾರೆ. ಪುರಾತನ ಕಲೆಯಾದ ಕಲರಿಪಯಟ್ಟನ್ನು ಪ್ರದರ್ಶಿಸುತ್ತ ಇನ್ನೊಂದು ತಂಡವು ಮೆರವಣಿಗೆಯನ್ನು ಮುನ್ನಡೆಸುತ್ತದೆ. ಧೋತಿ ಧರಿಸಿದ ಪುರುಷರು ಮತ್ತು ಕೆಲವು ಬ್ರಹ್ಮಚಾರಿಗಳು ಕೆಂಪು ಧ್ವಜಗಳು, ಬೆಂಕಿ ಹತ್ತಿದ ಪಂಜುಗಳನ್ನು ಹಿಡಿದು ಮೆರವಣಿಗೆಯೊಂದಿಗೆ ನಡೆಯುತ್ತಾರೆ. ಭೈರಾಗಿಣಿ ಮಾ ಒಬ್ಬರು ಪಲ್ಲಕ್ಕಿಯ ಜೊತೆಯಲ್ಲೇ ನಡೆಯುತ್ತಾ ದೇವಿಗೆ ಚಾಮರ ಬೀಸುತ್ತಿರುತ್ತಾರೆ.

ಇಡೀ ಮೆರವಣಿಗೆಯ ನಡಿಗೆ ಕೂಡ ಬಹಳ ಭಿನ್ನ. ನಾಲ್ಕು ಹೆಜ್ಜೆ ಮುಂದಿಟ್ಟರೆ ಎರಡು ಹೆಜ್ಜೆ ಹಿಂದೆ ಬರುತ್ತಾ ವಾದ್ಯಗಳ ಬಡಿತದ ಲಯಕ್ಕೆ ಅನುಗುಣವಾಗಿ ಮೆರವಣಿಗೆ ನಿಧಾನವಾಗಿ ಸಾಗುತ್ತದೆ. ಧ್ಯಾನಲಿಂಗ ಮತ್ತು ನಂದಿಯ ಮಧ್ಯೆ ದೇವಿಯ ಆಗಮನವಾದ ಮೇಲೆ ಬೆಂಕಿಯ ನೃತ್ಯ ನಡೆಯುತ್ತದೆ. ಧೋತಿ ಧರಿಸಿದ ಪುರುಷರು ಉರಿಯುತ್ತಿರುವ ಪಂಜುಗಳನ್ನು ಹಿಡಿದು ಸಂಸ್ಕೃತಿ ಮಕ್ಕಳು ಪಠಿಸುವ ಚೈತನ್ಯಯುತವಾದ ಲಯಬದ್ಧವಾದ ಪಠನಕ್ಕೆ ಹೆಜ್ಜೆ ಹಾಕುತ್ತಾ ಧ್ಯಾನಲಿಂಗಕ್ಕೆ ಆರತಿ ಮಾಡುತ್ತಾರೆ. ಮಳೆ ಬರಲಿ, ಬಿಸಿಲಿರಲಿ, ಮೆರವಣಿಗೆ ಮತ್ತು ಉರಿಯುವ ಪಂಜು ಹಿಡಿದು ಆರತಿ ಮಾಡುವುದು ತಪ್ಪುವುದಿಲ್ಲ. ಮೆರವಣಿಗೆ ಮುಗಿಯುತ್ತಿದ್ದಂತೆ ನಂದಿಯ ಮುಂದೆ ಕೈಲಾಸವಾದ್ಯ ತಂಡದ ಅಮೋಘವಾದ, ಉತ್ಸಾಹಭರಿತವಾದ ಲಯಬದ್ಧವಾದ ವಾದ್ಯಗಳ ಬಡಿತಕ್ಕೆ, ಅಲ್ಲಿ ನೆರೆದವರೆಲ್ಲರೂ ಕುಣಿಯದೆ ಇರಲು ಅಸಾಧ್ಯವೆನಿಸುವಂತಹ ಸಂಗೀತ ಕೇಳಿ ಮೈಮರೆತು ಕುಣಿಯುತ್ತಾರೆ. ಆ ದಿನ ರಾತ್ರಿ, ಒಂದು ಗಂಟೆಯವರೆಗೂ ಭೈರವಿ ದೇವಸ್ಥಾನದಲ್ಲಿ ಧ್ಯಾನ, ಭಜನೆ ನಡೆಯುತ್ತಿರುತ್ತದೆ. ಪ್ರತಿ ತಿಂಗಳಿನ ಪೂರ್ಣಿಮೆಯೇ ಹೀಗಾದರೆ, ಆ ಗುರುಪೂರ್ಣಿಮೆಯಂದು ಸದ್ಗುರುಗಳೊಡನೆ ಆನ್‌ಲೈನ್ ಸತ್ಸಂಗವಿದ್ದು, ಸಾಧನಪಾದದ ಪ್ರಾರಂಭಕ್ಕೆ ಇನ್ನಷ್ಟು ಮೆರುಗು ಕೊಟ್ಟಿತ್ತು.

(ಮುಂದುವರಿಯುವುದು)

ಕೋಡ್ ಮಾಡಿ ಎಂದರೇನು ಗೊತ್ತೆ?



ನಮ್ಮಲ್ಲಿ ಎಲ್ಲರೂ ಸಾಕ್ಷರರಾಗಬೇಕು, ಉದ್ಯೋಗಾರ್ಹತೆ ಪಡೆದಿರಬೇಕು, ಅದರ ಜೊತೆಗೆ ಮುಂದೆ ಹೋದಂತೆ ಪ್ರತಿಯೊಬ್ಬರಿಗೂ ಕಂಪ್ಯೂಟರ್ ಬಗೆಗೆ ಸಂಪೂರ್ಣವಾದ ಮಾಹಿತಿಯಿರಬೇಕು. ಕಂಪ್ಯೂಟರ್ ಕೋಡಿಂಗ್ ಎನ್ನುವ ವಿಷಯವನ್ನು ಅಕ್ಷರಗಳನ್ನು ಕಲಿತಂತೆ, ಗಣಿತದ ಮಗ್ಗಿಯನ್ನು ಕಂಠಪಾಠ ಮಾಡಿದಂತೆ ಕಡ್ಡಾಯವಾಗಿ ಕಲಿಯಬೇಕು. ಇದೇ ಕಂಪ್ಯೂಟರ್ ಸಾಕ್ಷರತೆ!

» ವಿಕ್ರಮ ಜೋಶಿ

ಮೂರು ನಾಲ್ಕು ದಶಕಗಳ ಹಿಂದೆ ದೇಶದಾದ್ಯಂತ ಸಾಕ್ಷರತೆಯ ಅಭಿಯಾನವು ನಡೆದಿದ್ದ ನೆನಪು. ಓದಲು, ಬರೆಯಲು ಬರದಿರುವವರನ್ನು ಅನಕ್ಷರಸ್ಥರು ಎಂದು ಘೋಷಿಸಿ, ಅಂತಹವರನ್ನು ರಾತ್ರಿಶಾಲೆಗೆ ಕರೆತಂದು ಓದು ಬರಹ ಕಲಿಸುತ್ತಿದ್ದರು. ಅಷ್ಟೊಂದು ಪರಿಶ್ರಮ ಪಟ್ಟರೂ ಕೂಡ ಇಂದು ನಮ್ಮ ದೇಶದ ಒಟ್ಟೂ ಜನಸಂಖ್ಯೆಯ ಸುಮಾರು 24% ಜನರು ಅನಕ್ಷರಸ್ಥರು. ಅವರಲ್ಲಿ ಬಹಳಷ್ಟು ಮಂದಿ ಮೊಬೈಲ್ ಬಳಸಬಲ್ಲರು, ನೋಟುಗಳನ್ನು ಗುರುತಿಸಬಲ್ಲರು, ಲೆಕ್ಕವನ್ನು ಕೂಡಿಸಿ ಕಳೆಯಬಲ್ಲರು. ಇವರಿಗೆ ಅಕ್ಷರಾಭ್ಯಾಸ ಮಾಡಿಸಲು ಕೆಲವೊಂದು ಸ್ವಯಂಸೇವಕ ಸಂಸ್ಥೆಗಳು ಹಳ್ಳಿ ಹಳ್ಳಿಗೆ ದೇಶದ ಮೂಲೆ ಮೂಲೆಗೆ ಹೋಗಿ ಕೆಲಸ ಮಾಡುತ್ತಿದ್ದಾರೆ.

ಆದರೆ, ಇಂದು ಖಾಸಗಿ ಕಂಪನಿಗಳ ವಿಷಯಕ್ಕೆ ಬಂದಾಗ, ಕೆಲಸ ಪಡೆಯಲು 'ಇಂಗ್ಲಿಷ್ ಬಂದರೆ ಮಾತ್ರ' ಅವರು ಸಾಕ್ಷರರು! ಕಳೆದೆರಡು ಮೂರು ದಶಕಗಳಿಂದ ಭಾರತದಲ್ಲಿ ಇಂಗ್ಲೀಷ್ ಭಾಷೆಯ ಬಳಕೆ ಹಾಗೂ ಸಾಕ್ಷರತೆಯ ಅಗತ್ಯತೆ ಹೆಚ್ಚಿದೆ. ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್‌ಗಳಂತೂ ಸಣ್ಣ ಪುಟ್ಟ ಪಟ್ಟಣಗಳಲ್ಲೂ ಇವೆ. ಇಂಗ್ಲಿಷ್ ಯಾವ ದೇಶದ ಆಡಳಿತ ಭಾಷೆಯಲ್ಲವೋ ಅಂತಹ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲೇ ಅತೀ ಹೆಚ್ಚು ಇಂಗ್ಲೀಷ್ ಮಾತನಾಡುವವರಿದ್ದಾರೆ. ಆದರೂ ನಮ್ಮ ಒಟ್ಟೂ ಜನಸಂಖ್ಯೆಯ ಕೇವಲ 10% ಜನರು ಮಾತ್ರ ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲರು. ಒಮ್ಮೆ ಗಮನಿಸಿ, ನಮ್ಮಲ್ಲಿ 25% ಜನರಿಗೆ ಓದು, ಬರಹ ಬರುವುದಿಲ್ಲ. ಆ ಓದು ಬರಹ ಬರುವ 75% ಜನರಲ್ಲಿ ಕೇವಲ 10% ಜನರು ಮಾತ್ರ ಇಂಗ್ಲೀಷ್ ಬರೆಯಬಲ್ಲರು, ಮಾತನಾಡಬಲ್ಲರು.

ಕಂಪ್ಯೂಟರ್ ಸಾಕ್ಷರತೆ

ಆರ್ಥಿಕ ಬೆಳವಣಿಗೆಗೆ ಸಾಕ್ಷರತೆ ಹಾಗೂ ಉದ್ಯೋಗಶೀಲತೆ ಎರಡೂ ಮುಖ್ಯ. ಇವತ್ತು ನಾವು ರಚನಾಶೀಲ ಕೃತಕ ಬುದ್ಧಿಮತ್ತೆ (ಜೆನ್-ಎಐ) ಯುಗದಲ್ಲಿದ್ದೇವೆ. ಈ ಶತಮಾನವನ್ನು ಭಾರತದ ಶತಮಾನವೆನ್ನಲಾಗುತ್ತಿದೆ. ಹಾಗಿದ್ದರೆ ಈ ಶತಮಾನದಲ್ಲಿ ಜಗತ್ತನ್ನು ಆಳಲು ನಾವು ಆರ್ಥಿಕವಾಗಿ ಸಮೃದ್ಧರಾಗಬೇಕು, ಹಾಗಾಗಲು ನಮ್ಮಲ್ಲಿ ಎಲ್ಲರೂ ಸಾಕ್ಷರರಾಗಬೇಕು, ಉದ್ಯೋಗಾರ್ಹತೆ ಪಡೆದಿರಬೇಕು, ಅದರ ಜೊತೆಗೆ ಮುಂದೆ ಹೋದಂತೆ ಪ್ರತಿಯೊಬ್ಬರಿಗೂ ಕಂಪ್ಯೂಟರ್ ಬಗೆಗೆ ಸಂಪೂರ್ಣವಾದ ಮಾಹಿತಿಯಿರಬೇಕು. ಕಂಪ್ಯೂಟರ್ ಕೋಡಿಂಗ್ ಎನ್ನುವ ವಿಷಯವನ್ನು ಅಕ್ಷರಗಳನ್ನು ಕಲಿತಂತೆ, ಗಣಿತದ ಮಗ್ಗಿಯನ್ನು ಕಂಠಪಾಠ ಮಾಡಿದಂತೆ ಕಡ್ಡಾಯವಾಗಿ ಕಲಿಯಬೇಕು. ಇದೇ ಕಂಪ್ಯೂಟರ್ ಸಾಕ್ಷರತೆ!

ಭಾರತವು ಎಐ ಸೇವೆಗಳನ್ನು ರಫ್ತು ಮಾಡುವ ಬಹುದೊಡ್ಡ ದೇಶವಾಗಲಿದೆ, ಇಡೀ ಜಗತ್ತಿಗೆ ಭಾರತವು ಎಐನ್ನು ಸರಬಾರಾಜು ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಈ ವಾರ ಮುಂಬಯಿಯಲ್ಲಿ ನಡೆದ ಎಐ ಶೃಂಗಸಭೆಯಲ್ಲಿ ಎನ್ವಿಡಿಯಾ ಸಿಇಓ ಹೇಳಿದ್ದಾರೆ. ಹೀಗಾಗಿ ಕಂಪ್ಯೂಟರ್ ಸಾಕ್ಷರತೆಯು ಮುಂದಿನ ಕೆಲ ವರ್ಷಗಳಲ್ಲಿ ಸಾಮಾನ್ಯವಾಗಲಿದೆ. ಈಗ ಇಂಗ್ಲೀಷ್ ಮಾತನಾಡಲು ಯಾರಿಗೆ ಬರುವುದಿಲ್ಲವೋ ಅವರಿಗೆ ಒಳ್ಳೆಯ ಹುದ್ದೆಯ ಕೆಲಸ ಸಿಗುವುದು ಬಹಳ ಕಷ್ಟ. ಹಾಗೆಯೇ ಕಂಪ್ಯೂಟರ್ ನಿರ್ವಹಣೆ ಯಾರಿಗೆ ಬರುವುದಿಲ್ಲವೋ ಅವರಿಗೂ ಕೆಲಸವಿಲ್ಲ. ಹೋಟೆಲ್, ಕಿರಾಣಿ ಅಂಗಡಿ, ಪೆಟ್ರೋಲ್ ಪಂಪ್, ಎಲ್ಲವೂ ಡಿಜಿಟಲ್‌ಮಯವಾಗಿದೆ. ಎಲ್ಲರ ಕೈಯಲ್ಲೂ ಲ್ಯಾಪ್‌ಟಾಪ್ ಇಲ್ಲವೇ ಸ್ಮಾರ್ಟ್‌ಫೋನ್.

ಕಂಪ್ಯೂಟರ್ ಸಾಲದು ಕೋಡಿಂಗ್ ಬೇಕು!

ಇದರಲ್ಲಿ ಒಂದು ಹೆಜ್ಜೆ ಮುಂದೆ ಹೋದಂತೆ ಕೇವಲ ಕಂಪ್ಯೂಟರ್ ಬಳಕೆಯನ್ನು ಕಲಿತರೆ ಸಾಲದು ಕೋಡಿಂಗ್ ಕೂಡ ಕಲಿಯುವುದು ಬಹಳ ಮುಖ್ಯವಾಗುತ್ತದೆ. ಕೆಲಸ ಸಿಗಬೇಕು ಅಂದರೆ ಕೋಡ್ ಬರೆಯಲು ಬರಬೇಕು, ಕನಿಷ್ಠ ಪಕ್ಷ ಅದೇನು ಎಂಬುದಾದರೂ ಗೊತ್ತಿರಬೇಕು. ಇದರರ್ಥ ಎಲ್ಲರೂ ಕಂಪ್ಯೂಟರ್ ಇಂಜಿನಿಯರ್ ಆಗಬೇಕು ಎಂದಲ್ಲ, ಅಥವಾ ಡೆವಲಪರ್ಸ್ (ಸಾಫ್ಟ್‌ವೇರ್ ತಯಾರಿಕೆಯಲ್ಲಿ ಕಂಪ್ಯೂಟರ್ ಪ್ರೋಗ್ರಾಮ್ ಬರೆಯುವವರು) ಆಗಬೇಕಿಲ್ಲ. ಕೋಡ್ ಅಂದರೇನು? ಕಂಪ್ಯೂಟರ್ ಜೊತೆ ಅದರದ್ದೇ ಆದ ಭಾಷೆಯಲ್ಲಿ ವ್ಯವಹರಿಸುವುದು ಹೇಗೆ? ಇತ್ಯಾದಿ ಮೂಲಭೂತ ವಿಷಯಗಳನ್ನು ತಿಳಿದಿಟ್ಟುಕೊಂಡಿರಬೇಕು.

ಇಂದು ಪೈಥಾನ್ ಎನ್ನುವ ಕಂಪ್ಯೂಟರ್ ಭಾಷೆಯನ್ನು ಕಲಿಯುವುದು ಸುಲಭ. ಜರ್ಮನ್, ಫ್ರೆಂಚ್, ಇತರೆ ಭಾಷೆಗಳನ್ನು ಕಲಿತಂತೆ! ಮೈಕ್ರೋಸಾಫ್ಟ್ ಕಂಪನಿಯ ಸಂಸ್ಥಾಪಕರಾದ ಬಿಲ್ ಗೇಟ್ಸ್ ಐದು ವರ್ಷಗಳ ಹಿಂದೆಯೇ – ಕಂಪ್ಯೂಟರ್ ಕೋಡಿಂಗ್ ಕಲಿತರೆ ಎಲ್ಲರಿಗೂ ಒಳ್ಳೆಯದು – ಎನ್ನುವ ಮಾತನ್ನು ಹೇಳಿದ್ದರು. 'ಇವತ್ತಿನ ಜೆನ್ ಎಐ ಯುಗದಲ್ಲಿ ಎಲ್ಲರೂ ಕಂಪ್ಯೂಟರ್ ಪ್ರೋಗ್ರಾಮರ್ಸ್, ಇದು ಎಐ ಚಮತ್ಕಾರ' ಎಂದು ಇತ್ತೀಚೆಗೆ ಎನ್ವಿಡಿಯಾ ಕಂಪನಿಯ ಸಂಸ್ಥಾಪಕರು ಹಾಗೂ ಸಿಇಓ ಆಗಿರುವ ಜೆನ್ಸನ್ ಹೂವ್ಯಾಂಗ್ ಹೇಳಿದ್ದಾರೆ.

ಎಲ್ಲಾ ವಿದ್ಯಾರ್ಥಿಗಳಿಗೂ ಬೇಕು

ಇದರಿಂದ ನಮಗೆ ಅರ್ಥವಾಗುವುದೇನೆಂದರೆ ಮುಂದೆ ಹೋದಂತೆ ಕಂಪ್ಯೂಟರ್ ಪ್ರೋಗ್ರಾಮ್ ಎನ್ನುವುದು ಒಂದು ವಿಶೇಷ ವಿಷಯವಾಗಿರುವುದಿಲ್ಲ ಅಥವಾ ಇವರಷ್ಟೇ ಕಲಿಯಬೇಕು ಎನ್ನುವ ಬಂಧನವಿರುವುದಿಲ್ಲ. ಎಲ್ಲರಿಗೂ ಪ್ರೋಗ್ರಾಮಿಂಗ್‌ನ್ನು, ಒಂದು ಭಾಷೆಯನ್ನು ಕಲಿತಂತೆಯೇ ಕಲಿಯಬೇಕಾಗುತ್ತದೆ. ಕಲೆ, ವಿಜ್ಞಾನ, ವಾಣಿಜ್ಯದ ವಿದ್ಯಾರ್ಥಿಯಾಗಿರಲಿ, ಅವರ ವಿಷಯದಲ್ಲಿ ಆಳಕ್ಕೆ ಅಧ್ಯಯನ ಮಾಡುವುದರ ಜೊತೆಗೆ, ಪೂರಕವಾಗಿ ಕೋಡಿಂಗ್ ಕೂಡ ಕಲಿತಿರಬೇಕು. ಇಂದು ಕೆಲವು ಹೆಸರಾಂತ ಖಾಸಗಿ ಶಾಲೆಗಳಲ್ಲಿ ಕೋಡಿಂಗ್‌ನ್ನು ಪ್ರಾಥಮಿಕ ಹಂತದಲ್ಲಿಯೇ ಕಲಿಸುತ್ತಾರೆ. ಮುಂದೆ ಅವರಿಗೆ ಉತ್ತಮ ಉದ್ಯೋಗಾವಕಾಶಗಳು ಹೆಚ್ಚುತ್ತಾ ಹೋಗುತ್ತವೆ. ಆದರೆ ಹಳ್ಳಿಗಳಲ್ಲಿ ಕಲಿಯುತ್ತಿರುವ ಮಕ್ಕಳ ಗತಿಯೇನು? ಬಡವರ ಮಕ್ಕಳಿಗೆ ಈ ಕೋಡಿಂಗ್ ಕಲಿಸಿಕೊಡುವವರಾರು? ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೂ ಕೋಡಿಂಗ್ ಕಲಿಸಬೇಕು ಅಂದರೆ ಅದು ಹೇಗೆ ಸಾಧ್ಯ? ಇವುಗಳಿಗೆಲ್ಲ ಉತ್ತರವು 'ಕೋಡ್ ಮಾಡಿ' ಎನ್ನುವ ಒಂದು ನೂತನ ವಿಚಾರ.

ಕೋಡ್ ಮಾಡಿ ಹುಟ್ಟಿದ್ದು ಹೇಗೆ?

ಗೀತಾ ಎನ್ನುವ ಹುಡುಗಿ ಬೆಂಗಳೂರಿನ ಹೊರವಲಯದ ಸರಕಾರಿ ಪ್ರೌಢ ಶಾಲೆಯೊಂದರಲ್ಲಿ ಓದುತ್ತಿದ್ದಾಳೆ. ವಿಜ್ಞಾನಕ್ಕೆ ಸಂಬಂಧಿಸಿದ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಗೆದ್ದಿದ್ದಾಳೆ. ಕಂಪ್ಯೂಟರ್ ಆಸಕ್ತಿಯ ವಿಷಯ. ಸಾಫ್ಟ್‌ವೇರ್, ಹಾರ್ಡ್‌ವೇರ್, ಕೋಡಿಂಗ್ ಇವುಗಳ ಕುರಿತು ತುಂಬಾ ಜಿಜ್ಞಾಸೆಯನ್ನು ಹೊಂದಿದ್ದಾಳೆ. ಆದರೆ ಅವಳಿಗೆ ತೃಪ್ತಿಯಾಗುವಷ್ಟು, ಜ್ಞಾನದ ದಾಹವು ತಣಿಯುವಷ್ಟು ಕಲಿಸುವವರು ಅವಳ ಶಾಲೆಯಲ್ಲಿ ಇಲ್ಲ. ಅಂತರ್ಜಾಲದಲ್ಲಿ, ಯೂಟ್ಯೂಬ್‌ಗಳಲ್ಲಿ ಸಾಮಗ್ರಿಗಳು ಇದ್ದರೂ ಅವೆಲ್ಲಾ ಇಂಗ್ಲೀಷ್‌ನಲ್ಲಿದೆ. ಕನ್ನಡದಲ್ಲಿ ಇದನ್ನು ಕಲಿಸುವವರು ಯಾರು? ಮಲ್ಲೇಶ ಎನ್ನುವಾತ ಅದೇ ಶಾಲೆಯಲ್ಲಿ ಓದುತ್ತಿರುವ ಹುಷಾರಿ ಹುಡುಗ. ಆತನಿಗೆ ಕಂಪ್ಯೂಟರ್ ಅಂದರೆ ಪ್ರಾಣ. ತಾನೇ ಎಲ್ಲೆಲ್ಲಿಂದಲೋ ನೋಡಿ, ಕೇಳಿ ಅಲ್ಪಸ್ವಲ್ಪ ಕಲಿತಿದ್ದಾನೆ. ಒಳ್ಳೆಯ ಮಾರ್ಗದರ್ಶನ ಸಿಗದೇ ಇರುವುದರಿಂದ ಅವನಲ್ಲಿಯ ಕುತೂಹಲವೆಲ್ಲವೂ ವಿಡಿಯೋ ಗೇಮ್ ಕಡೆಗೆ ಕೇಂದ್ರಿಕೃತವಾಗುತ್ತಿದೆ.

ಬೆಂಗಳೂರಿನ ಅಂತರಾಷ್ಟ್ರೀಯ ಶಾಲೆಯ ಹನ್ನೆರಡನೆಯ ತರಗತಿಯ ವಿಜ್ಞಾನ ವಿದ್ಯಾರ್ಥಿನಿ ನಿರುಪಮಾ (ಹೆಸರು ಬದಲಿಸಲಾಗಿದೆ). ಹನ್ನೆರಡನೆಯ ವಯಸ್ಸಿನಲ್ಲಿಯೇ ಆಕೆ ಕೋಡಿಂಗ್ ಕಲಿಯಲು ಶುರುಮಾಡಿದ್ದಳು. ಅವಳಿಗೆ ಕೋಡಿಂಗ್‌ನಲ್ಲಿ ಸಿಗುತ್ತಿದ್ದ ಖುಷಿ, ಜ್ಞಾನ, ಅವಕಾಶಗಳ ಅವಲೋಕನ ಒಂದು ಹೊಸ ಜಗತ್ತನ್ನೇ ತೆರೆದುಕೊಟ್ಟಿತ್ತು. ಒಮ್ಮೆ ಅವಳು ಸರ್ಕಾರಿ ಶಾಲೆಗೆ ಭೇಟಿ ಕೊಟ್ಟಾಗ ಅಲ್ಲಿರುವ ಗೀತಾ, ಮಲ್ಲೇಶನ ತರಹದ ಮುದ್ದು ಮಕ್ಕಳ ಕಣ್ಣುಗಳಲ್ಲಿರುವ ಕಂಪ್ಯೂಟರ್ ಜಗತ್ತಿನ ಕನಸುಗಳನ್ನು ಗಮನಿಸಿದಳು. ತನಗೆ ಸಿಕ್ಕ ಅವಕಾಶ, ಸಕಾರಾತ್ಮಕ ಬೆಳವಣಿಗೆಯು ಎಲ್ಲಾ ವರ್ಗದ ಮಕ್ಕಳಿಗೂ ಸಿಗಬೇಕು ಎಂದೆನಿಸಿತು ನಿರುಪಮಾಳಿಗೆ. ಕನ್ನಡದಲ್ಲಿಯೇ ಕೋಡಿಂಗ್ ಕಲಿಸಿದರೆ ಇವರಿಗೆ ಬೇಗ ಕಲಿಯಲು ಸಾಧ್ಯವಾಗುತ್ತದೆ ಎನ್ನುವುದನ್ನು ಮನಗಂಡಳು. ಮನೆಯಲ್ಲಿ ಪಾಲಕರ ಜೊತೆ, ಕಾಲೇಜಿನಲ್ಲಿ ಶಿಕ್ಷಕರ ಜೊತೆ, ಸಹಪಾಠಿಗಳ ಜೊತೆ ಚರ್ಚಿಸಿದಳು. ಆ ಚಿಂತನ ಮಂಥನದಲ್ಲಿ ಹುಟ್ಟಿದ್ದೇ 'ಕೋಡ್ ಮಾಡಿ' ಎನ್ನುವ ಯೋಜನೆ!

'ಕೋಡ್ ಮಾಡಿ' ಎನ್ನುವುದು ಕನ್ನಡದಲ್ಲಿ ಮಕ್ಕಳಿಗೆ ಕೋಡಿಂಗ್ ಕೌಶಲ್ಯವನ್ನು ಕಲಿಸುವ ಒಂದು ಬಗೆ. ಪೈಥಾನ್ ಎನ್ನುವ ಕಂಪ್ಯೂಟರ್ ಭಾಷೆಯನ್ನು ಅಥವಾ ಇನ್ನಾವುದೇ ಭಾಷೆಯನ್ನು ತೆಗೆದುಕೊಂಡರೂ ಅದರ ಕೋಡಿಂಗ್ ಇಂಗ್ಲೀಷ್‌ನಲ್ಲಿಯೇ ಆಗಬೇಕು. ಭಾಷೆ, ಸಿಂಟೆಕ್ಸ್, ಅಲ್ಗೋರಿದಮ್, ಎಲ್ಲವೂ ಇಂಗ್ಲೀಷ್. ಆದರೆ ಕೋಡ್ ಹೇಗೆ ಮಾಡಬೇಕು, ಅದರ ಹಿಂದಿರುವ ಸಿದ್ಧಾಂತಗಳೇನು, ಕೋಡಿಂಗ್ ತಂತ್ರಜ್ಞಾನದ ಪರಿಕಲ್ಪನೆಗಳು ಯಾವವು, ಮೊದಲಾದವುಗಳನ್ನು ಅಪ್ಪಟ ಕನ್ನಡದಲ್ಲಿ ಮಕ್ಕಳಿಗೆ ತಿಳಿಯುವಂತೆ ಶಾಲೆಯ ಕೊಠಡಿಯಲ್ಲಿ ಬೋರ್ಡಿನ ಮೇಲೆ ವಿವರಿಸುತ್ತಾ ಕಲಿಸುವುದೇ 'ಕೋಡ್ ಮಾಡಿ' ಎನ್ನುವ ವಿಚಾರ. ಮಕ್ಕಳನ್ನು ಆಟದ ಮೂಲಕ, ಗುಂಪಿನ ಚರ್ಚೆಗಳ ಮೂಲಕ ಹೆಚ್ಚು ಹೆಚ್ಚು ಈ ಅಧ್ಯಯನದಲ್ಲಿ ಪಾಲ್ಗೊಳ್ಳುವಂತೆ ಮಾಡುವುದೂ ಇದರ ವಿಶೇಷತೆ. ಕೊಠಡಿಯಲ್ಲಿ ಕಲಿಸುವುದರ ಜೊತೆಗೆ ಹೊರಗಡೆ ಆಕಾಶದ ಕೆಳಗೆ ಆಡಬಲ್ಲ ಅದರಿಂದ ಕೋಡಿಂಗ್ ಕಲಿಯಬಲ್ಲ ಹಲವಾರು ಆಟಗಳನ್ನು ರೂಪಿಸಲಾಗಿದೆ. ಆ ಆಟಗಳ ಮೂಲಕ ಕೆಲವೊಂದು ಕ್ಲಿಷ್ಟಕರವಾದ ಪರಿಕಲ್ಪನೆಯನ್ನು ಕಲಿಸಲಾಗುತ್ತದೆ.

ಆಟದ ಜತೆ ಕೋಡಿಂಗ್

ಇದನ್ನೆಲ್ಲ ನೆಡೆಸಿಕೊಡುವವರು ನಾಲ್ಕೈದು ಸ್ವಯಂ ಪ್ರೇರಿತ ವಿದ್ಯಾರ್ಥಿಗಳ ತಂಡ. ಅವರು ಬೆಂಗಳೂರಿನ ಹೊರವಲಯ ಸರಕಾರಿ ಕನ್ನಡ ಶಾಲೆಗಳ ಅಧ್ಯಾಪಕರನ್ನು ಭೇಟಿಯಾಗಿ, 'ಕೋಡ್ ಮಾಡಿ' ಯೋಜನೆಯ ಬಗ್ಗೆ ವಿವರಿಸಿ, ಮೂರು ದಿನಗಳ ಒಂದು ಕಾರ್ಯಾಗಾರವನ್ನು ನಡೆಸಿಕೊಡುತ್ತಾರೆ. ಮೂರು ದಿನದ ತರಗತಿಯು ಶುರುವಾಗುವುದು ಮಕ್ಕಳ ಇಷ್ಟದ ಆಟದ ಜೊತೆ. ನಂತರ ಕೋಡಿಂಗ್‌ಗೆ ಸಂಬಂಧಿಸಿದ ಒಂದೊಂದೇ ವಿಷಯವನ್ನು ಮಕ್ಕಳಿಗೆ ಹೇಳಿ ಕೊಡಲಾಗುತ್ತದೆ. ಪ್ರತಿ ಕಾರ್ಯಗಾರದಲ್ಲೂ 20-25 ಮಕ್ಕಳು ಇರುತ್ತಾರೆ. ಈ ಶಿಬಿರದಲ್ಲಿ 'ಪೈಥಾನ್' ಎನ್ನುವ ಕಂಪ್ಯೂಟರ್ ಭಾಷೆಯ ಬೇಸಿಕ್ಸ್‌ನ್ನು ಕಲಿಸುತ್ತಾರೆ. ಮೂರು ದಿನದ ಕಾರ್ಯಾಗಾರವು ಸ್ಪರ್ಧೆಯ ಮೂಲಕ ಮುಕ್ತಾಯಗೊಳ್ಳುತ್ತದೆ. ಆ ಸ್ಪರ್ಧೆಯಲ್ಲಿ ಮಕ್ಕಳು ನಿಜ ಜೀವನಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ಸಮಸ್ಯೆಯನ್ನು ತಗೆದುಕೊಂಡು ಕೋಡಿಂಗ್ ಮಾಡಬೇಕು. ಕಲಿಸಿದ್ದು ಮರೆಯಬಾರದು ಎಂದು ಅವರಿಗೆ ಕನ್ನಡದಲ್ಲಿಯೇ ಕೋಡಿಂಗ್ ಕುರಿತು ರಚಿಸಿದ ನೋಟ್ಸ್ ಕೊಡಲಾಗುತ್ತದೆ.

ಈ ಕಾರ್ಯಾಗಾರ ಮುಗಿದ ಮೇಲೆ ಕೋಡಿಂಗ್ ನಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗೆ ಕೋಡಿಂಗ್ ಕುರಿತಾದ ಮೂಲಭೂತ ತಿಳುವಳಿಕೆ ಬಂದಿರುತ್ತದೆ. ಈಗಾಗಲೇ ಬೆಂಗಳೂರಿನ ಸೊಣ್ಣಪ್ಪನ ಹಳ್ಳಿಯ ಶಾಲೆಯಲ್ಲಿ ಈ ತರಹದ ಕಾರ್ಯಾಗಾರ ನಡೆದಿದೆ. ಹಾಗೆಯೇ ಇನ್ನೂ ಹಲವಾರು ಕಡೆ ವಾರಾಂತ್ಯದಲ್ಲಿ ಶಿಬಿರವನ್ನು ನಡೆಸಿದ್ದಾರೆ. ನಿಮ್ಮ ಶಾಲೆಗೂ ಇವರನ್ನು ಆಮಂತ್ರಿಸಬೇಕು ಅಥವಾ ಇದರ ಕುರಿತು ಹೆಚ್ಚಿನ ಮಾಹಿತಿ ಬೇಕು ಅಂದರೆ 'codemadi07@gmail.com' ಎನ್ನುವ ಇಮೇಲ್ ವಿಳಾಸವನ್ನು ಸಂಪರ್ಕಿಸಬಹುದು.

ಆಟ, ಪಾಠ, ಚಿತ್ರಕಲೆಯ, ಕಾವ್ಯ, ಕಥೆ, ನಾಟಕ, ಸಂಗೀತ ಎಲ್ಲದರ ಮೂಲಕ ಕನ್ನಡ ಭಾಷೆಯನ್ನೇ ಮಾಧ್ಯಮವಾಗಿಟ್ಟುಕೊಂಡು ಇಂಗ್ಲೀಷಿನ ಕೋಡಿಂಗ್ ಕಲಿಸೋಣ, ಕಲಿಯೋಣ. ಕೋಡಿಂಗ್ ಎನ್ನುವುದು ಒಂದು ಭಾಷೆಯ ಹಾಗೆ. 'ನಾನು ಯಾಕೆ ಕಲಿಯಬೇಕು?' ಎನ್ನುವ ಪ್ರಶ್ನೆಯನ್ನು ಕೇಳುವುದಕ್ಕಿಂತ 'ನಾನು ಯಾಕೆ ಕಲಿಯಬಾರದು?' ಎನ್ನುವ ಪ್ರಶ್ನೆಯನ್ನು ಕೇಳಬೇಕು. ಮುಂದಿನ ದಿನಗಳಲ್ಲಿ ಕೋಡಿಂಗ್ ಗೊತ್ತಿಲ್ಲದೇ ಇರುವವರು, ಅನಕ್ಷರಸ್ಥರ ಸಾಲಿಗೆ ಸೇರಿದರೂ ಸೇರಬಹುದು! ಈಗಿನ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಕನಿಷ್ಠ ಕೋಡಿಂಗ್ ಎಂದರೇನು ಎಂಬುದನ್ನಾದರೂ ನಮ್ಮ ಮಕ್ಕಳು ಮತ್ತು ನಾವು ಕಲಿಯಲೇ ಬೇಕು. ಕೋಡಿಂಗ್ ಕಲಿಯೋಣ, ಕನ್ನಡವನ್ನು ಬೆಳೆಸೋಣ. ಕನ್ನಡದ ಹಣತೆಯನ್ನು ಕೋಡಿಂಗ್ ಎಂಬ ನೆಣೆಯ ಮೂಲಕ ಬೆಳಗಿಸೋಣ. ನಮ್ಮ ನಾಡಿನ ಮಕ್ಕಳು ಮುಂದಿನ ಭವಿಷ್ಯದ ದಾರಿದೀಪವಾಗಲಿ ಎಂದು ಬಯಸೋಣ.

ನಿಮ್ಮಿಬ್ಬರ ಮಧ್ಯೆ ನನ್ನನ್ಯಾಕೆ ಎಳೆದು ತರುತ್ತೀರಿ?

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ವಿ.ಜಿ.ಮನೋಹರ, ಶಿವಮೊಗ್ಗ

- **ಭಟ್ರೇ, ನನಗೆ ಮೂವತ್ತೆರಡು ವರ್ಷ ವಯಸ್ಸು. ಖಾಸಗಿ ಕಂಪನಿಯಲ್ಲಿ ಉದ್ಯೋಗ. ನನಗೆ ಮದುವೆಯಾಗಿ ಇಬ್ಬರು ಮಕ್ಕಳು. ಜೀವನದಲ್ಲಿ ಬಹಳ ಕಷ್ಟ ಅನುಭವಿಸಿದ್ದೇನೆ. ನನ್ನ ಸಮಸ್ಯೆ ನನ್ನ ಸ್ನೇಹಿತನ ಜತೆಗಿನ ಸಂಬಂಧಕ್ಕೆ ಸಂಬಂಧಿಸಿದ್ದು. ನಾನು ಮತ್ತು ನನ್ನ ಸ್ನೇಹಿತ ಆಗಾಗ ವಾದ-ಚರ್ಚೆ ಮಾಡುತ್ತಿರುತ್ತೇವೆ. ಇತ್ತೀಚೆಗೆ ನಾನು, 'ನಮ್ಮ ಬದುಕು ಬೇರೆಯವರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅವಲಂಬಿತವಾಗಿರುತ್ತವೆ' ಎಂದು ವಾದಿಸಿದೆ. ಆ ಮಾತನ್ನು ಆತ ಒಪ್ಪಲಿಲ್ಲ. ಈ ವಿಷಯದ ಬಗ್ಗೆ ನಮ್ಮಿಬ್ಬರ ಮಧ್ಯೆ ಬಹಳ ಹೊತ್ತು ವಾದ, ಬಿಸಿಬಿಸಿ ಚರ್ಚೆಯಾಯಿತು. ನನ್ನ ಸ್ನೇಹಿತನಿಗೆ ಹೇಗೆ ತಿಳಿ ಹೇಳುವುದು, ಗೊತ್ತಾಗದೇ ಚಡಪಡಿಸುತ್ತಿದ್ದೇನೆ. ವಿಶ್ವೇಶ್ವರ ಭಟ್ಟರನ್ನು ಕೇಳುತ್ತೇನೆ, ಅವರು ಹೇಳಿದ ಮೇಲಾದರೂ ನೀನು ಒಪ್ಪಿಕೊಳ್ಳುತ್ತೀಯ ಎಂದು ಹೇಳಿದ್ದೇನೆ. ದಯವಿಟ್ಟು ನನ್ನ ವಾದವನ್ನು ಸಮರ್ಥಿಸಿಕೊಳ್ಳುವುದು ಹೇಗೆ?**

-ಮನೋಹರ ಅವರೇ, ನಿಮ್ಮಿಬ್ಬರ ಮಧ್ಯೆ ನನ್ನನ್ನು ಯಾಕೆ ಎಳೆದು ತಂದಿರಿ? ಇಷ್ಟು ಸಣ್ಣ ವಿಷಯಕ್ಕೆ ನೀವ್ಯಾಕೆ ಬಿಸಿಬಿಸಿ ಮಾತು, ಚರ್ಚೆಗೆ ಇಳಿಯುತ್ತೀರಿ? ಯಾವತ್ತೂ ಸ್ನೇಹ-ಸಂಬಂಧ ಮುಖ್ಯ. ಪ್ರಮುಖವಲ್ಲದ ಚರ್ಚೆಯಲ್ಲಿ ನಿರತರಾಗಿ ಸಂಬಂಧ ಕಳೆದುಕೊಳ್ಳಬಾರದು. ವಾದದಲ್ಲಿ ಗೆದ್ದರೆ ನಿಮಗೆ ನಿಮಗೆ ನಿಮ್ಮ ಸ್ನೇಹಿತ ಕಿರೀಟ ಇಡ್ತಾನಾ? ಅಂಥ ವಾದದಿಂದ ಸಂಬಂಧಕ್ಕೆ ಧಕ್ಕೆಯಾದರೆ ನಿಮಗೇ ಹಾನಿಯಲ್ಲವೇ?

ಇಲ್ಲಿ ನಿಮ್ಮ ಪಾಯಿಂಟಿಗೆ ಬರೋಣ. ನೀವು ಹೇಳಿದ್ದೆ ಸಾರ್ವಕಾಲಿಕ ಸತ್ಯವಲ್ಲ. ಕೆಲವು ಸನ್ನಿವೇಶದಲ್ಲಿ ನಿಮ್ಮ ಮಾತನ್ನು ಒಪ್ಪಬಹುದು. ಅದನ್ನು 'ಇದಮಿತ್ಥಮ್' ಎಂದು ಭಾವಿಸುವಂತಿಲ್ಲ. ನಿಜ, ನಮ್ಮ ಬದುಕು ಬೇರೆಯವರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅವಲಂಬಿತವಾಗಿರುತ್ತವೆ ಎಂಬುದನ್ನು ಒಪ್ಪಬಹುದು. ಹೀಗೆ ಹೇಳುವಾಗ ನನಗೊಂದು ಹಾಸ್ಯ ಪ್ರಸಂಗ ನೆನಪಿಗೆ ಬರುತ್ತಿದೆ.

ಒಮ್ಮೆ ಬಾಸ್ ತನ್ನ ಸೆಕ್ರೆಟರಿಯನ್ನು ಕರೆದು, 'ಈ ವೀಕೆಂಡ್ ಬಿಜಿನೆಸ್ ಟ್ರಿಪ್ ನಿಮಿತ್ತ ಮಾರಿಷಸ್‌ಗೆ ಹೋಗೋಣ, ರೆಡಿ ಆಗು' ಎಂದು ಹೇಳಿದ. ಸೆಕ್ರೆಟರಿ ತನ್ನ ಗಂಡನಿಗೆ ಫೋನ್ ಮಾಡಿ, 'ನಾನು ಬಾಸ್ ಜತೆಗೆ ಬಿಜಿನೆಸ್ ಟ್ರಿಪ್‌ಗಾಗಿ ಒಂದು ವಾರ ಮಾರಿಷಸ್ ಗಾಗಿ ಹೋಗುತ್ತಿದ್ದೇವೆ. Take care off yourself ಎಂದಳು.

ಸೆಕ್ರೆಟರಿ ಗಂಡ ತನ್ನ ಗರ್ಲ್‌ಫ್ರೆಂಡಿಗೆ ಫೋನ್ ಮಾಡಿ, 'ನನ್ನ ಹೆಂಡತಿ ಒಂದು ವಾರ ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದಾಳೆ. ನೀನು ನನ್ನ ಮನೆಗೆ ಬಾ, ಮಜಾ ಮಾಡೋಣ' ಎಂದ. ಗರ್ಲ್ ಫ್ರೆಂಡ್ ತಾನು ಟ್ಯೂಷನ್ ನೀಡುವ ಹುಡುಗನಿಗೆ ಫೋನ್ ಮಾಡಿ, 'ಈ ವಾರವಿಡೀ ಟ್ಯೂಷನ್ ಇಲ್ಲ' ಎಂದು ಹೇಳಿದಳು.

ಆ ಹುಡುಗ ತನ್ನ ಅಜ್ಜನಿಗೆ ಫೋನ್ ಮಾಡಿ, 'ಈ ವಾರ ನಾವಿಬ್ಬರೂ ಎಲ್ಲಿಗಾದರೂ ಟೂರ್ ಹೋಗೋಣ, ಒಂದು ವಾರ ನನಗೆ ಟ್ಯೂಷನ್ ಇಲ್ಲ' ಎಂದ. ಅಜ್ಜ ತನ್ನ ಸೆಕ್ರೆಟರಿಗೆ ಫೋನ್ ಮಾಡಿ, 'ಮಾರಿಷಸ್ ಬಿಜಿನೆಸ್ ಟ್ರಿಪ್ ಕ್ಯಾನ್ಸಲ್ ಮಾಡಿದ್ದೇನೆ. ನಾನು ಈ ವಾರ ನನ್ನ ಮೊಮ್ಮಗನ ಜತೆ ಕಳೆಯಬೇಕು ಎಂದು ನಿರ್ಧರಿಸಿದ್ದೇನೆ' ಎಂದು ತಿಳಿಸಿದ.

ಸೆಕ್ರೆಟರಿ ತನ್ನ ಗಂಡನಿಗೆ ಫೋನ್ ಮಾಡಿ, 'ನನ್ನ ಮಾರಿಷಸ್ ಪ್ರವಾಸ ರದ್ದಾಗಿದೆ' ಎಂದು ತಿಳಿಸಿದಳು. ಅವಳ ಗಂಡ ತನ್ನ ಗರ್ಲ್ ಫ್ರೆಂಡಿಗೆ ಫೋನ್ ಮಾಡಿ, 'ಸಾರಿ ಕಣೆ, ನನ್ನ ಪತ್ನಿ ಪ್ರವಾಸ ರದ್ದಾಗಿದೆ. ಹೀಗಾಗಿ ನೀನು ಮನೆಗೆ ಬರುವುದು ಬೇಡ' ಎಂದ. ಗರ್ಲ್ ಫ್ರೆಂಡ್ ತನ್ನ ಟ್ಯೂಷನ್ ವಿದ್ಯಾರ್ಥಿಗೆ ಫೋನ್ ಮಾಡಿ, 'ನೀನು ನಾಳೆಯಿಂದ ಟ್ಯೂಷನ್‌ಗೆ ಬರಬೇಕು' ಎಂದು ತಿಳಿಸಿದಳು. ಆ ಹುಡುಗ ಅಜ್ಜನಿಗೆ ಫೋನ್ ಮಾಡಿ, 'ಸಾರಿ ತಾತಾ, ನಾನು ಟ್ಯೂಷನ್ ಗೆ ಹೋಗಲೇಬೇಕಾಗಿದೆ' ಎಂದು ತಿಳಿಸಿದ.

ಆಗ ತಾತ ತನ್ನ ಸೆಕ್ರೆಟರಿಗೆ ಫೋನ್ ಮಾಡಿ 'ಮಾರಿಷಸ್‌ಗೆ ಹೋಗೋಣ, ರೆಡಿಯಾಗು' ಎಂದು ತಿಳಿಸಲು ನಿರ್ಧರಿಸಿದ.... ಹಾಂ.. ಈ ಪ್ರಸಂಗವನ್ನು ನಿಮ್ಮ ಸ್ನೇಹಿತನಿಗೆ ಹೇಳಿ, ನಿಮ್ಮ ವಾದವನ್ನು ಮುಕ್ತಾಯಗೊಳಿಸಬಹುದು.

ಕ್ಷಮಿತಾ, ಕುಶಾಲನಗರ

- **ಭಟ್ರೇ, ಬೆಳಗ್ಗೆ ಬೇಗ ಏಳುವುದನ್ನು ರೂಢಿ ಮಾಡಿಕೊಳ್ಳುವೆದು ಹೇಗೆ, ಶರ್ಟ್ ಗುಂಡಿ ಹೇಗೆ ಹಾಕಬೇಕು, ಹುಡುಗಿಯರ ಮೊಬೈಲ್ ಪೌಚ್ ಹೇಗಿರಬೇಕು... ಇಂತಹ ಮೊದಲ ಬೆಂಚಿನ ಹುಡುಗರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಕೂತರೆ ಜನ ಈ ಕಾಲಂ ಓದುತ್ತಾರೆ ಅನಿಸುತ್ತಾ?**

-ಕ್ಷಮಿತಾ ಅವರೇ, ಇದು ಓದುಗರು ದೈನಂದಿನ ಜೀವನದಲ್ಲಿ ಎದುರಿಸುವ ಸಾಮಾನ್ಯ ಪ್ರಶ್ನೆ, ಸಂದೇಹಗಳಿಗೆ, ಸಮಾಧಾನ ನೀಡುವ ಪ್ರಶ್ನೋತ್ತರ ಅಂಕಣ. ಅದಕ್ಕೆ ನಾನು ಈ ಅಂಕಣಕ್ಕೆ 'ಸತಾಯಿಸುವ ಪ್ರಶ್ನೆಗಳಿಗೆ ಸಾಂತ್ವನದ ಉತ್ತರ' ಎಂಬ ಟ್ಯಾಗ್ ಲೈನ್ ನೀಡಿದ್ದೇನೆ. ಇಲ್ಲಿ ತೀರಾ ಗಹನವಾದ ಚರ್ಚೆ ನಡೆಯುವುದಿಲ್ಲ, ಅದು ಇದರ ಆಶಯವೂ ಅಲ್ಲ. ಕೆಲವು ಗಂಭೀರ ಸ್ವರೂಪದ ಪ್ರಶ್ನೆಗಳೂ ಇರುತ್ತವೆ. ಜಟಿಲವೆನಿಸುವ ಸಮಸ್ಯೆಗಳನ್ನು ಓದುಗರು ಹಂಚಿಕೊಂಡಿರುತ್ತಾರೆ. ನಾನು ಅವುಗಳಿಗೆ ತೀರಾ ಸರಳವಾದ, ಆದರೆ ಸಮಾಧಾನ ನೀಡುವ ಉತ್ತರಗಳನ್ನು ತಿಳಿ ಹಾಸ್ಯದ ಮೂಲಕ ನೀಡುತ್ತೇನೆ. ಅಷ್ಟಕ್ಕೂ ನಾನೇನು ಮನಶ್ಶಾಸ್ತ್ರಜ್ಞ ಅಲ್ಲ. ಇದರಲ್ಲಿ ಪ್ರಶ್ನೆ ಕೇಳದವರಿಗೂ ಒಂದಷ್ಟು ಖುಷಿ, ನೆಮ್ಮದಿ ಸಿಗಬೇಕು, ಹಗುರವೆನಿಸುವ, ಹಿತವೆನಿಸುವ ಓದಾಗಬೇಕು ಎಂಬ ಸಣ್ಣ ಆಶಯವೂ ಇದೆ.

'ಈ ಅಮೂರ್ತವಾದ, ಸಂಕೀರ್ಣ ಜಗತ್ತಿನಲ್ಲಿ, ಪರಕೀಯತೆಯನ್ನು ನಮ್ಮ ಮಾನಸಿಕ ಸ್ತರದ ಔನ್ನತ್ಯೀಕರಣದ ಬಾಹ್ಯ ಪ್ರಪಂಚದ ಪರಿಧಿಯಲ್ಲಿ, ಪರಾಕಾಷ್ಠೆಯ ಬಿಂಬದಲ್ಲಿ ಸಂಕೀರ್ಣತೆಯನ್ನು ಹೊಡೆದು ಹಾಕಿ ಮನುಷ್ಯತ್ವದ ಖಾನೇಷುಮಾರಿ ಸಹಜತೆಯನ್ನು ನಮ್ಮೊಳಗೇ ಅಂತಸ್ಥೀಕರಿಸಿಕೊಳ್ಳುವುದು ಸಾಧ್ಯವೇ?' ಎಂದು ಯಾರಾದರೂ ಕೇಳಿದರೆ, ಅಥವಾ ಶೂನ್ಯಕ್ಕಿಂತ ಕಡಿಮೆ ಸಮಯದಲ್ಲಿ ಏನಾದರೂ ಸಂಭವಿಸಬಹುದೇ ಎಂದು ಕೇಳಿದರೆ, ಅಥವಾ ಒಬ್ಬ ವ್ಯಕ್ತಿ ತನ್ನನ್ನು ತಾನೇ ನೋಡಿದರೆ, ಅದು ಅವನೇ ಅಥವಾ ಅವನ ಪ್ರತಿಬಿಂಬವೇ ಎಂಬುದನ್ನು ವಿಜ್ಞಾನ, ತತ್ವಶಾಸ್ತ್ರ ಮತ್ತು ಆಧ್ಯಾತ್ಮದ ಹಿನ್ನೆಲೆಯಲ್ಲಿ ಹೇಗೆ ವಿಶ್ಲೇಷಿಸುವುದು ಎಂದು ಕೇಳಿದರೆ, ನಾನು ಅಂಥ ಪ್ರಶ್ನೆಗಳನ್ನು, ಬನ್ನಂಜೆ ಗೋವಿಂದಾಚಾರ್ಯರು ಬದುಕಿದ್ದಿದ್ದರೆ ಅವರಿಗೆ ಕಳುಹಿಸಿಕೊಡುತ್ತಿದ್ದೆ. ಈ ಪ್ರಶ್ನೆಗಳನ್ನು ಈಗ ಬರಗೂರು, ಮನು ಚಕ್ರವರ್ತಿಗೆ ಕಳುಹಿಸಿಕೊಡಬಹುದು. ಆದರೆ ಅದನ್ನು ಅರ್ಥ ಮಾಡಿಕೊಳ್ಳುವಾಗ ನೂರಾರು ಪ್ರಶ್ನೆಗಳು ಮೂಡುತ್ತವೆ. ಹೀಗಾಗಿ ಯಾರಾದರೂ ಇಂಥ ಪ್ರಶ್ನೆಗಳನ್ನು ಕಳುಹಿಸಿದರೆ, ನನಗಿಂತ ಎತ್ತರವಿರುವ, ನನ್ನ ಪಕ್ಕದಲ್ಲಿಯೇ ಇರುವ ಕ.ಬು. (ಕಸದಬುಟ್ಟಿ) ಗೆ ಹಾಕುತ್ತೇನೆ.

ಓದುಗರೇನಾದರೂ, ಗಾಳಿಯಲ್ಲಿ ತೇಲುವ ಮೀನುಗಳು ಯಾವ ಬಣ್ಣದ ಕನಸು ಕಾಣುತ್ತವೆ? ಕಾಗದದ ಹುಳುಗಳು ಯಾವ ಪುಸ್ತಕವನ್ನು ಅತ್ಯಂತ ಇಷ್ಟಪಡುತ್ತವೆ? ಮೋಡಗಳಲ್ಲಿ ವಾಸಿಸುವ ಮಂದಾರಗಳು ಯಾವ ರೀತಿಯ ಸಂಗೀತವನ್ನು ಕೇಳುತ್ತವೆ? ಕಲ್ಲುಗಳಿಗೆ ಹೃದಯವಿದೆಯೇ.. ಇದ್ದರೆ ಅದು ಯಾವ ಬಣ್ಣದಲ್ಲಿ ಬಡಿಯುತ್ತದೆ? ಬಣ್ಣದ ಕನಸು ಕಾಣುವ ಮರಗಳು ಯಾವಾಗ ಹೂ ಬಿಡುತ್ತವೆ? ಶಿಲೆಗಳು ಸಂಗೀತವಾ ಹಾಡಿವೆ ಎಂಬ ಹಾಡಿದೆಯಲ್ಲ.. ಹಾಗಾದರೆ ಶಿಲೆಗಳು ಯಾವ ಭಾಷೆಯಲ್ಲಿ, ಯಾವ ರಾಗದಲ್ಲಿ ಸಂಗೀತ ಹಾಡುತ್ತವೆ, ಅವುಗಳಿಗೆ ಸಂಗೀತವನ್ನು ಕಲಿಸಿದ್ದು ಯಾರು, ಒಂದು ವೇಳೆ ನಮ್ಮ ಮನೆಯ ಮುಂದಿನ ಮರ ಬಣ್ಣದ ಕನಸು ಕಾಣುವಂತಿದ್ದರೆ, ಅದು ಎಷ್ಟು ಬಗೆಯ ಹೂಗಳನ್ನು ಬಿಡುತ್ತದೆ ಎಂಬ ಪ್ರಶ್ನೆಗಳನ್ನು ಕೇಳಿದರೆ, ನಾನು ಯಾರ ಕೈಗೂ ಸಿಗದೇ ಓಡಿ ಹೋಗುತ್ತೇನೆ.

ನೀವು ಇಂಥ ಪ್ರಶ್ನೆ ಕೇಳಿದರೆ, ನಾನು ಅವುಗಳಿಗೆ ಬರಗೂರರು, ಮನು ಚಕ್ರವರ್ತಿ, ಬನ್ನಂಜೆ ಮಾದರಿಯಲ್ಲಿ ಉತ್ತರಿಸಿದರೆ, ನಿಮ್ಮ ಪಾಡು ಏನಾಗಬಹುದು ಎಂದು ಎಂದಾದರೂ ಊಹಿಸಿದ್ದೀರಾ? ನಿಮಗೆ ಒಂದಷ್ಟು ನೆಮ್ಮದಿ, ಸಂತಸದಿಂದ ಜೀವನ ಸಾಗಿಸಬೇಕು ಎಂಬ ಆಸೆ ಇಲ್ಲವಾ?

ವಿನಾಯಕ ಬನ್ನಿಕೊಪ್ಪ, (ಇಮೇಲ್ ಮೂಲಕ)

- **ಭಟ್ರೇ, ನಾನು ಕಳೆದ ಇಪ್ಪತ್ತು ವರ್ಷಗಳಿಂದ ಒಂದು ದಿನವೂ ಕನ್ನಡ ಪತ್ರಿಕೆಗಳನ್ನು ಓದುವುದನ್ನು ತಪ್ಪಿಸಿದವನಲ್ಲ. ಆದರೆ ಇತ್ತೀಚೆಗೆ ನಮ್ಮ ಊರಿಗೆ ಪತ್ರಿಕೆಗಳೇ ಬರುತ್ತಿಲ್ಲ. ಸೇತುವೆ ಕುಸಿದು ಹೋಗಿದ್ದರಿಂದ ಹನ್ನೆರಡು ಕಿ.ಮೀ. ಸುತ್ತು ಹಾಕಿ ಬರಬೇಕಾಗಿದೆ. ಹೀಗಾಗಿ ಯಾವ ಏಜೆಂಟ್ ಸಹ ಪತ್ರಿಕೆ ಪೂರೈಸಲು ಮುಂದೆ ಬರುತ್ತಿಲ್ಲ. ಜೀವನದಲ್ಲಿ ನಾನು ಏನನ್ನೋ ಕಳೆದುಕೊಂಡ ಭಾವ ನನ್ನನ್ನು ಬಲವಾಗಿ ಕಾಡುತ್ತಿದೆ. ಏನು ಮಾಡಲಿ?**

-ವಿನಾಯಕ ಅವರೇ, ಈಗ ಎಲ್ಲ ಪತ್ರಿಕೆಗಳೂ ಇ-ಪೇಪರ್ ರೂಪದಲ್ಲಿ ಲಭ್ಯವಿದೆ. ನಿಮ್ಮ ಕಂಪ್ಯೂಟರ್ ಅಥವಾ ಮೊಬೈಲಿನಲ್ಲಿ ಎಲ್ಲ ಪತ್ರಿಕೆಗಳನ್ನೂ ಓದಬಹುದು. ಪ್ರೆಸ್ ರೀಡರ್ ಅಥವಾ ಮ್ಯಾಗ್ಸ್ಟರ್ ಆ್ಯಪ್‌ನಿಂದ ಜಗತ್ತಿನ ಬಹುತೇಕ ಎಲ್ಲಾ ಪತ್ರಿಕೆಗಳನ್ನೂ ಓದಬಹುದು. ನಿತ್ಯ ಪತ್ರಿಕೆಗಳನ್ನು ಓದಿ ಅಭ್ಯಾಸವಾದವರಿಗೆ, ಹಠಾತ್ ಪತ್ರಿಕೆಗಳನ್ನು ಓದುವುದನ್ನು ನಿಲ್ಲಿಸಿದಾಗ ಏನೋ ಕಳೆದುಕೊಂಡ ಭಾವ ಕಾಡುವುದು ಸಹಜ. ಕೆಲವು ದಿನಗಳ ಬಳಿಕ ಎಲ್ಲ ಸರಿ ಹೋಗುತ್ತದೆ.

ಪತ್ರಿಕೆಗಳನ್ನು ಓದದಿದ್ದರೆ ಬಹಳ ದೊಡ್ಡ ನಷ್ಟವೇನೂ ಆಗುವುದಿಲ್ಲ. ಪತ್ರಿಕೆ ಓದದೆಯೂ, ನಮಗೆ ಬೇಕಾದ ಮಾಹಿತಿಯನ್ನು ಪಡೆಯಬಹುದು. ಹೀಗಾಗಿ ನೀವು ಪತ್ರಿಕೆ ಬಗ್ಗೆ ಮಾನಸಿಕ ಆಗಬೇಡಿ. ಅಸಲಿಗೆ ಕೆಲವು ಪತ್ರಕರ್ತರೇ ಪತ್ರಿಕೆಗಳನ್ನು ಓದುವುದಿಲ್ಲ. ಪತ್ರಿಕೆಗಳನ್ನು ಓದದಿದ್ದರೆ, ಟಿವಿ ನೋಡದಿದ್ದರೆ, ಮಾನಸಿಕ ನೆಮ್ಮದಿ ಸಿಗುತ್ತದೆ ಎಂದು ಹೇಳುವುದನ್ನೂ ಕೇಳಿದ್ದೇನೆ. 'ಒಂದು ವರ್ಷ ನ್ಯೂಸ್ ಚಾನೆಲ್ ಮತ್ತು ಪತ್ರಿಕೆಗಳನ್ನು ಬ್ಯಾನ್ ಮಾಡಿದರೆ ಜಗತ್ತಿನಲ್ಲಿ ತನ್ನಷ್ಟಕ್ಕೆ ಶಾಂತಿ ನೆಲೆಸುತ್ತದೆ' ಎಂದು ಯಾರೋ ಹೇಳಿದ್ದರು. ಅದು ನಿಜವೂ ಹೌದು. ಒಂದು ತಿಂಗಳಾದ ಬಳಿಕ ನಿಮಗೂ ಹಾಗೆ ಅನಿಸಬಹುದು. ಹೀಗಾಗಿ ಈಗಲೇ ಯಾವ ನಿರ್ಧಾರಕ್ಕೂ ಬರಬೇಡಿ. ಎರಡು ತಿಂಗಳ ಬಳಿಕವೂ 'ಏನನ್ನೋ ಕಳೆದುಕೊಂಡ ಭಾವ' ನಿಮ್ಮನ್ನು ಬಲವಾಗಿ ಕಾಡುತ್ತಿದ್ದರೆ ನಿಮ್ಮೂರಿಗೆ ಪತ್ರಿಕೆ ತಲುಪಿಸುವ ಜವಾಬ್ದಾರಿ ನನ್ನದು. ಆಯ್ತಲ್ಲ?!

ವೀರೇಶ್, (ಇಮೇಲ್ ಮೂಲಕ)

- **ಸಂಪಾದಕರೇ, ನಮ್ಮ ಬಾಸ್ ಹತ್ತಿರ ಸಂಬಳ ಕೇಳಿದರೆ, 'ನಾಳೆ ನೋಡೋಣ, ನೋಡಿ ಹೇಳ್ತಿನಿ' ಅಂತಾರೆ. ಅದು ಕ್ಯಾಶುವಲ್ ಲೀವ್, ಬೋನಸ್, ಬೇಸಿಗೆ ರಜೆಯ ಹಣ... ಹೀಗೆ ಯಾವುದೇ ಆಗಲಿ ನಾವು ಕಷ್ಟ ಪಟ್ಟು ಮಾಡಿದ ಕೆಲಸದ ಹಣ ಕೇಳಿದರೆ ಜಾಣತನದಿಂದ ಏನಾದರೂ ಹೇಳಿ ಜಾರಿಕೊಳ್ಳುತ್ತಾರೆ. ಅವರಿಗೆ ಹಣ ನೀಡುವ ಮನಸ್ಸಿಲ್ಲ ಎಂಬುದು ಎಂಥ ದಡ್ಡನಿಗೂ ಅರ್ಥವಾಗುತ್ತದೆ. ಆದರೆ ನನಗೆ ನನ್ನ ಹಣ ಬಿಡುವ ಮನಸ್ಸು ಇಲ್ಲ. ಇಂಥವರಿಂದ ಹಣ ವಸೂಲಿ ಮಾಡುವುದು ಹೇಗೆ?**

-ವೀರೇಶ್ ಅವರೇ, ನಾವು ಕೆಲಸ ಮಾಡುವ ತಾಣದಲ್ಲಿ ಮಾಲೀಕರೊಂದಿಗೆ ಯಾವ ಕಾರಣಕ್ಕೂ ಮನಸ್ಸು, ಸಂಬಂಧ ಕೆಡಿಸಿಕೊಳ್ಳಬಾರದು. ಹಾಗೆಯೇ ಅನ್ಯಮನಸ್ಕರಾಗಿಯೂ ಕೆಲಸ ಮಾಡಬಾರದು. ಅಂಥ ಸನ್ನಿವೇಶ ಎದುರಾದರೆ, ಅಲ್ಲಿ ಇರಬಾರದು. ಕಾರಣ, ನಾವು ದಿನದ ಹೆಚ್ಚಿನ ಸಮಯವನ್ನು ಆಫೀಸಿನಲ್ಲಿ ಕಳೆದಿರುತ್ತೇವೆ. ನಾವು ಆಫೀಸಿನಲ್ಲಿ ಸಮಾಧಾನದಿಂದ ಇದ್ದರೆ, ಮನೆಯಲ್ಲೂ ಸಮಾಧಾನದಿಂದ ಇರುವುದು ಸಾಧ್ಯ. ಹೀಗಾಗಿ ಆಫೀಸಿನಲ್ಲಿ ಬಾಸ್ ಜತೆಗೆ ಎಂದೂ ಉತ್ತಮ ಸಂಬಂಧ ಹೊಂದಿರುವುದು ಮುಖ್ಯ.

ನಿಮಗೆ ಸಂಸ್ಥೆಯಿಂದ ಕ್ಯಾಶುವಲ್ ಲೀವ್, ಬೋನಸ್, ಬೇಸಿಗೆ ರಜೆಯ ಬಾಬತ್ತು ಹಣ ಬರಬೇಕಿದೆಯೆನ್ನಿ.. ಆಗ ನೀವೊಬ್ಬರೇ ಬಾಸ್ ಬಳಿ ಹೋಗಿ ಕೇಳಬೇಡಿ. ಆಫೀಸಿನಲ್ಲಿರುವ ಇನ್ನಿತರ ಉದ್ಯೋಗಿಗಳಿಗೂ ಬಾಸ್ ಆ ಬಾಬತ್ತಿನ ಹಣ ನೀಡಿರುವುದಿಲ್ಲ. ಅಂಥವರನ್ನೂ ಜತೆಯಲ್ಲಿ ಸೇರಿಸಿಕೊಳ್ಳಿ. ಎಲ್ಲ ಸೇರಿ ಬಾಸ್ ಬಳಿ ಹೋದರೆ, ನಿಮ್ಮೆಲ್ಲರ ದನಿಗೆ ಬಲ ಬರುತ್ತದೆ. ಆಗ ಆತ ನಿಮ್ಮ ಒತ್ತಡಕ್ಕೆ ಮಣಿಯಬಹುದು. ಅಷ್ಟಕ್ಕೂ ಆತ ಮಣಿಯದಿದ್ದರೆ, ನಿಮ್ಮ ಮುಂದೆ ಎರಡು ಆಯ್ಕೆಗಳಿವೆ – ಮೊದಲನೆಯದು, 'ಸಾಯ್ಲಿ ಮುಂಡೇದು' ಎಂದು ಸುಮ್ಮನಾಗುವುದು ಮತ್ತು ಎರಡನೆಯದು, ಆತನ ಜತೆ ಜಗಳಕ್ಕೆ ನಿಲ್ಲುವುದು. ಮೊದಲ ಕ್ರಮದಿಂದ ನೀವು ಕೆಲಸದಲ್ಲಿ ಮುಂದುವರಿಯುತ್ತೀರಿ. ಎರಡನೆಯ ಕ್ರಮದಿಂದ ನೀವು ಆ ಕ್ಷಣದಿಂದ ಅಲ್ಲಿ ಮುಂದುವರಿಯುವುದು ಸಾಧ್ಯವಿಲ್ಲ!

ಈ ಪೈಕಿ ಯಾವುದು ಸರಿ ಎಂಬುದನ್ನು ನೀವೇ ನಿರ್ಧರಿಸಬೇಕು. ಯಾಕೆಂದರೆ ಬಾಸ್‌ನನ್ನು ಎದುರು ಹಾಕಿಕೊಂಡು ಯಾರೂ ಆಫೀಸಿನಲ್ಲಿ ನೆಮ್ಮದಿಯಿಂದ ಇದ್ದಿದ್ದನ್ನು ನಾನಂತೂ ಇದುವರೆಗೆ ನೋಡಿಲ್ಲ.

ಪ್ರಕಾಶ್ ವಿ.ಹಿರಿಯಣ್ಣನವರ, ಧಾರವಾಡ

- **ಭಟ್ರೇ, ನಮ್ಮದು ಅವಿಭಕ್ತ ಕುಟುಂಬ. ನಾವು ಮೂವರು ಸಹೋದರರು ಮತ್ತು ಕುಟುಂಬ-ಮಕ್ಕಳು ಒಟ್ಟಿಗೆ ಇದ್ದೇವೆ. ನಾನೇ ದೊಡ್ಡವನು. ನಮ್ಮ ಮನೆಯಲ್ಲಿ ನಾವು ಎಲ್ಲರನ್ನೂ ಸಮವಾಗಿ ನೋಡುತ್ತೇವೆ. ನನ್ನ ಮಗನನ್ನೋ, ಮಗಳನ್ನೋ, ಪ್ರಮೋಟ್ ಮಾಡುವ ಆಸೆಯಿದ್ದರೂ, ಅದು ಸಾಧ್ಯವಾಗುವುದಿಲ್ಲ. ಕಾರಣ ನಮ್ಮ ನಿರ್ಧಾರವನ್ನು ಉಳಿದ ಸಹೋದರರು ತಪ್ಪಾಗಿ ಭಾವಿಸಬಹುದು ಎಂದು ಭಯವಾಗುತ್ತದೆ. ನಮ್ಮ ನಿರ್ಧಾರದಿಂದ ನಮ್ಮ ಮಕ್ಕಳಿಗೆ ಅನ್ಯಾಯವಾಗುತ್ತಿದೆಯೇನೋ ಎಂದು ಎಷ್ಟೋ ಸಲ ಅನ್ನಿಸಿದ್ದಿದೆ. ನಾನು ಮಾಡುತ್ತಿರುವುದು ಸರಿ ತಾನೇ?**

-ಪ್ರಕಾಶ್ ಅವರೇ, ನೀವು ಸರಿಯಾದ ಮಾರ್ಗದಲ್ಲಿ ನಡೆಯುತ್ತಿದ್ದೀರಿ. ಅವಿಭಕ್ತ ಕುಟುಂಬದಲ್ಲಿ ನೀವು ನಿಮ್ಮ ಹೆಸರಿಗೆ ತಕ್ಕ ಹಾಗೆ 'ಹಿರಿಯಣ್ಣ'ನಂತೆ ವರ್ತಿಸಬೇಕು. ನೀವು ತೆಗೆದುಕೊಳ್ಳುವ ನಿರ್ಧಾರದಿಂದ ಯಾರಿಗೂ ನೋವಾಗಬಾರದು. ಅಷ್ಟೇ ಅಲ್ಲ, ಅದು ಸಂದೇಹಕ್ಕೂ ಕಾರಣವಾಗಬಾರದು. ನಿಮಗೆ ಸ್ವಲ್ಪ ಅನ್ಯಾಯವಾದರೂ ಸರಿಯೇ, ನಿಮ್ಮ ಉಳಿದ ಸಹೋದರರ, ಅವರ ಹೆಂಡತಿ-ಮಕ್ಕಳಿಗೆ ಅನ್ಯಾಯವಾಗದಂತೆ ನೀವು ನಡೆದುಕೊಳ್ಳಬೇಕು. ಅದು ಅವಿಭಕ್ತ ಕುಟುಂಬದ ಧರ್ಮ. ಇದನ್ನು ಎಲ್ಲರೂ ಪಾಲಿಸಬೇಕು ಮತ್ತು ನೀವು ಹೆಚ್ಚು ಪಾಲಿಸಬೇಕು. ಆಗಲೇ ಕುಟುಂಬ ಸುಸೂತ್ರವಾಗಿ, ನಡೆದುಕೊಂಡು ಹೋಗುತ್ತದೆ.

ನಿಮ್ಮ ಮೂವರ ಪೈಕಿ ಯಾರಾದರೂ ಒಬ್ಬರು, ತಮ್ಮ ಹೆಂಡತಿ-ಮಕ್ಕಳ ಹಿತಾಸಕ್ತಿಯನ್ನು ನೋಡಿದರೆ, ಆಗ ಕುಟುಂಬದಲ್ಲಿ ಬಿರುಕು ಮೂಡುತ್ತದೆ. ಒಮ್ಮೆ ಬಿರುಕು ಮೂಡಿದರೆ, ಕಂದಕ ನಿರ್ಮಾಣವಾದರೆ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಕುಮಾರಸ್ವಾಮಿ ಅವರಿಗೊಬ್ಬರಿಗೆ ಅಲ್ಲ, ಎಲ್ಲರಿಗೂ ತಮ್ಮ ಮಗನನ್ನು ಪ್ರಮೋಟ್ ಮಾಡಬೇಕು ಎಂಬ ಆಸೆ ಇರುತ್ತದೆ. ಆದರೆ ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ.

ಈ ವಿಷಯದಲ್ಲಿ ಕುಮಾರಸ್ವಾಮಿಯವರಿಂದ ಕಲಿಯುವುದು ಸಾಕಷ್ಟಿದೆ. ಅವರಿಗೆ ತಮ್ಮ ಮಗನಿಗೇ ಚನ್ನಪಟ್ಟಣ ಟಿಕೆಟ್ ಕೊಡಿಸಬೇಕು ಎಂಬ ಆಸೆ ಮೊದಲಿನಿಂದ ಇದ್ದರೂ, ಕಾರ್ಯಕರ್ತರ ಹೆಸರುಗಳನ್ನು ತೇಲಿಬಿಟ್ಟು, ಯಾವ ಕಾರಣಕ್ಕೂ ನನ್ನ ಮಗ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿ, ಅವರ ಮಗನೂ ತನಗೆ ಚುನಾವಣೆಗೆ ಸ್ಪರ್ಧಿಸಲು ಮನಸ್ಸಿಲ್ಲ ಎಂದು ಹೇಳಿ, ಕೊನೆಗೆ ಕಾರ್ಯಕರ್ತರ ಒತ್ತಡಕ್ಕೆ ಮಣಿದು, ಒಲ್ಲದ ಮನಸ್ಸಿನಿಂದ ನನ್ನ ಮಗನನ್ನೇ ಚುನಾವಣೆಗೆ ಅನಿವಾರ್ಯವಾಗಿ ನಿಲ್ಲಿಸುತ್ತಿದ್ದೇನೆ ಎಂದು ಹೇಳಿದರು. ಈ ರೀತಿ ನಾಟಕವಾಡಲು ಭಾಳ ಚಾಕಚಕ್ಯತೆ ಬೇಕು. ನ್ಯಾಯ ಒದಗಿಸುವ ಸೋಗನ್ನು ಎಲ್ಲರಲ್ಲೂ ಮೂಡಿಸುತ್ತ, ಕೊನೆಗೆ ತಮಗೆ ಬೇಕಾದಂಥ ನಿರ್ಧಾರವನ್ನು ತೆಗೆದುಕೊಳ್ಳುವುದು ಸಣ್ಣ ಮಾತಲ್ಲ.

ನಿಮಗೆ ನಿಮ್ಮ ಮಗನನ್ನು ಪ್ರಮೋಟ್ ಮಾಡುವ ಆಸೆಯಿದ್ದರೆ, ಅದನ್ನು ಪ್ರಕಟಿಸಬಾರದು. ನಿಮ್ಮ ಸಹೋದರರ ಬಾಯಿಂದಲೇ ನಿಮ್ಮ ಮಗನನ್ನು ಪ್ರಮೋಟ್ ಮಾಡುವ ಮಾತು ಬರಬೇಕು.

ಕಾರ್ಯಕರ್ತರೇ ನಿಖಿಲ್ ಕುಮಾರಸ್ವಾಮಿಯವರ ಹೆಸರನ್ನು ಹೇಳಿದರಲ್ಲ.. ಆ ಥರ. ಆಗ ಯಾರೂ ತಪ್ಪು ತಿಳಿದುಕೊಳ್ಳುವುದಿಲ್ಲ. ನಮ್ಮ ಮಕ್ಕಳನ್ನೂ ಪ್ರಮೋಟ್ ಮಾಡಲು ಸಾಧ್ಯವಾಗದಿದ್ದರೆ ನೀವು ಯಾವ ಸೀಮೆ ತಂದೆಯಾಗಲು ಸಾಧ್ಯ? ಇದನ್ನು ದೇವೇಗೌಡ, ಕುಮಾರಸ್ವಾಮಿ, ಯಡಿಯೂರಪ್ಪ, ಬೊಮ್ಮಾಯಿ, ಖರ್ಗೆ ಅವರಿಂದ ನೋಡಿ ಕಲಿಯಬೇಕು. ನಾವು ನಮ್ಮ ಮಕ್ಕಳಿಗೆ ಅನುಕೂಲ ಮಾಡಿಕೊಡದಿದ್ದರೆ, ಆಗ ಅವರಿಗೆ ಅನ್ಯಾಯ ಮಾಡಿದಂತೆ ಎಂಬ 'ಆದರ್ಶ'ವನ್ನು ಈ ಎಲ್ಲ ನಾಯಕರು ತೋರಿಸಿಕೊಟ್ಟಿದ್ದಾರೆ. ಕಲಿತುಕೊಳ್ಳಿ.